
ತಗ್ಗಿನಮನೆ ಸೀತೆ
ಎಂ.ಕೆ. ಇಂದಿರಾ

# ತಗ್ಗಿನ ಮನೆ ಸೀತೆ

ಎಂ. ಕೆ. ಇಂದಿರಾ

ಪ್ರಕಾಶಕರು :
**ಪ್ರಕಾಶ ಸಾಹಿತ್ಯ**
ತಲಕಾಡು ಸುಬ್ಬರಾವ್ ಗಲ್ಲಿ,
ಅರಳೇಪೇಟೆ — — ಬೆಂಗಳೂರು-53

ಮೊದಲ ಮುದ್ರಣ : 1984

ಮುದ್ರಣ :
ಪ್ರಧಾನ್ ಪ್ರಿಂಟರ್ಸ್
31, ಸುಬ್ಬಣ್ಣಾಚಾರ್ ಗಲ್ಲಿ, ಅರಳೆಪೇಟೆ,
ಬೆಂಗಳೂರು–53.

# ವಿನಂತಿ

'ವನಿತಾ' ಮಾಸಪತ್ರಿಕೆಯಲ್ಲಿ ಧಾರಾವಾಹಿ ಆಗಿ ಹರಿದು ಬಂದು. ಬಹು ಜನಗಳ ಮೆಚ್ಚುಗೆ ಪಡೆದ ನನ್ನ 'ತಗ್ಗಿನ ಮನೆ ಸೀತೆ' ಇದೀಗ ಪುಸ್ತಕ ರೂಪದಲ್ಲಿ ಹೊರಬರುತ್ತಿದೆ. ಇದನ್ನು 'ಪ್ರಕಾಶ ಸಾಹಿತ್ಯ'ದ ನಮ್ಮ ಪ್ರಕಾಶಕರು ಅಂದವಾಗಿ ಪ್ರಕಟಿಸಿದ್ದಾರೆ.

ನನ್ನ ಬರಹಗಳಿಗೆ ಉತ್ತೇಜನ ಕೊಡುತ್ತಿರುವ ಪ್ರಕಾಶಕರಿಗೆ, ಓದುಗರಿಗೆ, ಮುಖಚಿತ್ರ ಕಲಾವಿದರಿಗೆ, ಮುದ್ರಕರಿಗೆ ನನ್ನ ದೀಪಾವಳಿಯ ಶುಭಾಶಯಗಳು.

ನಮಸ್ಕಾರ

—ಎಂ. ಕೆ. ಇಂದಿರಾ

# ೧

"ಹೂವಿನ ಮರವೆ—ಹೂವಿನ ಮರವೇ, ನಳಚರಿತ್ರೆ ಹಾಡ್ನ ಅರ್ಧಾಂಬರ್ಧ ಹೇಳ್ಕೊಟ್ಟಿದಾರಲ್ಲ ಅವರಿಗೆ ಹೇಳು ಮುಂದಕ್ಕೆ ಹೇಳ್ಕೊಡಬೇಕಂತೇಂತ"

"ಪುರಾಣದ ಕತೇನ ಅಪಸ್ವರ ಹೇಳ್ಬ್ಯಾರ್ದಂತೇಂತ ಹೇಳು ಮರವೆ."

"ಅವಳಿಗೆ ಬಂದ್ಹಂಗೆ ಹೇಳ್ತೀನಂತೇನ್ನು ಮರವೇ"

"ನಂಗೇನಂತೆ ಹೇಳ್ಕೊಡ್ತನಿ ಎಲ್ಲೀವರ್ಗ ಹೇಳ್ಕೊಟ್ಟಿದ್ದೆ ಕೇಳು ಮರವೇ."

"ದಮಯಂತಿ ಮೈ ತುಂಬ ನಗ ಇಟ್ಕಂಡು ಮದುವೆ ಚಪ್ರಕ್ಕೆ ಬರ್ತಾಳಲ್ಲ ಅಲ್ಲೀತಂಕ ಬಂದಿತ್ತೂ ಅನ್ನು ಮರವೇ."

"ಸೈ ಇವತ್ತು ತುಸಾ ಹೇಳ್ಕೊಡ್ತನಿ. ಮನೇಲಿ ಬಂಚೂರಾರ ಕೆಲ್ಸಾನ ಗಿಲ್ಲ. ನಾ ಗುಡ್ಡಕ್ಕೆ ಹೋಗೂಕೆ ಬಂದೋಳು. ಇನ್ನೂ ಹೋಗಿಲ್ಲ. ಅಪ್ಪಾಜಿ ಮೈಲಿಗೇಲಿ ಹೇಳಿ ಕೊಡೂಕಾಗುಲ್ಲ. ಚಿಕ್ಕಮ್ಮಗೆ ತಿಳದ್ರೆ ಲಕ್ಕಿ ಬರಲು ತಗಂಡು ಬಾಸುಂಡೆ ಬರೂಹಂಗೆ ಹೊಡೀತಾಳೆ. ಆಗ್ಲೇ ಊರ ಮಧ್ಯಾನಾತು. ಇನ್ನೂ ಹಳ್ಳಕ್ಹೋಗಿ ಬಟ್ಟೆ ಒಗೀಬಕು ಇವತ್ತು ಒಂದೇ ನುಡಿ ಹೇಳ್ಕೊಡ್ತನಂತೆ ಸುಮ್ನಾಗಿ ಹೇಳ್ಬೇಕಂತೇ ಅನ್ನು ಮರವೆ."

"ಸೈ ಹೇಳ್ತನಿ, ಹೇಳ್ಕೊಡೂನ್ನು ಮರವೇ."

'ಬಂದಳಿಂದೂ ವದನೆ ಹಂದರಾದೊಳಗೇ
ಮಂದಗಮನೇ ಮಹಾ ಸುಂದರಾಂಗೀ'

ತಗ್ಗನಮನೆ ಸೀತೆ ಹೇಳಿಕೊಟ್ಟಳು. ಕಟ್ಟೆಮನೆ ಅಚ್ಚಿ ಹೇಳಿದಳು.

"ಹಾಂಗೆ ಕೀಸ್ಲುದನಿ ಮಾಡ್ಬ್ಯಾರ್ದಂತೇನ್ನು ಮರವೇ."

"ನಂದನಿ ಇರೂದೇ ಹಂಗೇ. ಅದಕೇನು ಮಾಡೂಕಾಗುತ್ತೆ. ಹೇಳಿದ್ದು ಅರ್ತ ಆದರೆ ಸೈ. ದನಿ ಕಟ್ಕಂಡು ಏನಾಗ್ಬಕಂತೇನ್ನ ಮರವೇ."

"ಸೈ ಅಪಸ್ವರ ಹೇಳಿ ಪಾಪ ಬಂದ್ರೆ ನಂಗೊತ್ತಿಲ್ಲಾನ್ನ ಮರವೇ."

"ಬಂದ್ರೆ ಬರಲಂತೆ ನಂಗೇ ಸೈಯಲ್ಲಿ ಪಾಪ ಬರೂದು. ಹೊತ್ತಾತು ಹೇಳ್ಕೊಡಪ್ಪ ಮರವೇ."

"ಬಿಲ್ಲಿ, ರುಕ್, ಪೈರಪುಣಾವು, ಪಿಲ್ಲಿ ಕಾಲುಂಗರವು......."

ಅಜ್ಜಿ ಹೇಳಿದಳು ಸೀಸಿಯಂತೆ.

"ಜಣ ಅಲ್ಲಿ 'ರಪುಣ' ಅಂತ ಘಮ್ಮಗೆ ಅವ್ಳು ಹೇಳ್ಬೇಕಂತೇನ್ನು ಮರವೇ." ಅನುಕೆ ಹೇಳಿದಳು ಅಜ್ಜಿ.

"ಹಂಗೆ ಸಂಗಾಭಟ್ರು ಮಂತ್ರ ಹೇಳ್ದಂಗೆ ಹೇಳಿದ್ರೆ ಕೇಳೂಕೆ ಅಸಯ್ಯಾಸು ಮರವೇ."

"ಅಪ್ರತ ಮುಂದಕ್ಕೆ ಹೇಳ್ಕೊಡೂನ್ನು ಮರವೇ."

'ಮೆಲ್ಲಿ ನಲ್ಲಿಲ್ಲಿ ಲೊಲ್ಲ ಪ್ಪ ಜ್ಜೆ ಸಿಕ್ಕುತಾ'

"ಒಂದೇ ದಪಕ್ಕೆ ಅಷ್ಟಾ ಬಟ್ಟು 'ಲೊಲ್ಲ ಲೊಲ್ಲ ಲೊಲ್ಲ' ಅಂತಂದ್ರೆ ಕಲ್ತುಗೊಳ್ಳೂದಾರಾ ಹ್ಯಂಗೆ? ತುಸು ಸಿಧಾನಾಗ ಹೇಳ್ಬೇಕಂತೇನ್ನ ಮರವೇ."

"ಸಿಧಾನಾಗ ಕಲ್ತುಗಳ್ಳಿ. ನಂಗೆ ಈಗ ತಂಡ್ಗೆ ತಗಂಡು ಹೋಗೂಕೆ ಬೇಸ್ರಾಗದ. ಉಳಿದದ್ದು ಮಧ್ಯಾನ ಊಟಾದಮ್ಯಾಲೆ ಸೂರ್ಯ ಸೊಟಾಗ್ತು ನಲ್ಲಿ ಆಗ ಒಂದ್ರೆ ಹೇಳ್ಕೊಡ್ತ್ತೇನಂತೇನ್ನ. ಯಾವಾಗ್ಲೂ ಹಾಡ್ನ ಕುಂತ್ಕಂಡು ಮಾಡ್ಬೇಕು. ಅದಕ್ಕೆ ಈಗ ಮಿಕ್ಕದ್ದ ಹೇಳಿಹೋಗ್ತಿನಿ ಮಿಕ್ಕದ್ದ ಅಮ್ಯಾಲೆ ಹೇಳ್ತೀನ್ನ ಮರವೇ."

'ಪ್ರಲ್ಹಾಕ್ಷಿ ಭೀಮೇಶ ಕೃಷ್ಣನೇ ಗತಿಯೆಂದು
ನಲ್ಲನಾಗಲಿ ನಳಾರಾಯನೆನುತಾ'

ಅದನ್ನೂ ಗೊಣಗಿಕೊಂಡಳು ಅಜ್ಜಿ. ಸರಿಯಾಗಿ ತಿಳಿಯಲಿಲ್ಲ. ಆದನ್ನೂ ಗೊಣಗಿಕೊಂಡಳು—

"ತಂಗೀ ಹಾಡು ಬರೂದೂ ಅಂತೆ ಮಹಾ ಜಂಬ. ಸಮನಾಗಿ ಹೇಳೀಕೊಡುಲ್ಲ." ಸೀತೆ ತಂಬಿಗೆ ಎತ್ತಿಕೊಂಡು ಇಲಾಯಿತಿ ಸೀಗೆಯ ಮಟ್ಟಿನ ಕಡೆಗೆ ನಡೆಯುತ್ತ ಅಂದಳು—

"ನಮಗೆ ಬರೂದನ್ನ ಬ್ಯಾರೆಯೋರಿಗೆ ಹೇಳ್ಕೊಡ್ದೇ ಹೋದ್ರೆ ಮುಂದಿನ ಜನ್ಮದಾಗೆ ಗೊಡ್ಡುದನಾನೋ, ಹುಳುಕ ಮಾವಿನ ಮರಾನೋ ಆಗಿ ಹುಟ್ತಾರಂತೆ. ನಂಗೇನು ಜಂಬಾನೂ ಇಲ್ಲ, ಗಿಂಬಾನೂ ಇಲ್ಲ. ಹೇಳಿ ಕೊಡ್ತಾ ಇಲ್ವಾ ಈಗಾ ?"

"ಲೇ ಕುರದೇ ! ಯತ್ಲಾಗಿ ಹಾಳಾಗ್ಹೋದ್ಯೇ ? ಬ್ಯಾಗ ಬಾರೇ ಮನೀಗೇ. ಒಂದ್ರಾಶಿ ಬಟ್ಟೆ ಬಿದ್ದದೆ ಒಗೆಯೂದೂ"

'ತಗ್ಗಿನಮನೆ' ಹಳ್ಳಿಯ ಅಡಿಕೆ ತೋಟದ ಹಿಂಬದಿಯ ನಾಡು ಹೆಂಚಿನ ಮನೆಯಿಂದ ಬಂದಿತು ಅರಚುದನಿಯ ಅಶರೀರವಾಣಿ.

"ಅಕ್ಕಾ ಮಾವಿನಮರವೇ ಕೇಳಸ್ತಾ ? ಮೋಟಿ ಅರಚ್ಯತದೇಂತಾ ಹೇಳು ಮಾತಾಡ್ದೋಡ್ಹೋರ ಮನೆ ಹುಡ್ಗೀಗೆ. ನಾ ಹೋಗ್ತೀನಿ"

ಎಂದು ಓಡೋಡುತ್ತ—

"ನಾ ಗುಡ್ಡಕ್ಹೋಗಿದೀನೀಂತ ಹೇಳ್ರೆ ಯಾರಾರ ಮಡೀಲಿದೋರಿಗೇ. ಇಕಾ ಬಂದೆ ಈಗ."

ಸೀತೆ ಕಣ್ಮರೆಯಾದೊಡನೆ ಅಚ್ಚಿ ಬಾನಿನತ್ತ ಕತ್ತೆತ್ತಿ ನೋಡಿದಳು. ಸೂರ್ಯ ಇನ್ನೂ ನಡು ನೆತ್ತಿಗೆ ಬಂದಿರಲಿಲ್ಲ.

'ಅಯ್ಯ ಇನ್ನೂ ನಡು ಮಧ್ಯಾನಾನೇ ಆಗಿಲ್ಲ. ತಾಸು ಹನ್ನೊಂದಾಗಿದ್ದೀತು. ಏನಸಸ್ತ್ರನೋ ಆ ಮೋಟಿವಮ್ಮಗೆ. ಒಂದೇ ಸಮ ಬಡ್ಕೊಳ್ತೆ'

ಎಂದು ಸ್ವಗತವಾಗಿ ಹೇಳಿಕೊಂಡು ಮಾವಿನ ಮರದ ಕೆಳಗೆ ಉದುರಿದ್ದ ಹೀಚು ಮಾವಿನಕಾಯಿ ಕಚ್ಚಿ 'ಥೂ ಬರೀ ಒಗರು' ಎಂದು ಕೊಂಡು ಅಡಿಕೆಯ ಸೋಗೆ ತುಳಿದು ಸರಪರ ಸದ್ದು ಮಾಡುತ್ತ ಮನೆಯ ಕಡೆ ನಡೆದಳು.

ಈ ಇಬ್ಬರು ಬಾಲೆಯರು ಸುಮಾರು ಎಪ್ಪತ್ತು ವರ್ಷ ಹಿಂದಿನವರು. ಮಲೆನಾಡ ನಟ್ಟನಡುವಿನಲ್ಲಿ ಸುತ್ತಲೂ ಕೋಟೆಯಂತೆ ಘನೀಭವಿಸಿ ಸುತ್ತಿ ಕೊಂಡಿರುವ ಗುಡ್ಡ, ಬೆಟ್ಟ, ಕತ್ತಲು ಗವಿಸುವ ಕಾಡುಗಳ ಸಂದಿಗೊಂದಿಗಳಲ್ಲಿ

ಹೊರ ಪ್ರಪಂಚಕ್ಕೆ ಗೋಚರವಾಗದಂತೆ ಅಡಗಿ ಕುಳಿತಿದ್ದ ನೂರಾರು ಹಳ್ಳಿಗಳಲ್ಲಿ ಈ ಕಟ್ಟೆಮನೆ, ತಗ್ಗಿನ ಮನೆಗಳೂ ಸೇರಿವೆ. ಈ ಕತೆಯ ಪ್ರಾರಂಭಕ್ಕೂ ನಲವತ್ತು ವರ್ಷದ ಹಿಂದೆ ಎರಡು ಮನೆಗಳಲ್ಲಿದ್ದ ದಾಯಾದಿಗಳಲ್ಲಿ ಏನೋ ಒಂದು ಸಣ್ಣ ಕಾರಣಕ್ಕಾಗಿ ದೊಡ್ಡ ಜಗಳ ಹಗರಣವಾಗಿ ಒಬ್ಬರಿಗೊಬ್ಬರು ಧರ್ಮಸ್ಥಳದ ಆಣೆ ಹಾಕಿಕೊಂಡಿದ್ದರಂತೆ. ಈ ಕತೆಯ ಕಾಲದವರಿಗೆ ಆಣೆಯ ಕಾರಣ ಏನೆಂಬುದೇ ತಿಳಿಯದು. ಹಿರಿಯರಲ್ಲಿ ನಡೆದ ಒಂದು ವಾಕ್ಯ ಮಾತ್ರ ಗೊತ್ತು.

"ನಾನಾಗೇ ನಿನ್ನ ಮನೆ ಹೊಸಲು ಮೆಟ್ಟಿದರೆ ಮಂಜುನಾಥೇಶ್ವರನ ಆಣೆ. ಆಗ್ಲೇ ನಾನು ರಕ್ತ ಕಾರ್ಕಂಡು ಸಾಯ್ತಿನಿ. ನಮ್ಮ ವಂಶದಾಗೆ ಯಾರೂ ನಿಮ್ಮನೆ ಕಡೆ ಕಾಲು, ತಲೆ ಹಾಕ್ಬಾರ್ದು. ನೀವಾಗೆ ನಮ್ಮನೀಗೆ ಬಂದ್ರೂ ನಿಮಗೂ ಆದೇ ಗತಿ."

ಆಣೆ ಹಾಕಿದ ಮುದುಕ ನೆಗೆದು ಬಿದ್ದ. ಅವನ ಮಗ ಅಡಳಿತಕ್ಕೆ ಬಂದ. ಆಗ ಯಾರು ಯಾರೋ ಈ ಆಣೆ–ಪ್ರಮಾಣ ತೆಗೆಸಿ ಬಿಡಬೇಕೆಂದು ಪ್ರಯತ್ನಿಸಿದರು. ಅಪ್ಪ ನೆಟ್ಟ ಆಲದ ಮರಕ್ಕೆ ನೇಣು ಹಾಕಿಕೊಳ್ಳುವ ಆ ಮೂರ್ಖರು ಹಿರಿಯರ ಮಾತು ಕೇಳಲಿಲ್ಲ.

ಎರಡು ಮನೆಯವರೂ ಧರ್ಮಸ್ಥಳಕ್ಕೆ ಹೋಗಿ ನೇತ್ರಾವತೀಲಿ ಮುಳುಗಿ ಒದ್ದೆಬಟ್ಟೇಲಿ ದೇವಸ್ಥಾನಕ್ಕೆ ಹೋಗಿ ಹಿರಿಯರು ಮಾಡಿದ ತಪ್ಪಿನ ಕಾಣಿಕೆ ನೀಡಿ ಪೂಜೆ ಮಾಡಿಸಿ ಪ್ರಸಾದ ತೆಗೆದುಕೊಂಡು ಇಟ್ಟ ಆಣೆಯನ್ನು ದೇವರ ಎದುರಿಗೆ ಹಿಂತೆಗೆದುಕೊಳ್ಳಬೇಕು ಅಲ್ಲಿಂದ ಮುಂದೆ ಅವರು ಒಂದಾಗಬಹುದು.

ಮಲೆನಾಡಿನಲ್ಲಿ ಇದು ನಾಲ್ಕುನೂರು ವರ್ಷಗಳಿಂದ ನಡೆದು ಬಂದ ಪದ್ಧತಿ.

'ಮಾತಿನ ಮಂಜುನಾಥ; ಕಾಸಿನ ತಿಮ್ಮಪ್ಪ'—ಎಂಬುದು ಗಾದೆ ಮಾತು. ತಿಮ್ಮಪ್ಪನಿಗೆ ಅಷ್ಟಾಗಿ ಯಾರೂ ಹೆದರುತ್ತಿರಲಿಲ್ಲ. ಧರ್ಮಸ್ಥಳದ ಮಂಜುನಾಥ ಎಂದರೆ ಥರಥರ ನಡುಗಿ ಹಿಂದೆ–ಮುಂದೆ ಮಾಡಿಕೊಳ್ಳುವಂಥ ಹೆದರಿಕೆ.

ನಾಗರೀಕತೆ ಎಂಬ ಶಬ್ದವನ್ನೇ ಕಂಡರಿಯದ ಜನ. ಮಾತಿಗೆ

ಮೊದಲು ದೆವ್ವ, ಭೂತ, ಜಕಣಿ, ನಿಮಿತ್ಯ, ಕವಡೆ, ಕಣಿ ಇವೇ ಅವರ ಮಂತ್ರ.

ಕಷ್ಟ ಎಂದರೆ ಏನೆಂಬುದೇ ಅರಿಯದ ಜನ ಅವರು. ಸುಖದ ರುಚಿ ತಿಳಿದಿದ್ದರೆ ತಾನೇ ಕಷ್ಟದ ವ್ಯಥೆ?

ಮಳೆ, ಕೊಳೆ, ರೋಗ-ರುಜಿನ, ಹುಟ್ಟು-ಸಾವು, ಜಗಳ, ಮಾಟ-ಕೂಟಗಳು, ಯಂತ್ರ-ಮಂತ್ರಗಳು.

ಮದುವೆ ಸಂಭ್ರಮ; ತಿಥಿ-ಕರ್ಮಾಂತರಗಳ ಸಂಭ್ರಮ ಎರಡೂ ಒಂದೇ ಆಗಿದ್ದವೆನ್ನಬಹುದು.

ಅಂತ ಮಲೆಗಳ ತಪ್ಪಲಿನಲ್ಲಿ ಅವಿತು ಕುಳಿತ ತಗ್ಗಿನ ಮನೆ ದಾಯಾದಿಗಳಲ್ಲಿ ಈ ಆಣೆ-ಪ್ರಮಾಣಗಳಾಗಿ ಮೂರು ತಲೆ ಕಳೆದಿತ್ತು. ದ್ವೇಷದ ಕಾರಣ ಗೊತ್ತಿಲ್ಲದೆ ಈಗ ಎರಡು ಕುಟುಂಬಗಳ ಹೆಂಗಸರು, ಗಂಡಸರು ಸಮಾಧಾನ ಹೊಂದಿದ್ದರೂ ಧರ್ಮಸ್ಥಳದ ಆಣೆ ಒಡೆಯುವವರೆಗೂ ಒಬ್ಬರನ್ನೊಬ್ಬರು ಮಾತಾಡಿಸುವಂತಿಲ್ಲ. ಊಟ ತಿಂಡಿ ಮಾಡುವಂತಿಲ್ಲ, ಕಡೆಗೆ ಬಂಧುಗಳ ಮನೆ ಮದುವೆ—ಮಂಜಗಳಿಗೂ ಎರಡು ಮನೆಯವರೂ ಒಟ್ಟಿಗೆ ಹೋಗುವಂತಿಲ್ಲ. ಕಾರಣ—ಅಪ್ಪಿತಪ್ಪಿ ಹತ್ತಿರ ಕೂರಬೇಕಾಗಬಹುದು; ಒಂದೇ ಪಂಕ್ತಿಯಲ್ಲಿ ಊಟಕ್ಕೆ ಕೂರುವಂತಿಲ್ಲ. ಒಂದೇ ಹಂಡೆಯ ನೀರು ಸ್ನಾನ ಮಾಡುವಂತಿಲ್ಲ. ಇವೆಲ್ಲ ಫಜೀತಿಗಳು. ಈ ಮನೆಗಳ ಆಣೆಗಳ ವಿಷಯ ಮಲೆನಾಡು ಪ್ರಾಂತ್ಯಕ್ಕೆಲ್ಲ ತಿಳಿದಿತ್ತು. ಈ ರಗಳೆ ಯಾಕೆ ಎಂದು ಬರಬರುತ್ತಾ ಅನೇಕ ಮದುವೆ ಮನೆಯವರು ಎರಡು ಮನೆಯನ್ನು ಕರೆಯುತ್ತಲೇ ಇರಲಿಲ್ಲ. ಎಲ್ಲ ಆರು, ಎಂಟು, ಹತ್ತು ಮೈಲಿಗಳ ಹಳ್ಳಿಗಳೇ. ಅವರ ಪಾಲಿಗೆ ಆಗ ದೊಡ್ಡ ಶಹರು ಅಂದರೆ—ಅತ್ತ ಶೃಂಗೇರಿ, ಕೊಪ್ಪ, ಎಡೇಹಳ್ಳಿ. ತೀರ್ಥಹಳ್ಳಿ, ಶಿವಮೊಗ್ಗ. ಬಾಕಿ ಊರುಗಳ ಹೆಸರು ಕೇಳಿದ್ದರಷ್ಟೆ.

ಅವರ ಮನೆರಂಜನೆ ಅಂದರೆ ವರ್ಷಕ್ಕೆ ಒಂದು ಸಾರಿ ನಡೆಯುವ ಶೃಂಗೇರಿಯ ಶರನ್ನವರಾತ್ರಿ, ತೀರ್ಥಹಳ್ಳಿಯ ಎಳ್ಳಮಾವಾಸ್ಯೆ ಜಾತ್ರೆ. ಅದು ಬಿಟ್ಟರೆ ಯಾರ ಮನೆಯದಾದರೂ ಮದುವೆ ಮುಂಜಿಗಳು.

ಈಗಿನ ಚಿಟಿಕೆ ಮದುವೆಗಳಲ್ಲ. ಆಗ ಎಂಟು ದಿನ ಸಾರೋದ್ಧಾರ

ಮದುವೆ. ತಾಮ್ರದ ತಂಬಿಗೆ, ಪಂಚ ಪಾತ್ರೆ, ಸಂಕಲ್ಪೆ ಪಂಚೆಯೇ ಅಳಿಯನ ಭಾರೀ ಉಡುಗೊರೆ. ಎಂಟು ದಿನದ ಅದ್ದೂರಿ ಮದುವೆ ಮುನ್ನೂರು ರೂಪಾಯಿಗಳಲ್ಲಿ ಮುಗಿದು ಹೋಗುತ್ತಿತ್ತು.

ಅಪರೂಪದ ಈ ಮನರಂಜನೆಯೂ ಇರುತ್ತಿರಲಿಲ್ಲ ಇವೆರಡು ಮನೆಯವರಿಗೆ. ಇವರು ಮಾತ್ರವಲ್ಲ. ಕನ್ನಡಜಿಲ್ಲೆ, ಘಟ್ಟದತಗ್ಗು, ಕಣಿವೆ ಕೆಳಗಿನ ನೂರಾರು ಸಂಸಾರಗಳು ತಾವಾಗಿ ಬಂದು ಮಂಜುನಾಥನ ಕೈಗೆ ಸಿಕ್ಕಿ ಹಾಕಿಕೊಂಡು ಒದ್ದಾಡುತ್ತಿದ್ದವು.

ಈ ತಗ್ಗಿನ ಮನೆಯ ಕೊಕ್ಕೆಯನ್ನು ಬಿಡಿಸಬೇಕೆಂದು ಆ ಪ್ರಾಂತ್ಯದ ಮುನಿಯಂತಿದ್ದ ಶಂಕರಭಟ್ಟರು ಶತ ಸಾಹಸ ಮಾಡುತ್ತಿದ್ದರು. ಎರಡು ಮನೆಯ ಹಿರಿಯರೂ ಹೊರಡಬೇಕು. ಅದಕ್ಕೆ ನೂರೆಂಟು ವಿಘ್ನಗಳು. ಎರಡು ಮನೆಯಲ್ಲೂ ಬಸುರಿ, ಬಾಣಂತಿ, ಪುರುಡು, ಸೂತಕ, ರೋಗ—ರುಜಿನಗಳು ; ಅಡಿಕೆಕೊಯಿಲು, ಬತ್ತದಕೊಯಿಲು, ಆಲೆ ಮನೆ, ಮಳೆಗಾಲ ಹೀಗೆ ಒಂದಲ್ಲಾ ಒಂದು ಅಡ್ಡಿ. ಎಲ್ಲವನ್ನು ಹೇಗಾದರೂ ಸಿದ್ಧಮಾಡಿಕೊಂಡರೆ ಯಾರಾದರೂ ಒಬ್ಬರು ಹೆಂಗಸರು ಮುಟ್ಟಾಗಿ ಕೂರುತ್ತಿದ್ದರು. ಮನೆಯಲ್ಲಿ ಮೈಲಿಗೆ ಇರುವಾಗ ಹೊರಡುವಂತಿಲ್ಲ. ಎರಡು ಮನೆಯಲ್ಲೂ ಹತ್ತು, ಹದಿನೈದು ಜನ ಹೆಂಗಸರು. ಒಬ್ಬರು ಒಳಗೆ ಬರುವುದರೊಳಗೆ ಮತ್ತೊಬ್ಬರು ಹೊರಗೆ.

ಹೀಗಾಗಿ ತಗ್ಗಿನ ಮನೆ ಆಣೆ ಹಾಗೇ ಉಳಿದಿತ್ತು. ಎತ್ತಿನಗಾಡಿ ಬಿಟ್ಟರೆ ಬೇರೆ ವಾಹನವಿಲ್ಲ. ಬಸುರಿ, ಬಾಣಂತಿ, ತೀರಾ ಎಳೆಯ ಮಕ್ಕಳಾದರೆ ಮಾತ್ರ ಗಾಡಿ. ಇಲ್ಲದಿದ್ದರೆ ನಲವತ್ತು ಮೈಲಿಯಾದರೂ ಕಾಲು ನಡಿಗೆಯೇ. ಹಗಲು—ಇರುಳು ದನಗಳಂತೆ ದುಡಿಯುತ್ತಿದ್ದ ಮಲೆನಾಡ ಜನರಿಗೆ ದಣಿವು ಎಂಬುದು ಗೊತ್ತಿದ್ದರಲ್ಲವೇ ? ನಡಿಗೆಗೆ ಹೆದರುವ ಜನವಲ್ಲ ಅವರು. ಎರಡು ಮನೆಯುವರೂ ಒಟ್ಟಿಗೆ ಹೊರಡಲು ಅಡ್ಡಿಯಾಗಿ ಅದು ಹಾಗೇ ನಿಂತಿತ್ತು.

ತಲೆಯಿಂದ ತಲೆಗೆ, ಹಿರಿಯರ ಬಾಯಿಂದ ಕಿರಿಯರ ಕಿವಿಗೆ ಈ ಸುದ್ದಿ ಹರಿದು ಬಂದು ಈಗ ಸೀತೆಯ ಕಾಲದವರೆಗೆ ಬಂದಿದೆ. ಆಗ ಧರ್ಮಸ್ಥಳದಲ್ಲಿ ಮಂಜಯ್ಯ ಹೆಗ್ಗಡೆಯವರ ಕಾಲ ಮಂಜಯ್ಯಹೆಗ್ಗಡೆ ಎಂದರೆ

ಸಾಕ್ಷಾತ್ ಮಂಜುನಾಥನೇ ಸಾಕಾರವಾಗಿ ಬಂದಂತೆ ಎಂಬ ಲೆಕ್ಕ. ಧರ್ಮಾವತಾರ ಎಂಬ ಬಿರುದಿತ್ತು ಮಂಜಯ್ಯ ಹೆಗ್ಗಡೆಯವರಿಗೆ. ಕೋರ್ಟು ಕಚೇರಿಗಳಲ್ಲಿ ಇತ್ಯರ್ಥವಾಗದ ಅನೇಕ ವಿಷಯಗಳು, ಮಾಟ ಕೂಟಗಳು, ಧರ್ಮಸ್ಥಳದಲ್ಲಿ ಬಗೆಹರಿಯುತ್ತಿದ್ದವು. ಅನೇಕ ಕಳ್ಳದೆವ್ವಗಳೂ ಸ್ಥಳದ ಹೆಸರು ಹೇಳಿದರೆ ಸಾಕು ಹೇಳದೆ ಕೇಳದೆ ಪರಾರಿ.

ಈಗ ಅತ್ತ ಶಾಮಯ್ಯ, ಇತ್ತ ಮಹಾಬಲಯ್ಯ ಎರಡು ಮನೆಯವರಲ್ಲಿ ಹೇಳಿಕೊಳ್ಳುವಂಥ ಮನಸ್ತಾಪವಿರಲಿಲ್ಲ. ಈ ಪಂಚಾಯಿತಿ ಬಗೆಹರಿದರೆ ಸಾಕು ಎನ್ನುವಂತಾಗಿತ್ತು. ಆದರೂ ಕಟ್ಟಳೆ ಮುರಿಯುವ ಧೈರ್ಯ ಯಾರಿಗೂ ಇರಲಿಲ್ಲ. ಎರಡು ಮನೆಯ ಮಕ್ಕಳೂ ತಮ್ಮ ವಂಶದ ಕಟ್ಟಳೆ ಮುರಿಯದೆ ಹಾಗೆಯೇ ವ್ಯವಹಾರ ಮಾಡುವುದಕ್ಕಾಗಿ ತಮ್ಮದೇ ಆದ ಒಂದು ಹೊಸ ಕ್ರಮವನ್ನು ಜಾರಿಗೆ ತಂದುಕೊಂಡಿದ್ದರು. ಅದೂ ಹಿರಿಯರು ಅನುಸರಿಸಿದ ಕ್ರಮವೇ. ಆದರೂ ಮಕ್ಕಳು ಕದ್ದು ಮುಚ್ಚಿ ಏನಾದರೂ ಮಾತಾಡಿದರೆ ಎರಡು ಮನೆಯ ಮಕ್ಕಳಿಗೂ ಗಲೀತ ತಪ್ಪಿದ್ದಲ್ಲ. ಹೀಗೇ ಬಿಟ್ಟರೆ ಅರಿಯದ ಮಕ್ಕಳು ಮತ್ತೂ ಮೀರಿಯಾರು ಎಂಬ ಹೆದರಿಕೆ.

ಈ ದಿನವಾದರೂ ಅಚ್ಚಿ, ಸೀತೆಯರು ಮನೆಯವರಿಗೆ ಗೊತ್ತಿಲ್ಲದಂತೆ ಬಂದವರು. ತಾವು ಭೇಟಿಯಾಗುತ್ತೇವೆ ಎಂಬುದು ಹಿರಿಯರಿಗೆ ಗೊತ್ತಿದೆ ಎಂಬ ವಿಷಯ ಇಬ್ಬರಿಗೂ ಗೊತ್ತು. ಈ ಮಕ್ಕಳು ಅಲ್ಲಿ ಇಲ್ಲಿ ಮುಟ್ಟು-ಮರಗಳ ಸಂದಿ ಲ್ಲಿ ಭೇಟಿಯಾಗಿ ತಮ್ಮಂತೇ ಮರವನ್ನೋ, ಗಂಗೆಯನ್ನೋ ಸಾಕ್ಷಿಯಾಗಿಟ್ಟುಕೊಂಡು ಮಾಡುತ್ತಾರೆಂದು ಹಿರಿಯರಿಗೂ ಗೊತ್ತು. ನೆಪ ಮಾತ್ರಕ್ಕೆ ಶಿಕ್ಷೆ.

ಈಗ ಸೀತೆಗೆ ಶಿಕ್ಷೆಯಾಗುವ ರೀತಿ ಬೇರೆ, ಮಹಾಬಲಯ್ಯನ ಹಿರಿ ಹೆಂಡತಿ ಮಗಳು ಹತ್ತು ವರ್ಷದ ಸೀತೆ. ಎರಡನೇ ಹೆಂಡತಿ ಮೋಟಮ್ಮನಿಗೆ ಗೊತ್ತಿದ್ದದ್ದು ಒಂದೇ ವಿಷಯ. ತಾನು ಮಲತಾಯಿಯಾದವಳು ತನ್ನ ಸವತಿಯ ಮಗಳನ್ನು ಗೋಳು ಹುಯ್ದುಕೊಳ್ಳಲೇಬೇಕು ಎಂಬುದು. ಅವಳಿಗೂ ಕೇವಲ ಇಪ್ಪತ್ತು ವರ್ಷ. ಎರಡು ಹೆಣ್ಣು, ಒಂದು ಗಂಡು, ಮೂರು ಮಕ್ಕಳತಾಯಿ ಇಪ್ಪತ್ತು ವರ್ಷಕ್ಕೆ. ಮಹಾಬಲಯ್ಯ ಒಂದು ಬಗೆಯ ಮಂಕುಮನುಷ್ಯ. ಎರಡನೇ ಹೆಂಡತಿಗೆ ಹೆದರುತ್ತಿದ್ದ ಎಂದರೆ ಸೂಕ್ತ.

ಮಹಾಬಲಯ್ಯನ ತಾಯಿ ಮಾಲಕ್ಷಮ್ಮನಿಗೆ ದನಕಿವ್ಡು. ನಗಾರಿ ಬಡಿದರೂ ಕೇಳುತ್ತಿರಲಿಲ್ಲ. ಮೋಟಮ್ಮನಿಗೆ ಲೊಟಗುಟ್ಟಲು ಅನುಕೂಲವಾಗಿತ್ತು. ಮಾಲಕ್ಷಮ್ಮನೂ ತನ್ನ ಅತ್ತೆತನವನ್ನು ತೋರಿಸದೆ ಬಿಡುತ್ತಿರಲಿಲ್ಲ. ಅಲ್ಲಿಯ ಸಂಸಾರಗಳ ರೀತಿಯದು.

ಮೋಟಮ್ಮನದು ಅನ್ವರ್ಥನಾಮ. ಸರಿಯಾಗಿ ಆರುಗೇಣು ಉದ್ದ ಇದ್ದಳಾಕೆ. ಆಕೆಯ ಮಕ್ಕಳೂ ಉತ್ತುತ್ತೆಯ ಬೊಂಬೆಗಳಂತೆ ಕಪ್ಪಗೆ, ಸಣ್ಣಗೆ, ಮೂರು ಗೇಣುದ್ದ ಇದ್ದವು.

ಸೀತೆ ಆ ಸುತ್ತಮುತ್ತಲ ಪರಿಸರದಲ್ಲಿ ಅಂದದ ಹುಡುಗಿ ಅನಿಸಿಕೊಂಡಿದ್ದಳು. ಆದರೂ ಆಗಿನವರಿಗೆ ಸೌಂದರ್ಯ ಮೀಮಾಂಸೆ ಅಷ್ಟಾಗಿ ತಿಳಿಯದು.

ಕಣ್ಣಿಗೆ ಬಳಿದ ಅರಸಿನ ಹಚ್ಚಗೆ ಎದ್ದು ಕಾಣುವಂಥ ಬಣ್ಣ. ಮೋಟಾದರೂ ದಪ್ಪ ಜಡೆ, ತನ್ನ ಗಟ್ಟಿತನವನ್ನು ಬಿಚ್ಚಿ ತೋರಿಸುವ ಕಣ್ಣುಗಳು, ಆರೋಗ್ಯ ಸುಘಟಿತ ಶರೀರ, ಕುಟಿಲತೆಗೆ ಜಗ್ಗದ ನಿರ್ಭಯ ರೀತಿ.

ಇದೇ ಸೀತೆಯ ವೈಶಿಷ್ಟ್ಯ. ಇನ್ನು ಹೊರ ಅಲಂಕಾರ! ಒಗಿದು ಹೆಣೆದ ಜಡೆ, ಕೊರನಾಡು ಸೀರೆ–ಕಬಾಸ. ಸೀತೆಯ ತಾಯಿಯ ಬೆಳ್ಳಿ ಪಟ್ಟಿಯನ್ನ ಮೋಟಿ ಸೊಂಟಕ್ಕೇರಿಸಿ ಕೊಂಡದ್ದರಿಂದ ಸೀತೆಗೆ ಚಳ್ಳಿ ಹುರಿಯೇ ಪಟ್ಟಿಯಾಗಿತ್ತು. ಹದಿನಾರು ಮೊಳದ ಕೊರನಾಡು ಸೀರೆಯನ್ನು ದಪ್ಪ ಬಾಳೆಕಾಯಿ ಹಾಕಿ ಉಟ್ಟು ಹುರಿ ಬಿಗಿಯುವಳು. ಆ ಮಡಿಲು ಎಂಬುದು ಒಂದು ಉಗ್ರಾಣ. ಆ ಬ್ರಹ್ಮಾಂಡವನ್ನು ತೆಗೆದುನೋಡುವ ಅಧಿಕಾರ ಯಾರಿಗೂ ಇರಲಿಲ್ಲ. ಹುಣಸೇಕಾಯಿ, ನೆಲ್ಲೀಕಾಯಿ, ಮಾವಿನಮಿಡಿ, ಬೆಮ್ಮಾರಲಹಣ್ಣು, ಪಟ್ಟಾರಲಹಣ್ಣು, ಗಜ್ಜುಗ, ಕವಡೆ, ಉಪ್ಪು–ಮೆಣಸಿನ ಪುಡಿ ಪಟ್ಣ ಸಕಲವೂ ಅದರೊಳಗೆ ಐಕ್ಯ. ಸೀತೆಯ ಬಾಯಿ ಸುಮ್ಮನಿರುತ್ತಿರಲಿಲ್ಲ. ಸದಾ ಬಾಯಾಡಿಸುತ್ತಲೇ ಇರುವಳು.

"ಯಂತದೆ ಅದು ಮಡ್ಳುತುಂಬ ? ಯಾವಾಗ್ನೋಡಿದ್ರೂ ದನ ಮೇಲಕ್ ಹಾಕ್ದಾಂಗೆ ಆಗೀತಿರ್ತೀ ? ಅವಲಕ್ಕಿ ಡಬ್ಬ ಮುಟ್ಟಿ ತಗಂಡ್ಯಾ ?" ಮೋಟಮ್ಮನ ಇಂಥ ಪ್ರಶ್ನೆಗಳು ದಿನಾ ಇರುವುದೇ. ಈ ಸುಳ್ಳು ಆರೋಪದ ಪ್ರಶ್ನೆಗಳಿಗೆ ಒರಟಾಗಿ ಉತ್ತರ ಕೊಡುವಳು ಸೀತೆ.

"ಎಂತದದೆ ಮಡ್ಡಾಗೆ ಗೊರಟು ! ಬಾಳೇಕಾಯದೆ ಮಧ್ಯ ತುಂಬ. ಅಜ್ಜಿ ಮಡೀಲಿಟ್ಕಂಡಿರೂ ಅವಲಕ್ಕೀನ ನಾಯಾಕೆ ಮುಟ್ಲಿ ? ಮರದ ಕೆಳಗೆ ಒಂದು ಪ್ಯಾರಲಕಾಯಿ ಬಿದ್ದಿತ್ತು ತಿಂತದನಿ. ಅದೂ ಕಸಕಟ್ಟೆ ಕಾಯಿ"

"ರಂಡೆ ಕುರದೆ ನಿನ್ನ ಸೊಕ್ಕಡಗಾ. ಎಷ್ಟೇ ಮಾತು ನಿಂದು ? ಮುಚ್ಚೇ ಬಾಯಿ."

"ನಾನ್ಯಾಕಾದೇನು ರಂಡೆ ಕುರದೆ ? ನಮ್ಮಮ್ಮ ಮುತ್ತೈದೆ ಸಾವಿತ್ರಿಯಾಗೇ ಸತ್ತದ್ದು."

ಮೋಟಮ್ಮ ಕೈಗೆ ಕಟಿಗೆ ತೆಗೆದುಕೊಳ್ಳುವುದರೊಳಗೆ ಸೀತೆ ಅಲ್ಲಿಂದ ಪರಾರಿ.

## ೨

ಎರಡು ಮನೆಯ ಅಡಿಕೆ ತೋಟಗಳ ನಡುವೆ ಸಣ್ಣದೊಂದು ತೋಡಿನಲ್ಲಿ ಕೆರೆಯ ನೀರು ನಿಧಾನವಾಗಿ ಹರಿದು ಗದ್ದೆಯ ಕಡೆಗೆ ಹೋಗುತ್ತಿದೆ. ಆಸ್ತಿ ಪಾಲಾಗಿ ಎಷ್ಟೋ ವರ್ಷಗಳೇ ಕಳೆದಿವೆ. ಮೊದಲು ಆಣೆ ಪ್ರಮಾಣಗಳಾದಾಗ ಎರಡು ತೋಟಗಳ ಅಂಚಿಗೂ ಮುಳ್ಳುಬೇಲಿ ಹಾಕಿದ್ದಿರಬೇಕು. ಈಗ ದನ, ಎಮ್ಮೆಗಳು ನುಗ್ಗಿ ಬೇಲಿ ಪೂರಾ ಹೋಗಿತ್ತು. ಅಲ್ಲಿ ಬೇಲಿಇತ್ತೆಂಬ ಸಾಕ್ಷಿಗಾಗಿ ಅಲ್ಲೊಂದು ಇಲ್ಲೊಂದು ಬಗಿನೆ ಗೂಟಗಳು ನಿಂತಿವೆ. ಸೀತೆಯ ತೋಟದ ಅಂಚಿನಲ್ಲಿ ಒಂದು ಅಡಿಕೆ ಮಾವಿನಮರವಿದೆ. ಅದರ ಪಕ್ಕ ಒಂದು ನಾಗಸಂಪಿಗೆ ಮರ. ಅಜ್ಜಿ ತೋಟದ ಕಡೆಗೆ ಶೀಗೆ ಹಿಂಡಳು.

ದಪ್ಪ ಕಾಲುಬಳೆ, ಕೈಗೆ ಕರಿ ಬಳೆ, ಕೊರಳಿಗೆ ಕರಾಬಾ ಮಣಿಸರ,

ಗಿಟ್ಟಿಗಿರಿದು ಹೆಣೆದುಕೊಂಡ ಮೋಟು ಜಡೆ. ಒಂದು ದುಗ್ಗಾಣಿಯಷ್ಟಗಲದ ಕುಂಕುಮ ನಡುಹಣೆಯಲ್ಲಿ.

ಅಚ್ಚಿ ಸೀತೆಯರಿಬ್ಬರದೂ ಹೆಚ್ಚು ಕಡಿಮೆ ಒಂದೇ ಅಲಂಕಾರ. ಎರಡು ತೋಟಗಳ ಅಂಚಿನಲ್ಲಿ ಕಾಲುವೆಯ ಆಚೆ–ಈಚೆ ಕಡೆ ನಿಂತು ಇವರ ಸಂಭಾಷಣೆ, ಹಾಡು–ಹಸೆ ಇತ್ಯಾದಿ.

ಅಚ್ಚಿಯದು ಕುದುರೆಮುಖ, ಕಪ್ಪು, ಸಣ್ಣ ಕಣ್ಣು, ಇಲಿ ಬಾಲದ ಜಡೆ, ಉಬ್ಬು ಹಲ್ಲು, ಸೊಣಕಲು ಕೈಕಾಲುಗಳು.

ತನಗಿಂತ ಸೀತೆ ಚಂದ. ಅವಳು ಶೃಂಗೇರಿ, ತೀರ್ಥಹಳ್ಳಿ, ಎಳ್ಳಮಾಸೆ ಕಂಡಿದಾಳೆ. ತುಂಬಾ ಜಾಣೆ. ಹಾಡುಹಸೆಯಲ್ಲಿ ಅವಳಿಗೆ ಬರುತ್ತೆ ಎಂದು ತಿಳಿದುಕೊಂಡಳು.

ಸೂರ್ಯ ಸೊಟ್ಟಾಗುವ ವೇಳೆಗೆ ಇಬ್ಬರು ಹುಡುಗಿಯರೂ ತಮ್ಮ ನಿಯತ ಸ್ಥಾನಕ್ಕೆ ಬಂದು ನಿಂತರು.

ಮೊದಮೊದಲು ಮಾಪಿನ ಮರ, ಹರಿಯುವ ಗಂಗೆ ಅವರ ಪ್ರತಿಮಾತಿನಲ್ಲೂ ನಡುವಿನ ಮೂಕಸಾಕ್ಷಿ. ಮಾತನ್ನ ಆಡಾಡುತ್ತ ನೂರಾರು ವರ್ಷಗಳಿಂದ ಈ ಎರಡು ಮನೆಗಳ ಏಳು–ಬೀಳು, ಮುನಿಸು–ಮನಸ್ತಾಪ, ಕಷ್ಟ–ಸುಖಗಳನ್ನು ಕಂಡ ಆ ಮೂಕ ಸಾಕ್ಷಿಗಳು ಅವರ ಮನದಿಂದ ಮರೆಯಾಗಿ—

"ಬ್ಯಾಗ ಹೇಳ್ಕೊಡೇ ಬಿಸ್ಲು ಅಡಿಕೆ ಮರತ್ತುದೀಗ್ಬಂತು. ಕರೂ ಬಿಟ್ಬಂಡು ಹೋಗ್ಬಕು ಮನೀಗೇ" ಎಂದು ನೇರವಾಗಿ ಹೇಳುವ ಪರಿಗೆ ಬಂದು ನಿಲ್ಲುವುದು.

"ಬೆಳಗ್ಗೆ ಹೇಳ್ಕೊಟ್ಟಿದ್ದ ಹೇಳೇ. ಮುಂದಿಂದ ಹೇಳ್ಕೊಡ್ತ್ನೀ"

ಸೀತೆ ಸಂಗೀತ ಮೇಷ್ಟರಂತೆ ಹೇಳಿದಳು.

"ಯಂತದೆ ಅದು ಲ್ಲು ಲ್ಲು ಲ್ಲು ಲ್ಲು ಅಂದ್ಬಿಟ್ಟೆ. ನಂಗೆ ಮರ್ತೇ ಹೋತು."

"ಸೈ ನೀ ಕಲೀಲಿಲ್ಲ, ನಾ ಮರೀಲಿಲ್ಲ."

"ನಾ ದಡ್ಡೀಕಣೇ, ಇನ್ನೊಂದಪ ಹೇಳ್ಕೊಡು"

ಮತ್ತೆ ಲ್ಲುಲ್ಲು–ರುಳಿಯ ಪುನರಾವರ್ತನೆಯಾಯ್ತು. ಅಚ್ಚಿ ಅದೇ ಕೀರಲು ದನಿಯಲ್ಲಿ ಹಾಡಿದಳು. ಮಧ್ಯೆ ಮಧ್ಯೆ ಸೀತೆ ಮಡಿಲಿನಿಂದ

ಏನನ್ನೋ ತೆಗೆದು ಬಾಯಿಗೆ ಎಸೆದುಕೊಳ್ಳುತ್ತಿದ್ದದ್ದನ್ನು ಕಂಡ ಅಚ್ಚಿ ಕೇಳಿದಳು—

"ಯಂತದೆ ಅದು ಗಳಿಗ್ಗೊಂದಪ ಬಾಯಿಗೆ ಯಸ್ಕಳೋದು ?"

"ದನ ಅಟ್ಕಂಡು ಗುಡ್ಡಕ್ಹೋಗ್ತಾನಲ್ಲ ಆ ಹುಚ್ಚಗೆ ಹೇಳಿದ್ದೆ ಬೆಮಾರಲ ಹಣ್ಣು ತಂದ್ಕೊಡೋಂತ ಕಳ್ಳ ಮುಂಡೇಗಂಡ ಗೋಟಡಿಕೆ-ವಿಳ್ಳೆದೆಲೆ ಕೊಟ್ಹೋರತೂ ಹಣ್ಣು ಕೊಡೂದಿಲ್ಲ. ಗಳಿಗ್ಗೊಂದಪ ಅಡಿಕೆ ತಗೊಂಡ್ರೆ ಅಪ್ಪ ಬೈತಾನೆ. ಅದ್ಕೇ ಅಪ್ಪ ಮನೇಲಿಲ್ದೇ. ಇದ್ದಾಗ ಒಂದಷ್ಟು ಭರ್ತಿ ಅಡ್ಕೆ ತಂದ್ಕಂಡು ಒಂದ್ಕಡೆ ಬಚ್ಚಿಟ್ಕಂಡದನಿ ಅವ ಗೇರ್ಹಣ್ಣು, ಬೆಮ್ಮಾರಲ ಹಣ್ಣು, ಕಲ್ಸಂಪ ಹಣ್ಣು ತಂದ್ಕೊಟ್ರೆ ನಾನ್ಕೀಕೆ ಅಡಿಕೆ, ತರಗೆಲೆ ಕೊಡ್ತನಿ. ಇವತ್ತು ನಾಕೇ ಅಡಿಕೆ ಕೊಟ್ಟೆ. ಒಂದ್ಬಗಸೆ ಅಷ್ಟು ಹಣ್ಣ ತಂದಿದಾನೆ. ಇನ್ನಷ್ಟು ಹಣ್ಣ ತಂದಿದ್ರೆ ಅವನ ಕೈಯೇನು ಚೊಟ್ಟಾಗ್ತಿತ್ತೋ ಯಂತದೋ."

ಈಗ ಅಚ್ಚಿಗೆ ಸೀತೆ ಹೇಳಿದ ಪುರಾಣವೆಲ್ಲಾ ಮರೆತುಹೋಯ್ತು. ಮನದಲ್ಲಿ ಉಳಿದ ವಿಷಯವೆಂದರೆ ಸೀತೆಯ ಮಡಿಲಿನಲ್ಲಿಯ ಬೆಮ್ಮಾರಲ ಹಣ್ಣು.

ಎರಡು ಮನೆಗಳಲ್ಲೂ ತಿಂದುಣ್ಣುವುದಕ್ಕೆ ಸಂಮೃದ್ಧಿ. ಅರಳು, ಅವಲಕ್ಕಿ ಹುರಿಯಿಟ್ಟು, ಕೆಂಡರೊಟ್ಟಿ ಇತ್ಯಾದಿ ತಿಂಡಿಗಳು ಸಾಕಷ್ಟು ಇರುತ್ತಿದ್ದವು. ಮಧ್ಯಾಹ್ನದ ತಿಂಡಿಗಳು ಬೇರೆ. ಕೋಡುಬಳೆ, ಚಕ್ಲಿ, ಕರಿದ ರೊಟ್ಟೆ ಮೊದಲಾದವು. ಆದರೆ ಈಗಿನ ತಿಂಡಿಗಳನ್ನು ನೋಡುವುದಿರಲಿ, ಅವುಗಳ ಹೆಸರೇ ಕೇಳಿರಲಿಲ್ಲ ಆಗ.

ಹೊಟ್ಟೆ ಬಿರಿಯ ತಿಂದಿದ್ದರೂ ಮಕ್ಕಳಿಗೆ ಈ ಕಾಯಿ–ಕಸರು ಬಾಯಾಡಿಸದಿದ್ದರೆ ತೃಪ್ತಿಯಿಲ್ಲ. ಅಚ್ಚಿಯ ಗುಡ್ಡದಲ್ಲೂ ಸಿಗುವದೇ ಈ ಹಣ್ಣುಗಳು. ಗಂಡು ಹುಡುಗರು ತಂದು ಸ್ವಾಹಾ ಮಾಡುತ್ತಿದ್ದರು. ಹುಡುಗಿಯರಿಗೆ ಒಂದೊಂದು ಸಲ ಸಿಕ್ಕುತ್ತಿರಲಿಲ್ಲ.

ಅಚ್ಚಿ ಗೋಗರೆದಳು—

"ನಂಗೊನ್ನಾಕು ಹಣ್ಣು ಯಸೆಯೇ ? ಜತೀಗಿರೋರಿಗೆ ಕೊಡ್ದೆ ತಿಂದ್ರೆ ಮುಂದಿನ್ಜನ್ಮಕ್ಕೆ ಬಲಗೈ ಚೊಟ್ಟಾಗತ್ತಂತೆ"

"ನಂಗೂ ಗೊತ್ತು ಕಣೇ. ಹಣ್ಣು ಹಂಚಿ ತಿನ್ನು, ಹೂವ್ನ ಕೊಟ್ಟು ಮುಡೀಂತ ಗಾದೆ ಅದೆಯಲ್ಲ. ಬ್ಯಾರೆಯೋರಿಗೆಲ್ಲ ಕೊಟ್ಟೀಕೊಡ್ತನಿ. ನಾನು ನಿಂಗೆ ಕೊಡಬಾರ್ದಲ್ಲೇ. ಆಣೆ ತಪ್ಪಿದ್ಹಾಂಗೆ ಆಗುತ್ತಲ್ಲೇ. ಆಮ್ಯಾಲೆ ಧರ್ಮಸ್ಥಳದ ಮಂಜ್ನಾತ ಬಂದು ನಿನ್ನ ಕುತ್ಗೆ ಹಿಚ್ಕಿದ್ರೆ ಏನ್ಮಾಡ್ತಿಯೆ ?"

ಮನೆ ಹಿರಿಯರ ನಡವಳಿಕೆ, ಮಾತು, ಪರಿಹಾರಗಳು ಮಕ್ಕಳಿಗೆ ಮೇಲ್ಪಂಕ್ತಿಯಾಗಿತ್ತು.

"ಮರದಾಗೆ ಬಿಡೂ ಹಣ್ಣು–ಹಂಪ್ಲಿಗೆ ದೋಷಿಲ್ಲಂತೆ ಕಣೇ. ಯಳೆ ಯಷ್ಟಮಿ ದೇವತಾರ್ಥದಾಗೆ ನಂಗೆ ಒಂದ್ಕಾಸು ದಕ್ಷಿಣೆ ಕೊಟ್ಟದಾರೆ ಹಾಲ ಮತ್ತೂರು ಅಜ್ಜ. ಮುಂದಿಂದಪ ಎಳ್ಳಮಾಸೀಗೆ ತೀರ್ಥಳ್ಳೀಗೆ ಯಲ್ಲಾ ಕರ್ಕಂಡು ಹೋಗತ್ತಂತೆ ಅಪ್ಪ. ಆಗ ಸಕ್ರೆಕಾಳು, ಬತ್ತಾಸು ತಗಾಳಾ ಣಾಂತ ಇಟ್ಕಂಡದನಿ ಕಾಸ್ನ. ಆದ್ನೇತ್ರಾಳದು ಅರಶಿನ ಬಟ್ಟೇಲಿ ತಪ್ಪಾಕ್ಣೆ ಕಟ್ಟಿಟ್ರಾತು."

"ನಾಲ್ಕು ಬೆಮ್ಮಾರಲ ಹಣ್ಣಿಗಾಗಿ ತನ್ನ ಬದುಕಿನ ಏಕೈಕ ಆಸ್ತಿ ಒಂದು ಕಾಸನ್ನ ಮಂಜುನಾಥನಿಗೆ ಮೀಸಲಿಡಲು ತಯಾರಾದಳು ಅಚ್ಚಿ. ಸೀತೆ ತನ್ನ ಮಡಿಲಿನ ಭಂಡಾರಕ್ಕೆ ಕೈಹಾಕಿ ಒಂದು ಹಿಡಿ ಬೆಮ್ಮಾರಲ ಹಣ್ಣನ್ನು ತೆಗೆದು ಕೈಯಲ್ಲಿ ಹಿಡಿದು—

"ಕ್ವಾ, ತಗಳೇ, ಸೆರಗ್ನ ಅಗ್ಲ ಮಾಡಿ ಹಿಡ್ಕಾ ಯಸೀತನಿ. ಅದೇನಾರಾ ಕ್ಯಳಗೆ ಹರೀತಿರೂ ಅಬ್ಬೆ ನೀರಿಗೆ ಬಿದ್ರೆ ನಂಗೂ ಇಲ್ಲ, ನಿಂಗೂ ಇಲ್ಲ. ಯಲ್ಲ ಕೊಚ್ಕಂಡು ಹೋಗತ್ತೆ. ಭಿಮ್ಗೆ ಹಿಡ್ಕಾ ಸೆರಗ್ನಾ."

ಹರಿಯುತ್ತಿದ್ದ ಸಣ್ಣ ಕಾಲುವೆಯ ಅಂಚಿಗೆ ಕೂತು ಸೆರಗೊಡ್ಡಿದಳು ಅಚ್ಚಿ. ಹಣ್ಣು ಎಸೆದಳು ಸೀತೆ. ಒಂದೆರಡು ಹಣ್ಣುಗಳು ನೀರಿಗೆ ಬಿದ್ದು ತೇಲಿಹೋದವು.

"ಹೋದ್ರೆ ಹೋತು ಬಿಡೆ. ಅದು ಗಂಗೆಗಾತು. ಅಲ್ನೋಡ್ಕ ನಿನ್ನ ಸೆರಗು! ಮದುವ್ಯಾಗೂ ಹುಡುಗೀರು ಹಂಗೆ ಸೆರಗ್ನ ತೆಗೀಬಾರ್ದು ಕಣೇ ಗಂಡಸ್ರಿಗೆ ಕಾಣಸ್ವಾರ್ದಂತೆ ಯದೇನ. ಅಜ್ಜ ಹೇಳ್ತು."

"ಇಲ್ಯಾರದಾರೇ ಗಂಡಸ್ರೂ ಕಾಣ್ಸಾಕೆ? ನಾನು ನೀನು ಇಬ್ರೇ ಸೈಯಲ್ಲ."

"ಯಾಕೇ ಸೂರ್ಯ ಗಂಡ್ಸಲ್ವನೇ ? ಕುಂತಿ ಮದುವೆಗೆ ಮುಂಚೆ ಹೊಳೇಲಿ ಮೈತ್ಸಳದು ಅದೇತಂದೋ ಜಪ ಮಾಡಿದ್ಲಂತೆ. ಆಕಾಶದಾಗೆ ಉರೀತಿದ್ದ ಸೂರ್ಯ ಕುಂತಿ ಎದ್ರಿಗೆ ಬಂದು ನಿಂತ್ಬಿಟ್ನಂತೆ. ಅವಳಿಗೆ ಹೆದ್ರಿಕೆ ಯಾತಂತೆ. ಕಣ್ಮುಚ್ಕಂಡುಬಿಟ್ಳಂತೆ. ಅದೆಂತ ಮಂಗ ಮಲಕು ಮಾಡಿದ್ನೋ ಮಾರಾಯ, ತಕ್ಷಣ ಕುಂತಿ ಬಸ್ರಾಗಿ ಕರ್ಣನ್ನ ಅಲ್ಲೇ ಹಡದ್ಲಂತೆ. ಅಷ್ಟೊತ್ತಿಗೆ ಸೂರ್ಯ ಪರಾರಿ! ಆಕಾಶಕ್ಕೆ ನೆಗ್ದಾಗ್ಹೋಗಿತ್ತಂತೆ. ಕುಂತಿಗೆ ಇಪ್ರೀತ ಹೆದರ್ಕೆ ಆತಂತೆ. ಮದಿವ್ಯಾಗಿಲ್ಲ ಮಗು ಹುಟ್ಯಾತು! ಯಂತದ ಮಾಡ್ತಾಳೆ? ದೊರೆ ಮಗಳಲ್ವಾ ? ಮನೀಗೆ ಮಗಿನ್ನ ಕರಕೊಂಡು ಹೋದ್ರೆ ಅವಳೀಗೆ ಬಹಿಷ್ಕಾರ ಹಾಕ್ತಾರೆ. ಅದಕೇ ಕರ್ಣನ್ನ ಒಂದು ಅಡಿಕೆ ಹಾಳೇಲಿ ಮಲಗ್ಸಿ ಹೊಳೇಲಿ ತೇಲಿ ಬಿಟ್ಳಂತೆ. ಪಾಪ ಕಡೇತನಕ ಕರ್ಣಂಗೆ ಯಾಷಾಟಿ ಕಷ್ಟಾತು ನೋಡು ದಿನಾ ಹುಟ್ತಾನೆ ಈ ಅಪ್ಪಾ ಅನ್ನಿಸ್ಕಂಡ ಸೂರ್ಯ. ಒಂದಿನಾ ನಾರ ಭೂಮಿಗೆ ಬಂದು ಮಗಂಗೆ ಹೇಳ್ಬಾರ್ದಾಗಿತ್ತಾ ನಾ ನಿನ್ನಪ್ಪಾಂತ! ಕಡೀಗೆ ಮಗ ಸಾಯೂ ಹೊತ್ನಾಗೆ ಹೇಳಿದ್ನಂತೆ. ಯಾತಕ್ಕೆ ಮಣ್ಣು ಹುಯ್ಕಳೂಕೆ. ಒಂದೊಂದಪ ಈ ಗಂಡಸ್ರು ಇಪ್ರೀತ ಮೋಸ ಮಾಡ್ತಾರೆ ಕಣೇ !"

ಅಚ್ಚಿಯ ಬಾಯಿ ಬೆಮ್ಮಾರಲ ಹಣ್ಣನ್ನು ಮೆಲುಕು ಹಾಕುತ್ತಿದ್ದರೂ ಅವಳು ಬೆರಗಾಗಿ ಕೇಳಿದಳು ಸೀತೆಯ ಉದ್ದಪಾದ ವ್ಯಾಖ್ಯಾನವನ್ನ. ಅವಳ ಮಟ್ಟಿಗೆ ಸೀತೆ ಇನ್ನೂ ಬಾಲೆಯಾಗಿದ್ದರೂ ಮಹಾ ಜ್ಞಾನಿಯಾಗಿ, ವಿಜ್ಞಾನಿ ಯಾಗಿ ಕಂಡಿರಬೇಕು. ಅವಳು ತನ್ನ ಪಿಳಚು ಗಣ್ಣನ್ನೇ ಸಾಧ್ಯವಾದಷ್ಟು ಅರಳಿಸಿ ಕೂತಿದ್ದಳು. ತನಗೇ ತಿಳಿಯದಂತೆ ತನ್ನ ಸೆರಗನ್ನು ಭದ್ರವಾಗಿ ಹೊದ್ದಳು.

"ಲೇ ಸೂರ್ಯ ದೇವ್ರಲ್ಲನೇ ? ಹಂಗೆಲ್ಲ ದೇವ್ರನ್ನ ಬೈದ್ರೆ ಪಾಪ ಬರುತ್ತಂತೆ ಕಣೇ."

ಸೀತೆ ಮೂತಿ ಸೊಟ್ಟ ಮಾಡಿದಳು—

"ನಾ ಏನು ಸುಳ್ಳು ಹೇಳಿದ್ನೇ ಪಾಪ ಬರೂಕೇ ? ದೇವ್ರೆಲ್ಲ ಹಂಗೆ ಹೆಂಗಸ್ರೀಗೆ ಮೋಸ ಮಾಡ್ಬೋದಾ ? ಆ ದೇವೇಂದ್ರ ಸತೀಗಾ ಅಹಲ್ಯೆಗೆ

ಮೋಸಾ ಮಾಡಿದ್ನಂತೆ. ಪಾಪ ಅವಳು ರಾಮು ಬರೂತಂಕ ಕಲ್ಲಾಗಿ ಬಿದ್ದಿದ್ಲಂತೆ."

"ನಿಂಗೆ ಇದ್ನೆಲ್ಲ ಯಾರು ಹೇಳಿದ್ರೀ ?"

"ಯಾಕೇ ಅಡಿಕೆ ಕೊಯಿಲ್ನಾಗೆ ತೂದೂರುಕಟ್ಟೆ ತಿಪ್ಪಾ ಜೋಯಿಸ್ರು ಪುರಾಣ ಹೇಳ್ತಿರಲಿಲ್ವಾ ದಿನಾ ರಾತ್ರೆಹೊತ್ತು."

"ಹಂಗಾರೆ ಅಗ್ನೀನೂ ಗಂಡ್ಸೆ ಅಲ್ವಾ ?"

"ಹೌದು ಮತ್ತೇ. ನಾವೇನು ಮೈತ್ವಳೀಬಕಾರೆ ಬೆಂಕೀ ಎದುರ್ಗೆ ತ್ವಳೀತಿವಾ ? ತುಂಡುಟ್ಕಂಡು ಬಚ್ಚಲಾಗೆ ಕೂತ್ಕಂಡು ಮೈತ್ವಳೀತಿವೀ. ಗಂಗೆ ಹೆಂಗ್ಸಲ್ವಾ ? ಆಕೆ ನಮ್ಮನ್ನ ಬರೀ ಮೈಯಾಗೆ ನೋಡಿದ್ರೂ ಅಡ್ಡಿಲ್ಲ."

"ಹಂಗಾರೆ ಗಂಡಸ್ರು ಲಂಗೋಟಿ ಹಾಕ್ಕಂಡು ಸ್ನಾನ ಮಾಡ್ತಾರಲ್ಲ. ಗಂಗೆಗೆ ನಾಚ್ಕೆ ಆಗುಲ್ಲನೇ ?"

"ನೀನೊಬ್ಬ ಪೆದ್ದಿ ! ಗಂಗೆಗೆ ಯಂತದಕ್ಕು ದೋಷಿಲ್ಲ ಕಣೇ. ಪಾಯ್ಖಾನೆ ತೊಳ್ಯೂಕೂ ನೀರೇ, ದೇವರ ಅಭಿಷೇಕಕ್ಕೂ ನೀರೇ. ನೀರಿಲ್ದೆ ಯಾವ ಕೆಲ್ಸಾಗತ್ತೆ ?"

"ನೀ ರಾಮಾಯ್ಣ, ಮಾಬಾರ್ತ ಯಲ್ಲಾ ಕೇಳಿದೀಯಾ ?"

"ಹುಂ, ಸುಮಾರು ಕೇಳೀದನಪ್ಪ. ಆ ತಿಪ್ಪಾ ಜೋಯಿಸ್ರು ಭದ್ರಗು ನೆಟ್ಟಗೆ ಹೇಳ್ತಾರಾ ? ಗಳಿಗ್ಗೊಂವಪ ಕಾಫಿ ಕುಡಿಯೋದು, ನಶ್ಯ ಹಾಕ್ಕಳೂದು ಇದೇ ಕಸಬು. ಸಮಾ ಹೇಳಿದ್ರೆ ಯಾಪಾಟ ಹೇಳ್ಬೋದು."

"ನಾ ರಾಮಾಯ್ಣ ಸುಮಾರು ಕೇಳೀದನಪ್ಪ. ರಾಮು ತುಂಬಾ ಒಳ್ಳೇನು ಅಲ್ವಾ ?".

ತಾನೂ ಬುದ್ಧಿವಂತೆಯೆಂದು ತೋರಿಸಿಕೊಳ್ಳಲು ಯತ್ನಿಸಿದಳು ಅಚ್ಚಿ-ಸೀತೆಯ ಉತ್ತರವನ್ನು ಕಾಯ್ದಳು.

ಸೀತೆ ಹತ್ತಿರ ಬಂದು ನಿಂತ ಎಳೆಗರುವಿನ ಕೊರಳನ್ನು ಕೆರೆಯುತ್ತ ನಿಧಾನವಾಗಿ ಅಂದಳು–

"ಅಡ್ಡಿಲ್ಲ, ರಾಮು ಒಳ್ಳೇನೇನೋ ನಿಜ. ಆದರೆ ಪಾಪಾ ತನ್ನ ಹಿಂದೆ ಕಾಡ್ನಾಗೆಲ್ಲ ಅಲ್ದು, ಕಷ್ಟಪಟ್ಟು ಕಡೀಗೆ ಆ ರಾವಣ ಆಕೇನ ಕದ್ಗಂಡ್ಹೋಗಿ ಯುದ್ಧಮಾಡಿ ಯಲ್ಲ ಆದ್ಮೇಲೆ ಆಕೆ ಎಷ್ಟು ಒಳ್ಳೇಳೂ ಅಂತ

ಗೊತ್ತಿದ್ರೂ ಯಲ್ಲಾರ ಎದುರ್ಗೂ ಬೆಂಕೀಗೆ ಹಾಕೂದನೇ ? ಸೀತೆ ಪತಿವ್ರತೆ, ಆದ್ಕೇ ಅಗ್ನಿ ಆವಳ್ನ ಸುಡ್ಲಿಲ್ಲ. ಆದೆಲ್ಲ ಗೊತ್ತಿದ್ರೂ ಮತ್ತೆ ಬಸ್ರಿ ಹೆಂಗಸ್ನ ಕಾಡಿಕ್ಕಳಿಸೀದಾನೆ, ಅಗ್ಸ ಯಂತದೋ ಅಂದಾಂತ. ಅಗ್ಸ ಅವನ ಹೆಂಡ್ತೀನ ಒಯ್ಕಂಡ್ರೆ ಇವಗೇನಾತೋ ? ಪಾಪ ಆ ಸೀತೆಗೆ ಕಡೇತಂಕ ಕಷ್ಟಕೊಟ್ಟ. ನಂಗಂತೂ ರಾಮನಂತ ಗಂಡ ಬ್ಯಾಡಪ್ಪಾ. ಕೃಷ್ಣ ಒಳ್ಳೋನಪ್ಪ ಹುಡುಗಾಟದಾಗೆ ತುಸ ಚಾಷ್ಟೆ ಮಾಡಿದ್ದಾನು. ಆದರೆ ಆಪಾಟಿ ಜನ ಹೆಂಡ್ತಿರಿದ್ರೂ ಒಬ್ರಿಗಾರಾ ತುಸಾನಾರಾ ಕಷ್ಟಕೊಡ್ಲಿಲ್ಲ. ದ್ರೌಪತೀಗನ್ಕ ಎರಡ್ಮೂರ್ಸಲ ಉಪ್ಕಾರಾ ಮಾಡಿದಾನೆ ಕೃಷ್ಣ."

ಅಜ್ಜಿಗೆ ಮುಂದೇನು ಹೇಳಬೇಕೆಂದು ತೋರಲಿಲ್ಲ. ಯಾವ ರೀತಿ ಮಾತಾಡಿದರೂ ತಾನು ಪೆದ್ದಿಯಾಗುತ್ತೇನೆ. ಸೀತೆಗೆ ಈ ಪಾಟಿ ಪುರಾಣ, ರಾಮಾಯ್ಣ ಎಲ್ಲಾ ಹೆಂಗೆ ತಿಳೀತೋ. ನಂಗೆ ಹಾಳಾದ್ದು ಬ್ಯಾಗ ಗ್ಯಾಪ ಗಾನೇ ಒರುಲ್ಲ ಎಂದು ಯೋಚಿಸುತ್ತಿದ್ದಳು. ಹಂಡಕರು ಕಾಳಿಂದಿ ತನ್ನ ಕತ್ತನ್ನು ಉದ್ದ ಮಾಡಿ ಸೀತೆ ಕೆರೆಯುವುದಕ್ಕೆ ಅಣಿ ಮಾಡಿಕೊಟ್ಟಿತು. ಸೀತೆ ಆದರ ಕಿವಿಯ ಉಣ್ಣೆ ಕಿತ್ತು ಹಾಕಿ ಹದವಾಗಿ ಕೆರೆದಳು. ಕಾಳಿಂದಿ ಅರೆ ಗಣ್ಣು ಮುಚ್ಚಿ ಆ ಕೆರೆತದ ಸುಖವನ್ನನುಭವಿಸುತ್ತ ಹಾಗೇ ನಿಂತು ಕೊಂಡಿತು.

"ಬರೀ ಮಾತ್ನಾಗೇ ಆತಲ್ಲೇ, ಹಾಡ್ನ ಪೂರಾ ಹೇಳೇ ಕೊಡ್ಲಿಲ್ಲ ನೀನು."

"ನುಡಿ ತಿರಗಾಮುರಗಾತಲ್ಲೇ. ನಾಳೆ ಸಮನಾಗಿ ಹೇಳ್ಕೊಡ್ತನಂತೆ."

"ಇನ್ನೂ ಯಾಪಾಟಿ ಆದೆ ನಳಚರಿತ್ರೆ ನಾ ಪೂರಾ ಕಲಿಯೂದು ಎಂದಿಗೇ ?"

"ಆದಕ್ಕೇ ನಾ ಬ್ಯಾಡಾಂದದ್ದು. ಉರಟ್ಣೆ, ಉಯ್ಯಾಲೆ, ಹಸೆಕರದ್ದು, ಆರ್ತಿ ಎತ್ತಿದ್ದು ಎಲ್ಲ ಹೇಳಿಸ್ಕಳ್ಳೇಂದ್ರೆ ಕೇಳಲಿಲ್ಲ ನೀನು. ಬ್ಯಾಗ ಮದಿ ವ್ಯಾದ್ರೆ ಆಗೇನ್ಮಾಡ್ತಿ ಹೇಳು ? ಒಂದಾರ ಉರಟ್ಣೆ ಹಾಡು ಬರಲ್ವಲ್ಲೆ ನಿಂಗೆ ?"

"ನಂಗಿಂತ ಮುಂಚೆ ನಿಂಗೇ ಮದಿವ್ಯಾಗತ್ತೆಕಣೆ, ನೀ ಚೆಂದಾಗಿದ್ದಿ. ತುಂಬ ಹಾಡ್ಹೇಳ್ತಿ. ನಾ ಕಪ್ಗದನಿ, ನನ್ಯಾರು ಮದಿವ್ಯಾಗ್ತಾರೆ ?"

"ನನ್ನ ಮದಿವ್ಯಾದರೆ ನೀ ಬರೂಹಂಗಿಲ್ಲ ; ನಿನ್ನ ಮದಿವ್ಯಾದರೆ ನಾ ಬರೂಹಂಗಿಲ್ಲ. ಯಂತದಪ್ಪ ಈ ಸುಡಗಾಡು ಆಣೆ ಬಡ್ಕಂಡು ಕೂತಿದಾರೆ. ಯರಡ್ಮನೆಯೋರೂ ಒಟ್ಗೆ ಅತ್ಲಾಗಿ ಧರ್ಮಸ್ಥಳಕ್ಹೋಗಿ ಇದ್ನ ಒಡದು ಬರೂದಬಿಟ್ವು."

ಸೀತೆಗೆ ತಿಳಿದಿರುವಷ್ಟು ವಿಷಯ ತನಗೆ ತಿಳಿದಿಲ್ಲವೆಂದೂ ಅವಳು ತನಗಿಂತ ತುಂಬಾ ಜಾಣೆಯೆಂದೂ ಮೆಚ್ಚಿಕೊಂಡಳು ಅಚ್ಚಿ.

ವಯಸ್ಸಿನಲ್ಲಿ ಇಬ್ಬರೂ ಒಂದೇ. ಇಬ್ಬರಿಗೂ ಹತ್ತು ವರ್ಷ ತುಂಬಿತ್ತು. ಆಗಿನ ವಾತಾವರಣಕ್ಕೆ ಸೀತೆಯ ತಿಳುವಳಿಕೆ ಹೆಚ್ಚೆಂದೇ ಹೇಳಬೇಕು. ಮನೆಗೆಲಸ ಎಲ್ಲಾ ಮಾಡುತ್ತಿದ್ದಳು. ಸೋದರತ್ತೆ ಕಡೆಯಿಂದ ಎಲ್ಲಾ ಹಾಡುಗಳನ್ನೂ ಕಲಿತಿದ್ದಳು. ಮುಖ್ಯವಾಗಿ ಧೈರ್ಯದ ಹುಡುಗಿ.

• "ಅಜ್ಜನೂ ಹಂಗಂತಿದ್ದ. ಯಂತದ ಮಾಡ್ತಾರೋ ಏನೋ."

"ಹೋದ್ರೆ ಮನೆಯೋರೆಲ್ಲ ಹೋಗ್ಬಕಂತೆ ಕಣೇ. ನಮ್ಮನೇಲಿ ಕಾಶತ್ತೆ ಹಡಿಯೂಕೆ ಬಂದಿದಾರೆ. ನಿಮ್ಮನೇಲಿ ನಿನ್ನ ಚಿಕ್ಕಮ್ಮ ಬಾಣಂತಿ. ಇನ್ನು ಹೋಗೂದೆಂತದು ಅಮಟೇಕಾಯಿ"

ಸೀತೆ ಎದ್ದು ನಿಂತಳು ವೈಶಾಖದ ಬಿಸಿಲಿಗೆ ಅವಳು ಜೋನಿ ಬೆಲ್ಲದಲ್ಲಿ ಕಲಸಿಟ್ಟುಕೊಂಡಿದ್ದ ಕಂಚಿಕುಂಕುಮ ಕರಗಿ ಬುಲಾಕಿನ ಮುತ್ತಿನಂತೆ ಹುಬ್ಬಿನ ನಡುವಿನವರೆಗೆ ಇಳಿದುಬಂದಿತ್ತು.

ಅಚ್ಚಿಯೂ ಏಳುತ್ತಾ–

"ನಿನ್ನ ಮಕ ನೋಡ್ಕಳ್ಳೇ ಯಾಪಾಟ ಕೆಂಪ್ಗಾಗದೆ ಈ ಬ್ಯಾಸಿಗೇಲಿ ಬೆಲ್ಲದ ಕುಂಕ್ಮ ಇಟ್ಕಂಡ್ರೆ ಹಿಂಗೇ ಇಳಕಂಬರುತ್ತೆ. ನಾಳೆ ಇನ್ನೊಂದ್ಸಡಿ ಪೂರಾ ಹೇಳ್ಕೊಡೆ ಮರೀಬ್ಯಾಡ. ನಂಗೂ ಕೆಲ್ಸದೆ ಮನೇಲಿ. ಬಂದ್ ಗಜ್ಗ ಆಡೂ ಹಂಗಿಲ್ಲ. ಕವ್ಡೆ, ಚೌಕಾಬಾರಾ ಆಡೂ ಹಂಗಿಲ್ಲ. ಸುಮ್ಗೆ ದೂರ್ದೂರ ಕೂತ್ಗಂಡು ಮಾತಾಡೂದೆ ಸೈ ನಾವು"

ಸೀತೆ ಬೆರಳಿನಿಂದ ಇಳಿದ ಕುಂಕುಮ ಮೇಲಕ್ಕೆ ತಿದ್ದಿಕೊಂಡಳು.

"ಮಾವಿನ ಮರವೇ ನೀನು, ಗಂಗೆ ಸಾಕ್ಷಿಯಾಗಿದ್ದೀರಿ. ಅಚ್ಚಿ ತಪ್ಪಾಣೆಕ್ಕೆ ಕಟ್ಟಿಡ್ತಾಳಂತೆ. ನಾನೇನೂ ಕಟ್ಟಿಡುಲ್ಲ."

"ನೀನೂ ಕಟ್ಟಿಡಬಕಂತ್ತೇಂತ ಹೇಳು ಮರವೇ."

"ಅವಳ ಹತ್ರ ಕಾಸಿಲ್ವಂತೇನ್ನ ಮರವೇ. ಅಜ್ಜಿ ವ್ಯೈಲ್ಗೆ ಮುಟ್ಗೆಳೂ ಕೇಂತ ಮೂರ್‍ಕ್ಯಾಸ್ನ ಇಟ್ಕಂಡದಾಳೆ. ಸ್ವೈ ನಂಗ್ಯಾರು ಕೊಡ್ತಾರೆ ಕಾಸ್ನ."

ಸೀತೆಯ ಕಣ್ಣುಗಳು ತೋಟದ ಕೆಳಗಿನ ಗದ್ದೆಯ ಕಡೆ ಹೋಯಿತು. ಸಂಜೆಯ ಬಿಸಿಲು ಚುರುಕಾಗಿಯೇ ಇತ್ತು. ಹಿಂದಿನ ಧರೆಯನ್ನಿಳಿದು ಗದ್ದೆಯ ಬದುವಿನ ಮೇಲೆ ಇಬ್ಬರು ಗಂಡಸರು ನಡೆದು ಬರುತ್ತಿರುವುದು ಕಂಡಿತು. ಮುಂದೆ ಬರುತ್ತಿದ್ದ ಮುದುಕರು ಕಚ್ಚೆಪಂಚೆಯನ್ನ ಮೇಲಕ್ಕೆ ಎತ್ತಿ ಕಟ್ಟಿ ಕೋಲೂರಿ ಬರುತ್ತಿದ್ದರು. ಅವರ ನೆತ್ತಿಯ ಮೇಲೆ ಮಡಿಸಿಟ್ಟು ಕೊಂಡಿದ್ದ ಪಾಣಿ ಪಂಚೆ ಇವೆ. ಆದರ ಹಿಂದೆ ಬಳ್ಳಿ ದೇಹದ ಇನ್ನೊಬ್ಬ ಗಂಡಸರು ಬರುತ್ತಿದ್ದರು.

ಸೀತೆ ಕಣ್ಣಿಗೆ ಎಡಗೈ ಮರೆಮಾಡಿ ನೋಡಿದಳು. ಬರುವವರು ಯಾರೆಂದು ತಿಳಿಯಿತು. ಆಚ್ಚಿಗೆ ಕುತೂಹಲವಾಯಿತಾದರೂ ಬರುತ್ತಿದ್ದವರು ಅವಳಿಗೆ ಕಾಣುತ್ತಿರಲಿಲ್ಲ. ಅವಳಂದಳು–

"ಮಾವಿನ ಮರವೇ, ಗದ್ದೆ ಬದೂ ಮ್ಯಾಲೆ ಯಾರೋ ಬರ್ತ್ತದಾರೇಂತ ಕಾಣುತ್ತೆ ಅದ್ಯಾರು ನನ್ಮನೀಗೋ. ಅವರ್ಮನೀಗೋ ಕೇಳು ಮರವೇ"

"ಮುಂದ್ಗಡೆ ಬರ್‍ತ್ತಿರೂದು ನಾರದಭಟ್ರು, ಹಿಂದ್ಗಡೆ ಬರ್‍ತ್ತಿರೂದು ಕುಡವಳ್ಳಿ ದೋಟೀ ಸುಬ್ಬಯ್ಯಾಂತನ್ನು ಮರವೇ ?"

"ಈಗ ಯಾಕ್ಬರ್ತ್ತದಾರೋ ?"

"ಯಾರಿಗ್ಗೊತ್ತು ? ಅಜ್ಜಿ ಮಾಡು ಹುರುಳಿ ಸಾರಿನ ಗ್ಯಾಪಕ ಬಂತಕ್ಷಣ ಇತ್ಲಾಗೆ ಓಡ್ಬರುತ್ತೆ ನಾರದಭಟ್ಟ."

"ಈ ಬೆಟ್ಟ ಬ್ಯಾಸಗೇಲಿ ಯಾರು ಮಾಡ್ತಾರೆ ಹುರುಳಿ ಸಾರ್‍ನ ? ಈಗ ತಿಂದ್ರೆ ಉಷ್ಣಾಗತ್ತೆ. ಮಳೆಗಾಲ್ದಾಗಾದ್ರೆ ಖಾರಕಟ್ಟಿಗೆ ಮಾಡಿದ್ರೆ ಚಂದ."

ಸೀತೆಯ ಗಮನ ಇನ್ನೂ ಗದ್ದೆಯ ಕಡೆಗೇ ಇತ್ತು. ಹಿಂದುಗಡೆ ಯಿಂದ ಶೀಲಕ್ಕಿ, ಬಾನಿ ಒಟ್ಟಿಗೇ ಕೂಗಿದರು–

"ಲೇ ಸೀತೇ ! ಕರಾ ಆಟ್ಕಂಡು ಬರ್‍ಬೇಕಂತೆ ಮನೀಗೆ. ಅಮ್ಮ ಕರೀತದೇ."

"ನಿಮ್ಮಮ್ಮ ನೆಗದ್ಬೀಳಾ."

ಎಂದುಕೊಂಡು ಸೀತೆ ಸ್ವಲ್ಪ ಗಟ್ಟಿಯಾಗಿ ಹೇಳಿದಳು–

"ಮಾವಿನ ಮರವೇ, ಆಚೆ ಮನೆಯೋರಿಗೆ ಹೇಳು. ಶಂಕರಭಟ್ರು ಯಾಕೆ ಬಂದದಾರೆ ನಮ್ಮನೀಗೆ ಅನ್ನುವದನ್ನ ನಾಳೆ ಬೆಳಗ್ಗೆ ಬಂದು ಹೇಳ್ತಾ ಳಂತೇಂತ."

ಸೀತೆಯ ತಂಗಿಯರಿಗೆ ತಾನು ಕಾಣಬಾರದೆಂದು ಅತ್ತ ಸರಿದು ಹೋದಳು ಅಚ್ಚಿ. ಸೀತೆ ಕೂಗಿ ಹೇಳಿದಳು–

"ಹಂಗೆ ಹೆದರ್ಕ್ಯಾಬಾರ್ದಂತೇಂತ ಹೇಳು ಮರವೇ"

## ೩

ಮಲೆನಾಡಿನ ಉಪಚಾರ ಕೆಲವರಿಗೆ ಚಿರಪರಿಚಿತವಾದದ್ದು. ಮತ್ತೆ ಕೆಲವರಿಗೆ ಪ್ರಚಲಿತವಾಗಿ ತಿಳಿದು ಬಂದದ್ದು.

ಈ ಸೀತಾ ಚರಿತ್ರೆಯ ಕಾಲಕ್ಕೇ ಹತ್ತು ವರ್ಷಗಳಾಗಿದ್ದುವು. ಮಲೆನಾಡಿಗೆ ಕಾಫಿ ಎಂಬ ಕಷಾಯದ ಉಷ್ಣೋಪಚಾರ ಬಂದು. ಅದಕ್ಕೆ ಮೊದಲು ಜೇಸಿಗೆಯಲ್ಲಿ ಬಂದವರಿಗೆ ಮೊದಲು ಕಾಲುತೊಳೆಯಲು ಬಾಗಿಲಲ್ಲಿ ಒಂದು ದೊಡ್ಡ ಕವಳಿಗೆಯಲ್ಲಿ ನೀರು, ತಂಬಿಗೆ ಸಿದ್ಧವಿರುತ್ತಿತ್ತು. ಕಾಲು ತೊಳೆದು ಅವರು ಜಗುಲಿಗೆ ಬಂದೊಡನೆ ದೊಡ್ಡ ಕಲಾಯದ ತಂಬಿಗೆಯಲ್ಲಿ ನೀರು ಮಜ್ಜಿಗೆ, ಅಥವಾ ಬೇಲದ ಹಣ್ಣಿನ ಪಾನಕ, ಹುರಿಯಿಟ್ಟಿನ ಪಾನಕ ಕಡೆಗೆ ಯಾವುದೂ ಇಲ್ಲವಾದರೆ ಒಂದು ಮುದ್ದೆ ಬೆಲ್ಲ, ಒಂದು ತಂಬಿಗೆ ನೀರ್ರು ಬರುತ್ತಿತ್ತು. ಬೆಲ್ಲ ಬಾಯಿಗೆ ಹಾಕಿಕೊಂಡು ಗಟಗಟ ಸದ್ದು ಮಾಡುತ್ತ ಒಂದು ತಂಬಿಗೆ ನೀರು ಕುಡಿದು ಗರ್ರನೆ ತೇಗಿ ಜಗುಲಿಯ ಚಾಪೆಯ ಮೇಲೆ ಸದಾ ತಟಕಿನಲ್ಲಿ ಸಿದ್ಧವಿರುತ್ತಿದ್ದ ಬಟ್ಲಡಿಕೆ, ತರೀಕೆರೆ ವಿಳ್ಳೆದೆಲೆ, ಹೊಗೆ

ಸೊಪ್ಪು ಬಾಯಿಗೆ ತುಂಬಿ ಕೂತರೆಂದರೆ ಅಲ್ಲಿಗೆ ಅವರಿಗೆ ಪರಮಪದ ದೊರಕಿದಂತೆ.

ಮಳೆಗಾಲದಲ್ಲಾದರೆ ಪಾನಕಕ್ಕೂ ಸೊನ್ನೆ, ಹಂಡೆಯ ಬಿಸಿನೀರಿನಲ್ಲಿ ಕೆಸರಿನ ಕಾಲುತೊಳೆದು ಮುರುವಿನ ಒಲೆ, ಹುರುಳಿ ಒಲೆ ಅಥವಾ ಅಡಿಕೆ ಬೇಯಿಸುವ ಒಲೆಯ ಮುಂದೆ ಕೂತು ತಾಂಬೂಲ ಹಾಕುವುದು. ಇನ್ನು ಬಿಸಿ ಉಪಚಾರ ಎಂದರೆ ಗೆಣಸು, ಹಪ್ಪಳ, ಹಲಸಿನ ಬೀಜ, ಗೇರುಬೀಜ ಸುಟ್ಟು ತಿನ್ನುವದು. ಮತ್ತೆ ಊಟಕ್ಕೆ ಕೂತರೆ ಮೂರು ಪಾವು, ಸೇರಕ್ಕಿ ಅನ್ನದವರೇ. ದಿನಕ್ಕೆ ಮೂವತ್ತು ನಲವತ್ತು ಮೈಲಿ ನಡೆದವರುಂಟು.

ವರ್ಷದಲ್ಲಿ ಸುಮಾರು ಅರೇಳು ತಿಂಗಳು ಮಳೆಗಾಲ. ಮಳೆಗಾಲ ವೆಂದು ಮನೆಯಲ್ಲಿ ಬೆಚ್ಚಗೆ ಕೂರುವಂತಿಲ್ಲ. ಕೊಡೆ, ಮೆಟ್ಟುಗಳು ತುಂಬಾ ಶ್ರೀಮಂತರ ಆಸ್ತಿಗಳು. ಪಂಚೆ ಎತ್ತಿಕಟ್ಟಿ ವಾಲೆಕೊಡೆ ಹಿಡಿದು ಕೆಸರು, ಜಾರಿಕೆಯಲ್ಲಿ ಹಳ್ಳ, ಹೊಳೆ ಏರು–ತಗ್ಗುಗಳನ್ನು ಇಳಿದು–ಹತ್ತಿ–ದಾಟಿ ನಡೆಯುವುದ. ಬ್ರಾಹ್ಮಣೇತರರಿಗೆ ಗೊರಬು, ಕಂಬಳಿ ಕುಪ್ಪೆಗೇಯ. ಕಾಡು ಮೇಡುಗಳ ಅಲೆದಾಟ. ಆರು ತಿಂಗಳು ಜಡಿಮಳೆಯೇ. ಅಂತಹ ಸಮಯ ದಲ್ಲಿ ದಾರಿಯಲ್ಲಿ ತಂಗಲು ಒಂದು ಹಳ್ಳಿ ಸಿಕ್ಕಿತೆಂದರೆ ಸ್ವರ್ಗವೇ ಸಿಕ್ಕಿದಂತೆ. ಹೋದೊಡನೆ 'ಒನ್ನಿ ಕಾಲುತ್ತ್ನೀರಿ, ಬೆಂಕಿ ಕಾಯಿಸಿ, ಒಂದಷ್ಟು ತಾಂಬೂಲ ಹಾಕಿ' ಅಂದರೆ ಅದಕ್ಕಿಂತ ಉಪಚಾರವೇ ಬೇಕಿಲ್ಲ. ಮುಂದೆ ಹೊಟ್ಟೆಯ ಪಾಡು.

ಆತ್ಮೀಯವಾದ ಸರಳತೆಯ ಉಪಚಾರ. ಢಾಂಬಿಕವಿಲ್ಲ, ಆಡಂಬರ ವಿಲ್ಲ, ಬಂದವರಿಗಾಗಿ ಸಡಗರವಿಲ್ಲ. ಮನೆಗೆ ಬಂದವರಿಗೆ ತಾವು ತಿಂದದ್ದನ್ನ ನಿರ್ವಂಚನೆಯಿಂದ ಇಕ್ಕುವುದು ಇಷ್ಟೇ.

ಹಳ್ಳಿ ತರಕಾರಿಯ ಬಿಸಿಯೂಟ ; ಮಲಗಲು ಒಂದು ಚಾಪೆ, ಕಂಬಳಿ, ಮುಗಿಯಿತು ಅತಿಥಿ ಸತ್ಕಾರ.

ಬ್ರಿಟಿಷರು ಬಂದು ಭಾರತಕ್ಕೆಲ್ಲ ಕಾಫಿ ಬಿತ್ತಿದರು ಎಂಬುದು ವಾಡಿಕೆ. ಒಂದು ರೀತಿಗೆ ಅದು ನಿಜ. ಒಂದು ರೀತಿಗೆ ಅಲ್ಲ. ಅಂತೂ ಮಲೆನಾಡಿಗೆ ಕಾಫಿ ಬಂತು. ಅದನ್ನ ಮಾಡುವ ಕ್ರಮ ಒಬ್ಬರಿಂದೊಬ್ಬರಿಗೆ ದಾಟಿ ಬಂತು. ಮನೆಯಲ್ಲೇ ಕಾಫಿಪುಡಿ ತಯಾರಿಸಿ ಬೆಲ್ಲದ ನೀರು ಕುದಿಸಿ ಅದಕ್ಕೆ ಎರಡು

ಚಿಟಿಕ್ಕೆ ಪುಡಿ ಹಾಕಿ ಕಾಸಿದ ಹಾಲನ್ನೂ ತೋರಿಸಿ ಸ್ವಲ್ಪ ತಿಳಿಯಾದ ಕೂಡಲೇ ಮೂರು–ನಾಲ್ಕು ಲೋಟ ಕುಡಿಯುವುದು.

ಕೆಲದಿನ ಅದು ಮಡಿವಂತರಿಗೆ ನಿಷೇಧವಾಗಿತ್ತು. ಅದರಲ್ಲೂ ಮಡಿ ಹೆಂಗಸರು ಕುಡಿಯಲೇಬಾರದು ಆದರೆ ಅದರ ಆಸೆ ಹತ್ತಿಯಾಗಿತ್ತು. ಕಡೆಗೆ ಅದರ ಚಟ ಪೂರಾ ಹತ್ತಿದವರೊಬ್ಬರು ಅದಕ್ಕೆ 'ಕೈಲಾಸದ ಕಷಾಯ' —ಎಂದು ಹೆಸರಿಟ್ಟು ವೇದವ್ಯಾಸರಂತೆ ಅದಕ್ಕೊಂದು ಪೌರಾಣಿಕ ಕಥೆಯನ್ನು ಕಲ್ಪಿಸಿ ಹೇಳಿದರು. ಅದು ಕಲ್ಪನೆಯಾದರೂ ಸ್ವಾರಸ್ಯವೂ ಸಹಜವೂ ಆಗಿ ಕಾಣಿಸುತ್ತೆ.

'ಭಗೀರಥನ ಪ್ರಾರ್ಥನೆಯ ಮೇರೆಗೆ ಗಗನಾಂತರದಿಂದ ಧುಮುಕಿದ ಗಂಗೆಯನ್ನು ಪರಶಿವ ತಡೆದು ಜಡೆಯಲ್ಲಿ ಬಿಗಿದು ಕೂರಿಸಿಕೊಂಡ. ಮುಂದೆ ಗಂಗೆ ಸಾವಧಾನವಾಗಿ ಹರಿದು ಭಾಗೀರಥಿ ಎನಿಸಿಕೊಂಡಳು. ಸಗರ ಪುತ್ರರೇನೋ ಮುಕ್ತಿ ಪಡೆದರು. ಆದರೆ ಕೈಲಾಸದಲ್ಲಿ ಗಂಗೆಯನ್ನು ತಲೆಯಲ್ಲಿ ಹೊತ್ತ ಪರಮೇಶ್ವರನಿಗೆ ಅಸಾಧ್ಯ ನೆಗಡಿ ಪ್ರಾರಂಭವಾಯ್ತು. ಏನು ಮಾಡಿದರೂ ನೆಗಡಿ ನಿಲ್ಲಲೊಲ್ಲದು. ಶಿವನ ಜಡೆಯಿಂದ ಧುಮುಕುತ್ತಿದ್ದುದಲ್ಲದೆ ಆತನ ಮೂಗಿನಿಂದಲೂ ದ್ವಿಧಾರೆಯಾಗಿ ಇಳಿಯತೊಡಗಿದಳು. ತಲೆನೋವು, ಮೈನೋವು, ಜ್ವರ ಎಲ್ಲಾ ಹೊಡೆದು ಬಾರಿಸಿತು ಹರನಿಗೆ. ಮೂಗು ಒರೆಸಿಕೊಳ್ಳಲು ಅವನಲ್ಲಿ ಒಂದು ತುಂಡು ಬಟ್ಟೆಯಿಲ್ಲ. ಕಡೆಗೆ ವಿಧಿಯಿಲ್ಲದೆ ಪಾರ್ವತಿಯ ಪೀತಾಂಬರದ ಸೆರಗನ್ನೇ ಮೂಗಿಗೆ ಒತ್ತಿ ಹಿಡಿದ. ಹರನ ಕಾಯಿಲೆಯ ವಿಷಯ ತಿಳಿದು ಅಗ್ನಿದೇವ ಓಡಿಬಂದು ಕೈಲಾಸದಲ್ಲಿ ಧಗೆ ಎಬ್ಬಿಸಿ ಎಲ್ಲರಿಗೂ ಬೆಚ್ಚಗೆ ಮಾಡಿದ. ಉಹು ! ಜಗ್ಗಲಿಲ್ಲ. ಮುಂದೇನೆಂದು ದೇವಾಧಿದೇವತೆಗಳಿಗೆ ಚಿಂತೆಯಾಗಿ ಕಡೆಗೆ ದೇವ ವೈದ್ಯನಾದ ಧನ್ವಂತರಿಯನ್ನು ಕರೆಸಿದರು ಅವನು ಪರಶಿವನ ನಾಡಿ ಹಿಡಿದು ನೋಡಿದ. ಶಿವನ ಮೈಯ ಜ್ವರದ ಜೊತೆಗೆ ಅಗ್ನಿಯ ಶಾಖವೂ ಸೇರಿ ಶಿವನ ಜ್ವರ ನೂರಾ ಹತ್ತು ಡಿಗ್ರಿಯಾಗಿತ್ತು. ಧನ್ವಂತರಿ ಇದುವರೆಗೆ ಯಾರಿಗೂ ಕೊಡದ ಒಂದು ಔಷಧಿಯನ್ನು ಈಗ ಜಗದೀಶನಿಗೆ ಕೊಡಲೇಬೇಕಾಯ್ತು. ಸಂಜೀವಿನೀ ಪರ್ವತದಿಂದ ಆ ಬೀಜವನ್ನು ತರಬೇಕು. ಅದಕ್ಕೆ ಯಾರು ಸಮರ್ಥರು ಎಂದು ಯೋಚಿಸಿ ಕಡೆಗೆ ಆ ಕೆಲಸಕ್ಕೆ ವಾಯುಪುತ್ರನೇ ಸರಿಯೆಂದು

ಭೂಲೋಕದ ಋಷ್ಯಮೂಕ ಪರ್ವತದ ಕೋಡುಗಲ್ಲಿನ ಮೇಲೆ ಮೈ ಕೆರೆಯುತ್ತ ಕೂತಿದ್ದ ಮಾರುತಿಯನ್ನು ಕರೆತರಲಾಯ್ತು. ಪರಮೇಶ್ವರನ ಫಜೀತಿ ನೋಡಿ ಆವನಿಗೂ ಗಾಬರಿಯಾಯ್ತು. ಧನ್ವಂತರಿಯ ಅಜ್ಞೆಯ ಮೇರೆಗೆ ಹನುಮಂತ ಹಾರಿದ ಸಂಜೀವಿನೀ ಪರ್ವತಕ್ಕೆ. 'ಕೆಂಪು ಸಣ್ಣ ಹಣ್ಣು, ತಿನ್ನಲು ಸಿಹಿಸಿಹಿ, ಒಳಗೆ ದಪ್ಪ ಬೀಜ ಇರುತ್ತೆ. ಅದನ್ನ ಜಾಗ್ರತೆ ತೆಗೆದುಕೊಂಡು ಬಾ' —ಎಂದು ಹೇಳಿದ್ದ ಧನ್ವಂತರಿ. ಸರಿ ಸಂಜೀವಿನೀ ಪರ್ವತವನ್ನು ಗರಪಾಡಿದ ಪ್ರಾಣೇಶ. ಅಲ್ಲಿ ಆ ಹಣ್ಣಿನ ಗಿಡಗಳ ವನವೇ ಇದೆ. ಮೊದಲು ತಾನು ತಿಂದು ರುಚಿ ನೋಡಿದ ಆಂಜನೇಯ. ಬಹು ರುಚಿಯಾಗಿತ್ತು ಹಸಿ ಬೀಜವನ್ನೇ ನುಂಗಿಬಿಟ್ಟ. ಹನುಮನ ಬಲ ನೂರ್ಮಡಿಯಾಯ್ತು. ಗಿಡಗಳನ್ನೇ ಕಿತ್ತು ಹೊರಕಟ್ಟಿ ಹೊತ್ತ ಹನುಮ. ಆವನು ಅಂತರಿಕ್ಷಮಾರ್ಗದಲ್ಲಿ ರಭಸದಿಂದ ಹಾರಿ ಬರುತ್ತಿದ್ದಾಗ ಪಕ್ವವಾದ ಕೆಲವು ಹಣ್ಣುಗಳು ಭರತ ಖಂಡದ ಮೇಲೆ ಅಲ್ಲಲ್ಲಿ ಉದುರಿದವು. ಕ್ರಮೇಣ ಅವು ಭೂಮಿಯಲ್ಲಿ ಸಂಮೃದ್ಧವಾಗಿಯೇ ಬೆಳೆದವು. ಅತ್ತ ಕೈಲಾಸದಲ್ಲಿ ಕೂಡಲೇ ಧನ್ವಂತರಿ ಒಣಗಿದ ಹಣ್ಣನ್ನು ಒಡೆದು ಬೀಜ ತೆಗೆದು ಅಗ್ನಿಗೆ ಉರಿಯಲು ಕೊಟ್ಟ. ಅಗ್ನಿ ಹದವಾಗಿ ಹುರಿದುಕೊಟ್ಟ. ಅದನ್ನ ಅರೆದು ಪುಡಿಮಾಡಿ ಕಷಾಯಕ್ಕಿಟ್ಟಾಯಿತು. ಅದಕ್ಕೆ ಹಾಲು, ಸಕ್ಕರೆ ಬೇಕು. ಸರಿ, ಗಣಪ್ಪ, ಸುಬ್ರಹ್ಮಣ್ಯರು ಓಡಿದರು. ದೇವಲೋಕದಿಂದ ಸಕ್ಕರೆ ಬಂತು. ವೈಕುಂಠದ ಕ್ಷೀರಸಾಗರದಿಂದ ಹಾಲು ಬಂತು. ಘಂ ಎನ್ನುವ ಕಷಾಯ ತಯಾರಾಯಿತು. ದೊಡ್ಡ ಕರಂಡದ ತುಂಬಾ ಕಷಾಯ ತುಂಬಿ ಪರಮೇಶ್ವರನಿಗೆ ಕೊಟ್ಟ ಧನ್ವಂತರಿ. ಬಿಸಿಬಿಸಿಯಾಗಿ ಬಲು ರುಚಿಯಾಗಿತ್ತು. ಉಮೆ–ಶಂಕರನ ಮುಖವನ್ನೇ ನೋಡುತ್ತಿದ್ದಳು ಆರು ಗಳಿಗೆಯಲ್ಲಿ ಹರನ ಮೂಗಿನ ಗಂಗಾ ಪ್ರವಾಹ ನಿಂತಿತು. ಮೈ ಹಗುರವಾಗಿ ಜ್ವರಬಿಟ್ಟು ಪರಮೇಶ್ವರ ಪ್ರಸನ್ನನಾದ. ಈ ಪವಾಡವನ್ನು ಕಂಡು ದೇವತೆಗಳು ವಿಸ್ಮಯಪಟ್ಟರು. ಉಳಿದ ಕಷಾಯವನ್ನು ಧನ್ವಂತರಿ ನೆರೆದವರೆಲ್ಲರಿಗೂ ಬಿಸಿಬಿಸಿಯಾಗಿ ಕೊಟ್ಟ. ಅಮೃತ ಕುಡಿದು ಕುಡಿದು ಸೀಬಡಿದು ಹೋದ ಬಾಯಿಗೆ ಈ ಕಷಾಯ ಅಮೃತಕ್ಕಿಂತ ರುಚಿಯಾಗಿ ಕಂಡಿತು ಎಲ್ಲರಿಗೂ ಮೈ ಹುರುಪು ಬಂದಿತು.

ಗಂಗೆ, ಗೌರಿ, ಗಣಪ, ಸುಬ್ಬಣ್ಣ ಎಲ್ಲರೂ ಕಷಾಯ ಕುಡಿದು ಹರ್ಷಪಟ್ಟರು. ಜಗದೀಶ್ವರ ಜಗತ್ತಿಗೇ ವರಕೊಟ್ಟ.

'ಕಲಿಯುಗದಲ್ಲಿ ರೋಗರುಜಿನಾದಿಗಳು ಹೆಚ್ಚು. ಶೀತ-ವಾತಾದಿಗಳನ್ನು ಕ್ಷಣ ಮಾತ್ರದಲ್ಲಿ ಪರಿಹರಿಸುವ ಈ ದಿವ್ಯೌಷಧ ಆಗ ನಿರಂತರ ಪ್ರಯೋಜನಕ್ಕೆ ಬರಲಿ. ಇದನ್ನು ಕುಡಿದವರಿಗೆ ಜಡತೆ ಹರಿದು ಶಕ್ತಿ ಉತ್ಸಾಹಗಳು ತುಂಬಲಿ' —ಎಂದು ವರಕೊಟ್ಟು ಆನಂದದಿಂದ ಡಮರು ಹೊಡೆದು ಭಲ್ಲೆ ಹಿಡಿದು ನೃತ್ಯ ಮಾಡಿದ. ಹನುಮ ಮಾತ್ರ ಸಾಕಷ್ಟು ಹಣ್ಣು ತಿಂದದ್ದರಿಂದ ಕಷಾಯ ಬೇಡವೆಂದ. 'ನನಗೆ ಸಂಜೀವಿನೀ ತಂದು ಕೊಟ್ಟ ನೀನು ಚಿರಂಜೀವಿಯಾಗು' —ಎಂದು ಹರಸಿದ ಹರ ಹನುಮನಿಗೆ. ಎಲ್ಲರೂ ಪರಮೇಶ್ವರನಿಗೆ ಕೈಮುಗಿದು ಹೊರಟರು.

ನಂತರ ದೇವತೆಗಳು ಧನ್ವಂತರಿಯನ್ನು ಕೇಳಿದರು :

"ಆ ಬೀಜದ ಹೆಸರೇನು ?" ಎಂದು.

ಧನ್ವಂತರಿ ಯೋಚಿಸಿದ. ಅದರ ಹೆಸರು ಹೇಳಿದರೆ ಇವರು ದಿನಾ ಅದೇ ಕೆಲಸ ಮಾಡಿಯಾರು. ಆಗ ನನ್ನ ಔಷಧಿಯ ಬೆಲೆ ಏನು ಉಳಿಯಿತು ? ಈಗಾಗಲೇ ಈ ಪರಮೇಶ್ವರ ಕಲಿಯುಗಕ್ಕೆ ವರಕೊಟ್ಟು ಕುಳಿತಾಯಿತು. ಇನ್ನು ಇವರಿಗೂ ತಿಳಿದರೆ ಸಂಜೀವಿನೀ ಪರ್ವತ ಖಾಲಿಯಾದೀತು—ಎಂದುಕೊಂಡು :

"ಯಾವಾಗಲೂ ಕೆಲವು ಮಹತ್ವದ ಔಷಧಿಗಳ ಹೆಸರು ಹೇಳಬಾರದು. ಹೇಳಿದರೆ ಅದರ ಶಕ್ತಿ ಕಡಿಮೆಯಾಗುತ್ತದೆ. ಅಲ್ಲದೆ ಈಶ್ವರನಿಗಾದದ್ದಕ್ಕೆ ಪರ್ವತದ ಒಡೆಯ ಸಂಜೀವ ಈ ಔಷಧಿ ಕೊಟ್ಟ. ನೀವೆಲ್ಲ ಹೋಗಿ ಕೇಳಿದರೆ ಕೊಟ್ಟಾನೇ ? ಬೀಜವನ್ನ ಕಪಿರಾಜ ತಂದುಕೊಟ್ಟದ್ದರಿಂದ ನೀವು 'ಕಪಿಬೀಜ' —ಎಂದು ಕರೆಯಿರಿ. ಇಷ್ಟು ಸಾಕು. ಇನ್ನು ಹೊರಡಿ" ಎಂದಾಗ ಎಲ್ಲರೂ ಹೊರಟರು.

ಅಲ್ಲಲ್ಲಿ ಬೆಟ್ಟ-ಗುಡ್ಡಗಳ ತಪ್ಪಲಿನಲ್ಲಿ ಉದುರಿದ ಬೀಜಗಳು ಅಲ್ಲೇ ಬೆಳೆದು ಉಳಿದು ಕಲಿಯುಗದವರೆಗೂ ಬಂದಿತ್ತು. ಮೊದಮೊದಲು ಆ ಕಪಿ ಬೀಜದ ಹಣ್ಣುಗಳನ್ನು ಮಂಗಗಳೇ ತಿನ್ನುತ್ತಿದ್ದವು ಅಂಜನೇಯನೂ ವಜ್ರದೇಹಿಯಾದ. ಅವನ ಜಾತಿಯ ಕಪಿಗಳು ಇಂದಿಗೂ ಬಹು ಲವಲವಿಕೆ.

ಮಾರುತಿಯ ಅಂಶದಿಂದ ಹುಟ್ಟಿದ—ಅಂದರೆ ಮಂಗನ ಮೂತಿಯು ಕೆಂಪು. ಆಂಗ್ಲ ಜನ ಮೊಟ್ಟಮೊದಲು ಈ ಕಪಿಬೀಜವನ್ನು ಕಂಡು ಹಿಡಿದರು. ಅವರಿಗೆ ಕಪಿ ಎನ್ನಲು ಬರಲಿಲ್ಲ. 'ಕಫಿ' ಎಂದರು. ಬರಬರುತ್ತ ಅದು ಕಾಫಿಯಾಯಿತು. ಕಾಫಿಯನ್ನು ಜಾರಿಗೆ ತಂದವರು ಆಂಗ್ಲರು ನಿಜ. ಮುಖ್ಯವಾಗಿ ಅದು ಭಾರತದ ಬೆಳಸು. ಈಶ್ವರನ ಕಷಾಯ.

ಮೊದಲು ಇದು ಮೈಲಿಗೆ ಎನ್ನಿಸಿತು ನಿಜ. ಕ್ರಮೇಣ ಕೈಲಾಸದ ಕಥೆ ಸಕಲರಿಗೆ ತಿಳಿಯಿತು. ಇದು ಮೆದುಳಿಗೆ ಮತ್ತು ಬರಿಸುವ ಪಾನೀಯವಲ್ಲ. ದೇಹಕ್ಕೆ ಶಕ್ತಿ, ಹುರುಪು ತರುವ ಔಷಧಿ ಎಂದು ತಿಳಿದ ಮೇಲೆ ವಿದೇಶದಿಂದ ಸ್ವದೇಶದ ಹೋಟೆಲುಗಳಿಗಿಳಿದು ; ಹೋಟೆಲುಗಳಿಂದ ಸಂಸಾರಗಳಿಗೆ ಹರಿದು ಬಂದು ಈಗ 'ಸರ್ವಂ ಕಾಫಿ ಮಯಂ ಜಗತ್' —ಎಂದಾಗಿದೆ ಈ ಕಲ್ಪನಾ ಕಥೆ ಸತ್ಯವೆಂದು ನಂಬಿ ನಮ್ಮ ಮಲೆನಾಡಿನ ಮನೆಮನೆಯ ಮಡಿವಂತರೂ, ಮಡಿಹೆಂಗಸರೂ ಈ ಈಶ್ವರ ಕಷಾಯವನ್ನು ತೀರ್ಥದೋಪಾದಿಯಲ್ಲಿ ಸೇವಿಸುತ್ತಾರೆ.

ನಮ್ಮ ಸೀತೆ ಮನೆಯೊಳಗೆ ಹೋಗುವ ವೇಳೆಗೆ ನಾರದಭಟ್ಟರು ಮುಂದಿನ ಜಗಲಿ ಹತ್ತಿ ಒಳಬಂದರು. ಹಿಂದೆ ದೋಟಿ ಸುಬ್ಬಣ್ಣನೂ ಬಂದ. ಅಂಗೈಗೆ ಸುಣ್ಣ ಹಚ್ಚಿ ಮಡ್ಡಿನಶ್ಯ ತಿಕ್ಕುತ್ತಾ ಕುಳಿತ ಮಹಾಬಲಯ್ಯ—

"ಹಾಂ ಬನ್ನಿ ಬನ್ನಿ ! ತುಂಬಾ ಬಿಸ್ಲು ಅಲ್ವಾ ? ಕಾಲ್ತೊಳದು ಬನ್ನಿ" ಎಂದು,

"ಲೇ ಇವಳೇ, ಇದ್ದಿಯನೆ ? ಶಂಕರಭಟ್ರು ಬಂದದಾರೆ ನೋಡೇ" ಎಂದು ಕೂಗಿದ. ಮೋಟಮ್ಮ ಪುಟ್ಟ ಕೂಸಿಯಂತೆ ಹೊರಬಂದು ತನ್ನ ಕೊಳಕು ಹಲ್ಲುಬಿಟ್ಟು :

"ಓ ! ಅಪ್ರುಪ ಶಂಕರಭಟ್ರು. ಕೂತ್ಗಳಿ. ಬಾಯಾರ್ಕಿಗೆ ಯಂತದ ಕೊಡ್ಲಿ. ರಣ ಬಿಸ್ಲು ಅಲ್ವಾ ? ನೀರ್ಮಜ್ಗೆ ಕೊಡ್ಲಾ, ಪಾನ್ಕ ಮಾಡ್ಕೊಡ್ಲಾ ?"

ಶಂಕರಭಟ್ರು 'ಹುಷ್ ಭಗವಂತಾ, ಮಂಜುನಾಥಾ' ಎಂದು ಮುಖ ಮುದುರಿಸಿ ಹಲ್ಲು ಕಿರಿದು ಹಗುರವಾಗಿ ಅಂದರು—

"ಈ ಉರಿ ಬಿಸ್ಲಾಗೆ ನಡೆದು ಬಂದು ಯಂತದಾರ ತಣ್ಣಗೆ ಕುಡಿದ್ರೆ ನಂಗೆ ಭಗ್ನೆ ಗಂಟ್ಲು ಕಟ್ಟುತ್ತೆ. ಅದ್ರಬದ್ಲು ಮೋಟಮ್ಮ ಕಟ್ಟಗೆ ಒಂದ್ಹಂಡು ಕಾಪಿ ಕೊಟ್ರೆ ಒಳ್ಳೇದಿತ್ತಪ್ಪ."

ಮೋಟಮ್ಮನಿಗೆ ಈ ಮುದುಕನ ನೆತ್ತಿಯ ಮೇಲೆ ಹಿಡಿದು ಗುದ್ದ ಬೇಕೆನಿಸಿತು. 'ಯಾವಾಗ ಬಂದರೂ ಕಾಪಿ ಕಾಪಿ ಅಂತ ಒಡ್ಕಳ್ಳುತ್ತೆ ಮುದ್ಕ' —ಅಂದುಕೊಂಡಳು. ಆದರೆ ಅದನ್ನ ಯಾವ ರೀತಿಯಿಂದಲೂ ಪ್ರಕಟ ಗೊಳಿಸಲಿಲ್ಲ.

ಒಂದು ಸ್ವಭಾವಜನ್ಯವಾಗಿ ಬಂದ ಅತಿಥಿ ಸತ್ಕಾರದ ಗುಣ. ಇನ್ನೊಂದು ಈ ಕಾಫಿ ಮುದುಕನಿಂದಲೇ ಸಾಧ್ಯವಾದಷ್ಟು ಜಾಗ್ರತೆ ಸೀತೆ ಯನ್ನು ಮನೆಯಿಂದ ಹೊರಗಟ್ಟಬೇಕಾಗಿತ್ತು.

ಅವಳಿಗಿನ್ನೂ ಹತ್ತು ತುಂಬಿತ್ತಾದರೂ ಆಗಿನ ಕಾಲಕ್ಕೆ ಮದುವೆಯ ವಯಸ್ಸು. ಎರಡನೆಯದು ಸವತಿಯ ಮಗಳು ಮತ್ತು ತನಗಿಂತ, ತನ್ನ ಎರಡು ಮುಸಿಯಗಳು ಶ್ರೀಲಕ್ಷ್ಮಿ, ಭವಾನಿಯರಿಗಿಂತ ತುಂಬ ಚಲುವೆ. ಅದ ಕ್ಕಿಂತ ಮುಖ್ಯವಾಗಿ ಸೀತೆಯ ಕಣ್ಣು ತಪ್ಪಿಸಿ ತಾನು ಏನೇ ಕೆಲಸ ಮಾಡಿ ದರೂ ಅವಳಿಗೆ ಹೇಗೋ ತಿಳಿದು ಹೋಗುತ್ತಿತ್ತು. ಸಮಯ ಬಂದಾಗ ಸೀತೆ ಮುಲಾಜಿಲ್ಲದೆ ಅದನ್ನ ಎಲ್ಲರ ಎದುರೂ ಒದರಿ ಬಿಡುತ್ತಿದ್ದಳು. ಕಿವುಡು ಅತ್ತೆ ಅತ್ತಿತ್ತ ಹೋದಾಗ, ಗಂಡ ಮನೆಯಲ್ಲಿಲ್ಲದಾಗ ಏನಾದರೂ ಕುಂಟು ನೆವದಲ್ಲಿ ಸೀತೆಗೆ ಕಟ್ಟಿಗೆಯಿಂದ ಹೊಡೆತಗಳು ಬೀಳುತ್ತಿತ್ತು. ಅಜ್ಜಿ ಮನೆಗೆ ಬಂದ ಕೂಡಲೇ ಆಕೆಯ ಎದುರಿಗೆ ತನ್ನ ಸೀರೆ ಎತ್ತಿ ನೀಲಿಗಟ್ಟಿದ ತನ್ನ ತೊಡೆಯನ್ನೂ, ಕಟ್ಟಿಗೆಯನ್ನೂ, ಚಿಕ್ಕಮ್ಮನನ್ನೂ ತೋರಿಸುತ್ತಿದ್ದಳು. ಅಪ್ಪನ ಮುಂದೂ ಹೇಳುತ್ತಿದ್ದಳು. ಹೆದರಪುಕ್ಕಲ ಅಪ್ಪ ತೆಪ್ಪಗಿದ್ದರೂ ಅಜ್ಜಿ ಸುಮ್ಮನಿರುತ್ತಿರಲಿಲ್ಲ.

"ಯಾಕೆ ಮೋಟೀ, ಅಪಾಟ ಹೊಡೆದಿದ್ದಿ ಮಗಿನ್ನ ? ತಬ್ಬಲಿ ಮುಂಡೇದು. ಅಂಥಾ ಚಂದಾಗಿ ಕೆಲ್ಸ ಮಾಡತ್ತೆ. ಅದರ ಅಮ್ಮ ಸತ್ಹೋದ್ಲು ಬದ್ಧ. ನಾನು, ಮಾಬಲ ಬದ್ಕಿದೀವಿ ಇನ್ನೂ. ಇನ್ನಾಕ್ದಿನ ಸೈ, ಅಮ್ಯಾಲೆ ಅದರ ಗಂಡನ ಮನೀಗೆ ಹೋಗತ್ತೆ ಅದು. ತಿಳೀದೆ ಯಂತದಾರ ತಪ್ಮಾಡಿದ್ರೆ ಹೇಳ್ಬೇಕು. ಹಂಗ್ಯಾಕೆ ಹಡಬ್ಯಾಡಾಂತ. ಅದ ಬಿಟ್ಕಂಡು ಆ ಬೆಳ್ಳನೆ ತ್ವಡೆ

ಸೀಲಿಗಟ್ರೂ ಹಂಗೆ ಹೊಡಿಯೂದನೇ ? ನಿನ್ನ ಮಕ್ಳಿಗೆ ಹ್ವಡಿ ನೋಡಾಣ. ಕಂಡ್ಯನಾ ಮಾಬಲಾ ? ಈ ತಾಟ್ಕಿ ಕೆಲ್ಸಾನ ?....ಸ್ಯೆ ನಿನ್ಹತ್ರ ಹೇಳೂದೂ ಒಂದೇ, ಆ ಹಲ್ಸಿನ ಮರದ ಹತ್ರ ಹೇಳೂದೂ ಒಂದೇ. ಬ್ಯಾಗ ಆದಕೊಂದು ಧಾರೆಯರದು ಕಳ್ಸು ಗಂಡನ ಮನೀಗೆ. ಆಮೇಲಾರ ಸುಕವಾಗಿರತ್ತಿ"

ಮೋಟಮ್ಮನಿಗೆ ತಲೆ ಕುಟ್ಟಿಕೊಳ್ಳುವಂತಾಗುತಿತ್ತು. ತಮ್ಮ ಪಾಡಿಗೆ ತಾವು ಆಡಿಕೊಳ್ಳುತ್ತಿರುವ ಮಕ್ಕಳಿಗೆ ಎರಡು ಹೇರುತ್ತಿದ್ದಳು. ಕಾರಣ ವಿಲ್ಲದೆ ಹೊಡೆಸಿಕೊಂಡ ಮಕ್ಕಳು ಜೋಡಿವಾಲಗ ಊದುವವು. ಮೋಟಮ್ಮ ಗಂಡನ ಮೇಲೆ ಹರಿಹಾಯುವಳು :

"ಈಗ್ಲಾರ ತೃಪ್ತಿಯಾತ ನಿಮ್ಗೆ ? ಈ ಕುರ್ದೆ ಮಾಡೂ ದಿಂಡೆತನ ಯಾರ್ಕಣ್ಣೂ ಕಾಣೂದಿಲ್ಲ. ನಾ ಹೊಡದ್ದು ಮಾತ್ರ ಊರು-ಹೊಲಗೇರೀಗೆ ಗೊತ್ತಾಗತ್ತೆ. ಅಜ್ಜಿ ಗುಣ ಪೂರಾ ಹೊತ್ಗಂಡದೆ ಕತ್ತೆಗ್ಯೆನೆ"

ಮಹಾಬಲಯ್ಯ ಮಡ್ಡಿ ನಶ್ಯವನ್ನು ಮೂಗಿಗೆ ತುಂಬಿ, ಪಾಣಿ ಪಂಚೆ ಯಿಂದ ಮೂಗು ಒರೆಸಿಕೊಂಡು ಅಂಗಳ ಮೂಲೆಗೆ ತಂಬಲ ತುಪ್ಪಿ ಬಂದು ತೆಪ್ಪಗೆ ಕೂರುವ ಜಗಲಿ ತುದಿಯಲ್ಲಿ ಈಗ ಅತ್ತಿಗೆಯಿಂದಲೇ ಎರಡನೇ ಬಾಣಂತನ ಮಾಡಿಸಿಕೊಳ್ಳಲು ಬಂದ ಕಾಡಿ ಯಾರ ಪಕ್ಷಕ್ಕೂ ಸೇರ.ತ್ತಿರ ಲಿಲ್ಲ. ತಾಯಿಗೆ ಕಿವಿ ಕೇಳ.ವುದಿಲ್ಲ. ಅಣ್ಣ ಕಿವಿಗೆ ಹಾಕಿಕೊಳ್ಳುವುದಿಲ್ಲ. ಅದಕ್ಕಾಗಿ ಅವಳೂ ತೆಪ್ಪಗಿರುವಳು.

ಸೀತೆಯಾದರೂ ರೂಪಿನಲ್ಲಿ ತಾಯಿ, ಗುಣದಲ್ಲಿ ಅಜ್ಜಿಯನ್ನು ಹೊತ್ತಿ ದ್ದಳು. ದಿನಾ ಇರುವ ಈ ಹಗರಣ ಮರೆಯುತ್ತಿದ್ದಳು. ಆದರೂ ಮೋಟಮ್ಮನ ಪಾಲಿಗೆ ಸೀತೆ ಒಂದು ಕಿರುಕುಳದ ಪ್ರಾಣಿ. ಸಾಧ್ಯವಾದಷ್ಟು ಜಾಗ್ರತೆ ಅವಳನ್ನು ಮನೆಯಿಂದ ತೊಲಗಿಸಬೇಕು. ಈ ಜೋಬದ್ರಗಂಡ ಬಂದು ಗಂಡು ಹುಡುಕುವುದಿಲ್ಲ. ಅದಕ್ಕಾಗಿ ಅವಳು ಶಂಕರಭಟ್ಟರ ಮೊರೆ ಹೊಕ್ಕಿದ್ದಳು. ಅವರು ಬಂದಾಗ ಸವತಿಯ ಮಗಳ ಮೇಲಿನ ವಾತ್ಸಲ್ಯ ತೋರಿಸುವಳು.

"ಹುಡುಗಿ ಮೈ ನೆರೆಯಾಕೆ ಬಂತು ಕಂಡ್ರ ಭಟ್ರೆ. ಮತ್ತೀನಾರಾ ಹೆಚ್ಚೂ ಕಮ್ಮಿಯಾತೂಂದ್ರೆ ಶೃಂಗೇರಿ ಸ್ವಾಮಿಗಳು ಸುಮ್ನೆ ಬಿಟ್ಟಾರಾ

ನಮ್ಮನ್ನ ? ಬಹಿಷ್ಕಾರ ಹಾಕಿ ಕೂರಸ್ತಾರೆ. ಈಗ ಇರೂದು ಒಂದು ಗೋಳು ಸಾಲ್ದೂಂತ ಇನ್ನು ಅದ್ನ ಬ್ಯಾರೆ ಮೈಮ್ಯಾಲೆ ಹಾಕ್ಕಳೂದು ನೀವು ಹ್ಯಂಗೂ ಅತ್ತ–ಇತ್ತ ತಿರುಗೂದು ಸೈಯಲ್ಲ. ಬ್ಯಾಗ ಈ ಸೀತೆಗೆ ಒಂದು ಗಂಡು ನೋಡಿ. ಅದ್ರ ಜಾತ್ಕ ಅವತ್ತೇ ಕೊಟ್ಟಿದನಲ್ಲ ನಿಮ್ಕೈಲಿ. ಇದೆಲ್ಲ ನಿಧಾನ ಮಾಡೂ ಕೆಲ್ಸಲ್ಲ ಕಂಡ್ರಾ ?"

ಈಗ ಮೋಟಮ್ಮನ ಬೀಗದ ಕೈ ನಾರದ ಭಟ್ಟರ ಕೈಯಲ್ಲಿತ್ತು. ಅದರಿಂದ ಮೋಟಮ್ಮ ಇಷ್ಟವಿಲ್ಲದಿದ್ದರೂ ಭಟ್ಟರಿಗೆ ಬೆಲ್ಲದ ಕಾಫಿ ಕೊಡಲೇಬೇಕಿತ್ತು. ಅಲ್ಲದೆ ಇವತ್ತು ಭಟ್ಟರ ವರಸೆ ನೋಡಿದರೆ ಸೀತೆಗೆ ವರ ಗೊತ್ತು ಮಾಡಿಕೊಂಡೇ ಬಂದಂತಿತ್ತು.

'ಕಾಪಿ ಕೊಟ್ರೆ ಹೊರ್ಗ್ತಾ ಬಾಯಿ ಬಿಡುಲ್ಲ ದರಿದ್ರ ಮುದ್ಕ. ಇದರ ಋಣ ತೀರಿ ಹೋಗ್ಲಿ'—ಎಂದುಕೊಂಡು ತನ್ನ ಅತ್ಯಮೂಲ್ಯವಾದ ಆಸ್ತಿ ಕಾಫಿಪುಡಿ ಡಬ್ಬಿ ಹಿಡಿದು ಅಡಿಗೆ ಮನೆ ಹೊಕ್ಕಳು ಮೋಟಮ್ಮ. ಈಗ ಭಟ್ಟರಿಗೆ ಸಮಾಧಾನವಾಯ್ತು. ಆಕೆ ಕೈಲಿ ಹಿಡಿದು ಹೋದ ಮಸಿ ಹಿಡಿದ ಡಬ್ಬಿ ಕಾಫಿ ಪುಡಿಯದೇ–ಎಂದು ಅವರಿಗೆ ಖಾತ್ರಿಯಾಯ್ತು.

## ೪

ಹುಡಿಯ ದರ್ಶನ ಮಾಡಿಸಿದ ಬೆಲ್ಲದ ಕಾಫಿಯನ್ನು ಮೂರು ಪಾವಳತೆಯ ಉದ್ದ ಲೋಟಗಳಲ್ಲಿ ತಂದಿಟ್ಟಳು ಮೋಟಮ್ಮ. ದೋಟಿ ಸುಬ್ಬನಿಗಂತೂ ಕೈವಲ್ಯ ಮೂರೇ ಬೆರಳಷ್ಟಾಯಿತು. ಸುಮಾರು ಹದಿನೈದು ಮೈಲಿ ನಡೆದು ಬಂದ ಅವರ ಮೈಯ ದಣಿವಿಗೆ ಆ ಹೊಗೆ ವಾಸನೆಯ ಕಾಫಿಯೇ ಅಮೃತ ಸಮಾನವಾಯ್ತು. ಬಿಸಿಯಾಗಿದ್ದ ಕಾಫಿಯನ್ನು ನಿಧಾನವಾಗಿ ಹೀರಿದರು ಇಬ್ಬರೂ. ಮಹಾಬಲನಿಗೆ ಸ್ವಲ್ಪ ಸಿಕ್ಕಿತು. ಅರ್ಧಗಂಟೆ

ಮುಂಚೆ ಕುಡಿದಿದ್ದರಿಂದ ಹೆಚ್ಚು ಕೇಳುವಂತಿಲ್ಲ. ಕೊಟ್ಟಿದ್ದರೆ ಮಾಲಕ್ಷ್ಮಮ್ಮನೂ ಕುಡಿಯುತ್ತಿದ್ದರು. ಆದರೆ ಮೋಟಮ್ಮ ಕೊಡಲಿಲ್ಲ. ಬೆಳಗ್ಗೆ ಮಡಿ, ಪೂಜೆ, ಆಹ್ನಿಕವಾದ ಮೇಲೆ ಒಂದು ಬಾರಿ ಮಾತ್ರ ಕುಡಿಯುವ ಹಕ್ಕಿತ್ತು ಮಾಲಕ್ಷ್ಮಮ್ಮನಿಗೆ. ಮತ್ತೊಂದು ಸಾರಿ ಪುಡಿ ಕೇಳಿದರೆ ಈ ಕೆಪ್ಪಮ್ಮನ ಭಯವೇನೂ ಇರಲಿಲ್ಲ ಆಕೆಗೆ. ಗಂಡನ ಮುಂದೇ ಅನ್ನುತ್ತಿದ್ದಳು : "ಈ ಗಂಡಸತ್ತ ಮುಂಡೇರಿಗೆ ಈಪಾಟಿ ಕಾಪಿ ಚಪ್ಲ ಇರಬಾರ್ದು" ಎಂದು. ಎದುರಾಡಿದರೆ ತನಗೂ ಸೊನ್ನೆಬಿದ್ದೀತೆಂದು ತೆಪ್ಪಗಿರುತ್ತಿದ್ದ ಮಹಾಬಲಯ್ಯ.

ಮೋಟಮ್ಮ ಬಂದು ಕಂಬ ಒರಗಿ ಕೂತಳು :

"ನಾ ಹೇಳಿದ್ದು ಏನಾರ ಮಾಡಿದ್ರಾ ಭಟ್ರೆ ?"

ಭಟ್ಟರು ಲೋಟ ಕೆಳಗಿಟ್ಟು ನಶ್ಯ ಏರಿಸಿದರು.

"ನಾ ಮರೀತನಾ ? ನಾ ಬ್ಯಾರೆ ಮಹಾಬಲ ಬ್ಯಾರೆಯ ? ಅದೇ ಕೆಲ್ಸಕ್ಕೆ ಒಂತಿಂಗ್ಳಿಂದ ಒಂದೇ ಸಮ ಅಲ್ದದನಿ ಗೊತ್ತಾ. ಈಗ ಬ್ಯಾಸಿಗೇಲಿ ಬಿಟ್ರೆ ಮಳೆಗಾಲ್ದಾಗೆ ಹಿಂಗೆ ಅಲಿಯೂಕಾದೀತಾ ? ಯಲ್ಲ ಗಟ್ಟಿ ಮಾಡ್ಕಂಡೇ ಬಂದದನಿ. ನೀವೆಲ್ಲ ಒಪ್ಪಿದ್ರಾತಪ್ಪ, ಮುಂಗಾರು ಬೀಳೂದ್ರಾಗೆ ಒಂದು ವಾಲಗ ಊದಿಸಿ ಬಿಡೂದೇ"

ಮೋಟಮ್ಮ ಮುಖ ಹಿಗ್ಗಿಸಿ ತಿದ್ದಿ ಕುಳಿತಳು.

"ನೀವ್ಹಿಂಗೆ ಒಗಟು ಹೇಳಿದ್ರೆ ನಮಗೆ ತಿಳಿಯಾದಾರ ಹ್ಯಂಗೆ. ಸಮ ಹೇಳ್ಬಿಡಿ ಒಂದಪ. ನಮಗೂ ಹಗುರ."

ಮಹಾಬಲಯ್ಯನಿಗೆ ಮೈ ಚುರುಕಾಯಿತು. ಈಗಲೇ ಮಗಳನ್ನು ಧಾರೆ ಎರೆಯುವವನಂತೆ ಕುಕ್ಕರಗಾಲಲ್ಲಿ ಮುಂದೆ ಸರಿದುಬಂದ. ಭಟ್ಟರೂ ಪುತ್ರಕಾಮೇಷ್ಟಿ ಮಾಡಲು ದಶರಥನಿಗೆ ಸಲಹೆ ಕೊಡುವಾಗ ವಸಿಷ್ಠರು ಕೂತ ಭಂಗಿಯಲ್ಲಿ ಕೂತು ಗಂಟಲು ಹೆರೆದರು.

ಮೊದಲೇ ಬೆಟ್ಟದ ತಪ್ಪಲು ಸುತ್ತಲೂ ಹಸಿರು. ಬೇಸಿಗೆಯಾದದ್ದರಿಂದ ಇಷ್ಟುರತನಕವಾದರೂ ಸ್ವಲ್ಪ ಬೆಳಕಿತ್ತು. ಈಗ ಸುತ್ತಲು ಕತ್ತಲು ಗುಡಿಸಿ ಕೊಳ್ಳುತ್ತಾ ಬಂದಿತ್ತು. ಶಾವಿಗೆ ತೆಗೆದು ಕೋಲಿಗೆ ಹಾಕುತ್ತಿದ್ದ ಮಾಲಕ್ಷ್ಮಮ್ಮ ಅಂದರು—

"ಕತ್ಲಾತಲ್ಲೇ ಮೋಟಿ ದೀಪ ಹಚ್ಚೂಕೆ ಹೇಳೆ ಸೀತೆಗೇ. ಒಬ್ರ

ಮಕ ಒಬ್ರಿಗೆ ಕಾಣುಲ್ಲ. ಯಂತ ಮಾತಾಡ್ತೀರಿ. ಯಾರ್ಮನೆ ಸುದ್ದಿ ಹೇಳ್ತದಾರೆ ಶಂಕರಭಟ್ರು ?"

"ಹೌದು ಮೋಟಮ್ಮ. ಕತ್ಲಾತು ದೀಪ ಹಚ್ಚಿದಿ. ಹಂಗೇ ದೇವರ ದೀಪಾನೂ ಹಚ್ಚಿ ಬನ್ನಿ. ಯಂತದಾರ ಆಗ್ಲಿ ಲಗ್ನದ ಮಾತಾಡೂದು ದೀಪ ಸಮನಾಗಿರ್ಲಿ. ಕತ್ಲೇಲಿ ಶುಭದ ಮಾತಾಡೂಕ್ಯಾಗ್ದು."

ಮೋಟಮ್ಮ ಬುಡಕ್ಕನೆ ಎದ್ದಳು. ಈಗ ಅವಳು ಸೀತೆಯನ್ನು ಬೈಯು ವಂತಿಲ್ಲ. ಶಂಕರಭಟ್ಟರ ಎದುರಿಗೆ ಪ್ರೀತಿಯನ್ನೇ ತೋರಿಸಬೇಕು. ಸಾಧ್ಯ ವಾದಷ್ಟು ನಯವಾದಳು.

"ಲೇ ಸೀತೇ ಎತ್ಲಾಗ್ಹೋದ್ಯೇ ? ದೀಪ ಹಚ್ಚು ಬಾರೇ"

ಇವರ ಮಾತುಕತೆಗಳೆಲ್ಲಾ ಸೀತೆಯ ಕಿವಿಗೆ ಬಿದ್ದು ಅವಳಾಗಲೇ ಗಿನುಟುಹಿಡಿದ ಕಾಲು ದೀಪಗಳಿಗೆ ಹರಳೆಣ್ಣೆ ಸುರಿದು ದೇವರ ನಂದಾದೀಪ ದಿಂದ ಮೂರು ನಾಲ್ಕು ಕಾಲು ದೀಪ ಹಚ್ಚಿ ಚೌಕಿಗೊಂದು, ಅಡಿಗೆ ಮನೆ ಗೊಂದು,ಕೋಣೆಗೊಂದು ಇಟ್ಟು ಬಂದಳು. ಏಳು ತಿಂಗಳ ಕಾಡಿ ಕೋಣೆಯ ಒಳ ಬಾಗಿಲಲ್ಲೇ ಕೂತು ಇವರ ಮಾತು ಕೇಳುತ್ತಿದ್ದಳು. ಮಕ್ಕಳು ಒಂದು ದೀಪದ ಮುಂದೆ ಚಲಿಪಿಲಿ ಮಾಡಿದವು.

"ಹೋಗ್ರಾ ಒಳಗೆ. ಗಲಾಟೆ ಮಾಡಬ್ಯಾಡಿ. ಕಾಲ್ತೊಳದು ದೇವರ ಮುಂದೆ ಬೆನಕ ಬೆನಕ ಹೇಳಿ"

ಎಂದು ಆಜ್ಞಾಪಿಸಿದ ಮಹಾಬಲಯ್ಯ. ಮಕ್ಕಳು ಒಳಗೆ ಹೋದವು. ಸೀತೆ ದನ ಕರೆಯಲು ನಡೆದಳು. ಅವಳಿಗೆ ಇದರಲ್ಲಿ ಯಾವ ಆಸ್ಥೆಯೂ ಇರಲಿಲ್ಲ. ಎಲ್ಲರಿಗೂ ಮದುವೆಯಾಗುವಂತೆ ತನಗೂ ಮದುವೆಯಾಗುತ್ತದೆ ಮೈನೆರೆದು ಪ್ರಸ್ತವಾದ ಮೇಲೆ ಗಂಡನ ಮನೆಗೆ ಹೋಗಬೇಕು ಎಂಬು ದಷ್ಟೇ ಗೊತ್ತು. ಮೈ ನೆರೆಯುವುದೆಂದರೇನು ? ಪ್ರಸ್ತ ಎಂದರೇನು ? ಯಾವು ದರ ಅರ್ಥವೂ ತಿಳಿಯದು. ಅವಳ ಭಾವನೆಯಲ್ಲಿ ಹಬ್ಬ ಹರಿದಿನಗಳಂತೆ ಇವೆಲ್ಲವೂ ಒಂದೊಂದು ಸಮಾರಂಭ ಅಷ್ಟೆ. ಗಂಡು-ಹೆಣ್ಣು ಒಬ್ಬರನ್ನೊಬ್ಬರು ನೋಡುವ ಮತ್ತು ಒಪ್ಪುವ ಸಂಪ್ರದಾಯವೇ ಇರಲಿಲ್ಲ ಆಗ. ಮನೆಯ ಹಿರಿ ಯರು ಎದುರಿಗೆ ತಂದು ನಿಲ್ಲಿಸಿದ ಗಂಡಿನ ಕೊರಳಿಗೆ ಮಾಲೆ ಹಾಕುವುದಷ್ಟೇ ಗೊತ್ತು. ಮದುವಣಗಿತ್ತಿ ಗಂಡನ ಮುಖ ನೋಡಬಾರದು, ನಾಚಿ

ಕೊಳ್ಳಲೇಬೇಕು, ಎಂಬುದು ಗೊತ್ತು. ಆ ಕಾಲಕ್ಕೆ ಅದೆಲ್ಲಾ ಮಾಡಿಕೊಂಡರಾಯ್ತೆಂದು ಸೀತೆ ಸಧ್ಯದ ದನ ಕರೆಯುವ ಕೆಲಸಕ್ಕೇ ಹೊರಟಳು.

ಸ್ವಲ್ಪ ಹೆಚ್ಚು ಹಾಲು ಕರೆಯುವ ಗೋಪಿ ದನ ಮೋಟಮ್ಮನನ್ನು ಕಂಡರೆ ಭರತನಾಟ್ಯ ಪ್ರಾರಂಭಿಸುವುದು. ಸೀತೆ , ಮಾಲಕ್ಷಮ್ಮ ತಪ್ಪಿದರೆ ಮಹಾಬಲಯ್ಯ ಅದನ್ನ ಕರೆಯಬೇಕಾಗಿತ್ತು. ಮೋಟಮ್ಮನನ್ನು ಒಂದೆರಡು ಬಾರಿ ಹೇಸರಕತ್ತೆಯಂತೆ ಹಿಂಗಾಲಿನಿಂದ ಒದ್ದು ಉರುಳಿಸಿತ್ತು ಗೋಪಿ ಅಂದಿನಿಂದ ಹಿಡಿ ಶಾಪ ಹಾಕುತ್ತಿದ್ದಳು ಮೋಟಮ್ಮ. "ನಿಂತ್ಗಳ್ಳಿ ತೆಪ್ಗೆ" ಎಂದು ಗದರಿ ಕೆಚ್ಚಲಿಗೆ ನೀರು ಎರಚಿ ಸೀತೆ ಕರೆಯಲು ತೊಡಗಿದರೆ ಸದ್ದಿಲ್ಲದೆ ಎರಡು ತಂಬಿಗೆ ಹಾಲು ಇಳಿಸುತ್ತಿತ್ತು ಅದು. ಅದೊಂದು ಕೆಲಸ ತಪ್ಪಿತು, ಹಾಲು ಧಾರಾಳ ಸಿಗುತ್ತದಲ್ಲ. ಮೋಟಮ್ಮ ಹಾಯಾದಳು.

ಈಗ ಸೀತೆಗೆ ಸಿಟ್ಟು ಬಂದಿತ್ತು. 'ನಂಗೆ ಮಾತ್ರ ಮಧ್ಯಾನದ ಹೊತ್ತು ಒಂತೊಟ್ಟು ಕಾಪಿ ಕೊಡಲ್ಲ. ಈ ಭಟ್ರಿಗೆ ಒಂದೊಂದು ಕೊಳಗ ಕೊಟ್ಟದಾಳೆ. ಮಧ್ಯಾನ ನಾನು ಅತ್ತ-ಇತ್ತ ಹೋದಾಗ ತಾವೆಲ್ಲ ಕುಡೀತಾರೆ ಇವರ ಗಂಟ್ಯಕಟ್ಟ.'

ತನ್ನಲ್ಲೇ ಗೊಣಗಿಗೊಂಡು ಮೂರು ದನಗಳ ಹಾಲು ಕರೆದು ಅಡಿಗೆ ಮನೆಗೆ ತಂದಿಟ್ಟು ಕಾಡಿಯ ಹಿಂದೆ ಹೋಗಿ ಕೂತಳು.

ಆ ವೇಳೆಗೆ ಮದುವೆಯ ಮಾತು ಮುಕ್ಕಾಲು ಮುಗಿದಿತ್ತು. "ಸ್ಸೈ ಮತ್ತೆಂತದು ಮುಂದಿಂತಿಂಗ್ಳು ಮೂರು ಒಳ್ಳೇ ಲಗ್ನದೆ. ನಾಳೆ ಬೆಳಿಗ್ಗೆ ಪಂಚಾಂಗ ನೋಡಿ ಹೇಳ್ತನಿ. ನಿಮ್ಮತ್ತೆ ಕವಿಗೊಂಚೂರು ಹಾಕ್ಬಕಲ್ಲ ಸುದ್ದೀನ. ಈಗೆಂತ ಕೂಗೂದು. ಬೆಳಿಗ್ಗೆ ಹೇಳಿದ್ರಾತು" ಎಂದರು ಭಟ್ಟರು. ಮೋಟಮ್ಮನಿಗೆ ಬ್ರಹ್ಮಾನಂದವಾಗಿತ್ತು. ಆದರೂ ಅಂದಳು.

"ಪಾಪ ನೀವೇನೋ ವರ ಹುಡಿಕ್ಕೊಟ್ರಾತು. ಲಗ್ನ ಮುಂದಿಂತಿಗ್ಯೇ ಅಂದ್ರೆ ಬಾಳ ಹತ್ರಾತಲ್ಲ. ಹಪ್ಲ-ಸಂಡ್ಗೆ ಮಾಡ್ಬಕು. ಜವಳಿ-ಜಾಪತ್ತು ಆಗ್ಬಕು. ಧಾರೆ ಯರೀಬಕಾರೆ ಅದರ ಸ್ವಂಟಕ್ಕೆ ಒಂದು ಪಟ್ಟೇನಾರಾ ಮಾಡ್ಸಿ ಹಾಕ್ಬಕಲ್ಲ ಕಾಲ್ಬಳೆ ಅದೆ. ಚಿನ್ನಾ ನೋಡಿದ್ರೆ ಯಾಪಾಟ

ತುಟ್ಟಿಯಾಗೆ ಕೂತದೆ. ಸೌರನ್ನು ಎಂಟ್ರುಪಾಯಂತಲ್ಲ. ನಮ್ಮಂತೋರು ಯಂತ ಚಿನ್ನಾ ಮಾಡ್ಸೂದು. ಕಡೀಗೆ ನಮ್ಮನೇದು ತಾಳಿದಂದಾರ ಇದ್ವಕಲ್ಲ."

"ಮತ್ತೇನಿಲ್ಲ, ಮುಂದಿಂತಿಂಗ್ಳು ಬಿಟ್ರೆ ಮತ್ತೆ ಇನ್ನು ಅರ್ತಿಂಗ್ಳು ಮಳೆ ಹುಯ್ಯುತ್ತೆ. ನಿಮ್ಮ ನಾದ್ನಿ ಬಾಣಂತನಕ್ಕ ಬಂದದಾಳೆ ಅಂದ್ರಲ್ಲ. ಯೋಚೆ ಮಾಡಿ ನೀವು ಗಂಡ–ಹೆಂಡ್ತಿ."

"ಆತು ನೋಡಾಣಂತೆ. ಈಗ ಅಡಿಗೆ ಯಂತದು ಮಾಡ್ಲಿ ಹೇಳಿ" ಎಂದಳು ಮೋಟಿ.

"ನೀವೆಲ್ಲ ಇದ್ನ ಒಪ್ಪಿದ್ದು ನಂಗೆ ಹೊಟ್ಟೆ ತುಂಬಿದ್ದಂಗಾತು. ಮಧ್ಯಾಹ್ನದ್ದು ಇದ್ರೆ ಅದೇ ಆದೀತು. ಈಗೆಂತದು ಬ್ಯಾಸಿಗೆ. ತಣ್ಣಗಿದ್ರೂ ಸೈ" ಎಂದರು ಭಟ್ಟರು.

ಇವರಿಬ್ಬರ ಮಾತಿನ ಮಧ್ಯೆ ಮೌನ ಪ್ರೇಕ್ಷಕರಾಗಿ ಕುಳಿತವರು ದೋಟಿ ಸುಬ್ಬ, ಮಹಾಬಲಯ್ಯ ಮತ್ತೆ ಕೆಪ್ಪುಮಾಲಕ್ಷ್ಮಮ್ಮ. ಆ ದೊಡ್ಡ ಚೌಕಿಗೆ ಹರಳೆಣ್ಣೆ ಕಾಲು ದೀಪ ಯಾವ ಮೂಲೆಗೂ ಸಾಲದು. ಒಬ್ಬರ ಮುಖವೂ ಕಾಣುತ್ತಿರಲಿಲ್ಲ. ಓಡಾಡಲು ಅಡ್ಡಿಯಿಲ್ಲ.

ಸೀಮೆಎಣ್ಣೆ ಶ್ರೀಮಂತಿಕೆ ಹಳ್ಳಿಗಳಿಗೆ ಇನ್ನೂ ಬಂದಿರಲಿಲ್ಲ. ಸೀತೆ ಅದನ್ನು ಮೊದಲು ನೋಡಿದ್ದು ತೀರ್ಥಹಳ್ಳಿಯ ಸದಾಶಿವ ಭಟ್ಟರ ಮನೆಯಲ್ಲಿ. ಸದಾಶಿವಭಟ್ಟರ ಮಗ ಶಿವಮೊಗ್ಗೆಯಿಂದ ಈ ಅದ್ಭುತ ದೀಪವನ್ನು ತಂದು ಅದಕ್ಕೆ ಸೀಮೆಎಣ್ಣೆ ತುಂಬಿಸಿ, ಬೆಂಕಿಕಡ್ಡಿಯಿಂದ ಹೊತ್ತಿಸಿ ಗಾಜಿನ ಬುರುಡೆ ಹಾಕಿ ಗೋಡೆಗೆ ತಗುಲಿಸಿದ್ದೊಂದು ಭಾರೀ ಪವಾಡ. ಆ ವೇಳೆಗೆ ಅಲ್ಲಿಯ ಶ್ರೀಮಂತರ ಮನೆಗಳಲ್ಲೆಲ್ಲಾ ಅದು ಜಾರಿಗೆ ಬಂದಿತ್ತು. ಆಗ ಅದು ಚಿಮಣಿಯೆಣ್ಣೆಯಾಗಿತ್ತು.

ಸೀತೆ ಈ ಅದ್ಭುತವನ್ನು ಅಚ್ಚಿಯ ಮುಂದೆ ವರ್ಣಿಸಿದ್ದಳು

"ಇಷ್ಟಗ್ಲ ನಾಗಸಂಪ್ಗೆದಳ ಇದ್ದಾಗೆ ಇರುತ್ತೆಕಣೆ ದೀಪಾ ! ಯಾಪಾಟಿ ಬೆಳಕೂಂತಿ ? ಹಗಲದ್ದಾಗೇ ಇರುತ್ತೆ."

ಆ ಪವಾಡ ಇನ್ನು ಈ ಹಳ್ಳಿಗಳ ಮನೆಗೆ ಬಂದಿರಲಿಲ್ಲ. ಮೋಟು·

ಗೋಡೆಯ ಮೇಲೆ ದೀಪದ ಹಣತೆ ಇಟ್ಟುಕೊಂಡು ಹಾಲು ಕರೆದಿದ್ದಳು ಸೀತೆ.

ಈಗ ಇವರ ಮಾತಿನಲ್ಲಿ ತೀರ್ಥಹಳ್ಳಿ, ಕುರುವಳ್ಳಿ, ಮೂಳೂರುಗಳು ಹಾದುಹೋಗಿದ್ದವು. ಬಹುಶಃ ತನ್ನ ಗಂಡನ ಮನೆ ಅಲ್ಲೇ ಎಲ್ಲೋ ಇರ ಬೇಕು. ನಿಜವಾಗಿ ಅಷ್ಟು ದೊಡ್ಡ ಊರಿಗೆ ನನ್ನ ಕೊಡ್ತಾನ ನಮ್ಮಪ್ಪ ? ಸೀತೆಗೆ ಅನುಮಾನವೇ ಆಯ್ತು.

ಯಂತದಾರ ಆಗ್ಲಿ ಈ ಮೋಟೆ ಕೈಲಿ ಬೇಯೂದಾರ ತಪ್ಪುತ್ತಲ್ಲ ಅಂದುಕೊಂಡಳು.

ಸೀತೆ ಬಹಳ ಬುದ್ಧಿವಂತೆ ನಿಜ. ಆದರೆ ಮದುವೆಯ ಬಗೆಗೆ ಅವಳಿಗೆ ಅಷ್ಟಾಗಿ ಗೊತ್ತಿಲ್ಲ. ಹತ್ತೆಂಟು ಹಳ್ಳಿಯ ಮದುವೆಗಳಿಗೆ ಹೋಗಿದ್ದಳು. ಒಂದು ಸಾಹುಕಾರರ ಮನೆಯ ಮದುವೆಗೂ ಹೋಗಿದ್ದಳು. ಆದರೂ ಸಂಭ್ರಮ ಮಾತ್ರ ಗೊತ್ತು.

ಮದುವಣಗಿತ್ತಿ ಮೈತುಂಬ ನಗ ಇಡುತ್ತಾಳೆ. ಉರುಟಣೆ ಹಾಡು ಹೇಳುತ್ತಾಳೆ. ನಾಚಿಕೊಳ್ಳುತ್ತಾಳೆ.

ಹವನ, ಹೋಮ, ಉರುಟಣೆ, ಆರತಿ, ಬೀಗರ ಉಪಚಾರ, ಶಾಸ್ತ್ರ, ಗದ್ದಲ. ಕೆಲವು ಮನೆಗಳಲ್ಲಿ ಬೀಗರ ಜಗಳ

ಈಗ ಮೋಟಮ್ಮ ಅಡಿಗೆ ಮನೆಗೆ ಹೋದಕೂಡಲೆ ಭಟ್ಟರು, ಮಹಾ ಬಲಯ್ಯ, ದೋಟಿ ಸುಬ್ಬ ಸಂಧ್ಯಾವಂದನೆಗಾಗಿ ಎದ್ದರು.

ಸೀತೆ ನಿಶ್ಚಿಂತೆಯಾಗಿ ಕಾಡಿ ಮಗು, ತಂಗಿಯರನ್ನು ಕೂರಿಸಿಕೊಂಡು ಅವರ ತೊಡೆಗಳನ್ನ ತಟ್ಟುತ್ತ—

'ತಟಿಕೆ ಮುಟಿಕೆ ತಾಳಂಪೇಪಿ' ಆಡುತ್ತಿದ್ದಳು. ಕಾಡಿಯ ಮದುವೆಯೂ ಹೀಗೇ ಆಗಿದ್ದರಿಂದ ಅವಳಿಗೆ ಅದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಅವಳ ಗಂಡನ ಮನೆ ಹುಮಚ. ಸುಮಾರಿನ ಸಂಸಾರ.

ಅವರ ಮನೆಯಲ್ಲಿ ತುಂಬಾ ಓದಿದವರೆಂದರೆ ಮಹಾಬಲಯ್ಯ. ಅಲ್ಲಿಂದ ಎಂಟು ಮೈಲಿ ದೂರದ ಐಗಳ ಮಠದಲ್ಲಿ ಮರಳಿನ ಮೇಲೆ ಬೆರಳಲ್ಲಿ ಅ. ಆ. ಇ. ಈ. ಕಲಿತಿದ್ದು. ಅಂತೂ ಹದಿನಾಲ್ಕು ವರ್ಷಕ್ಕೆ ಐವತ್ತೆರಡು ಅಕ್ಷರ ಕಲಿತು ವಿದ್ಯಾವಂತನಾಗಿದ್ದ.

ಇನ್ನು ಬಾಕಿಯವರು ಹೆಂಗಸರು. ಹೆಂಗಸರು ಅಕ್ಷರ ಕಲಿತರೆ ಸರಸ್ವತಿ ಶಾಪ ಕೊಡುತ್ತಾಳೆ—ಎಂಬ ನಂಬಿಕೆ ಇತ್ತು ಈ ಸೀತೆ ಕಾಲದಲ್ಲೂ. ಅಲ್ಲಿ ಯಾರಿಗೂ ಶಾಲೆಯ ಅಗತ್ಯವೇ ಇರಲಿಲ್ಲ.

ಕೆಸುವಿನ ದಂಟಿನ ಕಾಯಿರಸ, ಗಂಜಿ ಮಜ್ಜಿಗೆ ಮಧ್ಯಾಹ್ನದ ಅಡಿಗೆಯಾಗಿತ್ತು. ಕಾಯಿರಸ ಇತ್ತು. ಆದರೆ ಈ ನಾರದ ಭಟ್ಟರು, ದೋಟಿ ಸುಬ್ಬನ ಊಟದ ಅಳತೆ ಮೋಟಿಗೆ ಗೊತ್ತು. ಹಿಂದೆ ಒಂದೆರಡು ಬಾರಿ ಭಟ್ಟರ ಜೊತೆಗೆ ಅವನು ಬಂದಿದ್ದ. ತೆಳ್ಳಗೆ ಆರೂವರೆ ಅಡಿ ಉದ್ದವಿದ್ದ ಅವನ ಹೊಟ್ಟೆಯೇ ಒಂದೂವರೆ ಮೊಳ ಉದ್ದ. ಹೆಂಗಸರಿಗೆ ಅಗಸೇ ಸೊಪ್ಪು, ನುಗ್ಗೇಕಾಯಿ ಕೊಯ್ಯಲು ಬೇಗ ದೋಟಿ ಸಿಗದಿದ್ದಾಗ ಸುಬ್ಬನನ್ನು ಕರೆದು :

"ಸುಬ್ಬ, ದೋಟಿ ಮುರದ್ಹೋಗ್ಯದೆ. ತುಸ ಅಗಸೆ ಸೊಪ್ಪು ಕಿತ್ಕೊಡಾ ?"

ಅಂದ್ರೆ ಆಯಿತು. ಅವನು ಮಾತಾಡುವವನಲ್ಲ. ಸದಾ ಬಾಯಲ್ಲಿ ಹೊಗೆಸೊಪ್ಪಿನ ರಸ ಇರುತ್ತಿದ್ದುದರಿಂದ ಕೂಡಲೇ ಜಿರಾಫೆಯ ಕುತ್ತಿಗೆಯಂತೆ ಉದ್ದವಾಗಿದ್ದ ತನ್ನ ತೋಳನ್ನು ಮೇಲಕ್ಕೆ ಚಾಚಿ ಅರ್ಧ ಮರವನ್ನೇ ತರಿದು ಹಾಕುತ್ತಿದ್ದ. ಅವನ ಹದಿನಾಲ್ಕನೇ ವಯಸ್ಸಿನಿಂದಲೇ ಅವನಿಗೆ ಈ ದೋಟಿ ಎಂಬ ಬಿರುದಾಂಕಿತ ಸೇರಿಕೊಂಡಿತು.

ಈಗ ಈ ದೋಟಿಸುಬ್ಬನ ಕಣಜದಂಥ ಹೊಟ್ಟೆಗೆ ಚಾಚಲು ಏನಾದರೂ ಆದೀತು. ಸುಮ್ಮನೆ ಯಾಕೆ ಒದ್ದಾಡಲಿ–ಅಂದುಕೊಂಡು ಕೋಡಲೆ ಹಚ್ಚಿ ಅಡಿಗೆಗಿಟ್ಟಳು. ಅಕ್ಕಿ ತೊಳೆದು ನೀರಿಗೆ ಹೊನಗನ್ನೆ ಬೇರು ಜಜ್ಜಿ ಹಾಕಿ ಒಂದು ಸಾರು, ಎರಡೂವರೆ ಸೇರಕ್ಕಿ ಅನ್ನ ಮಾಡಿ–ದಿಂಡಿನ ಕಾಯಿ ಗೊಜ್ಜಿಗೆ ಒಂದು ರಾಶಿ ಹಸಿ ಮೆಣಸಿನಕಾಯಿ ಹೆಚ್ಚಿಹಾಕಿ ಇಂಗಿನ ಒಗ್ಗರಣೆ ಕೊಡುವುದರಲ್ಲಿ ಇವರೆಲ್ಲರ ಸುಧ್ಯಾವಂದನೆ ಮಾಬಲಯ್ಯನ ದೇವರ ಮಂಗಳಾರತಿ ಮುಗಿದಿತ್ತು.

ಇಂಗಿನ ವಾಸನೆ ಘ್ರಾಣೇಂದ್ರಿಯ ಹೊಕ್ಕೊಡನೆ ದೋಟಿ ಸುಬ್ಬನ ಪುನಶ್ಚರಣೆ ಮೊಟಕಾಯಿತು. ಭಟ್ಟರು ಅಡಿಗೆ ಮನೆ ಬಾಗಿಲಲ್ಲಿ ಬಂದು ನಿಂತು :

"ಓ ಮೋಟಮ್ಮ, ಯಂತದು ಅಡಿಗೆ ಭಾರಿ ಗಡದ್ದ ?" ಅಂದರು.

"ಸ್ಸೈ ಗಡದ್ದೆಂತದು ಬಂತು. ಒಂದು ಹೊನಗನ್ನೆ ಸಾರು, ದಿಂಡಿನ ಕಾಯಿ ಗೊಜ್ಜು ಮಾಡೀದನಿ. ಮಧ್ಯಾನದ್ದು ಕಾಯಿರಸ, ಬಾಳಕ ಅದೆ ಸಾಕಲ್ಲ ?"

"ಅಬ್ಬಬ್ಬ ! ಭಾರೀ ಗಮ್ಮತ್ತಾತು. ಇದಕಿಂತ ಇನ್ನು ಅಡಿಗೆ ಬೇಕಾ ? ನಂಗಂತೂ ಯಂತದಾರ ಒಂದು ಗೊಜ್ಜು ಮಾಡಿಟ್ರಾತಪ್ಪ. ಖಾರ ಕಟ್ಟಿಗೆ ಉಂಡ್ರೆ ಬ್ಯಾಗ ಹಸಿವಾಗುಲ್ಲ."

ಮೋಟಮ್ಮ ಮನದಲ್ಲೇ ಗೊಣಗಿದಳು. 'ಯಾರ ಮನೆಗೆ ಹೋದ್ರೂ ಹಿಂಗೇ ಸ್ಸೈ ಈ ಮುದ್ಕ. ನಿನ್ನ ಕಾಪಿ ಚಂದ. ನಿನ್ನ ಅಡಿಗೆ ಚಂದ ಅಂತ ಹೆಂಗಸ್ರನ್ನ ಹೊಗಳಿ ಅಟ್ಟಕ್ಕೆ ಕೂರ್ಸಿ ಪಟ್ಟಾಗಿ ಹೊಡದು ಬರತ್ತೆ. ಈಗ ನನ್ನ ಹೊಗಳಾಟ. ತಿಂದು ಚಾಯಿಚಪಲ ತೀರಿಸ್ಕಳ್ಳಲಿ, ಒಬ್ರಲ್ಲಾ ಒಬ್ರು. ಇರೂದೇ ಸ್ಟೈಯಲ್ಲ ಊಟಕ್ಕೆ' –ಎಂದುಕೊಂಡು :

"ಕಾಡೀ, ಸೀತೇ ಬನ್ರೇ ಊಟಕ್ಕೆ. ಏ ಸೀತೇ ಬಾರೆ ಯಲ್ಲಾರ್ಗೂ ಒಳ್ಳೆ ಹಾಕೇ, ಹುಡುಗ್ರು ನಿದ್ದೆ ಮಾಡ್ಯಾವು"

ಎಂದು ಕೂಗುವುದರೊಳಗೆ ಮಹಾಬಲಯ್ಯನೇ ಸ್ವತಃ ಬಾಳೆ ಎಲೆ ತಂದು ಎಲ್ಲರಿಗೂ ಹಾಕಿದ. ಸುಬ್ಬರಿಗೆ, ಭಟ್ಟರಿಗ ದೊಡ್ಡ ಕುಡಿಬಾಳೆ ಎಲೆ ಹಾಕಿತ್ತು. ಸೀತೆ ಮಣೆ ಹಾಕಿದಳು. ಸೀತೆ ಈಗ ಒಂದು ತಿಂಗಳಲ್ಲಿ ಹೇಗೆ ಬೆಳೆದಿದ್ದಾಳೆ ಎಂದು ನೋಡಲು ಪ್ರಯತ್ನಪಟ್ಟರು ಭಟ್ಟರು. ಆ ಮಿಣುಕು ಕಾಲುದೀಪದ ಬೆಳಕಿನಲ್ಲಿ ಆವಳ ಮುಖವೇ ಕಾಣಲಿಲ್ಲ ಕಾಲು ಮಾತ್ರ ಕಾಣಿಸಿತು. ದಪ್ಪ ಕೊರನಾಡು ಸೀರೆ ಅವಳ ಕಿಶೋರ ಕೋಮಲ ತನುವನ್ನು ಸಂಪೂರ್ಣ ಆವರಿಸಿಕೊಂಡಿತ್ತು. ದಪ್ಪ ಕಾಲುಬಳೆ, ಮರುಭೂಮಿಯಂತೆ ಹಿಮ್ಮಡಿ ಒಡೆದ ಕಾಲು ಕಂಡಿತು. ಅಡಿಗೆಯ ವಾಸನೆ, ಹಸಿವು ಈಗ ಅವರಿಗೆ ಬೇರೆ ವಿಷಯ ಯೋಚಿಸಲು ಅವಕಾಶ ಕೊಡಲಿಲ್ಲ. ಮಣೆಯ ಮೇಲೆ ಕೂತ ನಂತರ ದೋಟಿ ಸುಬ್ಬ ಅಡ್ಡ ಪಂಕ್ತಿಯಲ್ಲಿ ಕೂತಿದ್ದ ಕಾಡಿ, ಸೀತೆ, ಮಕ್ಕಳ ಕಡೆ ಕಣ್ಣು ಹರಿಸಿದ. ಮುಂದೆ ತನ್ನ ಭಾವಮೈದುನನ ಹೆಂಡತಿಯಾಗಲಿರುವ ಸೀತೆ ಹೇಗಿರಬಹುದೆಂದು ನೋಡಿದ. ರೂಪ ಲಾವಣ್ಯಗಳ ಗೊಡವೆ ಆಗ

ಯಾರಿಗೂ ಬೇಕಿಲ್ಲ. ಹುಡುಗಿ ಗಟ್ಟಿಮುಟ್ಟಾಗಿ ಇದ್ದು ಮನೆಗೆಲಸ, ಪೂಜೆ–ಪುನಸ್ಕಾರ, ಹಬ್ಬ ಹರಿದಿನ ಸರಿಯಾಗಿ ನಡೆಸಿಕೊಂಡು ಹೋದರಾಯ್ತು. ಮುಖ್ಯವಾಗಿ ಮಡಿ–ಹುಡಿ, ನೇಮನಿಷ್ಠೆಗಳು ತಿಳಿದಿರಬೇಕು. ಒಳ್ಳೆ ಮನೆತನವಾದರಾಯ್ತು.

ಸೀತೆ ಒಳ್ಳೆ ಮನೆತನದ ಹುಡುಗಿ. ಕೆಲಸದಲ್ಲಿ ಜಾಣೆ. ಗಟ್ಟಿಭದ್ರವಾಗಿದ್ದಾಳೆ. ಮೊದಲು ಮೂರು ನಾಲ್ಕು ಬಾರಿ ನೋಡಿದ್ದರೂ ಬೆಳಗ್ಗೆ ಬೆಳಕಿನಾಗೆ ಸಮನಾಗಿ ನೋಡ್ಬೇಕು ಅಂದುಕೊಂಡ. ಈಗ ಮಬ್ಬು ಬೆಳಕಿನಲ್ಲಿ ಕಂಡದ್ದು ಸೀತೆಯ ಬೆಳ್ಳಗಿನ ಮುಖ, ದುಗ್ಗಾಣಿಯಗಲದ ಕುಂಕುಮ ಮಾತ್ರ.

ಎಲೆಯ ಮೇಲೆ ಬಿಸಿ ಬಿಸಿಯ ಕೇಸಕ್ಕಿ ಅನ್ನದರಾಶಿ ಬಿದ್ದಾಗ ಅವನಿಗೆ ಸೀತೆ ಮರತುಹೋದಳು.

'ನಮ್ಮ ಕೊಮಾರಿ ಏನು ಕಡಿಮೆಯಾ ?'

ಎಂದುಕೊಂಡು ಪರಿಷಂಚನೆ ಮಾಡಿದ. ಮುಂದೆ ಘಮಘಮ, ಸೊರಭರ, ಲೊಟ್ಟೆಗಳ, ಭಟ್ಟರ ಹೊಗಳಿಕೆಯ ಮಾತುಗಳಲ್ಲಿ ಎಲ್ಲರ ಊಟ ಸಾಗಿತು. ದೇವರ ಗೂಡಿನ ಪಕ್ಕದಲ್ಲಿ ಕೂತ ಮಾಲಕ್ಷಮ್ಮನ ಅರಳು, ಹಾಲು ಬೆಲ್ಲದ ಫಳಾರ ಸದ್ದಿಲ್ಲದೆ ಸಾಗಿತ್ತು.

ಮೋಟೆ ಕೈಬಟ್ಟಲಲ್ಲಿ ತಂದು–ತಂದು ಪೇರಿಸುತ್ತಿದ್ದ ಅನ್ನದರಾಶಿಯನ್ನು ಸದ್ದಿಲ್ಲದೆ ಕರಗಿಸುತ್ತಿದ್ದ ಸುಬ್ಬ. ಅದನ್ನು ನೋಡುತ್ತಿದ್ದ ಸೀತೆ ಮನದಲ್ಲೇ ಅಂದುಕೊಂಡಳು.

ಮಹಾಭಾರತ್ತಾದ ಬಕಾಸುರ ಈಗ ಈ ಸುಬ್ಬನಾಗಿ ಹುಟ್ಟಿಬಂದದಾನೋ ಏನ್ಕತೆಯೋ ! ನಮ್ಮನೆ ಗೊಡ್ಡೆಮ್ಮೆ ಈಪಾಟ ತಿನ್ನಲ್ಲ. ಇವ ಒಂದೆಂಟ್ದಿನ ನಮ್ಮನೇಲಿ ಸಮನಾಗಿ ಇದ್ರೆ ನಮ್ಮನೆ ಕಣಜದ ಬತ್ತ ಪೂರ ಖಾಲಿ ಆಗತ್ತೆ.

ತಾಮ್ರದ ದೊಡ್ಡ ಪಂಚಪಾತ್ರೆಯನ್ನೆತ್ತಿ ಗಳಗಳಗಳ ನೀರು ಕುಡಿದ ಸುಬ್ಬ.

'ಅಡ್ಡಿಲ್ಲ, ಇನ್ನೂ ಯರಡು ಕೈ ಬಟ್ಲನ್ನ ಹಿಡಸತ್ತೆ ಇವನ ಹೊಟ್ಗೆ' ಅಂದುಕೊಂಡಳು ಸೀತೆ.

## ೫

ಜಾಕಿಯ ಜಗಲಿಯಲ್ಲಿ ಭಟ್ಟರಿಗೆ, ಸುಬ್ಬನಿಗೆ ಚಾಪೆ ದಿಂಬಿನ ಹಾಸಿಗೆ ತಯಾರಾಯಿತು. ಮಹಾಬಲಯ್ಯ ಅಲ್ಲೇ ಮಲಗುವುದು. ಕಾಡಿ, ಮಕ್ಕಳು, ಸೀತೆ ಪಕ್ಕದ ಕೋಣೆಯಲ್ಲಿ. ಮತ್ತೊಂದು ಕೋಣೆಯಲ್ಲಿ ಮೋಟಮ್ಮ. ಊಟದ ಮನೆಯಲ್ಲಿ ಮಾಲಕ್ಷಮ್ಮನ ಶಯನೋತ್ಸವ. ಆಕೆ ಸೋಮಾರ ಅಮಾವಾಸ್ಯೆ ವ್ರತದ ಉದ್ಯಾಪನೆ ಮಾಡಿದ್ದರಿಂದ ಹತ್ತಿ ಹಾಸಿಗೆಯ ಮೇಲೆ ಮಲಗುತ್ತಿರಲಿಲ್ಲ. ಒಂದು ಹಚಿಬೆಕಡ್ಡಿ ಚಾಪೆ. ಒಂದೆರಡು ಅವರದೇ ಹಳೇ ಸೀರೆಯ ದಟ್ಟಿಗಳು. ಒಂದು ಹಳೇ ಬಟ್ಟೆ ಗಂಟು ಇಷ್ಟೇ ಅವರ ಪಲ್ಲಂಗ.

ಎಲ್ಲರೂ ಮಲಗಿಯಾಯಿತು. ಭಟ್ಟರು ಮಾತ್ರ ಚಾಪೆಯ ಮೇಲೆ ಕೂತು ನಶ್ಯ ತೀಡುತ್ತಿದ್ದರು. ಮಹಾಬಲ ಕೇಳಿದ—

"ಹಂಗಾರೆ ಮುಂದಿಂತಿಂಗ್ಳೇ ಮುಹೂರ್ತ ಇಡಿಸಿ ಬಿಡೂದೂಂತ್ಲಾ ?"

"ಅದೇ ಸಮ ಅನ್ಸುತ್ತೆ ನಂಗೆ. ಕಾಡಿಗೆ ಏಳ್ತಿಂಗ್ಳು ಅಂತ್ಲೋ ಏನೋ ಅಂದ್ರಲ್ಲ, ಅಷ್ಟ್ರಾಗೇ ಮುಗ್ಸಿದ್ರೇ ವಾಸಿ. ಅವಳು ಹಡದಮ್ಯಾಲೇ ಅಂದ್ರೆ ಮಳೆ ಹಿಡ್ಕಳತ್ತೆ."

"ಮತ್ತೆಂತದಿಲ್ಲ, ರೊಕ್ಕ ಹೊಂದಿಸ್ಬ್ಯಾಕಲ್ಲ. ಇಕಾ ಈ ಹೆಂಗಸ್ರ ಕೆಲ್ಸ ಒಂದಷ್ಟು."

ಕೋಣೆಯ ಒಳಗೆ ಮಲಗಿದ್ದ ಮೋಟಿ ಬುಡಕ್ಕನೆ ಎದ್ದು ಬಂದ್ಳು. ಒಂದು ಸಣ್ಣ ಚಿನ್ನದ ಗೆಜ್ಜೆಯಂತೆ ಮಂಕಾಗಿ ಉರಿಯುತ್ತಿದ್ದ ಕಾಲುದೀಪದ ಕುಡಿಯನ್ನು ಕಡ್ಡಿಯಿಂದ ದೂಕಿ ದೊಡ್ಡದು ಮಾಡಿ ಅದರ ಪಕ್ಕದಲ್ಲೇ ಗೋಡೆಗೊರಗಿ ಕೂತು ಹೇಳಿದಳು :

"ಇಕಳ್ಳಿ ಶಂಕರಭಟ್ರೆ, ಇಪ್ರಿಗೆ ಶುಸಾನಾರಾ ವ್ಯೆಮೇಲೆ ಗ್ಯಾನಿಲ್ಲ. ಸೀತೆಗೆ ಹತ್ವರ್ಷ ತುಂಬಿ ಹೋತೂಂತ ಸಾವಿರದಪ ಹೇಳಿವನಿ. ತಾವಂತೂ ಒಂದಿನ ಹೋಗಿ ಗಂಡು ಹುಡುಕ್ಲಿಲ್ಲ. ಈಗ ನೀವು ಗೋತ್ಯಾಡ್ಕಂಡು ಒಂದ ದೀರಿ. ಈಗ್ಲೂ ಇವರು ಹೀಂಗೆ ಜೂಗಸ್ತಾ ಕೂತ್ರೆ ಆದೀತಾ ? ಒಳ್ಳೆ ಮಂತನ ಸಿಕ್ಕಿರೂವಾಗ ದುಡ್ಡಿಲ್ಲ, ಕಾಸಿಲ್ಲಾಂತ ರಾಗ ಎಳಿಯೂದಾ ? ಒಂದಷ್ಟು ಆಡ್ಕೆನೋ, ಬತ್ತಾನೋ ಮಾರ್ಬಕಪ್ಪ. ಹಾಗಂತ ಕಂಡಾಪಟ್ಟೆ ಖರ್ಚು ಮಾಡೂಕೂ ನಮ್ಮ ಕೈಲಿ ಕೂಡೂದಿಲ್ಲ. ಇನ್ನೂ ಯರಡು ಆದಾ ವಲ್ಲ ಮದಿವ್ಯಾಗೋವು. ಮತ್ತೆ ಪಂಚತ್ರೆ, ಉದ್ದರಣೆ, ತಟ್ಟೆಯಲ್ಲ ಹೊಸದೇ ಮನೇಲದೆ. ಒಂದಷ್ಟು ಜವಳಿ ಜಾಪತ್ತು ತಂದ್ಕಳೂದು. ಸೀತೇ ಅಮ್ಮಂದೇ ಯರಡು ಕುರಡೀ ಬಾಪ್ಲಿ ಆದೆ. ಅದ್ನ ಕೊಡ್ತಂತೆ. ನಿಮ್ಮೂರು ಹೊನ್ನಾ ಚಾರಿ ಕೈಲಿ ಕೊಟ್ಟು ಬ್ಯಾಗ ಒಂದು ತಾಳಿ ಮಾಡ್ಕೊಡೂನ್ನಿ ನೀವೇ. ಇವರ ಕೈಲಿ ಯಂತದೂ ಹರಿಯುಲ್ಲ."

ಭಟ್ಟರ ಎದುರಿಗೆ ಮಹಾಬಲನಿಗೆ ಜೂರು ಪೊಗರು ಬಂದಿತು. ತಾನೇನು ತೀರಾ ಬೀಳಲ್ಲ ಎಂದು ಭಟ್ಟರಿಗೆ ತೋರಿಸಿದ:

"ಶುಸ ತೆಪ್ಪಗೆ ಕೂತ್ಕಳ್ಳೇ. ಅವರು ಪೂರಾ ಮಾತಾಡೂದರಾಗೆ ಬಂದ್ನಲ್ಲ. ನಾ ಸೀತೆಗೆ ಅಪ್ಪಲ್ವ ? ನನಗೂ ಗೊತ್ತಲ್ಲ, ಲಗ್ನ ಮಾಡೂದು ಹ್ಯಂಗೇಂತ."

"ನಾ ಕಂಡಿದನಿ ಸುಮ್ಮಗೆ ಕೂತ್ಕಳ್ಳಿ. ಎಷ್ಟು ಮಕ್ಕಿಗೆ ಮದ್ವೆ ಮಾಡಿದ್ದೀರಿ ನೀವು."

ಭಟ್ಟರು ಅಭಯ ಹಸ್ತ ತೋರಿದರು. ಬಾಯಲ್ಲಿ ತುಂಬಿಕೊಂಡಿರುವ ಹೊಗೆಸೊಪ್ಪಿನ ರಸವನ್ನು ಈಗಲೇ ಹೊರಗೆ ತುಪ್ಪಿ ಬಿಡಲು ಅವರಿಗೆ ಮನಸ್ಸಿಲ್ಲ ಕೆಳದುಟಿಯನ್ನು ಮುಂದೆ ಚಾಚಿ ಬಾಯನ್ನು ದೊನ್ನೆ ಮಾಡಿ ಕತ್ತೆತ್ತಿ ಹೇಳಿದರು—

"ನಾಳೆ ಬೆಳಿಗ್ಗೆಯಲ್ಲ ಮಾತಾಡಣಂತೆ. ಈ ಸೊರವತ್ನಾಗೆ ಯಂತ ಮಾತು. ಯಲ್ಲಾರೂ ಮಲಗ್ಯಾತಲ್ಲ. ನಾಳೆ ಮದ್ಯಾನ ನಾಜತೀಗ ಹೊರಟ್ಬಿಡಾ ಮಾಬಲ. ಎಲ್ಲ ಒಂದಪ ಗಟ್ಟಿ ಮಾಡ್ಕಂಡು ಬಂದ್ರಾತು."

ಮೋಟಿ ಎದ್ದಳು.

ಸೈ ಹಂಗಾರೆ ಮಲಗಿ ಇನ್ನು. ನಾನೂ ಮಲಗ್ತನಂತೆ."

ಕಡ್ಡಿಯಿಂದ ದೀಪವನ್ನು ಕಿರಿದುಗೊಳಿಸಿ ತನ್ನ ಕೋಣೆಗೆ ಹೋದಳು. ಈಗ ವಿಧಿಯಿಲ್ಲದೆ ಅಂಗಳದ ಹೊಟ್ಟಿನ ತಮ್ಮ ಅಮೂಲ್ಯ ಆಸ್ತಿಯಾದ ಎಲೆ ಯಡಿಕೆಯನ್ನು ಪೂರಾ ತುಪ್ಪಿ ಬಂದು ಮಲಗಿದರು ಭಟ್ಟರು. ಮಹಾ ಬಲನೂ ಮಗ್ಗಲುಕೊಟ್ಟ. ಸುಬ್ಬನಿಗೆ ಮಂಪರು ಹತ್ತಿತ್ತು. ಅಂತೂ ತನ್ನ ಭಾವನೆಂಟನಿಗೆ ಸೀತೆಯನ್ನು ಕೊಟ್ಟು ಮದುವೆಯಾಗುವುದು ಗಟ್ಟಿ. ಎಂಟು ದಿನ ಪುಗದಸ್ತಾಗಿ ಊಟ ಸಿಗುತ್ತದೆ. ಅದಕ್ಕಿಂತ ಹೆಚ್ಚಿಗೆ ಅವನಿಗೆ ಏನೂ ಬೇಕಿರಲಿಲ್ಲ.

ಒಳಗೆ ಬಾನಿಯ ಕಾಟ ತಡೆಯಲಾರದೆ ಸೀತೆ ಗುಬ್ಬಚ್ಚಿ ಪಾಯಸದ ಕತೆ ಹೇಳುತ್ತಿದ್ದಳು ಮುಕ್ಕಾಲು ಕತೆ ಕೇಳುವಾಗಲೇ ಬಾನಿ ನಿದ್ದೆ ಮಾಡಿದಳು

"ಇದೊಂದು ಕುರದೆ. ದಿನಾ ಹಿಂಗೆ. ಕತೆಕತೇಂತ ಬಡ್ಕಳತ್ತೆ. ಅರ್ಧ ಹೇಳೂದರಾಗೆ ನಿದ್ದೆ ಹೊಡೆಯುತ್ತೆ. ಮತ್ತೆ ಮಾರ್ನೆದಿನ ಮದ್ಲಿಂದ ಹೇಳ್ಬಕು. ಒಂದಿನಾರಾ ಪೂರಾ ಕೇಳಲ್ಲ."

ಎಂದು ತನಗೆ ತಾನೇ ಹೇಳಿಕೊಂಡು ಇತ್ತ ತಿರುಗಿ ಮಲಗಿದಳು ಸೀತೆ. ಕಾಡಿಗೆ ನಿದ್ರೆ ಬರಲಿಲ್ಲ. ಅವಳು ಮೆಲ್ಲಗೆ ಕೇಳಿದಳು ಸೀತೆಯನ್ನ :

"ನಿನ್ನ ಗಂಡ ಯಾರು ಗೊತ್ತನೇ ?"

"ನಂಗೇನ್ಗೊತ್ತು ?"—ಎಂದಳು ಸೀತೆ ನಿರಾತಂಕವಾಗಿ.

"ಕುರುವಳ್ಳಿ ಕಿಟ್ಟಿಪ್ನೋರ ಮಗ ಕೊಮಾರಿನಂತೆ."

"ಸೈ."—ಅಂದು ಹಗುರವಾಗಿ ಕಣ್ಣು ಮುಚ್ಚಿದಳು ಸೀತೆ.

ಗಂಡು ಹೆಣ್ಣುಗಳನ್ನು ಮದುವೆಯ ಬಗೆಗೆ ಕೇಳುವ ಸಂಪ್ರದಾಯ ಆಗ ಇರಲೇ ಇಲ್ಲ 'ಅವಕ್ಕೆ ಯಂತದು ತಿಳಿಯುತ್ತೆ ?' ಎನ್ನುವುದು ಮಾಮೂಲಿ ಮಾತು. ತಿಳಿಯುತ್ತಲೂ ಇರಲಿಲ್ಲ. ಒಬ್ಬರನ್ನೊಬ್ಬರಿಗೆ ತೋರಿಸುವ ಸಂಪ್ರದಾಯವೂ ಇರಲಿಲ್ಲ. ಮದುವೆಯಾಗಿ ನಾಲ್ಕೈದು ವರ್ಷಗಳ ಮೇಲೆ ಅವರು ಒಬ್ಬರನ್ನೊಬ್ಬರು ಸರಿಯಾಗಿ ನೋಡುತ್ತಿದ್ದದ್ದು. ಗಂಡು-ಹೆಣ್ಣು ಗಳಿಗೆ ಈ ವಿಷಯವಾಗಿ ಯಾವ ಯೋಚನೆಯೂ ಇರುತ್ತಿರಲಿಲ್ಲ.

ಈಗಲೂ ಸೀತೆ ನಿಶ್ಚಿಂತೆಯಾಗಿ ಕಣ್ಣು ಮುಚ್ಚಿದಳು. ಆಗಲೇ ಜಗಲಿ

ಯಲ್ಲಿ ಮಲಗಿದ ಮೂರು ಜನರ ಗೊರಕೆಯ ಸದ್ದು ಪೈಪೋಟಿಯಲ್ಲಿ ಕೇಳು ತ್ತಿತ್ತು. ಹುಲಿ ಗುಟುರ ಹಾಕಿದಂತೆ, ಮಜ್ಜಿಗೆ ಕಡೆದಂತೆ, ಹಂದಿ ಗುರು ಗುಟ್ಟಿದಂತೆ. ಸೀತೆಗೆ ಇದೂ ಸಾಮಾನ್ಯ.

ಬೆಳಗಿನ ಜಾವಕ್ಕೇ ಏಳುವುದು ಸೀತೆಯ ಪದ್ಧತಿ. ಸೋಮಾರಿತನ ವೆಂಬುದು ಅವಳಿಗೆ ಇಲ್ಲ. ಮೋಟಿ ಕರೆಯುವುದಕ್ಕೆ ಮೊದಲೇ ಎದ್ದು ಮುಖತೊಳೆದು ಹಣೆಗಿಟ್ಟು ಹಾಳೆಕುಂಟು, ಸಗಣಿ, ಈಚಲಹಿಡಿ, ನೀರು ಹಿಡಿದು ಹೊರಟಳೆಂದರೆ ಮುಂದಿನ ದೊಡ್ಡ ಜಗಲಿಯನ್ನು ಪೂರ್ತಿ ಹಾಳೆ ಕುಂಟಿನಲ್ಲಿ ಸಾರಿಸಿ, ರಂಗವಲ್ಲಿ ಇಡಬೇಕು. ಶುಕ್ರವಾರ, ಮಂಗಳವಾರ ಮನೆ ಪೂರ್ತಿ ಸಾರಿಸುವುದು ಅವಳ ಕೆಲಸವೇ. ಅದಲ್ಲ ಆಗಿನ ಹುಡುಗಿ ಯರಿಗೆ ಕೆಲಸವೇ ಅಲ್ಲ. ನಂತರ ದನಕರೆದು, ಮಜ್ಜಿಗೆ ಕಡೆದು, ಮನೆ ಯೆಲ್ಲ ಗುಡಿಸುವುದು.

ಹೆಂಚಿನ ಸಂದಿಯ ಬಿಸಿಲುಕೋಲು ದೇವರಗುಡಿಗೆ ಬಿದ್ದಾಗ ಒಂಬತ್ತು ಗಂಟೆ ಎಂದು ಲೆಕ್ಕ. ಗಡಿಯಾರವೆಂಬ ಕಾಲಸೂಚಿ ಆಗ ತುಂಬಾ ಶ್ರೀಮಂತರ ಮನೆಗಳಲ್ಲಿ ಮಾತ್ರ ಇತ್ತು. ಈ ಹಳ್ಳಿಗಳಲ್ಲಿ ಸೂರ್ಯನನ್ನು ನೋಡಿ ಹೊತ್ತು ತಿಳಿಮಕೊಳ್ಳುವುದು ಅಷ್ಟೆ. ಮಳೆಗಾಲದಲ್ಲಿ ಅದೂ ಇಲ್ಲ. ದೂರದ ಹೊಲೆಯರ ಹಟ್ಟಿಯ ಕೋಳಿಗಳು ಕೂಗಬೇಕು. ಇಲ್ಲ ಕೊಟ್ಟಿ ಗೆಯ ಎಳೆಗರುಗಳು ಎದ್ದು ನಿಂತು 'ಅಂಬಾ' ಎಂದು ಕೂಗಿದರೆ ಐದು ತಾಸಾಗಿರಬಹುದೆಂದು ಅಂದಾಜು. ಅಲ್ಲದೆ ಅವರಿಗೆ ಕಾಲದ ಪರಿವೆಯೂ ಇರಲಿಲ್ಲ. ಒಂದಾದ ಮೇಲೊಂದು ಕೆಲಸಮಾಡುತ್ತಿರುವುದು ಅಷ್ಟೆ.

ಸೀತೆ ತನ್ನ ಮೊದಲ ಕೆಲಸ ಮುಗಿಸಿ ಬರುವುದರಲ್ಲಿ ಮಲಗಿದವರೆಲ್ಲಾ ಎದ್ದಿದ್ದರು. ಹಾಸಿಗೆ ಸುತ್ತಿ, ಗುಡಿಸಿಯಾಯಿತು. ಅವಳ ಪಾಲಿನ ಕೆಲಸ ಎಲ್ಲಾ ಮುಗಿಯಿತು.

"ಬ್ಯಾಗ ಸ್ನಾನ, ಸಂಧ್ಯಾವಂದ್ನೆ ಮುಗ್ಸಿ, ಕಾಪಿ ಕೊಡ್ತ್ನಂತೆ."

ಎಂದ ಮೋಟಿಯ ಅಭಯವಾಕ್ಯ ಕೇಳಿ ಭಟ್ಟರು, ಸುಬ್ಬ ಚುರು ಕಾದರು. ಅದನ್ನ ಮುಗಿಸದಿದ್ದರೆ ಇವಳು ಕೊಡುವುದಿಲ್ಲವೆಂದು ಖಾತ್ರಿಯಾಗಿತ್ತು.

ಗುಡ್ಡ, ಸ್ನಾನ, ಪೂಜೆ ಮುಗಿಸುವುದರಲ್ಲಿ ಮೋಟಮ್ಮನ ಮೊಸರವ

ಲಕ್ಕಿ, ಕಾಫಿ ಬಂತು. ಬಾಳೆ ಎಲೆಯಲ್ಲಿ ಹಾಕಿದ ಮೊಸರವಲಕ್ಕಿಯನ್ನ ಎಡ ಅಂಗೈ ಮೇಲೇ ಇಟ್ಟು ತಿಂದರು ಮೂರು ಜನವೂ. ಆವೇಳೆಗೆ ಈ ಅತ್ತೆ—ಸೊಸೆಯರ ಮಡಿಕೆಲಸ ಪೂಜೆಗಳೂ ಮುಗಿದು, ಅವರು ಕಾಫಿ ಕುಡಿದೂ ಆಗಿತ್ತು. ಇನ್ನು ಮಕ್ಕಳಿಗೆ ಕೊಡುವುದು ಸಧ್ಯದಲ್ಲಿ ಕಾಡಿಗೆ ಸೇರಿತ್ತು. ಭೋಜನ ಶಾಲೆಯ ಒಂದು ಮೂಲೆಯಲ್ಲಿ ಕಾಡಿ, ಸೀತೆ, ಮಕ್ಕಳ ಕಾಫಿ-ತಿಂಡಿ ಸಂಭ್ರಮವಾಯಿತು.

ಕಾಡಿ ಬಂದ ಮೇಲೆ ಸೀತೆಗೆ ಸ್ವಲ್ಪ ಒಳ್ಳೆಯ ಕಾಫಿ ಸಿಗುತ್ತಿತ್ತು. ಅದಕ್ಕೆ ಮುಂಚೆ ಬರೀ ಚರಟದ ನೀರೇ. ಸೀತೆಗೆ ತಿಳಿದರೂ ಹೇಳುತ್ತಿರಲಿಲ್ಲ ಅವಳು ಅದು ಸೇರದಿದ್ದರೆ ಮೋಟೆಯ ಎದುರಿಗೇ ಅಂಗಳಕ್ಕೆ ಸುರಿದು ಕಾಫಿ ಪಾತ್ರೆ ತೊಳೆಯುತ್ತಿದ್ದಳು.

"ಯಾಕೇ ಅದು ಅಪಾಟ ಕಾಫೀನ ಮುಸ್ರೆ ಹೊಂಡಕ್ಕೆ ಸುರದ್ದು? ನಿಂಗೆ ಬ್ಯಾಡ್ದೆ ಹೋದ್ರೆ ಒಂದು ಮೂಲೇಲಿ ಬಡಿ. ಕಾಫಿ ಪುಡಿ ಏನು ನಿಮ್ಮಜ್ಜ ತಂದ್ಕೊಡ್ತಾನಾ?"

ಅಜ್ಜಿಯ ಎದುರಿಗೆ ಚಿಕ್ಕಮ್ಮ ತನಗೆ ಹೊಡೆಯುವುದಿಲ್ಲವೆಂದು ಗೊತ್ತು. ಹೊಡೆದರೂ ಅಡ್ಡಿಯಿಲ್ಲ. ನಿರ್ಭಯವಾಗಿ ಹೇಳುತ್ತಿದ್ದಳು.

"ನಮ್ಮಜ್ಜೆಲ್ಲದಾರೆ ಕಾಪಿಪುಡಿ ತಂದ್ಕೊಡೂಕೆ? ಅದು ಬರೀ ಬೆಲ್ಲದ ನೀರು. ಕಾಫಿಪುಡಿ ವಾಸ್ನಿಲ್ಲ, ಹಾಲಿಲ್ಲ, ಹೊಗೆ ವಾಸ್ನೆ ಸೈ. ಹ್ಯಂಗೆ ಅದ್ನ ಕುಡಿಯೂದು. ಅದ್ಕೆ ಚಲ್ದೆ."

"ಹುಚ್ಗ್ಯೆನೆ ತಂದು, ಈಗ ನಾವೆಲ್ಲ ಕುಡೀಲಿಲ್ಲವೇ?"

"ನೀವೆಲ್ಲ ಕೂಡಿಯೂ ಕಾಪಿ ಚಂದಾಗಿರತ್ತೆ, ನಂಕೊಡೂದು ಬರೀ ಬಿಸ್ನಿರು."

"ನಿಂಗೆ ಬರ್ತಾ ಬರ್ತಾ ದಿಂಡೇತನ ಹೆಚ್ಚಾತು! ನಾಳಿಂದ ನಿಂಗೆ ಅದ್ನೂ ಕೊಡೂದಿಲ್ಲ ನೋಡ್ತಿರು."

"ಬ್ಯಾಡೇಬ್ಯಾಡ. ನಾ ಅಜ್ಜಿಕೈಲೇ ಇಸ್ಕಾತನಿ."

ಇದು ಯಾವುದಕ್ಕೂ ಜಗ್ಗುವುದಿಲ್ಲವೆಂಬುದು ಗೊತ್ತಾಗಿತ್ತು ಮೋಟಮ್ಮನಿಗೆ. ಈಗ ಕಾಡಿಯ ಮುಂದೆ ಒಂದು ಡಬರಿ ಕಾಫಿ ಇಟ್ಟು—

"ಹುಡುಗ್ರಿಗೆಲ್ಲ ಕೊಟ್ಟು ನೀನೂ ಕುಡಿಯೆ" ಅನ್ನುತ್ತಿದ್ದಳು ಮೋಟಿ.

ಆದರಿಂದ ಈಗ ಸೀತೆಯ ಕಾಫಿಗೂ ಚೂರು ರುಚಿ ಬಂದಿತ್ತು.

"ಅಡಿಗೆ ಯಂತದ ಮಾಡ್ಲಿ ಭಟ್ರೇ ?" ಆಸ್ತೆಯಿಂದ ಕೇಳಿದಳು ಮೋಟಿ.

"ನೀ ಯಂತದ ಮಾಡಿದ್ರೂ ಚಂದಾಗಿ ಮಾಡ್ತೀಯಪ್ಪ. ನಿಂಗೆ ತೋಚಿದ್ದು ಮಾಡು." ಎಂದರು ಭಟ್ಟರು.

"ಬ್ಯಾಳೆಸಾರು, ತೊಂಡೇಕಾಯಿ ಪಲ್ಯ ಮಾಡಾಣಾಂತದನಿ"

"ಸೈ ಹಂಗಾರೆ ಇವತ್ತು ಗಡದ್ದು ಊಟ "

"ಯಂತ ಗಡದ್ದು ಬಂತು ? ಗೌರಕ್ಕನ ಅಡಿಗೆ ಭಾರಿ ಚಂದನಂತೆ ಹೌದಾ ?"

"ಅಯ್ಯೋ ! ಅದ್ಯಾಕೆ ಹೇಳ್ತಿ ಮಾರಾಯ್ತಿ. ಆ ಮಾಹಾತಾಯಿಯಾನ ಮೆಚ್ಸೂದು ಭೋಕಷ್ಟ. ಮಕ್ಳು, ಸೊಸೇರು ಆಕೇನ ಕಂಡ್ರೆ ಥರಥರ ನಡ ಗ್ತಾರೆ. ಚೊಕ್ಕ, ಶುಭ್ರ, ಮಡಿ–ಮೈಲ್ಗೀ, ಆ ಅಡಿಗೀನೋ, ತಿಂಡೀನೋ ಯಾಪಾಟೆ ಚಂದಾಂತಿ ? ಹಂಗೇ ಮೂಗಿಂತುದೀಲಿ ಸಿಟ್ಟೂ ಅದೆ."

"ಹಂಗಾರೆ ನಮ್ಮನೆ ಈ ದಡ್ಡ ಕುರದೆ ಅವರ ಕೈಲಿ ಪೂರೈಸೂದಾದರೂ ಹ್ಯಂಗೆ ?"

"ಯಾಕೆ ಈ ಹೆಣ್ಣಿಗೇನು ಕೆಲಸ ಬರದ ? ಮಾಲಕ್ಷಮ್ಮ, ನೀನು ಏನು ಕಮ್ಮಿಯಾ ಕೆಲಸದಾಗೆ ? ನಿನ್ನ ಕೈಕೆಳಗೆ ನುರದ್ದಿಲ್ಲ ಸೀತೆ ? ಮದಿ ವ್ಯಾದ ಮೇಲೆ ಹ್ಯಂಗೂ ಯರಡ್ಮೂರು ವರ್ಷನಾರ ಇರುತ್ತಿಲ್ಲ ಇಲ್ನೀ. ಅಷ್ಟರಾಗೆ ತುಸ ಮಡಿ–ಹುಡಿ, ಅಡಿಗೆ–ಪಡಿಗೆ ಕಲ್ಸಿಬ್ಯಾತಪ್ಪ."

ಶಂಕರಭಟ್ಟರು ತನ್ನನ್ನೂ ಹೊಗಳಿದ್ದರಿಂದ ಚೂರು ಊದಿಕೊಂಡಳು ಮೋಟಿ.

"ಅದೂ ಸಮಾನ್ನಿ. ಕೆಲಸ ಹೆಂಗೂ ಕಲಸ್ತನಿ. ತಾಯ್ಸತ್ತಾ ಹುಡ್ಗೀಂತ ಈ ಅಜ್ಜಿ ಮುದ್ದು ತುಸ ಹೆಚ್ಚಾಗಿ ಅದು ತುಸ ದಡ್ಡತನ ಕಲ್ತದೆ. ಮಾತಿಗೆ ಮಾತಾಡತ್ತೆ. ಒಳ್ಳೇ ಮಾತ್ನಾಗೆ ಹೇಳ್ಸಾತು, ಬೈದಾತು, ಎರಡು

ಪೆಟ್ಟೊ ಕೊಟ್ಟಾತು. ಅದು ಜಗ್ಗಿದರಲ್ವ ? ನಾ ಹ್ಯಂಗೇ ಸಾಕಿದ್ರೂ ಮಲ್ತಾಯಿ ಅನಿಸ್ಕಂಡದನಿ. ಸುಮ್ನೆ ನಂಗೊಂದು ಕೆಟ್ಟಾತು ಸೈ."

"ಯಂತದಂದ್ರೂ ಹುಡುಗಾಟಿಕ್ಕಲ್ವ ಗಂಡನ ಮನೀಗ್ಹೋದ್ರೆ ತನ ಷ್ಟಕ್ಕೇ ತಿದ್ದಿ ಕಳತ್ತೆ. ನೀ ಯರಡು ಪೆಟ್ಟು ಕೊಟ್ರೂ ಅದರ ಒಳ್ಳೇದಕ್ಕೇ ಸೈಯಲ್ಲ."

ದೋಟಿ ಸುಬ್ಬನಿಗೆ ಇದ್ಯಾವುದರ ಕಡೆಗೂ ಗಮನವಿರಲಿಲ್ಲ. ಮಧ್ಯಾಹ್ನದ ಊಟಕ್ಕೆ ಮೋಟನ್ನು ಮಾಡುವ ಬ್ಯಾಳೇ ಸಾರಿನ ಕಡೆಗೆ ಮನಸ್ಸು ವಾಲಿತ್ತು.

"ಸೈ ಮಾಬಲ, ಸುಮ್ನೆಗೆ ಕೂತ್ಗಂಡು ಯಂತದ ಮಾಡೂದು ? ತ್ವಾಟಕ್ಕೆ ಹೋಗಿ ಒಂದಷ್ಟು ತರಗನಾರ ಎತ್ತಿ ದ್ವನ್ನೆ ಮಾಡಿಡಾಣ. ಇನ್ನು ಮದಿವ್ಯಾದರೆ ಬೇಕಲ್ಲ ದ್ವನ್ನೆ ?"

ಭಟ್ಟರ ಮನದ ಉದ್ದೇಶ ಬೇರೆ ಇತ್ತು. ಈ ತರಗು ಎತ್ತುವ ನೆವದಲ್ಲಿ ಒಂದಷ್ಟು ಹಲಸಿನ ಗುಜ್ಜು, ಕಲ್ಯಾಣ ಬಾಳೆಕಾಯಿ, ಬಾಳೆದಿಂಡು, ಕೆಸಿನ ಚಿಪ್ಪುಗಳನ್ನು ಶೇಖರಿಸಿಕೊಂಡು ಹೊರಡಬಹುದು.

ಮೂರೂ ಮಂದಿ ತೋಟಕ್ಕೆ ಹೊರಟರು. ಈಗ ಬೆಳಗಿನ ಹೂವು ಪತ್ರೆ ಕೀಳುವ ಕೆಲಸ ಕಾಡಿಯದಾಗಿತ್ತು. ಮೋಟಿ ಕೂಗಿದಳು—

"ಏ ಸೀತೇ, ಹೋಗೇ ಯಳೇ ತ್ವಂಡೆಕಾಯಿದೆ ಒಂದಷ್ಟು ಕಿತ್ಕಂಬಾರೇ. ಇನ್ನು ನೀ ಕರೂ ಕಟ್ಕೊಕೆ ಹೋದ್ರೆ ಊರ ಮಧ್ಯಾನಕ್ಕೆ ಮನಿಗ್ಬರ್ತಿ. ಹಾಂಗೆ ಒಂದಷ್ಟು ಕೊತ್ತಂಬ್ರಿ ಸಪ್ಪು, ಕರಿಬೇವು, ಹಸಿಮೆಣ್ಸಿನ ಕಾಯಿ ಕಿತ್ಕಂಬಾ"

"ಲೇ ಕರ್ಕಿ, ದಿನಬಿಟ್ಟು ಕೊಟಿಗೆ ಸಗಣಿ ತೆಗೆದು ಹೋಗೇ."

—ಎಂದು ಹೊಲೆಯರ ಕರ್ಕಿಗೆ ಹೇಳಿ ಸೀತೆ ತೊಂಡೇ ಕೀಳಲು ಹೋದಳು. ಚಪ್ಪರದ ತುಂಬ ತೊಂಡೆ ಜಗ್ಗಿತ್ತು. ಕೀಳುತ್ತ-ಕೀಳುತ್ತ ತುಂಬಾ ಎಳೆಯದಾಗಿದ್ದ ತೊಂಡೆಕಾಯನ್ನು ಬಾಯಿಗೆಸೆದು ಕರಕರ ಅಗಿದು ತಿನ್ನುತ್ತಿದ್ದಳು. ಹತ್ತೆಂಟು ಎಳೇ ತೊಂಡೇಕಾಯಿ ಅವಳ ಮಡಿಲು ಸೇರಿದವು.

ಅಂತೂ ಚಿಕ್ಕಮ್ಮನಿಗೆ ತರಕಾರಿ ತಲ್ಪಿಸಿ ಮಜ್ಜಿಗೆ ಕಡೆದಿಟ್ಟು ಬೆಣ್ಣೆ ತೆಗೆದ ಬೆರಳನ್ನು ಚೀಪುತ್ತಾ :

"ಚಿಕ್ಕಮ್ಮಾ, ನಾ ತ್ವಾಟದಾಗೆ ಕರೂಕಟ್ಟೆ ಬರ್ತ್ತಂತೇ"

ಎಂದು ದೂರದಿಂದಲೇ ಸಂದೇಶ ಕೊಟ್ಟು ತೋಟದ ತಿಟ್ಟು ಹತ್ತಿದಳು ಸೀತೆ.

"ಆ ಹಂದಿ ಮುಸಡಿ ಹುಡಗಿ ಕೂಟ ಹರಟಿಗೆ ನಿಂತ್ಕಾಬ್ಯಾಡ ನೀನು ಊರ ಮಧ್ಯಾನದ ತಂಕ. ಹಂಗೆ ಬ್ಯಾಡಾಂದ್ರು ಅವರ ಮನೆಯೋರ ಕೂಟ ಮಾತಾಡಿ ಯಂತದೋ ಇಸ್ಕಂಡು ತಿಂದದ್ದಕ್ಕೇ ನಿಮ್ಮಮ್ಮ ನೆಗೆದ್ಬಿದ್ಲು. ದೇವರಾಣೆ ಇಟ್ಕಂಡ ಮ್ಯಾಲೆ ಯಾಕಂತ ಕೆಲ್ಸ ಮಾಡ್ಬೇಕು ?"

ಇದು ಅನುದಿನದ ಪಾರಾಯಣ. ಮೋಟಿಯ ಮಾತು ಮುಗಿಯುವುದರಲ್ಲಿ ಸೀತೆ ದಿಬ್ಬ ಇಳಿದು ಹೆಚ್ಚು ಎಳೆಗರಿಕೆಗಳಿದ್ದ ಜಾಗದಲ್ಲಿ ನಾಲ್ಕು ಕರುಗಳನ್ನು ಕಟ್ಟಿ ಹತ್ತಿರದ ಕಾಕೆಹಣ್ಣಿನ ಗಿಡದಿಂದ ಗೊಂಚಲು–ಗೊಂಚಲಾಗಿ ಬಿಟ್ಟಿದ್ದ ಹಣ್ಣುಗಳನ್ನು ಕಿತ್ತು ತಿಂದಳು. ಭಟ್ಟರು, ಸುಬ್ಬ, ಮಹಾಬಲಯ್ಯ ತರಗು ಎತ್ತಲು ತೋಟಕ್ಕೆ ಬಂದದ್ದು ಅವಳಿಗೆ ಗೊತ್ತು. ಆದರೆ ಅವರು ಈ ಮಗ್ಗುಲಿಗೆ ಬಂದಿರಲಿಲ್ಲ. ಬಾಳೆ, ಹಲಸು, ಮಾವು, ದೊಡ್ಡೈ, ಚಕ್ಕೋತದ ಮರಗಳಿದ್ದ ಕಡೆಗೆ ಹೋಗಿದ್ದರು. ಸುಮಾರು ಸೀತೆ ಇದ್ದಲ್ಲಿಂದ ಒಂದು ಫರ್ಲಾಂಗು. ಸೀತೆ ಇದ್ದ ಜಾಗ ಅವರಿಗೆ ಕಾಣುವಂತಿರಲಿಲ್ಲ.

ಅಚ್ಚಿಯಾಗಲೇ ಸೀತೆಯನ್ನು ನಿರೀಕ್ಷಿಸುತ್ತಿದ್ದಳು. ಜೊತೆಗೆ ಬಂದ ತಂಗಿ ರುಕ್ಕಿಯನ್ನು ಏನೋ ನೆವಮಾಡಿ ಮನೆಗೆ ಅಟ್ಟಿದಳು. ಸೀತೆ ಪಕ್ಕದ ನಾಗಸಂಪಿಗೆ ಮರವೇರಿದಳು. ಅಚ್ಚಿಯ ದನಿ ಕೇಳಿತು :

"ಸಂಪ್ಗೆ ಮರವೇ ನಿನ್ನೆದಿನ ಶಂಕರಭಟ್ರು, ದೋಟ ಸುಬ್ಬಯ್ಯ ಬಂದ್ರಲ್ಲ ಯಾತಕ್ಬಂದದಾರೆ ಕೇಳು ?"

"ತಗ್ಗಿನಮನೆ ಸೀತೆಗೆ ಗಂಡು ಗೊತ್ಮಾಡ್ಕಂಡು ಬಂದದಾರಂತೆನ್ನು ಮರವೇ"

"ಹೌದಾ ? ನಾ ನಿನ್ನೆನೇ ಅನ್ಲಿಲ್ವಾ ಸೀತೆಗೆ ಬ್ಯಾಗ ಲಗ್ನಾಗುತ್ತೇಂತ. ಗಂಡು ಎಲ್ಲೀದಂತೆ ಕೇಳು ಮರವೇ ?"

"ಕುರುವಳ್ಳೀದಂತಪ್ಪ. ನಂಗೆ ಸಮನಾಗಿ ತಿಳೀದು."

"ಮದುಮಗ ಹ್ಯಂಗದಾನಂತೆ ?"

"ಯಾರಿಗ್ಗೊತ್ತು ? ಇದ್ದಾನು ಯಲ್ಲ ಗಂಡಸ್ರ ಹಾಂಗೇ"

"ಅತ್ತೆ, ಮಾವ ಆದಾರಂತಾ ?"

"ಅದಾಳಂತೆ ತಾಟ್ಕೆ ಅಂತಾ ಅತ್ತೆ. ಇಬ್ರು ವಾರಗಿತ್ತೀರೂ ಅದಾರೇ ಅಂತ ಹೇಳ್ತಿದ್ರು ಭಟ್ರು."

"ಹಂಗಾರೆ ಅತ್ತೆ ಕಾಟ ಆದೇಂತ ಆತು ಸೀತೆಗೆ ?"

"ಇದ್ರಿತ್ತು. ಒಂದ್ಹತ್ವರ್ಷ ಕಾಡತ್ತೆ. ಆಮ್ಯಾಲೆ ಅತ್ಲಾಗಿ ನೆಗದ್ಬಿದ್ಹೋಗುತ್ತೆ."

"ಯಾವಾಗಂತೆ ಲಗ್ನ ?"

"ಸಮನಾಗಿ ಗೊತ್ತಿಲ್ಲಪ್ಪ. ಮುಂದಿಂತಿಂಗ್ಳೇ ಮಾಡ್ಬಿಡಿ, ಆಮ್ಯಾಲೆ ಮಳೆ ಹಿಡ್ಕಳತ್ತೆ ಅಂತಿದ್ರು ಭಟ್ರು."

"ಹಂಗಾರೆ ಹಪ್ಪ-ಸಂಡ್ಗೆ ಯಲ್ಲ ಮಾಡಿಟ್ಟದಾರಾ ?"

"ಗೊತ್ತಿಲ್ಲಪ್ಪ. ಮಾಡ್ತ್ಯಾರು ಇನ್ಮೇಲೆ."

"ಸೀತೆ ಗಂಡನ ಮನೀಗೆ ಹೊರಟ್ಹೋದ್ರೆ ನಂಗೆ ಇಪ್ರೀತ ಬೇಜಾರಂತೇಂತ ಹೇಳು ಮರವೇ"

"ಅಯ್ಯೋ ಈಗ ಲಗ್ನಾದ್ರೆ ನಾ ಇನ್ನೂ ಮೈನೆರದೂ, ಪ್ರಸ್ತಾಗಿ. ಅತ್ತೆಮನೀಗ್ಹೋಗೂದು ಇನ್ನೂ ಮೂರ್ನಾಕು ವರ್ಷಾರೂ ಆದೀತು, ಅಷ್ಟೊತ್ಗೆ ನಿಂಗೂ ಲಗ್ನಾಗಿ ಗಂಡನ ಮನೀಗೆ ಹೊರಟರ್ತೀಯತೇಂತ ಹೇಳು ಮರವೆ."

"ಕೆಳಗೆ ನಿಂತ್ಕಳ್ದಿ ಮರ ಯಾಕೆ ಹತ್ತಿರೂದಂತೆ ಕೇಳು ಮರವೆ ?"

"ಗಂಡಸ್ರೆಲ್ಲ ತರಗೆತ್ತಾಕೆ ತ್ವಾಟಕ್ಕೆ ಹೋಗಿದಾರೆ ಅತ್ಲಾಕಡೆ. ನಾವಿಬ್ರೂ ಮಾತಾಡೂದ ಕಂಡ್ರೆ ಬೈತಾರೆ ಅವ್ರು. ಅದ್ಕೇ ಮರ ಹತ್ತಿರೂದು."

೬

“ಹಂಗಾರೆ ನಾನೂ ಬ್ಯಾಲದ ಮರದ ಬದೀಗೆ ನಿಂತ್ಕಾತನಿ.”

“ಅವ್ರು ಬಾಳೆ ತ್ವಾಟದಾಗದಾರೆ. ಇಲ್ಲೀಗೆ ಕಾಣುವುದಿಲ್ಲ. ಪಕ್ಕನೆ ಬಂದಾರೂಂತ ಮರ ಹತ್ಗಂಡೆ.”

“ಹಂಗಾರಿವತ್ತು ಹಾಡು ಹೇಳ್ಕೊಡೂದಿಲ್ಲ ?”

“ಈಗ ಹೊತ್ತಾತು. ಇನ್ನೂ ಹಳ್ಳಕ್ಹೋಗಿ ಬಟ್ಟೆ ಒಗೀಬಕು; ವೈತ್ರ್ವ ಳೀಬಕು; ಉಪ್ಕರಣೆ ತೊಳೀಬಕು. ಮಧ್ಯಾನ ಅವರೆಲ್ಲ ಕುರವಳ್ಳೀಗೆ ಹೋಗ್ತಾರಂತೆ. ಆಮ್ಯಾಲೆ ಬರ್ತನಿ ಮತ್ತೆ.”

“ಲಗ್ನ ಖಂಡ್ತ ಮಾಡೂಕಾ ?”

“ಇದ್ದೀತು.”

“ಹುಡುಗನ ಹೆಸರೇನಂತೆ ?”

“ಕೊಮಾರೀತ್ಲಂತೆ”

“ಗಂಡನ ಹೆಸ್ರ ಹೇಳಬಿಟ್ಯಲ್ಲೇ”

ಖುಷಿಯಿಂದ ನಕ್ಕಳು ಅಚ್ಚಿ.

“ನಂಗೆ ಅವ ಇನ್ನೂ ಗಂಡಾಗಿಲ್ಲಲ್ಲ. ಆ ಮೇಲೆ ಹೇಳ್ಬಾರ್ದಂತೆ. ಅವರ ಆಯಸ್ಸು ಕಡಿಮೆ ಆಗತ್ತಂತೆ. ಅವ ತಾಳಿ ಕಟ್ಟೊತಂಕ ಅಡ್ಡಿಲ್ಲಂತೆ.”

“ಲಗ್ನ ಹತ್ರ ಬಂತಲ್ಲ. ಇನ್ನು ಸೀತೆಗೆ ಉರಟ್ಣಿ ಹಾಡು ಗಟ್ಟಿ ಮಾಡೂದೇ ಆಗುತ್ತೆ ಅಲ್ವಾ ?”

“ಕಾಡತ್ತೆ ಹೇಳ್ಕೊಟ್ಟದ್ದು ಗ್ಯಾಪಕ ಅಪೆ. ಆದ್ರೆ ಮತ್ತೊಂದಪ ಸಮನಾಗಿ ಗ್ಯಾಪಕ ಮಾಡ್ಕಾಬಕು.”

“ನಾ ಇನ್ನು ಯಾವ ಕಾಲಕ್ಕೋ ಉರಟ್ಣಿ ಹಾಡು ಕಲಿಯೂದು ?”

"ನನ್ನ ಲಗ್ನ ಆದ ಮ್ಯಾಲೆ ತಕ್ಷಣ ಏನೂ ಗಂಡನ ಮನೀಗೆ ಹೋಗೂದಿಲ್ಲಲ್ಲ. ಎಲ್ಲ ಹೇಳ್ಕೊಡ್ತನಂತೆ."

ದೂರದಲ್ಲಿ ಹುಚ್ಚ ಬರುತ್ತಿದ್ದದ್ದು ಕಂಡಿತು. ಸೀತೆ ಕೂಗಿದಳು—

"ಲೇ ಪೆದ್ಮುಂಡೆಗಂಡ. ಇಲ್ಲದನಿ ಬಾರೋ ?"

ಹದಿನಾಲ್ಕು ವರ್ಷದ ಹುಚ್ಚ ನಾಗಸಂಪಿಗೆ ಮರದ ಬುಡದಲ್ಲಿ ನಿಂತು ಕತ್ತೆತ್ತಿ ನೋಡಿ ಅಂದ—

"ಸೀತವ್ವಾರ. ಆಣೆ ಬಾಶೆ ಆದೋರ ಅತ್ರ ಮಾತಾಡಿದ್ರೆ ಜಕಣಿ ಒಡಿಯತ್ತಂತೆ. ನೀವ್ಯಾಕ್ರ ಮಾತಾಡೂದು ಆವರ್ಹ್ಯಾಟ ? ಮೋಟವ್ವಾರಿಗೆ ಗೊತ್ತಾದ್ರೆ ಕಂಡಾಪಟ್ಟೆ ಬೈತಾರೆ."

"ನಿನ್ನ ಮೋಟವ್ವಾರ ಅಜ್ಜೀನ ಕುಟ್ಟ ! ನಾವೆಲ್ಲೋ ಮಾತಾಡ್ತದವಿ ? ಮಧ್ಯೆ ಗಂಗೆ ಆದಾಳೆ; ಮಾವಿನ ಮರ ಕುರ್ತು ಹೇಳ್ತದನಿ ಸ್ಯೆ. ಯಂತ ಹುಣಸೇ ಕಾಯೂ ಆಗುಲ್ಲ. ಆ ಮುಂಜ್ಯಾತಂಗೆ ಅಷ್ಟು ತಿಳಿಯುಲ್ಲನೋ ? ನಾವು ಮದಿವ್ಯಾಗದ ಹುಡುಗೀರು ನಮಗೇನಿಲ್ಲ. ಈಗ ಕಾಡತ್ತೆ ಇವರ ಹತ್ರ ಮಾತಾಡಿದ್ರೂ ಅಡ್ಡಿಲ್ಲ. ಅವರು ಬ್ಯಾರೆಮನಿಗೆ ಹೋದೋರಲ್ವ ? ಆಮ್ಯಾ ಕಾಡತ್ತೆ ಹೆದರ್ಕ್ಯಾತಾರೆ. ನಂಗೆ ಮದಿವ್ಯಾದರೆ ನಾನಂತೂ ಅವರ ಹತ್ರ ಮಾತಾಡ್ತನಪ್ಪ. ಸಮ ; ಯಂತ ಹಣ್ಣು ತಂದದಿ ಇತ್ಲಾಕೊಡು."

ಸೀತೆ ಏಣಿ ಇಳಿದಂತೆ ಮರ ಇಳಿದು ನಿಂತಳು.

"ಇವತ್ತಿನ್ನು ಗುಡ್ಡದ ಮ್ಯಾಲೆ ಹೋಗಿಲ್ರ. ಒಂದಷ್ಟು ಕಲ್ಸಂಪೆ ಹಣ್ಣು ತಂದದನಿ. ನೀವು ಬಾಯಿಕೊಡ್ತನಿ ಅಂದಿದ್ರಿ. ಇತ್ಲಾಗಿ ಕೊಡಿ ಮತ್ತೆ."

"ಮುಂಗಮುಂಡೆಗಂಡ ! ದಿನಾ ಒಂದೊಂದು ಬಗ್ಸೆ ಅಡ್ಕೆ ಕೊಡ್ತನಿ ನಿಂಗೆ ನಿಂಗೆ ಹಂಗೆ ಸೊಕ್ಕೆ ಚ್ಚು. ನಿನ್ನ ಋಣ ಯಾರಿಗ್ಬೇಕೋ ? ಇಕಾ ತಂದದನಿ ಯಲೆ–ಅಡ್ಕೆಯಲ್ಲ. ಮದ್ಲು ಹಣ್ಣ ಅಲ್ಲಿಡು. ಆಮ್ಯಾಲೆ ಕೊಡ್ತನಿ ಬಾಯ್ಗೆ."

ಹುಚ್ಚ ಕಲ್ಲುಸಂಪೆ ಹಣ್ಣುಗಳನ್ನು ಹುಲ್ಲಿನ ಮೇಲಿಟ್ಟ. ಸೀತೆ ಅಡಿಕೆ

ಕಾಳೆಯಿಂದ ಪುಟ್ಟ ಝರಿಯಾಗಿ ಹರಿಯುತ್ತಿದ್ದ ನೀರನ್ನೆತ್ತಿ ಹಣ್ಣಿನ ಮೇಲೆ ಸುರಿದು ನಂತರ ತನ್ನ ಸೆರಗಿಗೆ ಹಾಕಿಕೊಂಡಳು.

"ಹಣ್ಣ್ಯಾಕ ತ್ವಳೀಬಕ್ರ. ಅದ್ಕೇನು ದೋಷಿಲ್ಲ" ಹುಚ್ಚ ಹೇಳಿದ.

"ಹುಚ್ಚಾನ್ನು ಹೆಸ್ರು ನಿಂಗೆ ಸಮನಾಗದೆ. ನೀ ಕಚ್ಕಂಡು ತಿಂದ್ರ ಆದೇ ಯಂಜಲು ಕೈಯಾಗೆ ಪುತ್ತೆ ಕಿಂತ್ಕಂಡು ಬಂದದಿ. ಅದೂ ಯಂಜ್ಲಾಗ ಲಿಲ್ಲನೋ ? ಆದಕೇ ತ್ವಳದೆ."

ತನ್ನ ಮಡಿಲಿನ ಬ್ರಹ್ಮಾಂಡದಿಂದ ಗೋಟಡಿಕೆ, ತರಗು ವಿಳ್ಳೆದೆಲೆ ತೆಗೆದು ಒಂದು ಬದಿಗಿಟ್ಟು—

"ನಾಳೆ ಒಂದಷ್ಟು ಖರ್ಚಿ ಹಣ್ಣಾ ತಗಂಬಾರಾ, ನೋಡು ಯಾಪಾಟ ಅಡ್ಕೆ ಕೊಟ್ಟದನಿ. ನೀನು ಹಣ್ಣ ತಂದಿರೂದು ನೋಡು. ಮೂರು ಮತ್ತೊಂದು."

"ನಾಳೆ ತರ್ತನ್ರೋ ಮಸ್ತಾಗಿ. ಇವತ್ತು ನಾನು ಮ್ಯಾಲೆ ಹೋಗ್ಲಿಲ್ಲ. ಆ ಹಡ್ಬೆ ಮಣಕ ಎಷ್ಟು ಅಟ್ಟಿದ್ರೂ ಕಣಕ್ಕೇ ನುಗ್ಗತ್ತೆ. ಅದ್ನ ಗುಡ್ಡಕ್ಕೆ ಅಟ್ಟಿ ಇತ್ಲಾಗಿ ಬಂದೆ."

"ಸೈ ಹೋಗು. ಹಾಂಗೇ ಗೇರ್ಹಣ್ಣಿನ ಮರದ್ಹತ್ರ ಹೋಗ್ಬಾ. ಇದ್ರೆ ತಗಂಬಾ"

"ಈಗೆಲ್ರ ಗೇರ್ಹಣ್ಣ ಮುಗೀತಲ್ರ"

"ಸೈ ಹೋಗು."

"ನಾವಿಬ್ರೂ ಇಲ್ಲಿ ಮಾತಾಡಿದ್ನ ಅಲ್ಲಿ ಯಾರ ಹತ್ರಾನೂ ಹೇಳ್ಬಾರ್ದಂತೇನ್ನು ಮರವೇ." ಎಂದಳು ಅಚ್ಚಿ.

"ಕೇಳಸ್ತನೋ ಕೆಪ್ಪಾ."

"ಕೇಳಸ್ರೋ, ನಾಯಾಕೆ ಹೇಳ್ಲಿ. ಆ ದೇವ್ರು ನನ್ತಲೆ ಜಪ್ಪೀತು ಆ ಮ್ಯಾಲೆ."

ಹುಚ್ಚ ಗೋಟಡಿಗೆ ಎತ್ತಿಕೊಂಡು ನಡೆದ.

ಸೀತೆಯ ದೊಗಸೆಯ ಕಲ್ಲುಸಂಪಿಗೆಯ ಹಣ್ಣು ಅಚ್ಚಿಯನ್ನು ಆಕರ್ಷಿಸಿತಾದರೂ ಆದು ಅವರ ತೋಟದಲ್ಲಿಯೂ ಇತ್ತು. ಆದರೆ ಅದು ಬಹಳ ದೂರ. ಈಗಂತೂ ಸಿಕ್ಕುವಂತಿರಲಿಲ್ಲ. ಕೇಳಲು ಸ್ವಲ್ಪ ಬಿಗುಮಾನವಾಯಿತು. ಪರ್ಯಾಯವಾಗಿ ಅಂದಳು—

"ನಮ್ಮನೆ ತ್ವಾಟದ ಮೂಲೇಲೂ ಅದೆ ಕಲ್ಸಂಪೆ ಗಿಡ. ಒಬ್ಳೇ ಹೋಗ್ಬೇಕು ಆಪಾಟಿ ದೂರ."

"ನಿಮ್ಮ ಶೇಷ, ಗುಂಡ ಗಿಡದಾಗೆ ಉಳಿಸಿದ್ರಲ್ವ ಅದು ನಿಂತಂಕೆ ಬರೂದು ? ಕ್ವಳ್ಳಿ, ಹೆಚ್ಗೆ ಇಲ್ಲ ಇವತ್ತು. ಸೆರಗ್ಹಿಡಿ."

ಅಚ್ಚಿ ಸೆರಗು ಒಡ್ಡಿದಳು. ಅರೆ ಬೊಗಸೆ ಹಣ್ಣು ಅವಳ ಸೆರಗಿಗೆ ಬಿತ್ತು.

"ಹಣ್ಣಿ ಒಡದ್ರೆ ಕರಿ ಆಗುತ್ತೆ ಕಣೇ. ಬ್ಯಾಗ ತಿನ್ನು."

ಇಬ್ಬರೂ ಹಣ್ಣು ತಿಂದಾಯಿತು.

"ಇನ್ನಾರ ಹಿಂದಿನ ನುಡೀನ ತುಸ ಹೇಳ್ಕೊಡು."

ಸೀತೆ ಮರಕ್ಕೆ ಒರಗಿ ಕೂತಳು, ಅಚ್ಚಿ ಮಾವಿನ ಮರದ ಮರೆಗೆ ನಿಂತಳು.

ಉಟ್ಟ ಪೀತಾಂಬರವು, ಪಟ್ಟೆ ವಡ್ಯಾಣವು—ಕಠ್ಠಾಣಿ ಸರಚಂದ್ರ ಹಾರ ಪದಕ."

"ಈಗ ಗ್ಯಾಪಗ ಬಂತಂತೇನ್ನು ಮರವೇ. ಆದೆಲ್ಲಾ ಸಮ. ಪೀತಾಂಬ್ರ, ಪಟ್ಟೆ ನಾನೋಡೀದನಿ. ವಡ್ಯಾಣ, ಕಠ್ಠಾಣಿ, ಚಂದ್ರಹಾರ ಒಂದೂ ನಾನೋಡೇ ಇಲ್ಲ ಕಣೆ. ನೀನೋಡೀದೀಯಾ ?"

"ಸ್ಥೆ ಈ ಕಲಿಯುಗದಾಗೆ ಆದೆಲ್ಲ ಇವ್ರಲ್ವ ನಾನೋಡೋದು. ಬುಗಡಿ, ಚಂದ್ರಮುರು, ಬ ಲಾಕು, ಕೆನ್ನೆ ಸರಪ್ಣಿ ನೋಡೀದನಿ. ಮತ್ತೆ ಪದ್ಮಾವ್ತಿ ಹೇಳ್ತಿದ್ಲಪ್ಪ ಕಿತ್ತಂದೂರು, ಶೀರ್ಥಳ್ಳಿ, ಕಾಸರವಳ್ಳಿ ಸಾವಕಾರ್ರ ಮನೇಲಿ ಚಿನ್ನದ ಪಟ್ಟೆ, ನಾಗಮುರಿ, ಚಲ್ತುಂಬು, ರಾಗಟೆ, ಜಡೆಬಂಗಾರ, ಜೋಮಾಲೆ ಇನ್ನೂ ಯಂತೆಂತದೋ ಒಂದ್ರಾಶಿ ಒಡವೆ ಆದೇಂತ."

"ನೀನು ತೀರ್ಥಳ್ಳಿ ಜಾತ್ರಿಗೆ ಹೋದಾಗ ಕಿತ್ತಂದೂರೋರ ಮನೀಗೆ ಹೋಗಿದ್ದೆ ಅಂವ್ಯಲ್ಲೆ ? ನೀನೋಡ್ಲಿಲ್ಲ ಅವರ್ಮನೆ ಹೆಂಗಸ್ರನ್ನ ?"

"ಒಂದಿನ ಹೋಗಿದ್ದೆ ಕಣೆ ಅವರ್ಮನೀಗೆ. ಆದ್ರೆ ಎಳ್ಳಮಾಸೇಲಿ ಕನ್ನಗಳ್ಳು ಇಪ್ಪತ್ತ ಜನ ಬಂದಿರ್ತಾರಂತೆ. ಎಲ್ಲಾರ ಜತೀಗೆ ಅವರೂ ಹೊಳೇಲಿ ಮೈ ತ್ವಳೀತಾರಂತೆ, ದೇವಸ್ಥಾನಕ್ಕೂ ಬರ್ತಾರಂತೆ ಈಭೂತಿ ಇಟ್ಕಂಡಿರ್ತಾರಂತೆ. ಕಣ್ಮಾಯ—ಕಣ್ಕಿತ್ರದಾಗೆ ಕನ್ನಗತ್ರಿನಾಗೆ ಕಿವಿ,

ಜಡೆ, ಸರ ಕತ್ತರಿಸ್ತಾರಂತೆ. ಆಗ ಅದು ತಿಳಿಯೂದೇ ಇಲ್ಲಂತೆ. ಆ ಮೇಲೆ ಇವರಾಗೆ ಮುಟ್ಟಿ ನೋಡ್ಕಂಡಾಗ್ಲೇನಂತೆ ತಿಳಿಯೂದು. ಅದಕ್ಕೆ ಜಾತ್ರೆ ಸಮಯದಾಗೆ ಯಾರೂ ಮೈಮ್ಯಾಲೆ ನಗ ಹಾಕ್ಕಳೂದೇ ಇಲ್ಲಂತೆ. ಬೆಂಡ್ವಾಲೆ, ಮೂಗ್ಬಟ್ಟು, ತಾಳಿ ಇಷ್ಟೆ ಸ್ಯೆ."

ಅಚ್ಚಿ ಈಗ ನಿಜವಾಗಿ ಹಂದಿಯಂತೇ ಮೂತಿ ಉದ್ದ ಮಾಡಿ ಸೀತೆಯು ವಿಸ್ತಾರವಾದ ಪ್ರಪಂಚ ಜ್ಞಾನಕ್ಕೆ ಅಚ್ಚರಿಪಡುತ್ತಾ ಕೂತಿದ್ದಳು. ಹಾಗೇ ಅವಳ ಮುಖ ಮಂಕಾಯಿತು.

"ನಿಂಗೆ ಅಡ್ಡಿಲ್ಲ ಕಣೆ. ಹ್ಯಾಂಗೂ ಮತ್ತೆ ಕುರುವಳ್ಳಿ ಊರಿಗೇ ಲಗ್ನಾಗ್ತಿ. ಪ್ರತಿವರ್ಷಾನೂ ಎಳ್ಳಮಾಸೆ ಜಾತ್ರೆ ನೋಡ್ಬೋದು. ಯಾಪಾಟಿ ಜನ ಬಂದಿರ್ತಾರಲ್ಲ ?"

"ಹೌದಪ್ಪ. ಅದರಾಗೂ ವೆಂಕಟಭಟ್ರ ಮನೇಲಿ ಇಳಕಂಡ್ರೆ ಇತ್ಲಾಗಿ ದೇವಸ್ಥಾನಕ್ಕೆ ಇಪ್ಪತ್ತ ಹತ್ರ. ತೇರ್ಬೀಟ್ಗೆ ಬುಡದಾಗೇ ಅವರ ಮನೆ ; ಹ್ಯಳೀಗೂ ಹತ್ರ ; ಅಲ್ಲೇ ಬಯಲಾಗೆ ಭಾಗವತರಾಟ. ಪದ್ಮಾವತೀ ಮನೆ ಚೌಕಿ ಬೆಳಕಂಡೀಲಿ ಕೂತ್ಕಂಡ್ರೂ ಭಾಗವತ್ರಾಟ ನೋಡ್ಬೋದು."

ಕಳೆದ ವರ್ಷವೇ ಜಾತ್ರೆಯ ವೈಭವವನ್ನೆಲ್ಲಾ ವರ್ಣಿಸಿದ್ದಳು ಸೀತೆ. ಅದನ್ನ ಮತ್ತೆ ಕೇಳಬೇಕೆಂಬಾಸೆ ಅವಳಿಗೆ. ಸೀತೆ ಒಂದುಗಳಿಗೆ ಯೋಚಿಸಿದಳು.

"ಏ ಅಚ್ಚಿ, ಯಂತ ಸಮನಾತು ನೋಡೀಗ. ನೀನೂ ತೀರ್ಥಳ್ಳೀಗೆ ಬರಭೋದು."

ಅಚ್ಚಿಗೆ ಆಶ್ಚರ್ಯವಾಯ್ತು. ಅರ್ಥವಾಗಲಿಲ್ಲ.

"ನಾ ಬಂದೆ, ನೀ ಕಂಡೆ" ಎಂದಳು ನಿರಾಸೆಯಿಂದ

"ನಾ ಹೇಳಲಾದ ತುಸಾ ಕೇಳು. ನಾ ಹೆಂಗೂ ಕುರವಳ್ಳೀಗೆ ಮದಿವ್ಯಾಗಿ ಹೋಗ್ತನಿ. ನೀನೂ ಇಲ್ಲೇ ಎಲ್ಲಾರ ಒಂದ್ಕಡೀಗೆ ಲಗ್ನಾಗಿ ಹೋಗ್ತಿ. ಅಲ್ಲೀಗೆ ನಾವಿಬ್ರೂ ಬ್ಯಾರೆಮನೀಗೆ ಹೋದ್ಹಂಗಾತಲ್ಲ. ಆಮ್ಯಾಲೆ ಒಂದಪ ನೀನು ಗಂಡಂಜತೀಗೆ ಎಳ್ಳಮಾಸೇಲಿ ನಮ್ಮನಿಗೆ ಬಂದ್ರಾತು. ಆಗ ನಿಂದೂ ಬ್ಯಾರೆ ಮನೆ, ನಂದೂ ಬ್ಯಾರೆ ಮನೆ ! ದೋಷಿಲ್ಲ. ನಾವಿಬ್ರೂ ಒಟ್ಗೆ ಜಾತ್ರೆ ನೋಡ್ಬೋದಲ್ಲೆ ?"

"ಸ್ವೈ ! ಹಾಗಲವಾಡೀಗೆ ಹೋದ್‌ಗೀದ್ರೆ, ಹಾಗಕ್ಕೊಂದೆಮ್ಮೆ ತಂದ್ಗಿಂದ್ರೇಂತ. ನಂಗೆಂತ ಗಂಡ ಸಿಕ್ತಾನೋ ? ಯಾವೂರಿಗೆ ಕೊಡ್ತಾರೋ ಯಾರಿಗ್ಗೊತ್ತು ?" ಎಂದಳು ನಿರಾಸೆಯಿಂದ ಅಚ್ಚಿ.

"ಸ್ವೈ ತೀರ್ತಳ್ಳಿಯೇನು ಕಾಶಿಯಾ, ರಾಮೇಶ್ವರವಾ ? ಯಾವಾಗಾರ ಒಂದ್ರಾತಪ್ಪ." ಸೀತೆ ತಲೆ ಎತ್ತಿ ನೋಡಿದಳು. ಅಚ್ಚಿಯ ಮನೆಯ ಅಡಿಕೆ ಮಾವಿನ ಮರದಲ್ಲಿ ಇನ್ನೂ ಅಲ್ಲಲ್ಲಿ ಹಣ್ಣುಗಳಿದ್ದವು ಹರೆ ಹಿಡಿದು ಅಲ್ಲಾಡಿಸಿದರೆ ಒಂದು ಒಂದು ಹತ್ತಿಪ್ಪತ್ತು ಹಣ್ಣು ಉದುರಿಯಾವು— ಅನ್ನಿಸಿತು ಸೀತೆಗೆ. ತನ್ನ ಮನೆಯಲ್ಲೂ ಬೇಕಾದಷ್ಟು ಮಾವಿನ ಮರಗಳಿವೆ. ದಿನಾ ಹಣ್ಣು ತಿನ್ನುತ್ತಾಳೆ. ಆದರೂ ಆ ಗಳಿಗೆಯ ಚಪಲ.

"ಮಾವಿನ ಮರವೇ, ಅಕೇನ ಮರಹತ್ತಿ ಒಂದ್ಸಲೇನ ಅಲ್ಲಾಡಸ್ಬ ಕಂತೇಂನ್ನು ನಾಕ್ಹಣ್ಣು ಉದುರಿಯಾವು. ಎರಡೆರಡು ತಿಂದ್ರಾತು."

"ಹೆಂಗಸ್ರು ಮರಹತ್ತಿದ್ರೆ ಮುಂದಿನ ಜನ್ಮಕ್ಕೆ ಮಂಗಾಗಿ ಹುಟ್ತಾರಂತೇಂನ್ನು."

"ಹಂಗಾರ ಈಗ ಮಂಗಾಗಿರೋವೆಲ್ಲ ಹಿಂದಿನ ಜನ್ಮದಾಗೆ ಮರಹತ್ತಿದ ಹೆಂಗಸ್ರಾ ?"

"ಅದೆಲ್ಲ ನಂಗೇನ್ಗೊತ್ತು, ಹಂಗಂತಾರಪ್ಪ."

ಮಂಗಗಳು ಮರದ ಮೇಲೆ ಕೂತು ಹಣ್ಣು ತಿನ್ನುತ್ತಿದ್ದವು. ಸೀತೆ ಕೂಗಿದಳು.

"ಏ ಮಂಗವೇ ! ಇತ್ಲಾಗೆರಡು ಹಣ್ಣ ಯಸಿ. ಮುಂದಿನ ಜನ್ಮಕ್ಕೆ ಮತ್ತೆ ಮತ್ತೆ ಹೆಣ್ಣಾಗೂವಂತೆ."

ಕಾಕತಾಳೀಯದಂತೆ ಒಂದೆರಡು ಹಣ್ಣು ತಾನಾಗಿ ಕೆಳಗುರುಳಿತು. ಬಿದ್ದದ್ದು ತೋಡಿಗೆ.

"ಮತ್ತೂ ಒಳ್ಳೇದಾತು. ಗಂಗೆ ಸಾಕ್ಷಿ ಆದಾಳೆ, ತೊಳದ ಹಾಂಗೂ ಆತು."

ಸೀತೆ ತಿಳಿಯಾಗಿ ಜುಳಜುಳನೆ ಹರಿಯುತ್ತಿರುವ ತೋಡಿಗೆ ಇಳಿದು ಹಣ್ಣು ತೆಗೆದು ಮೇಲೆ ಹತ್ತಿ ಅಚ್ಚಿಗೊಂದು ಎಸೆದು ಅಂದಳು–

"ಇಕಳೇ ತಗ. ಕಡೆಕಡೆ ಹಣ್ಣು ಇಪ್ರೀತ ಸೀ. ನಮ್ಮ ತ್ವಾಟದಾಗೂ ಹಣ್ಣು ಮುಗೀತಾ ಬಂತು. ಅರ್ಧಕ್ಕರ್ಧ ಮಂಗಾನೇ ತಿಂದ್ಹಾಕ್ತವೆ."

ತೋಟದ ಅತ್ತ ಬದಿಯಿಂದ ಗಂಡಸರ ಮಾತಿನ ಧ್ವನಿಯ ಪ್ರತಿಧ್ವನಿ ಕೇಳಿಬಂದಿತು. ಇಬ್ಬರೂ ಮಾವಿನ ಹಣ್ಣಿನ ತುದಿಯನ್ನ ಕಚ್ಚಿ ಸೊರ್ರನೆ ರಸ ಹೀರಿ ಹೀರಿ ಸವಿದರು

"ಅಕಾ, ಇತ್ತ ಬರ್ತದಾರೋ ಏನೋ. ಕಂಡ್ರೆ ಬಯ್ದಾರು, ನಾ ಹೋಗ್ತನಿ ಕಣೆ" —ಎನ್ದಳು ಅಚ್ಚಿ.

"ಸ್ಯೆ, ಅವರು ಅತ್ತಾಕಡೆ ಅದಾರೆ. ಶಂಕ್ರಭಟ್ರ ದನಿ ಇಲ್ಲಿಂದ ಹೊಸಗ್ರಾರಕ್ಕೆ ಬೇಕಾರೂ ಕೇಳತ್ತೆ."

"ಶಂಕರಬಟ್ರೆ ಅಲ್ವಾ ನಿಂಗೆ ಗಂಡು ಹುಡುಕಿದ್ದು ?"

"ಇದ್ದೀತು ಅವರೇ ಉದ್ದುದ್ದಕ್ಕೆ ಯಂತೆಂತದೋ ಮಾತಾಡ್ತಿದ್ರು"

"ನಗ ಯಂತದಿಡ್ತಾರಂತೆ ನಿಂಗೆ ?"

"ಯಾರಿಗ್ಗೊತ್ತು. ಶಾನುಭೋಗ್ರ ಮನೇಲಿ ಯಂತದಿರತ್ತೆ ಚಿನ್ನ ಗೊರಟು. ಹಿರೀ ಸೊಸೇರು ಇದ್ರದಾರಂತೆ. ಅವರಿಗಿಟ್ಟಿದ್ರಲ್ಲ, ನಂಗ ಡೂದು ? ತಾಳಿ, ಪಟ್ಟಿ, ಕಾಲುಂಗ್ರ ಇಟ್ಟಾರು."

"ಈ ಹಾಡಿನಾಗೆ ಯಾಪಾಟ ನಗದ ಹೆಸರು ಬರತ್ತೆ. ನಾವದನ್ನ ಕಣ್ಣಾಗೆ ಕಂಡೂ ಇಲ್ಲ."

"ಯಾಕೇ, ಪಟದಾಗೆ ಲಕ್ಷ್ಮಿ, ಸರಸ್ವತಿ, ಪಾರ್ವತಿ ಯಲ್ಲ ಯಾಪಾಟ ನಗ ಇಟ್ಕಂಡು ಪೋಟ ತೆಗಸ್ಕಂಡಿಲ್ವ ? ನಿಮ್ಮನೇಲೂ ಅದೆಯಲ್ಲ ಒಂದ್ರಾಸಿ ಪೋಟ. ಅವರದಾಗೆ ನೋಡಿಲ್ವ ?"

"ಹೌದು ನೋಡೀದನಿ. ದೇವರ್ಗೇನು ಬಿಡು. ಮಾಯಮಂತ್ರ ಮಾಡಿದ್ರೆ ಬೇಕಾದ್ದೆಲ್ಲ ಸಿಕ್ಕುತ್ತಂತೆ. ಅದಕ್ಕೆ ಅವರು ಯಾವಾಗೂ ಅಲಂಕಾರ ಮಾಡ್ಕಂಡು ಸುಮ್ನಗೆ ಕೂತಿರ್ತಾರೆ."

ಸೀತೆ ಮೂತಿ ಸೊಟ್ಟ ಮಾಡಿದಳು

"ಸ್ಯೆ, ಅವರೇನು ಮನೆ ಸಾರಸ್ಬೇಕಾ ? ಗುಡಸ್ಬೇಕಾ ? ಅಡಿಗೆ ಮಾಡ್ಬೇಕಾ? ಅಡಿಗೆ ಮಾಡೂ ತಂಟೆಲ್ಲ, ಹಪ್ಳ-ಸಂಡ್ಗೆ-ಉಪ್ಪಿನಕಾಯಿ ಯಂತದೂ ಮಾಡೂ ಹಂಗಿಲ್ಲ. ಅವ್ರಿಗೆ ಮೈ ಕ್ವಳೇ ಆಗೂದಿಲ್ಲಂತೆ. ಹೂ ಬಾಡೂ

ದಿಲ್ಲಂತೆ. ನಮ್ಮಾಗೆ ಹಾಸ್ಗೆಮ್ಯಾಲೆ ಮಲಕ್ಕಂಡು ನಿದ್ರೆಸತೀಗಾ ಮಾಡುಲ್ಲಂತೆ. ಬೆಳಗ್ಗಿಂದ ಸಂಜೆತನಕ ಸುಮ್ಮಗೆ ಕುಕ್ಕರಬಡದಿರೂದೆ. ಹ್ಯಂಗೆ ಹೊತ್ತ ಕಳೀತಾರೋ ಯಂತದೋ ?"

"ಆದ್ರೂ ಅವರಿಗೆ ಸುಖ ಅಲ್ಲನೇ ?"

"ಯಾರಿಗ್ಗೊತ್ತು ಹಸ್ವಿಲ್ಲ, ಸಿದ್ದಿಲ್ಲ, ಬಾಯಾರ್ಕಿಲ್ಲ, ಕೆಲ್ಸವೂ ಇಲ್ಲ. ಯಂತ ಸುಕವೋ ?"

ಅಚ್ಚಿಯ ಮಾತು ಅಡ್ಡ ತಿರುಗಿತು.

"ಕಿರಸ್ತಾನ್ರ ಡೇವಿಡ್ಡಪ್ಪ ಫೋಟಾ ಪೆಟ್ಗೆ ತಂದದಾನಂತೆ ಮಂಡಗದ್ದೇಲಿ. ಅಲ್ಲೊಂದು ದೊಡ್ಡ ಆಸ್ಪತ್ರೆ ಅದೆಯಂತಲ್ಲೆ. ಅಲ್ಲಿ ಮಕಕ್ಕೆ ಕರೀ ಬಟ್ಟೆ ಮುಚ್ಚಂಡು ಫೋಟಾ ತೆಗೀತಾನಂತೆ ಭೂಮಂತ್ರಂಗಾಳಿ ಮಾಡ್ತಾನಾದೀತು. ಫೋಟಾ ತೆಗೆಸ್ಕಂಡಾರ್ಗೆ ತುಸನಾರಾ ನೋವೇ ಆಗಲ್ಲಂತೆ."

"ಅದೇ ಮತ್ತೆ. ಅವ ಫೋಟಾ ತೆಗೀತನಿ ಅಂತ ಮುಸಿಗಿನಾಗೇ ಮಂತ್ರ ಹಾಕಿ ಮಾಟಾಮಾಡಿ ಗೌಡ್ರನ್ನ, ಹೊಲೇರನ್ನ ಕಿರಿಸ್ತಾನ್ರ ಜಾತಿಗೆ ಸೇರಿಸ್ಗಾತಾನಂತೆ. ಅದಕ್ಕೇ ಬ್ರಾಂಬ್ರು ಯಾರೂ ಆ ಆಸ್ಪತ್ರೀಗೆ ಹೋಗೂದೇ ಇಲ್ಲಂತೆ. ಬಿಕ್ಕಲ ಮಾರಿ ಹೇಳ್ದ."

"ಬದ್ದ ಕಣೇ ! ಬ್ರಾಂಬ್ರು ಹೆಂಗಸ್ರನ್ನ ಕಂಡ್ರೆ ಈರಾಪಿನ್ರು ಕದ್ಕಂಡು ಹೋಗ್ತಾರಂತೆ."

"ಒರೀ ಸುಳ್ಳು, ಈಗ ಈರಾಪಿನ್ರು ಕುದ್ರೆಮ್ಯಾಲೆ, ಕಾರಿನಾಗೆ ಎಲ್ಲ ಕಡಿಗೂ ಬರ್ತಾರಂತೆ. ಯಾರಗ್ಗ, ಯಂತದೂ ಮಾಡುಲ್ಲಂತೆ. ಅವರಿಗೆ ಕನಡ ಮಾತಾಡೂಕೇ ಬರಲ್ಲಂತೆ. ಮಂಡಗದ್ದೆ ಪಾದ್ರಿಗಳು, ಡೇವಿಡ್ಡಪ್ಪ ಯಲ್ಲಕಡೆ ಓಡಾಡ್ತಾರಂತೆ. ಪದ್ಮಾವತಿ ಹೇಳಿದ್ಲು."

"ಹಂಗಾರೆ ಅವಳು ಈರಾಪಿನ್ರನ್ನ ನೋಡಿದಾಳನೇ ?"

"ನೋಡಿದಾಳಂತಪ್ಪ. ಕೆಂಪ್ಗೆ ಮಂಗನ ಮುಸಡಿ ಹಂಗಿತ್ತಂತೆ ಅವನ ಮುಕ. ಇಜಾರಾ. ಕೋಟು, ಅರಕನ ಚಟ್ಟಿತರ ಟೋಪಿ, ಬುಟೀಸು ಯಲ್ಲ ಹಾಕ್ಕಂಡಿದ್ನಂತೆ. ಉಸ್-ಪುಸ್ ಅಂತ ಮಾತಾಡ್ತಿದ್ನಂತೆ ಪಾದ್ರಿ ಹತ್ರ."

ಈಗ ಸೀತೆಗಿಂತ ಪದ್ಮಾವತಿಯೇ ಹೆಚ್ಚಿನ ಲೋಕ ಜ್ಞಾನ ಅರಿತವಳಾಗಿ

ಕಂಡಳು ಅಜ್ಜಿಯ ಮನಸ್ಸಿಗೆ. ಆದರೂ ಯೂರೋಪಿಯನ್ನರು ನ ಜನರಿಗೆ ಮಂಕುಬೂದಿ ಹಾಕುತ್ತಾರೆ ಎಂಬ ಒಂದು ಭೀತಿ ಆ ಪರಿಸರದ ಹೆಂಗಸರಿಗೆ ಬಲವಾಗಿ ಅಂಟಿಕೊಂಡಿತ್ತು.

ಇಬ್ಬರೂ ತಮ್ಮದೇ ಆದ ಒಂದು ಹೊಸ ಕಲ್ಪನಾ ಲೋಕದೊಳಗೆ ವಿಹರಿಸುತ್ತಿರುವಾಗ ಎಡಬದಿಯಿಂದ ಮಹಾಬಲಯ್ಯ ಬಂದದ್ದು ಇಬ್ಬರಿಗೂ ತಿಳಿದಿರಲಿಲ್ಲ. ಇದ್ದಕ್ಕಿದ್ದಂತೆ ಅಜ್ಜಿ ಎದ್ದು ಓಡತೊಡಗಿದಾಗ ಸೀತೆ ತಿರುಗಿ ನೋಡಿದಳು-

ಎಂದೂ ಇಲ್ಲದ ಲಕ್ಕಿ ಬರಲು ಇತ್ತು ಮಹಾಬಲಯ್ಯನ ಕೈಲಿ.
"ಇದೇ ಕಸಬಾ ನೀ ದಿನಾ ಮಾಡೂದು ? ನಡೀ ಮನೀಗೆ"
ಸೀತೆ ಒಂದಿಷ್ಟೂ ಅಂಜದೆ, ಅಳುಕದೆ ನಿಧಾನ ನಡೆದಳು ಮನೆಗೆ.

## ೭

ನಡುವೆ ನಿಂತು ನೋಡಿದರೆ ಸುತ್ತಲೂ ಅಲೆಅಲೆಯಾಗಿ ನಿಂತ ಮೇಘಚುಂಬಿ ಪರ್ವತಶ್ರೇಣಿ. ಸಸ್ಯಶ್ಯಾಮಲವಾಗಿ ದಟ್ಟೈಸಿನಿಂತ ಗೊಂಡಾರಣ್ಯಗಳು ; ಕಣಿವೆಗಳು ; ಜಲಧಾರೆ – ಝರಿಗಳು, ಬೆಟ್ಟದ ತಪ್ಪಲುಗಳ ಸಂದಿಗೊಂದಿಗಳಲ್ಲಿಯೇ ಹರಿಯುವ ತುಂಗ, ಭದ್ರ, ಶರಾವತಿ, ನೇತ್ರಾವತಿ, ಹೇಮಾವತಿ ನದಿಗಳು, ಜಲಪಾತಗಳು, ಝರಿ–ತಡಸುಗಳು. ಶೃಂಗೇರಿ, ಕಳಸ, ಕೂಡಲಿ, ಹುಂಬುಜ, ಹೊಂಬುಜ ಇತ್ಯಾದಿ ಸೌಮ್ಯ ಕ್ಷೇತ್ರಗಳು. ಅಡಿಕೆ, ಬಾಳೆ, ಏಲಕ್ಕಿ, ಮೆಣಸು, ಕಾಫಿಬೀಜ, ಕಬ್ಬು, ತೆಂಗು, ಬತ್ತ, ಹಾಲು—ಜೇನುಗಳ ತವರೂರಾದ ಮಲೆನಾಡು ! ಸಾವಿರಾರು ಬಗೆಯ ಹಣ್ಣು–ಹಂಪಲುಗಳ ಬೀಡು. ನೂರಾರು ತರದ ಪರಿಮಳದ ಹೂವುಗಳ ನಂದನ. ಸಾವಿರಾರು ನಮೂನೆಯ ಖಗ–ಮೃಗ–ಪಕ್ಷಿಗಳ ಸಂಕುಲ. ಹುಲಿ–ಹಾವು–ಚಿರತೆ–ಕರಡಿ

ಗಳ ಆವಾಸ. ಈ ಸಸ್ಯ ಸಾಂದ್ರತೆಗಳ ನೆರಳಿನಲ್ಲಿಯೇ ಅಡಗಿ ಕುಳಿತು ಋಷ್ಯಾಶ್ರಮಗಳ ನೆನಪು ತರುವ ಸಾವಿರಾರು ಹಳ್ಳಿಗಳು. ಅಲ್ಲಿಯ ನಿವಾಸಿಗಳಾದರೊ ರೂಢಿಗತವಾಗಿ ಬಂದ ಮೂಢ ನಂಬಿಕೆಗಳ ಜಾಡಿನಲ್ಲಿಯೇ ಸುತ್ತುವರೆಯುವ ಅಂಧ ಮೌಢ್ಯದ ಅಮಾಯಕ ಜನ.

ಅತ್ತಿತ್ತಲಿನ ಒಂದೆರಡು ಜಿಲ್ಲೆಗಳನ್ನು ಬಿಟ್ಟರೆ ಬೇರೆ ಜಗತ್ತೇ ಇಲ್ಲವೇನೋ ಎಂಬುವಂಥ ಮಂದದೃಷ್ಟಿ. ಸುಮಾರು ೧೮೮೦–೯೦ರ ಅತ್ತಿತ್ತಲಿನ ಸಮಯ. ಅಂದರೆ—ಬ್ರಿಟಿಷರು ಭಾರತಕ್ಕೆ ಕಾಲಿಟ್ಟು ಇನ್ನೂರು ವರ್ಷಗಳೇ ಕಳೆದಿತ್ತು. ಆದರೂ ಮಲೆನಾಡಿನ ಎಡಬಲದ ನಗರ, ಕೆಳದಿ, ಪುಂಗನೂರು ಪಾಳಯಪಟ್ಟಿನಲ್ಲಿ ವೈಭವದ ಅಳ್ಳಿಕೆ ಇತ್ತು ಎನ್ನಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ ಎಂದರೆ ಸೂಕ್ತ.

ಮುಂದಿನ ಮುವ್ವತ್ತು, ನಲವತ್ತು ವರ್ಷಗಳಲ್ಲಿ ಕಾಲ ಬಹಳ ಬದಲಾಗಿ ಮುಂಬಯಿ, ಮದ್ರಾಸ್, ಬೆಂಗಳೂರು, ಮೈಸೂರುಗಳಲ್ಲಿ ಸಾಕಷ್ಟು ಸಾಕ್ಷರತೆ, ನಾಗರೀಕತೆ, ಆಧುನಿಕತೆ, ಕಲಾವಂತಿಕೆ ಬೆಳೆದು ಬಂದಿದ್ದರೂ ಅರ್ಥಹೀನ ಸಂಪ್ರದಾಯದ ಅಂಧಕಾರದಲ್ಲ ತಡವರಿಸುತ್ತಿದ್ದ ಪ್ರದೇಶಗಳೂ ಇದ್ದವು. ಅದರಲ್ಲಿ ಮೊದಲನೆಯದು ನಮ್ಮ ಮಲೆನಾಡು ಎನ್ನಬಹುದು. ಮತ್ತೆ ಘಟ್ಟದ ತಗ್ಲು, ದಕ್ಷಿಣ ಕನ್ನಡ, ಕೊಡಗು ಎರಡನೆಯವು.

ಮೌಢ್ಯ ಧರ್ಮಭೀರುತ್ವ, ಕುರುಡು ನಂಬಿಕೆಗಳು ಆಲದ ಬೀಳಲಿನಂತೆ ಬೇರೂರಿ, ಅಲ್ಲಿಯ ಜನರಿಗೆ ನಿರ್ಮಲತೆ, ನಿಷ್ಕರುಣೆಯ ಶತತ್ವವನ್ನೂ ತಂದು ತುಂಬಿತ್ತೆಂಬುದಕ್ಕೆ ನೂರಾರು ಉದಾಹರಣೆಗಳಿವೆ.

ಹದಿಮೂರು, ಹದಿನಾಲ್ಕು ವರ್ಷದ ವಿಧವೆ ಮಗಳಿಗೆ ತಲೆಬೋಳಿಸಿ ಅದೇ ಮಗಳ ಕೈಯಿಂದ ತಾಯಿ ಆರೆಂಟು ಬಾಣಂತನಗಳನ್ನು ಮಾಡಿಸಿ ಕೊಳ್ಳುತ್ತಿದ್ದುದು ಸಾಮಾನ್ಯ ವಿಷಯ. ವಿಧವೆ ತಾರುಣ್ಯದ ಮಬ್ಬಿನಲ್ಲಿ ಬಸಿರಾದರೆ ಅದಕ್ಕೆ ಕಾರಣನಾದ ಪುರುಷನೇ ಮುಂದೆ ನಿಂತು ಆ ಅಮಾಯಕ ಹೆಣ್ಣಿಗೆ ಬಹಿಷ್ಕಾರ ಹಾಕಿಸಿ ಅವಳು ಜೀವನ ಪರ್ಯಂತ ಕಂಡವರ ಅಂಗಳದಲ್ಲಿ ಅನ್ನ ತಿನ್ನುವಂತೆ ಮಾಡಿದ ಉದಾಹರಣೆಗಳು ಬಹಳ ಅದಕ್ಕೆ ಹೆತ್ತವರೂ ಬದ್ಧರಾಗುತ್ತಿದ್ದರು.

ಮಕ್ಕಳಾಗಲಿಲ್ಲವೆಂಬ ನೆವದಿಂದ ಮನೆಯಲ್ಲಿ ನಾಲ್ಕು–ಐದು ಹೆಂಡತಿ

ಯರನ್ನೂ ತುಂಬಿಕೊಂಡ ಮಹಾನುಭಾವರಿದ್ದರು ಅವರಿಗೆ ಹೆಂಡತಿಯ ಬಂಜೆತನ ಕಣ್ಣಿಗೆ ಬಡಿಯುತ್ತಿತ್ತು ನಿಜ. ತನ್ನ ಬಂಜೆತನ ಕಡೆತನಕ ತಿಳಿಯುತ್ತಿರಲಿಲ್ಲ ; ಮೆದುಳಿಗೂ ಹೊಳೆಯುತ್ತಿರಲಿಲ್ಲ. ಒಂದು ಪಕ್ಷ ಹೆಂಡತಿ ಬೇರೆಯವರಿಂದ ಮಕ್ಕಳನ್ನು ಪಡೆದರೆ ತಾನು ಹಸೆಯ ಮೇಲೆ ಕೂತು ಮಗುವಿಗೆ ನಾಮಕರಣ ಮಾಡುತ್ತಿದ್ದಂಥ ಪೆದ್ದರೂ ಇದ್ದರು.

ಇನ್ನು ಕತ್ತಲಿನಲ್ಲಿ ನಡೆಯುವ ಪಾಪಕಾರ್ಯಗಳಿಗೂ ಕಡಿಮೆಯಿಲ್ಲ. ಪಾಪಕಾರ್ಯ ಮಾಡಿಬಿಡುವುದು, ನಂತರ ಅದರ ಪರಿಹಾರಾರ್ಥವಾಗಿ ಯಾತ್ರೆ–ತೀರ್ಥ, ದಾನ–ಧರ್ಮ ಮಾಡಿ ನಾವು ಪಾಪದಿಂದ ಮುಕ್ತರಾದೆವು ಎಂದು ತಾವೇ ಸಮಾಧಾನಮಾಡಿಕೊಳ್ಳುವುದು.

ಹೆಚ್ಚು ಕಡಿಮೆ ಇದೇ ಸಮಯದಲ್ಲಿಯೇ ಮಿಷನರಿಗಳು ಬೌದ್ಧಿಕವಾಗಿ, ತಾತ್ವಿಕವಾಗಿ, ಅಂಧತ್ವದಲ್ಲಿದ್ದ ಮಲೆನಾಡಿಗೆ ಕೈಕಾಲು ಚಾಚಿದರು. ನೂರಾರು ಚರ್ಚುಗಳು ತಲೆ ಎತ್ತಿದವು. ಪಾದ್ರಿಗಳು, ಉಪದೇಶಿಗಳು ಹಳ್ಳಿ ಹಳ್ಳಿಗಳಲ್ಲಿ ನೆಲಸಿ ಕ್ರೈಸ್ತಧರ್ಮ ಪ್ರಸಾರ ಮಾಡಿದರು. ಮಂಡಗದ್ದೆಯಲ್ಲಿ ಬಹುದೊಡ್ಡ ಮಿಷನ್ ಆಸ್ಪತ್ರೆಯಾಯಿತು. ಉಚಿತ ಔಷಧಿ, ಆಹಾರ, ಸೇವೆ, ಒಟ್ಟೆಬರೆ, ಹಣ ಎಲ್ಲವೂ ದೊರಕಿತು ದುರ್ಬಲರಿಗೆ, ದುರ್ಬಲ ಮನದವರಿಗೆ. ಆ ಮಂಕುಬೂದಿಗೆ ಮರುಳಾಗಿ ಕ್ರೈಸ್ತಮತಾವಲಂಬಿಗಳಾದವರೆಂದರೆ ಬ್ರಾಹ್ಮಣೇತರರು ಮಾತ್ರ.

ಇಲ್ಲಿಯೂ ಕಪಿಮುಷ್ಟಿ ಬ್ರಾಹ್ಮಣರದು. ಸ್ತ್ರೀ ಸ್ವಾತಂತ್ರ್ಯವಿಲ್ಲ ; ಮನೆಯ ಯಜಮಾನ ಹಾಕಿದ ಲಕ್ಷ್ಮಣ ರೇಖೆಯನ್ನು ಹೆಂಡತಿ, ಮಕ್ಕಳು, ಕಿರಿಯರು ದಾಟಿ ನಡೆಯುವಂತಿಲ್ಲ ವಿಚಾರಿದರೆ ಏನಾದರೂ ಕಠಿಣ ಶಿಕ್ಷೆ ಸಿದ್ಧವೇ.

ಮನೆಗೊಬ್ಬ, ಮಠಕ್ಕೊಬ್ಬ, ಮತಕ್ಕೊಬ್ಬ, ಹಳ್ಳಿಗೊಬ್ಬ, ಊರಿಗೊಬ್ಬ ಯಜಮಾನ ಇದ್ದೇ ಇರುತ್ತಿದ್ದ. ಇದನ್ನು ಮೀರಿ ಅನಾಚಾರ, ಅನ್ಯಾಯಗಳು ಆಗಾಗ ನಡೆಯುವುದು, ಊರ ಪಂಚಾಯಿತಿ, ಶಿಕ್ಷೆ, ಪರಿಹಾರ ಹೀಗೇ ನೂರೆಂಟು ತೊಳಸು–ಬಳಸಿನಲ್ಲಿ ಸಂವತ್ಸರ ಚಕ್ರ ತಿರುಗುತ್ತಿತ್ತು

ಅಮಾಯಕ ವಲಯ ನಿಜ. ಅಲ್ಲಿಯೂ ಜಾಣರು, ಪೆದ್ದರು, ಚಾಣಾಕ್ಷರು, ಮುತ್ಸದ್ದಿಗಳು, ಸುರೂಪಿ—ಕುರೂಪಿಗಳು ; ಪಂಡಿತ—ಪಾಮರರು ;

ಜಾರ—ಚೋರರ, ಪತಿವ್ರತೆಯರು, ಕಳ್ಳ-ಕಾಕರು ಎಲ್ಲರೂ ಇದ್ದರು. ಈ ದೊಡ್ಡ ಜಗತ್ತಿನೊಳಗಿನ ಒಹು ಪುಟ್ಟ ಜಗತ್ತು ಅದು. ಆದರೆ ಅಲ್ಲಿನ ನಿವಾಸಿಗಳಿಗೆ ಮಾತ್ರ ನಮ್ಮ ದೃಷ್ಟಿಕೋನವನ್ನು ಮೀರಿದ ಇನ್ನೊಂದು ವಿಶಾಲ ಜಗತ್ತು ಇದೆಯೆಂಬ ಕಲ್ಪನೆಯೂ ಇರಲಿಲ್ಲ ಅನ್ನಬಹುದು. ಅದೇ ಸಮಯದಲ್ಲಿಯೇ ನಮ್ಮ ಕಥಾನಾಯಕಿ ಸೀತೆಯು ಜನ್ಮ ತಳೆದುದು. ಅಚ್ಚಿಯಂಥ ಅಮಾಯಕಿಯರೂ, ಸೀತೆಯಂಥ ದಿಟ್ಟ, ಧೀಮಂತೆಯರೂ ಸಾಕಷ್ಟು ಆಗಿಹೋಗಿದ್ದರು. ಆದರಲ್ಲಿ, ಆ ಸಮಯದಲ್ಲಿ ಈ ಸೀತೆ ಬೇರೆ ಹೆಂಗಸರಿಗಿಂತ ಸ್ವಲ್ಪ ಭಿನ್ನವಾಗಿ, ಪ್ರತ್ಯೇಕವಾಗಿ ಕಂಡವಳು. ತೀರ್ಥಹಳ್ಳಿ, ಕುರುವಳ್ಳಿ, ತಗ್ಗಿನಮನೆ, ಸುತ್ತಮುತ್ತಲ ಹಳ್ಳಿಗಳಲ್ಲಿ ಸೀತೆ ಹರಡಿಕೊಂಡಳು. ಆವಳು ವಿದ್ಯಾವಂತೆಯಲ್ಲ. ಸ್ವಲ್ಪ ಬುದ್ಧಿವಂತೆ ಎನ್ನಬಹುದು ತ್ರಿಲೋಕ ಸುಂದರಿಯಲ್ಲವಾದರೂ ಸುರೂಪಿ. ಬಜಾರಿಯಲ್ಲ: ಧೀರೆ, ಧೀಮಂತೆ. ಕಲ್ಪನಾಲೋಕ ವಿಹಾರಿಯಲ್ಲ, ವಾಸ್ತವತಾವಾದಿ. ಸುಳ್ಳು, ಮರೆ, ಮೋಸ-ಕೊಂಕುಗಳನ್ನ ಎದುರೆದುರೇ ಸದೆಬಡಿಯುವ ನಿರ್ಭಯ ನಿಲುವು. ಅವಳ ಈ ಅಮೂಲ್ಯ ಗುಣಗಳನ್ನ ಗುರುತಿಸುವಂಥ ಸೂಕ್ಷ್ಮವೇದಿತ್ವ ಅವಳ ಸುತ್ತಲಿನ ಪರಿಸರಕ್ಕಿರಲಿಲ್ಲ. ಮುಖ್ಯವಾಗಿ ತನಗೆ ಅಂಥ ಒಂದು ವಿಶೇಷ ಗುಣ ಇದೆಯೆಂದು ಅವಳಿಗೇ ತಿಳಿಯದು. ರಕ್ತಗತವಾಗಿ ಬಂದ ಅವಳ ಸಹಜ ಗುಣ ಅವಳು ಬೆಳೆದಂತೆ ಬೆಳೆಯುತ್ತಾ ಹೋಯಿತು.

ಈಗಲೂ ಆದದ್ದು ಹಾಗೆಯೇ. ಸೀತೆ ಅಚ್ಚಿಯೊಡನೆ ದಿನವೂ ಮಾತಾಡುತ್ತಾಳೆ—ಎಂಬ ವಿಷಯ ಮಹಾಬಲಯ್ಯನಿಗೂ ತಿಳಿದ ವಿಷಯವೇ. ಆ ಬಗ್ಗೆ ತನ್ನ ಹೆಂಡತಿ ಮೋಟ ದಿನವೂ ಕಟಕಿ ನೀಡಿ ಮಾಡುವುದೂ ತಿಳಿದಿದೆ. ಆದರೆ ಆತನು ಮಹಾಬಲನಾದರೂ ಸ್ವಭಾವದಲ್ಲಿ ಅವನು ದುರ್ಬಲ. ಮೋಟ ನೋಡಲು ಮೂರು ಮೈಣಸಿನಕಾಯಿ ಉದ್ದವಿದ್ದರೂ ಎರಡನೇ ಹೆಂಡತಿಯಾಗಿ ಗಂಡನನ್ನಾಳುವ ಕುಟಿಲ ಬುದ್ಧಿ ಅವಳಿಗಿದೆ. ಅತ್ತೆ ಕೆಪ್ಪಿಯಾಗಿದ್ದುದು ಅವಳಿಗೆ ಬಹಳ ಅನುಕೂಲ ಮಾಲಕ್ಷಮ್ಮ ಬದುಕಿನಲ್ಲಿ ಬಹಳ ಕಷ್ಟ ಉಂಡ ಹೆಂಗಸಾದರೂ ಎಂದೂ ಎದೆಗುಂದಲಿಲ್ಲ, ಕಂಗೆಡಲಿಲ್ಲ. ಅದೇ ಗುಣ ಮೊಮ್ಮಗಳದು. ಅದನ್ನ ತಿಳಿದ ಮೋಟ ಆಗಾಗ ಗಂಡನ ಎದುರು ಕೂಗಾಡುವುದುಂಟು :

“ಅಜ್ಜಿ ಸಾಕಿದ ಮಕ್ಳು ಬಜ್ಜಕ್ಕೂ ಬಾರದೂಂತ ಇದಕೂ ಅಷ್ಟೆ, ತಬ್ಬಲಿ ಹುಡುಗೀಂತ ಈ ಅಜ್ಜಿ ಮುದ್ದು ಮಾಡ್ಕಾಡಿ ಅದು ಅತೀ ಸೊಕ್ಕತ್ತೆ. ಮುಂದೆ ಗಂಡನ ಮನೀಗ್ಹೋದ್ರೆ ಎನ್ಗತಿಯೋ ಇದ್ಕೇ. ಯಾವ್ಹೋಳಾರ ತಾಟ್ಕ ಅತ್ತೆ ಸಿಕ್ಬಕು ಇದ್ಕೆ. ಇವರ ಸೆಣ ಯಲ್ಲ ಇಳಸ್ತಾಳೆ ಇದರ ದಿಂಡೆ ತನ ಮುಂಡಾ ಮೋಚಾ”

ಇದು ಅನುದಿನದ ಪಾರಾಯಣ. ಕೇಳಿಕೇಳಿ ಮಹಾಬಲಯ್ಯನಿಗೂ ಅಭ್ಯಾಸವಾಗಿತ್ತು. ‘ಸೀತೆಯ ಗುಣ ಒಳ್ಳೆಯದು. ಎಲ್ಲಾ ಕೆಲಸ ಮಾಡ್ತಾಳೆ. ಅವರೂ ಯಾಕೆ ಹೀಗೆ ಇದು ಯಾವಾಗ್ಲೂ ವಟ ಗುಟ್ಟುತ್ತೇ—ಎಂದುಕೊಳ್ಳುವನು. ಆದರೆ ಆ ಮಾತು ಹೇಳುವುದರಿಂದ ಪ್ರಯೋಜನವಿಲ್ಲ. ಈ ವಿಷಯದಲ್ಲಿ ತನಗಿಂತ ಸೀತೆಯೇ ವಾಸಿ’ ಅನಿಸಿತ್ತು. ಅವಳು ಎಂದೂ ತಂದೆಯ ಎದುರು ದೂರು ಹೇಳಿದವಳಲ್ಲ. ಅಜ್ಜಿಯ ಮುಂದೆ ನಗಾರಿ ಹೊಡೆಯುವವರು ಯಾರು? ಅದಕ್ಕೇ ಅವಳು ತನ್ನ ಸಮಸ್ಯೆಯನ್ನು ತಾನೇ ಪರಿಹಾರ ಮಾಡಿಕೊಳ್ಳುತ್ತಿದ್ದಳು. ಮೋಟಿಯ ಕೆಲವು ಮಾತಿಗೆ ಉತ್ತರ ಕೊಡುವಳು. ಕೆಲವಕ್ಕೆ ಕೊಡುತ್ತಿರಲಿಲ್ಲ. ಕಿವುಡಿಯಂತೆ ಸುಮ್ಮನೆ ನಡೆದುಬಿಡುವಳು.

ಈ ಎರಡು ಮನೆಗಳ ನಡುವೆ ಆಣೆ-ಭಾಷೆ ಇರುವಾಗ ಈ ಹುಡುಗಿಯರು ಮಾತಾಡುವುದು ತಪ್ಪು ಎಂಬುದು ಎರಡು ಮನೆಯ ಹಿರಿಯರಿಗೂ ಗೊತ್ತು. ಇವರಿಗೂ ಗೊತ್ತು. ಆದರೆ ಹೇಳಿ ಕೇಳಿ ಬಾಲ್ಯ, ಹಳ್ಳಿಯಲ್ಲಿ ಇದ್ದದ್ದು ಅವೇ ಎರಡು ಮನೆ. ಆದು ಬಿಟ್ಟರೆ ಹೊಲೆಯರ ಗುಡ್ಡಗಳು, ದೂರದಲ್ಲಿ ಒಂದೆರಡು ಗೌಡರ ಮನೆಗಳು. ಈ ಮಕ್ಕಳು ಯಾರಲ್ಲಿ ಬೆರೆಯಬೇಕು?

ತೀರಾ ಅನಿವಾರ್ಯವಾಗಿ ಮಾತಾಡಲೇ ಬೇಕಾದ ಸಂದರ್ಭ ಬಂದಲ್ಲಿ ಮಧ್ಯೆ ಫಲಬಿಡುವ ಮರವನ್ನೋ, ಹೂ ಬಿಡುವ ಗಿಡವನ್ನೋ ಸಾಕ್ಷಿಯಾಗಿ ಇಟ್ಟುಕೊಂಡು ಮಾತಾಡಬಹುದೆಂದು ಮನೆಯ ಹಿರಿಯರೇ ಹೇಳಿಕೊಳ್ಳುತ್ತಿದ್ದುದರಿಂದ ಈಗ ಈ ಬಾಲೆಯರು ಅದನ್ನೇ ಪಟ್ಟಾಗಿ ಹಿಡಿದಿದ್ದರು.

ಇವರಿಗಾದರೂ ಹಿರಿಯರು ‘ಮದುವೆಗೆ ಬಂದ ಹುಡುಗೀರು’ ಎಂದು ಹೇಳಿಕೊಂಡರೂ ನಿಜದಲ್ಲಿ ಇವರು ಇನ್ನೂ ಗಜ್ಜುಗವಾಡುವ ಬಾಲೆಯರು.

ಬಾಲ್ಯ ಸಹಜವಾದ ಹುಡುಗಾಟಿಕೆ, ಮೊಂಡುತನ, ಹೆಣ್ಣುಹೆಂಪಲು, ತಿಂಡಿಗಳ ಆಸೆ ಎಲ್ಲಿ ಹೋಗಬೇಕು ?

ಮಹಾಬಲಯ್ಯನ ಅಕ್ಕ ಸೌಭದ್ರಮ್ಮನ ಮಗಳು ಗಂಗೆ ಸೀತೆಗಿಂತ ಎರಡು ವರ್ಷಕ್ಕೆ ದೊಡ್ಡವಳು. ಕೋಣಂದೂರಿಗೆ ಕೊಟ್ಟಿದ್ದ ಸೌಭದ್ರಮ್ಮ ವರ್ಷದಲ್ಲಿ ಒಂದೆರಡು ಬಾರಿ ತೌರಿಗೆ ಬಂದು ಹೋಗುವುದಿತ್ತು. ಇವರೂ ಆಗೀಗ ಕೋಣಂದೂರಿಗೆ ಹೋಗುವರು. ಅತ್ತೆಯ ಮನೆಗೆ ಹೋದರೆ ಸೀತೆಗೆ ಹಬ್ಬ ಬಂದಂತೆ. ಅದೂ ತೋಟದ ಮನೆ, ಮನೆತುಂಬ ಜನ, ಮಕ್ಕಳು, ಸದಾ ಅತಿಥಿ–ಅಭ್ಯಾಗತರಿಂದ ತುಂಬಿರುವ ಸಂಸಾರ. ಸೌಭದ್ರಮ್ಮನೇ ಆ ಮನೆಯ ಹಿರಿಯ ಸೊಸೆ. ಮೂವರು ಸೊಸೆಯರು ನಾಲ್ಕು ಜನ ಹೆಣ್ಣು ಮಕ್ಕಳು ಇದ್ದ ಆ ಮನೆಯಲ್ಲಿ ಸದಾಕಾಲ ಬಸುರಿ, ಬಾಣಂತಿಯರು, ಮುಟ್ಟಾದವರು, ಕಾಹಿಲೆ ಕಸಾಲೆಯವರು ಇರುತ್ತಿದ್ದರು. ಒಂದು ತಿಂಗಳಿಂದ ಹಿಡಿದು ಇಪ್ಪತ್ತು ವರ್ಷದವರೆಗಿನ ಗಂಡು–ಹೆಣ್ಣು ಮಕ್ಕಳಿದ್ದರು. ಹಬ್ಬ–ಹರಿದಿನ, ದೇವತಾರ್ಥ, ಪೂಜೆ–ಪುನಸ್ಕಾರ, ಪುಣ್ಯಾಹ, ನಾಮಕರಣ' ಹುಟ್ಟಿದಹಬ್ಬ, ವರ್ಷಕ್ಕೆ ಆರೆಂಟು ತಿಥಿಗಳು, ಹೀಗೆ ಒಂದು ದೊಡ್ಡ ಕಾರ್ಖಾನೆಯಂಥ ಮನೆಯದು. ಕೊಟ್ಟಿಗೆ ತುಂಬ ದನಗಳು. ಅವುಗಳ ಬಸಿರು–ಬಾಣಂತನಗಳು. ಇಂತಹ ಮನೆಗೆ ಸೀತೆ ಹೋದಳೆಂದರೆ ಆ ಸಂಸಾರ ಸಾಗರದಲ್ಲಿ ಮುಳುಗಿ ಹೋಗುತ್ತಿದ್ದಳು. ಅವಳಿಗೆ ಆ ಅತ್ತೆಯ ಮನೆಯೆಂದರೆ ಸ್ವರಾಜ್ಯವಿದ್ದಂತೆ. ಓರಗೆಯ ಹುಡುಗಿಯರು ನಾಲ್ಕಾರು ಮಂದಿ ಇದ್ದರು. ಮುಖ್ಯವಾಗಿ ಸೌಭದ್ರಮ್ಮನ ಹಿರಿಯ ಮಗಳು ಗಂಗೆ ಬಲು ಮಾತುಗಾತಿ. ಒಗಟು, ಗಾದೆ, ಕತೆಗಳನ್ನ ಹೇಳುವುದರಲ್ಲಿ ನಿಸ್ಸೀಮೆ. ಸುಸ್ವರದಲ್ಲಿ ಎಲ್ಲಾ ಹಾಡುವವಳು. ಸೀತೆ–ಗಂಗೆ ಸೇರಿ ಬಿಟ್ಟರೆ ಆಯಿತು. ಗುಡ್ಡ, ದರೆ, ಕಣಿವೆ, ಕೆರೆ, ತೋಡು, ತಡಸಲು, ಅಬ್ಬಿ, ತೋಟ, ಗದ್ದೆ ಎಲ್ಲಾ ಕಡೆ ಇವರ ತಿರುಪಾಟನೆ. ತಿರುಗುತ್ತ ತಿರುಗುತ್ತ ಹಾಡು ಕಲಿಯುವುದು, ಕತೆ ಕೇಳುವುದು, ಒಗಟು ಬಿಡಿಸುವುದು, ತೋಟದ ಕಾಯಿ ಕಸರುಗಳನ್ನೆಲ್ಲ ತಿನ್ನುವುದು, ವಾನರ ಸೇನೆಯಂತೆ ತಂಡವೆಲ್ಲ ಮಾವಿನ ತೋಪು ಹೊಕ್ಕರೆಂದರೆ ಹೀಚುಗಾಯಿ ತಿಂದು ಉದ್ದವಾದ ಹರೆಗಳ ಮೇಲೆ ಕೂತು ಜೋಕಾಲಿ

ಯಾಡುವರು. ಗಂಡು ಹುಡುಗರ ಜೊತೆ ಸೇರಿ ಗಂಗೆ, ಸೀತೆಯರಿಬ್ಬರೂ ಮರ ಹತ್ತುವುದು, ಈಜುವುದು ಕಲಿತದ್ದು ಅಲ್ಲಿಯೇ.

ಮಲೆನಾಡಿನ ತೆಂಗಿನ ಮರಗಳು ತೀರಾ ಎತ್ತರ. ಗಂಗೆ ಮನೆ ತೋಟದ ಒಂದು ಮರ 'ಡೊಂಕಾಗಿ ಬಹಳ ಎತ್ತರವಾಗಿತ್ತು. ಒಂದು ಬೇಸಿಗೆಯಲ್ಲಿ ಗಂಗೆ, ಸೀತೆಯರು ಕಾಲಿಗೆ ಹಗ್ಗ ಕಟ್ಟಿಕೊಂಡು ಆ ಮರ ಹತ್ತುವ ಸಾಹಸ ಮಾಡಿದರು. ಲಾಡಿಲಂಗವನ್ನು ಇಬ್ಬರೂ ಕಚ್ಚೆ ಬಿಗಿದು ಕಾಲಿಗೆ ಹಗ್ಗ ಬಿಗಿದು ಸೀತೆ ಮೊದಲು ಮರ ಹತ್ತಿದಳು. ಮೊದಲ ಸಾಹಸ. ಸ್ವಲ್ಪ ಹೆದರಿಕೆಯಾಯಿತು. ಕೆಳಗಿನಿಂದ ಯಂಟು ಸಲಹೆ ಹೇಳಿದ :

"ಕೆಳಗೆ ನೋಡಬ್ಯಾಡಾ ಕಣೇ ತಲೆ ತಿರಗತ್ತೆ. ಮೇಲೆ ನೋಡ್ತಾ ನಿಧಾನ ಹತ್ತು"—ಸೀತೆ ಹಾಗೇ ಮಾಡಿದಳು. ಎರಡು ಕೈಯಲ್ಲೂ ಮರ ವನ್ನು ಬಲವಾಗಿ ಹಿಡಿದು ಗುರಿಯನ್ನೇನೋ ಮುಟ್ಟಿದಳು. ಆಗ ನೆನಪಾಯಿತು ಎಳ ನೀರು ಕೆಡವಲು ಕುಡುಗೋಲನ್ನೇ ತಂದಿಲ್ಲವೆಂದು. ಕಾಯಿಗೊನೆಯ ಮೇಲೆ ಹತ್ತಲು ಸಾಧ್ಯವೂ ಇಲ್ಲ. ಕೈ ಬಿಟ್ಟರೆ ಬೀಳುವ ಹೆದರಿಕೆ. ಕೆಳಗಡೆ ಹುಡುಗರು ಅಕಸ್ಮಾತ್ ಸೀತೆ ಬಿದ್ದರೆ ಅಪಾಯವಾಗ ದಿರಲೆಂದು ಅಡಿಕೆ ಸೋಗೆಯನ್ನ ಅಗಲವಾಗಿ ಹಾಸಿ ಒಂದು ಕಂಬಳಿಯನ್ನ ನಾಲ್ಕು ಜನ ನಾಲ್ಕು ಮೂಲೆ ಹಿಡಿದು ಸೀತೆ ಏರುತ್ತಿದ್ದ ಜಾಡಿನಲ್ಲೇ ಬಿಚ್ಚಿ ಹಿಡಿದಿದ್ದರು. ಸೀತೆ ಅಲ್ಲಿಂದ ಕೂಗಿದರೂ ಕೇಳುವಂತಿರಲಿಲ್ಲ. ವಿಧಿಯಿಲ್ಲದೆ ನಿಧಾನವಾಗಿ ಇಳಿದಳು. ಆಗ ಇವರಿಗೂ ತಿಳಿಯಿತು ಕುಡುಗೋಲು ಇಲ್ಲ ವೆಂದು. ಯಾವ ಅಪಾಯವೂ ಇಲ್ಲದೆ ಕೆಳಗಿಳಿದಳು ಸೀತೆ. ಗಂಗೆ ಕುಡು ಗೋಲು ಹಿಡಿದು ಮಂಗನಂತೆ ಕುಪ್ಪಳಿಸಿ–ಕುಪ್ಪಳಿಸಿ ಮರವೇರಿ ಕೆಂದೆಳ ನೀರನ್ನು ಒಂದೊಂದಾಗಿ ಕಡಿದು ಕೆಳಗೆ ಬಿಟ್ಟಳು. ಒಂದು ಗೊನೆ ಬರಿದಾಯಿತು. ಅವಳೂ ಹಗುರವಾಗಿ ಇಳಿದಳು. ಹುಡುಗರ ತಂಡಕ್ಕೆ ಎಳ ನೀರ ಸಮಾರಾಧನೆಯಾಯಿತು.

ಸೀತೆಯ ಲಂಗ ಮಾತ್ರ ಎರಡು ಭಾಗವಾಗಿತ್ತು. ಅವಳು ಅದನ್ನ ಮುಚ್ಚಿಕೊಂಡು ಗಂಗೆಗೆ ಅಂದಳು :

"ಅಡ್ಡಿಲ್ಲ ಕಣೆ, ನಂಗೂ ತೆಂಗಿನಮರ ಹತ್ತೂಕೆ ಬಂತು. ಕುಡು ಗೋಲು ಇದ್ದಿದ್ರೆ ನಾನೇ ಕಾಯಿ ಕೀಳ್ತಿದ್ದೆ. ನಮ್ಮೂರಿಗೆ ಹೋದ್ಮೇಲೆ

ದಿನಾ ತುಸಾ ತುಸಾ ಅಭ್ಯಾಸ ಮಡ್ಯಾತನಿ. ಇಲ್ದಿದ್ರೆ ಆ ಹುಚ್ಚಂಗೋ, ರಾಮಂಗೋ ಗ್ಯಾಗರಿಬಕು ಕಾಯಿ ಕಿತ್ಕೊಡೂಂತ. ಚಿಕ್ಕಮ್ಮ ಬಯ್ತಾಳೇಂತ ಅವು ಕಿತ್ಕೊಡುಲ್ಲ. ಮಾಡ್ತನಿ ಇನ್ಮ್ಯಾಲೆ."

ಎಂಟು ವರ್ಷದವಳಿದ್ದಾಗಲೇ ಇಂತಹ ಸಾಹಸ ಸೀತೆಯದು. ಆದರೆ ಮನೆಗೆ ಬರುವುದರೊಳಗೆ ಯಾರೋ ಬಂದು ದೂರು ಹೇಳಿದ್ದರು. ಹುಡುಗಿಯರು ಡೊಂಕು ಮರ ಹತ್ತಿದ್ದರೆಂದು.

"ಹುಚ್ಚುಗ್ಯೆನಾರಾ, ಎಲ್ಲಾರ ಬಿದ್ದ್ಹಿಗಿದ್ದು ಸ್ವಂಟಾನೋ, ಕಾಲೋ ಮುರ್ಕಂಡ್ರೆ ಯಾವೋನು ಮದುವ್ಯಾಗ್ತಾನೆ ನಿಮ್ಮನ್ನ?"

ಇಬ್ಬರಿಗೂ ನಾಲ್ಕು ತಪರಾಕು ಬಿಗಿದೇ ಗದರಿದ್ದರು ಸೌಭದ್ರಮ್ಮ. ಮರ ಹತ್ತಿ ಇಳಿದು ಎಳನೀರು ಕುಡಿದಾಗಿತ್ತು. ಅಲ್ಲದೆ ಈ ಹೊಡೆತಬಡಿತ ದಿನವೂ ಇರುವುದೇ. ಇಬ್ಬರೂ ಅಳಲಿಲ್ಲ. ಮೂತಿ ಉದ್ದಮಾಡಿ ಹೊರ ಬಂದರು. ಮರುಗಳಿಗೆಗೆ ಅದು ಮರೆತು ಹೋಗುತ್ತಿತ್ತು. ಹೊಟ್ಟೆ ಬಿರಿಯ ಬಗೆಬಗೆಯ ಊಟ–ತಿಂಡಿಗಳು. ಮುರುವಿನ ಒಲೆಯಮುಂದೆ ಕೂತರೆ ಗೆಣಸು, ಹಲಸಿನ ಬೀಜ, ಗೇರು ಬೀಜಗಳಿರುತ್ತಿದ್ದವು ಸುಟ್ಟು ತಿನ್ನಲು. ಹಿತ್ತಲ ಚೌಕಿಯ ಆಟಗಳು. ಚೌಕಬಾರ, ಚನ್ನೆಮಣೆ, ಗಜ್ಜುಗೆ, ಕವಡೆ ಇತ್ಯಾದಿ.

ತಟಕೆ ಮುಟಕೆ ತಾಳಂದೇವಿ.
ಕಣ್ಣಾಮುಚ್ಚೆ–ಕಾಡೆಗೂಡೆ.
ಸಾರ್ ಭೋರ್ ಭಂಗಿ–ಭಂಗಾರಕ್ಕನ ತಂಗಿ.

ಹೀಗೆ ಎಲ್ಲಾ ಹಳ್ಳಿಯ ಆಟಗಳು ಮನೆಯಲ್ಲಿ ತಿಳಿಸದೆಯೇ ನಾಲ್ಕು ಮೈಲು ದೂರದ ಹುಮಚ್ಚಕ್ಕೆ ಹುಡುಗ ಪಾಳ್ಯವು ಹೊರಡುತ್ತಿತ್ತು. ಪದ್ಮಾವತೀ ಅಮ್ಮನವರ ದೇವಾಲಯ, ಕೆಳಗಿನ ಮುತ್ತಿನ ಕೆರೆ, ಘನ ಘನ ವೃಕ್ಷಗಳ ಸಾಂದ್ರತೆಯಲ್ಲಿ ಕತ್ತಲುಗವಿದ ಎತ್ತರದ ವ್ಯಾಸ ಪರ್ವತ! ಮಲೆನಾಡ ವನಾಂತರದಲ್ಲಿ ಮೌನವಾಗಿ ಅಡಗಿ ಕುಳಿತ ದೇವಿ ಪದ್ಮಾವತಿಯ ಪುಣ್ಯ ಕ್ಷೇತ್ರ. ಜೈನ ಗುರುಗಳು, ಸಂಸ್ಕೃತ ಪಾಠಶಾಲೆ, ವೇದಾಧ್ಯಯನ.

ವ್ಯಾಸ ಪರ್ವತದಿಂದ ಸಣ್ಣ ಸಣ್ಣ ಝರಿಗಳಾಗಿ ಹರಿದು ಬಂದ್ರ ಮುತ್ತಿನ ಕೆರೆಯಲ್ಲಿ ಸಂಗ್ರಹವಾಗುವ ಸ್ಫಟಿಕ ಜಲದಂತಹ ಆ ತಿಳಿನೀರು ರೋಗ ನಿವಾರಕ ಎಂದು ಪ್ರಸಿದ್ಧವಾದದ್ದು. ಈ ಹುಡುಗರು ಬೇಸಿಗೆಯಲ್ಲಿ

ಆ ನೀರಿನಾಗ ನಾಲ್ಕು ಮೈಲಿ ಓಡುತ್ತಿದ್ದರು. ಅವರ ಪಾಲಿಗೆ ಹುಮಚ (ಹೊಂಬುಜ) ನೆರೆಮನೆಯಾಗಿತ್ತು. ಸೀತೆ ಬಂದಾಗ ಇದೊಂದು ಲೀಲೆ ಮಕ್ಕಳಿಗೆ.

## ೮

ಪಟ್ಟಣಗಳ ಪರಿಚಯವಿಲ್ಲ, ನಾಗರಿಕತೆ ಗೊತ್ತಿಲ್ಲ; ಶ್ರೀಮಂತಿಕೆಯ ಡಾಂಬಿಕತೆಯಿಲ್ಲ. ಮುಗ್ಧ, ಅಮಾಯಕ ಕಿಶೋರವಲಯಗಳಲ್ಲಿಯೇ ಆ ಮಲೆನಾಡ ಮಕ್ಕಳ ಬೆಳವಣಿಗೆ. ಅವರದೇ ಆದ ತಿಳಿಪರಿಮಳದ ರಸಿಕತೆ. ಅಕಲಂಕ, ಅಬೇಧ ನಡೆನುಡಿ.

ದನಕರುಗಳು, ಹಕ್ಕಿ-ಪಕ್ಷಿಗಳು, ತರು–ಲತೆಗಳು ಹೊಲೆಯರ–ಗೌಡರ ಮಕ್ಕಳುಗಳೇ ಇವರ ಒಡನಾಡಿಗಳು.

ಮಡಿ ಹುಡಿಗಳು ಮನೆಯ ಹಿರಿಯರಲ್ಲಿದ್ದವು ಮಕ್ಕಳೇ ಸೇರಿದಾಗ ಆ ವಿಷಯವೇ ಅವರಿಗೆ ಮರೆತು ಹೋಗುತ್ತಿತ್ತು. ಜ್ಞಾಪಕ ಬಂದಾಗ ಅದು ಜಾರಿಯಲ್ಲಿರುತ್ತಿತ್ತು.

ಇಂಥದೇ ಪರಿಸರದಲ್ಲಿ ಸೀತೆ ಬೆಳೆದುಬಂದು ಹತ್ತು ವರ್ಷ ತುಂಬಿ ಹನ್ನೊಂದರಲ್ಲಿ ಅಡಿಇಟ್ಟಳು. ಅವಳ ಧೈರ್ಯ ಧೀಮಂತಿಕೆಗಳೂ ಬೆಳೆದು ಬಂದವು.

ಈಗ ತಂದೆ ಕೈಯಲ್ಲಿ ಲಕ್ಕಿಬರಲು ಹಿಡಿದು ಬಾಯಿ ಜೋರುಮಾಡಿ ಹಿಂದೆ ಬಂದರೂ ಅವರು ಹೊಡೆಯುವುದಿಲ್ಲವೆಂದು ಸೀತೆಗೆ ಗೊತ್ತಿತ್ತು.

ತಾಯಿಸತ್ತ ಹುಡುಗಿ ಎಂಬ ಕನಿಕರ ತಂದೆಗೆ. ಜೊತೆಗೆ ಮಕ್ಕಳಿಗೆ ಹೊಡೆದು ಬಡಿದು ಮಾಡುವ ಸ್ವಭಾವವೂ ಅಲ್ಲ ಆತನದು. ಈಗ ಆಕಸ್ಮಿಕ ಶಂಕರಭಟ್ಟರು ಕಂಡರೋ ಏನೋ ಎಂಬ ಸಂಶಯವಾಯಿತು ಆತನಿಗೆ. ಸೀತೆಯ ಸೆರಗು ಕಂಡಿತ್ತು ಮಹಾಬಲಯ್ಯನಿಗೆ ಮದುವೆ ನಿಶ್ಚಯ

ವಾಗಿರುವಾಗ ಈ ಹುಡುಗಿ ಆ ಮನೆಯವರೊಡನೆ ಮಾತಾಡಿದ್ದನ್ನ ಬಂದವರ್ರು ಕಂಡರೆ ಏನು ತಿಳಿದಾರು ?

ಸೀತೆ ಮನೆಕಡೆಗೆ ತಿರುಗಿದೊಡನೆ ಮಹಾಬಲಯ್ಯನ ಕಾಲು ಶಂಕರ ಭಟ್ಟರಿದ್ದಲ್ಲಿಗೆ ಹೋಯಿತು.

ಸೀತೆ ನಿಶ್ಚಿಂತೆಯಾಗಿ ಬಚ್ಚಲಿಗಿಳಿದು ಮೈ ತೊಳೆದು ತುಳಸೀಪೂಜೆ ಮುಗಿಸಿ ಕಾಡಿಯ ಹತ್ತಿರ ಜಡೆಹಣಿಸಿಕೊಂಡು ಹೂಮುಡಿದಳು.

ಶಂಕರಭಟ್ಟರು, ಸುಬ್ಬ ಇನ್ನೂ ಮನೆಗೆ ಬಂದಿರಲಿಲ್ಲವಾದ್ದರಿಂದ ಮೋಟಮ್ಮನ ಆಶೀರ್ವಾದ ನಡೆದೇ ಇತ್ತು.

"ಆ ಸುಟ್ಟ ಹಂದಿ ಮುಸಡಿ ಹತ್ರ ಹರಟ್ತ ಕೂತಿತ್ತನೋ ಇಸ್ಟೊತ್ತನಕ. ಅವರೂ ಅಲ್ಲೇ ತ್ವಾಟಕ್ಕೆ ಹೋಗಿದಾರೆ. ಇದಕ್ಕೆ ಗ್ಯಾನಿಲ್ಲ ಮೈಮ್ಯಾಲೆ. ಇನ್ನು ಲಗ್ನದ ಹೊತ್ತಿನಾಗೆ ಯಂತದಾರ ಯಡವಟ್ಟ ಮಾಡ್ಕಂಡು ಕೂತ್ಕಾಬಕಲ್ಲ."

ಕಾಡಿ ಅತ್ತಿಗೆಗೆ ಬದಲಾಡುತ್ತಿರಲಿಲ್ಲ. ಸೀತೆ ಅದನ್ನ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಪಾಲಕ್ಷಮ್ಮ ಕಪ್ಪು. ಮೋಟಮ್ಮನ ಮಾತು ಗಾಳಿಗೆ ಹೋಯಿತು. ಯಾರೂ ಉತ್ತರಕೊಡುವರಿಲ್ಲದ್ದರಿಂದ ಮೋಟಮ್ಮನಿಗೆ ಮತ್ತೂ ಸಿಟ್ಟು ಬಂತು. ಅವಳು ಅರಚಿಕೊಂಡಳು :

"ಏ ಸೀತೇ ! ಬಳ್ಳಿ ಹಾಕು ಬಾರೇ ಅಡಿಗ್ಯಾತು. ಇನ್ನೇನು ಅವರೂ ಬಂದಾರೂ"

ಸೀತೆ ಊಟದ ಮನೆಯಲ್ಲಿ ಮೂರು ಮಣೆ ಹಾಕಿ ಸಾಲಾಗಿ ಎಲ್ಲರಿಗೂ ಬಾಳೆ ಎಲೆ ಹಾಕಿ ಲೋಟಗಳಿಟ್ಟಳು. ಮತ್ತೆ ಹತ್ತುಗಳಿಗೆಯಲ್ಲಿ ಗಂಡಸರು ಬಂದು ಕೊಳಕು ಮಗುಟಗಳುಟ್ಟು ಮಡಿಯಲ್ಲಿ ಊಟಕ್ಕೆ ಕೂತಾಯಿತು. ಮಡಿನೀರಿನಲ್ಲಿ ಬಳ್ಳಿ ತೊಳೆದು ಲೋಟಕ್ಕೆ ನೀರು ಹಾಕಿದ ಮಹಾಬಲಯ್ಯ.

ಮೋಟಮ್ಮ ಮೊದಲು ಅಭಿಗಾರ ಮಾಡಿದ್ದು ನೋಡಿ ಶಂಕರಭಟ್ಟರಿಗೆ ಆಶ್ಚರಿಯಾಯಿತು.

"ಯಂತದಿವತ್ತು ಅಭಿಗಾರ ಆಗ್ತದೆ ?"

ಅಷ್ಟರಲ್ಲಾಗಲೇ ಮೋಟಮ್ಮ ಹಾಲುಬಾಯಿನ ಪರಾತ ತಂದಾಗಿತ್ತು.

ದೊಡ್ಡ ಕಡುಬಿನ ತಟ್ಟೆಗಳಲ್ಲಿ ಹುಯ್ದ ಅರ್ಧರ್ಧ ಹಾಲುಬಾಯಿ ಎಲೆಗೆ ಬಿತ್ತು.

"ಮದುವೆ ಸುದ್ದಿ ತಂದಿದೀರಿ. ನಿಂಬಾಯ್ನ ತುಸು ಸೀ ಮಾಡೂದು ಬ್ಯಾಡವಾ ? ಒಂಚೂರು ಹಾಲ್ಬಾಯಿ ಮಾಡ್ದೆ ಸೈ"

ಆ ವೇಳೆಗೆ ಮಾಲಕ್ಷಮ್ಮನ ಮುಂದೆ ಡೋಲು ಬಾರಿಸಿ ಮದುವೆ ಸುದ್ದಿ ತಿಳಿಸಿದ್ದಳು ಮೋಟಮ್ಮ. ಅತ್ತೆ—ಸೊಸೆಯರಿಬ್ಬರೂ ನಿಂತು ಬಡಿಸಿದರು ಹೆಂಡತಿಯ ಜಾಣ್ಮೆಗೆ ಹೆಮ್ಮೆಪಟ್ಟು ಗಂಟಲು ಹೆರೆದುಕೊಂಡ ಮಹಾಬಲ. ಮತ್ತಷ್ಟು ತುಪ್ಪ ಬಿತ್ತು ಹಾಲುಬಾಯಿ ಗೆ

ಇಂಗು, ಕರಿಬೇವಿನ ಘಮಘಮ ವಾಸನೆಯ ಬೇಳೆಸಾರು ಕಂಡು ಭಟ್ಟರು, ಸುಬ್ಬ ಎಡತೊಡೆಯಡಿಗೆ ಮುಂಗೈ ಸೇರಿಸಿ ಹೊಟ್ಟೆ ಆಳಕ ಬಿಟ್ಟು ಕುಳಿತರು.

"ಮೋಟಮ್ಮ, ಭಾರಿ ಗಡದ್ದು ಅಡಿಗೆ ಮಾಡಿದ್ದೀರಿ. ಯಂತದಪ್ಪ ಈ ತುಟ್ಟಿ ಕಾಲ್ದಾಗೆ ಬ್ಯಾಳೆಸಾರು ಮಾಡಿ ಉಣ್ಣೂದು ? ನಮ್ಮ ಕಾಲ್ದಾಗೆ ರೂಪಾಯ್ಗೆ ಮೂವತ್ಸೇರು ಬ್ಯಾಳೆ ಬರ್‍ತಿತ್ತು. ಈಗೆಂತದು ಇಪ್ಪತ್ನಾಕು ಸೇರಿಗೆ ಒಂದದೆ. ನಮ್ಮಂತೋರ ಮನೇಲಿ ದಿನಾ ಬ್ಯಾಳೆ ಹುಳಿ ಸಾರು ಮಾಡೂಕಾದೀತ ? ಮಾಡ್ತಾರಪ್ಪ ಸಾವಕಾರ ಮನೇಲಿ ಯರಡ್ಹೊತ್ತೂ ಬ್ಯಾಳೆಹುಳಿ, ಬ್ಯಾಳೆಸಾರು. ಕಡೀಗೆ ನಿಮ್ಮ ಸೌಭದ್ರಮ್ಮನ ಮನೆ ?! ಹಡಗಿನಂಥ ಸಂಸಾರ ! ಅವರ ಮನೇಲೂ ಮಾಡ್ತಾರಪ್ಪ ದಿನಾ ಬ್ಯಾಳೆಸಾರ್ನ. ಅಷ್ಟೂದ್ರ ಯಾಕೆ ಹೋಗ್ಬೇಕು ? ಈ ಸುಬ್ಬನ ಅತ್ತೆ ಗೌರಮ್ಮ ! ಬಲು ಅಚ್ಚುಕಟ್ಟು ಆಕೆ ಕೆಲಸಾಂದ್ರೆ. ಇಕಾ ಈ ಸಾರಿನ್ಹಂಗೆ ಗೌರಮ್ಮನ ಸಾರು ಖಾರಕಟ್ಟಿಗೆ ಘಮಘಮ."

ಬ್ಯಾಳೇ ಸಾರಿನ ವಿಮರ್ಶೆ ಮಾಡುತ್ತ ಒಬ್ಬೊಬ್ಬರು ಒಂದೊಂದು ಕೈ ಒಟ್ಟಳು ಸಾರನ್ನ ಸುರಿವರು. ಹಾಲುಬಾಯಿ, ಸಾರು, ತಂಬುಳಿ, ಪಲ್ಯ, ಮಿಡಿ ಉಪ್ಪಿನಕಾಯಿ, ಹಲಸಿನಕಾಯಿ ಹಪ್ಪ !

ಮಾತಾಡುತ್ತಿದ್ದವರು ಭಟ್ಟರೊಬ್ಬರೇ. ಬಾಕಿಯವರೆಲ್ಲ ಊಟದಲ್ಲಿ ತಲ್ಲೀನರಾಗಿ ಪರವಶರಾಗಿದ್ದರು. ಸಾರು ಸುರಿಯುವ ಸದ್ದು, ಹಪ್ಪಳ ಮುರಿ

ಯುವ ಸದ್ದು. ಸುಬ್ಬನ ಅತಳ—ವಿತಳ—ಪಾತಾಳಕ್ಕೆ ಇಳಿಯುತ್ತಿತ್ತು ರಸಕವಳ.

"ಭಾಳ ಹೊತ್ತಾತು. ನಿಧಾನವಾಗಿ ಉಣ್ಣಿ" ಉಪಚರಿಸಿದ ಮಹಾಬಲ.

"ಆತು, ಈಗ್ಲೇ ತೂಕಡಿಕೆ ಬರ್ತದೆ. ಇವತ್ತು ಊರಕಡೀಗೊಂದು ಹೋಗೂದದೆಯಲ್ಲ. ಇಲ್ದಿದ್ರೆ ಸಮನಾಗಿ ಉಂಡು ಮಲಗ್ತಿದ್ದೆ "

ಭಟ್ಟರ ಮಾತು ಕೇಳಿ ಮೋಟಮ್ಮ ಹೌಹಾರಿದಳು.

'ಇವರ ಹೊಟ್ಟೆಗೆ ಬೆಂಕಿ ಬೀಳ' ಈಗ್ಲೇ ನಾಕ್‌ನಾಕು ಕೈಬಟ್ಲು ಅನ್ನಾತು ಒಬ್ಬೊಬ್ರಿಗೆ. ಇನ್ನು ಸಮನಾಗಿ ಉಂಡ್ರೆ ರಾತ್ರಿಗೆ ಇಲ್ಲೇ ಕುಕ್ಕರ ಬಡೀತಾವೆ. ನಾ ಬ್ಯಾಳೆ ಸಾರು ಮಾಡಿದ್ದೇ ತಪ್ಪಾತು. ಮುಸುರೆ ದಬರಿಗೆ ಕೈ ತೊಳೆದು ತಂಬಿಗೆಯನ್ನು ನೆಲಕ್ಕೆ ಕುಕ್ಕಿದಳು.

ಸೀತೆ ಸುಬ್ಬನ ಹೊಟ್ಟೆಯ ಉದ್ದವನ್ನು ಅಳತೆ ಮಾಡಿದಳು. ಮುಂದಲ ಚೌಕಿಯ ಜಗುಲಿಯ ಹತ್ತಿರ ಬಾದಾಳದ ಹತ್ತಿರ ಕಾಲು ತೊಳೆಯಲು ಇಟ್ಟ ರವ ನೀರಿನ ಕಪಳಿಗೆ ಇಷ್ಟೇ ಇದ್ದೀತು ಅನಿಸಿತು ಅವಳಿಗೆ.

ದೊಡ್ಡ ಕೊಡಪಾನೀಲಿ ಎರಡು ಕೊಡಪಾನಿ ನೀರು ಹಿಡಿಸತ್ತೆ ಅದು. ಇವನ ಹೆಂಡ್ತಿ ತಾಮ್ರದ ಹಂಡೇಲಿ ಅನ್ನ ಮಾಡ್ತಾಳೋ ಯಂತದೋ ಇವಗೆ.

ಅಂತೂ ಊಟ ಮುಗಿಯಿತು. ಹೊರಗಡೆ ತಾಂಬೂಲ ಸೇವನೆ ಯಾಯ್ತು. ಸೀತೆ ಯಂಜಲುಗೋಮೆ ಮಾಡುವುದರೊಳಗೆ ಅತ್ತೆ–ಸೊಸೆಯರ ಊಟ ಮುಗಿದಿತ್ತು. ಮೋಟಮ್ಮ ಸೆರಗಿಗೆ ಕೈ ಒರೆಸುತ್ತ ಹೊರ ಬಂದು ಕಂಬ ಒರಗಿ ನಿಂತು ಬಹಳ ಆಚ್ಛೆಯಿಂದ ಅಂದಳು :

"ಇಕಳ್ಳಿ ಶಂಕರಭಟ್ರೆ, ಶುಭಕಾರ್ಯ ಬ್ಯಾಗ ಮುಗಸ್ಬಕೂಂತ ನೀವೇ ಅಂತೀರಿ. ಇವರ ಸುದ್ದಿ ನಿಮಗ್ಗೊತ್ತಲ್ಲ. ಸಿಂಬಳನ ಹುಳೀನ ಹಾಗೆ. ಮಾಟೆ ಎಬ್ಸಿ ದೂಕಿದ್ರೂ ಹೊರಡೋದು ಕಷ್ಟ. ಇನ್ನೊಂತುಸೂ ಬಿಸಿಲು ತಗ್ಗತ್ಲು ನೀವು ಹೊರಟ್ರೆ ದೀಪ ಹಚ್ಚೂದರಾಗೆ ಕುರುವಳ್ಳಿ ತಲುಪತೀರಿ. ಲಗ್ನ ನಿಶ್ಚಯ ಆಗೂತಂಕ ಬೀಗರ ಮನೇಲಿ ಉಳೀಬಾರ್ದಂತಲ್ಲ. ಇವರ್ನ ನಿಮ್ಮನೇಲೆ ಉಳಿಸ್ಕಳ್ಳಿ. ನಾಳೆ ಹೆಂಗೂ ಗುರುವಾರ. ರಾಮಕ್ಕನ್ಮನ್ನ,

ಕೊಮಾರಯ್ಯನ್ನ ಮತ್ತೊಂದಪ ಕೇಳಿ ಲಗ್ನ ಗಟ್ಟಿಮಾಡಿ ಕಳ್ಸಿ. ಆಮ್ಯಾಲೆ ಒಂದಿನ ನೀವೇ ಬಂದು ಲಗ್ನಪತ್ರಿಕೆ ಮಾಡಸ್ಬಕು. ನೀವು ಕೈಬಿಟ್ರೆ ಈ ಕೆಲ್ಸ ಆಗೂದಲ್ಲ. ಒಳ್ಳೆಮಂತನ ಸಿಕ್ಕಿರೂವಾಗ ನಾವು ಜೋಬದ್ರಿತನ ಮಾಡ್ಕಂಡು ಕೂತಿರೂದಾ ?"

ಸುಬ್ಬ ಎಂದೂ ಆಯಾಸವಿಲ್ಲದ ಮನುಷ್ಯ. ಆದರೆ ಈಗ ಹಾಲುಬಾಯಿ ಬೇಳೆಸಾರಿನ ಊಟ ಭಟ್ಟರಿಗೆ ಜೂಗರಿಕೆಯಾಗಿತ್ತು. ಈಗ ಸಂಜೆಯವರೆಗೆ ಒಂದು ಗಡದ್ದು ನಿದ್ದೆ ತೆಗೆದು ರಾತ್ರಿಯೂ ಬೇಳೆಸಾರು ಉಂಡು ಬೆಳಗ್ಗೆ ಸೂರ್ಯ ಮೂಡುವ ಮೊದಲೇ ಎದ್ದು ಹೊರಡುವ ಯೋಚನೆ ಅವರಿಗಿತ್ತು. ಈ ಮೋಟಿ ಪಟ್ಟು ಹಿಡಿದಾಯಿತು. ಇನ್ನು ಹೊರಡದಿದ್ದರೆ ವಿಧಿಯಿಲ್ಲ. ಅವರ ತರ್ಕ ನಡೆದಿದ್ದಾಗಲೇ ಮೋಟಿಯಂದಳು :

"ಕಟ್ಟಿಗೆ ಅಷ್ಟು ಕಾಪಿ ಮಾಡ್ತನಿ. ತುಸೂ ಹಂಗೆ ಮಗ್ಲಾಗಿ"

ಎಂದು ಉತ್ತರಕ್ಕೆ ಕಾಯದೆ ಒಳಗೆ ಸರಿದಳು ಮೋಟಿ.

'ಹೆಂಡತಿ ಪರವಾಗಿಲ್ಲ. ನನಗಿಂತ ವ್ಯವಹಾರದಲ್ಲಿ ಚತುರೆ' —ಎಂದು ಮನದಲ್ಲೇ ಖುಷಿಪಟ್ಟ. ಅವನು ಭಟ್ಟರ ಮುಖ ನೋಡಿದ. ಅವರು ಸಂದಿಗ್ಧದಲ್ಲಿದ್ದರು. ಮೋಟಮ್ಮ ಕಾಫಿಯ ವಾಸನೆ ಮೂಗಿಗೆ ಹಚ್ಚಿ ಹೋಗಿದ್ದಳು. ಈಗ ಕಾಫಿ ಕುಡಿದ ಕೂಡಲೇ ಹೊರಡಬೇಕಲ್ಲ.

ಎದ್ದು ಅಂಗಳದ ಬಾದಾಳದ ಹತ್ತಿರ ತುಪ್ಪಿ ಬಂದು :

"ಇದೆಂತ ಕಂಡಾಪಟ್ಟೆ ಬಿಸ್ಲಪ್ಪ" ಅಂದರು

ಹೊರಡಲು ಕಷ್ಟ ಎಂಬ ಅಭಿಪ್ರಾಯದ ಧ್ವನಿಯಲ್ಲಿ ಮಹಾಬಲನ ಮಂದಬುದ್ಧಿಗೂ ಅದು ಹೊಳೆಯಿತೋ ಏನೋ. ಧೈರ್ಯವಾಗಿ ಅಂದ :

"ಲಗ್ನ ಕಾಲಕ್ಕೆ ಹಿಂಗೆ ಇರಬಕು ತಗಳ್ಳಿ. ಬರೂಕೆ—ಹೋಗೂಕೆ, ಹಪ್ಪ–ಸಂಡ್ಗೆ ಮಾಡೂಕೆ ಸಮನಾಗದೆ ದಿನ."

"ಅದು ಸಮ" –ಎಂದು ಮಗ್ಗಲು ಕೊಟ್ಟರು. ಸುಬ್ಬ ಕೈಕಾಲು ಮುದುರಿ ಕೊಕ್ಕರೆಯಂತೆ ಮಲಗಿದ.

ಮೋಟಿ ಜಾಗ್ರತೆಯೇ ಕಾಫಿ ಮಾಡಿದಳು. ಮಹಾಬಲಯ್ಯ ಹಳೆಯ ಪೆಟಾರಿಯಿಂದ ಆರೆಂಟು ಬೆಳ್ಳಿಯ ರೂಪಾಯಿಗಳನ್ನು ಹೊರತೆಗೆದ. ಮೋಟಿ ಗಂಡನನ್ನು ಅಡಿಗೆ ಮನೆಗೆ ಕರೆದು ಪಿಸುಗುಟ್ಟಿದಳು :

"ಲಗ್ನ ಗಟ್ಟಿ ಮಾಡ್ಕಂಬನ್ನಿ. ಹಾಂಗೇ ಹುಡುಗೀಗೆ ನಗ ಯಂತದಿಡ ತಾರೆ ಅಂತ ತಿಳಕಂಬನ್ನಿ. ಕಾಲ್ಬಳೆ, ಕಿಮಿತೊಟ್ಟು ನಮ್ಮನೆದದೆಯಲ್ಲ. ಅವರು ಪಟ್ಟಿ, ಬೆಂಡ್ವಾಲೆ, ಕಡಗಾರಾ ಇಡಬ್ಯಾಡ್ವಾ ? ನಿಮಗೆ ಮಾತಾಡೂಕೆ ಬರದು. ಯಲ್ಲ ಆ ಭಟ್ರಿಗೇ ಹೇಳಿ. ಅದರಾಗೂ ಆ ರಾಮಕ್ಕಮ್ಮ ಪಟಮ ರಾಕ್ಷಾಸಿ."

ಮಹಾಬಲ ತಲೆ ಹಾಕಿದ. ಕಾಫಿಯ ಲೋಟ ಹೊರಗೆ ಬಂದ ಕೂಡಲೇ ಗಂಡಸರ ಬಾಯಿನ ಹೊಗೆಸೊಪ್ಪಿನ ಉಂಡೆ ಹೊರಬೀಳ ಬೇಕಾಯಿತು.

ಬಿಸಿ ಪಾನಕದಂತಿದ್ದ ಕಾಫಿಯನ್ನು ಆಸ್ವಾದಿಸಿ ಕುಡಿದಾಯಿತು. ಹೊರಗೆ ತೊಂಡೆ ಚಪ್ಪರದ ಮೇಲೆ ಹರವಿದ್ದ ಪಾಣಿಪಂಚೆಗಳನ್ನು ತಂದು ಹೆಗಲಿಗೇರಿಸಿದರು. ಭಟ್ಟರು, ಸುಬ್ಬ, ತರಗುದೊನ್ನೆ ಹೊತ್ತು ನಿಂತು :

"ನಾವು ಇನ್ನು ಹೊರಡೂದಾ ?" ಎಂದರು. ಮಹಾಬಲನ ಪ್ರಯಾಣದ ಗಂಟೂ ಅಷ್ಟೆ. ಉಟ್ಟದ್ದೊಂದು ಮೋಟು ಪಂಚೆ, ಒಂದು ಕಸೆಯಂಗಿ, ಹೆಗಲಿಗೊಂದು ಅಂಗವಸ್ತ್ರ, ಮುಗಿಯಿತು. ಕಾಲಿಗೆ ಮೆಟ್ಟು ಹಾಕುವಂತಹ ಶ್ರೀಮಂತರು ಯಾರೂ ಇಲ್ಲ.

ಮೋಟ ಕಾಡಿಯನ್ನ, ಸೀತೆಯನ್ನ ಕರೆದು :

"ಭಟ್ರಿಗೆ ನಮಸ್ಕಾರ ಮಾಡಿ, ಬನ್ರೆ "

ಎಂದು ತಾನೇ ಮೊದಲು ಮಾಡಿದಳು. ಕಾಡಿ, ಸೀತೆಯರೂ ಮಾಡಿದರು.

"ದೀರ್ಘ ಸುಮಂಗಲೀ ಭವ, ಸುಪುತ್ರವತೀ ಭವ, ಕಲ್ಯಾಣಮಸ್ತು" ಆಶೀರ್ವಾದಗಳು ಬಂದವು.

"ಅವರಿಗೂ ಮಾಡೇ" ಎಂದಳು ಮೋಟ ಸೀತೆಗೆ. ಬೇತಾಳನಂತೆ ನೇರವಾಗಿ ನಿಂತ ಸುಬ್ಬ. ಆದರೆ ಸೀತೆ ಹಿತ್ತಲ ಜಗಲಿಗೆ ಹಾರಿ ಯಾಗಿತ್ತು.

"ಇರ್ಲಿ ಮದುವೇಲಿ ಮಾಡತ್ತೆ" ಎಂದರು ಭಟ್ಟರು. ಕೆಪ್ಪಮ್ಮನಿಗೂ ಸನ್ನೆಯಿಂದ ಹೇಳಿ ಹೊರಟರು ಭಟ್ಟರು

"ಇನ್ನು ಯರಡ್ಮೂರು ದಿನದಾಗೆ ಬರ್ತ್ನೇ. ಮನೆಕಡೆ ಜ್ವಾಪಾನ" ಎಂದು ಮೆಟ್ಟಿಲಿಳಿದ ಮಹಾಬಲ

ಮೋಟಿ ಮಹಾಬಲನಿಗೆ ಎಚ್ಚರಿಕೆ ಹೇಳುತ್ತ ಕಣದಾಟ ನಾಲ್ಕು ಹೆಜ್ಜೆ ಬಂದಳು.

"ಸುಬ್ಬಯ್ಯನ್ನ ಮದ್ಲು ಮನೀಗೆ ಕಳಿಸ್ಕೊಡಿ. ನಾಳೆ ಬೆಳಗ್ಗೆ ನೀವಿಬ್ರೂ ಹೋಗಿ, ಮೂರ್ಜನ ಹೋಗಬ್ಯಾಡಿ."

"ಸೈ, ಭಟ್ರಿಗೆ ಹೇಳ್ಕೊಡಬೇಕಾ ನೀನು. ಅವರಿಗೆ ಅದೆಲ್ಲ ತಿಳೀದಾ ?" ಎಂದ ಧೈರ್ಯವಾಗಿ.

"ಸೈ, ಮೋಟಮ್ಮ, ನೀ ಹೊರಡು ಇನ್ನು. ಮತ್ತೆಲ್ಲ ನಂಗೆ ಬಿಟ್ಬಿಡು" ಎಂದರು ಭಟ್ಟರು. ಮೋಟಮ್ಮ ಅಲ್ಲೇ ನಿಂತಳು. ಈ ತ್ರಿಮೂರ್ತಿಗಳು ಗದ್ದೆಗೆ ಇಳಿದರು :

ಅಷ್ಟರಲ್ಲಾಗಲೇ ಸೀತೆ ತೋಟಕ್ಕೆ ಓಡಿಯಾಗಿತ್ತು. ಅಜ್ಜಿಯೂ ಹಾಜರು. ಈಗ ತನ್ನ ಚಿಕ್ಕಮ್ಮ ಕಣದ ಆಚೆ ಉಣುಗೋಲಿನ ಹತ್ತಿರ ನಿಂತು ಅವರನ್ನು ಕಳಿಸಿಕೊಡುತ್ತಾಳೆಂದು ಸೀತೆಗೆ ಗೊತ್ತು. ಮೊದಲು ಅಜ್ಜಿಯೇ ಮಾತಾಡಿದಳು.

"ಫಲಕೊಡು ಮಾವಿನ ಮರವೇ. ಬಂದನೆಂಟ್ರು ಹೊರಟ್ರು ಕೇಳು ಮಾತಾಡದೇದ್ಹೋರ ಕೈಲಿ ?"

"ಅಕಾ, ಆ ಗದೇ ಬದಿನ ಮೇಲೆ ಹೋಗ್ತಾ ಅದೆಯಲ್ಲ ಬೆಟ್ಟದ ಬೇತಾಳ ಕಾಣ್ಣುದಿಲ್ಲನು, ಕೇಳು ಮರವೇ."

ಮರ ಸಾಕ್ಷಿಗೆ ನಿಂತಾಯಿತು. ಇನ್ನು ಮುಂದಿನ ಮಾತು :

"ನಿಮ್ಮಪ್ಪನೂ ಹೋಗ್ತಾ ಆದಾರಲ್ಲ ಯಾತಕ್ಕೆ ?"

"ಲಗ್ನ ನಿಶ್ಚಯ ಮಾಡ್ಕಂಬರೂಕಂತೆ."

"ಹಂಗಾರೆ ಬ್ಯಾಗ್ಲೆ ಆತು ಲಗ್ನ ?"

"ಗೊತ್ತಿಲ್ಲಪ್ಪ, ಅಪ್ಪ ಬಂದ್ಮೇಲೇ ಗೊತ್ತಾಗಬೇಕು."

"ಈ ದೋಟಿ ಸುಬ್ಬ ಯಾತಕ್ಬಂದದ್ದು ?"

"ಯಾರಿಗ್ಗೊತ್ತು ? ಅವ ಆ ಕೊಮಾರಯ್ಯನ ಭಾವನೆಂಟನಂತೆ ಬ್ಯಾಳೆ ಸಾರು ಉಣ್ಣುಕೆ ಬಂದಿದ್ದಾನು."

"ಹಂಗಾರಿವತ್ತು ನಿಮ್ಮನೇಲಿ ಬ್ಯಾಳೆ ಸಾರಾ ?"

"ಹೂಂ. ಬ್ಯಾಳೆಸಾರು, ಹಾಲ್ಬಾಯಿ, ಪಲ್ಯ, ಹಸಿವ್ಯಾಳೆ ಮಾಡಿತ್ತು ಚಿಕ್ಕಮ್ಮ."

"ಹಾಲ್ಬಾಯಿ ಭಟ್ರಿಗಿದ್ದೀತು, ಅಲ್ವಾ ?"

"ಯಾರ್ಗೋ, ಅಂತೂ ನಮಗೂ ಸಿಕ್ತು."

"ಸುಬ್ಬಯ್ಯ ನಿನ್ನೋಡೂಕೆ ಬಂದಿದ್ದನೋ ?"

"ಸೈ. ಅದು ನನ್ನ ನೋಡ್ಲೇ ಇಲ್ಲ. ಊಟಕ್ಕೂತಾಗ ಬಳ್ಳಿ, ಅನ್ನ ತ್ತಪ್ಲೆ, ಸಾರಿನ ಕಲ್ಮರಿಗೆ ; ಈಚಿಗೆ ಬಂದ್ರೆ ಕಾಪಿ ಲೋಟ, ಯಲಡ್ಕೆ ತಬಕು ಇಷ್ಟೇ ಅದು ನೋಡೂದು. ನಾನ್ಯಾಕೆ ನೋಡ್ಬೆಕು ಅದು ?"

"ದೊಡ್ಡೋರನ್ನ ಅದು ಇದೂಂತ ಅನ್ಬಾರ್ದಂತೆ. ಪಾಪ ಬರತ್ತಂತೆ."

"ಒಂದ್ಕಳ್ಳಿ, ನಾವು ಸತ್ಮೇಲಲ್ವಾ ನರಕಕ್ಕೆ ಹೋಗೂದು. ನಾವು ಬದುಕಿರುವಾಗಂತೂ ಯಮದೂತ್ರು ನಮಗೆ ಯಂತದೂ ಮಾಡೂ ಹಂಗಿಲ್ಲ. ನಾವು ಸತ್ಮೇಲಿ ಯಾರು ಯಂತದ ಮಾಡಿದ್ರೂ ನಮಗೆ ತಿಳಿಯಲ್ಲ. ಅಷ್ಟಕ್ಕೆ ಆ ಯಮದೂತ್ರಿಗ್ಯಾಕೆ ನಾವು ಹೆದರ್ಬೆಕು. ಮಾಡೂಕ್ಕೆಲ್ಸಿಲ್ಲ."

"ನಿಂಗೆ ಇಪ್ರೀತ ಧೈರ್ಯ ಕಣೆ ಸೀತೇ ! ನಂಗೆ ಪಾಪಾ ಮಾಡೂಕೆ ಹೆದರ್ಕೆ ಕಣೆ."

"ಹೆದರೂಕೆ ಯಂತದದೆ ಮಣ್ಣು ಅದರಾಗೆ. ನಂಪಾಡಿಗೆ ನಾವಿದ್ರಾ ತಪ್ಪ. ಅದ್ಕೇ ನಂಗೆ ಮನುಷ್ರಾಗಿ ಹುಟ್ಟೊಕೇ ಬೇಜಾರು. ಅಕಾ ಆ ಥರ ದೊಡ್ಡ ಕಸಿ ಮಾವಿನಮರ ಆಗಿ ಹುಟ್ಟಿದ್ರೆ ಎಷ್ಟು ಚಂದಾಗಿರತ್ತಲ್ವೆ ?"

"ಅಯ್ಯಬ್ಬ ! ಅದೆಂತದೇ ? ಬಿಸ್ಲಾಗೆ ಒಣಗ್ಬೆಕು, ಮಳೇಲಿ ನೆನಿಬೆಕು. ಮಾತಿಲ್ಲ–ಕತಿಲ್ಲ. ಕತ್ಲೇಲೂ ಇಲ್ಲೇ ನಿಂತಿರ್ಬೆಕಲ್ಲ. ಕೂರು ಹಂಗಿಲ್ಲ, ಮಲಗೂ ಹಂಗಿಲ್ಲ. ನಿಂತೇ ಇರ್ಬೆಕಲ್ಲ."

"ನೀನೊಬ್ಳು ತುಸಾನೂ ತಿಳಿಯುಲ್ಲ ನಿಂಗೆ. ಋಷಿಗಳಿಗೆ ಸಿಟ್ಬಂದಾಗ ಶಾಪಕೊಡ್ತಾರಂತಲ್ಲ, ಆಗ ಶಾಪ ತಂಗೊಂಡೋರೆ ಈ ಹೂವು, ಹಣ್ಣಿನ ಮರಾಗಿ ಹುಟ್ತಾರಂತೆ ಭೂಮಿಲಿ. ಶಾಪ ವಿಮೋಚ್ನನೆ ಆಗೂತಂಕ ಬಿಡ ಬ್ಯಾಡ ಇವರ್ನಿಲ್ಲ, ಭೂಮ್ಮಿಗೆ ಕಚ್ಚಿ ಹಿಡ್ಕಾಂತ ಭೂತಾಯಿಗೆ ಹೇಳ್ತಾರಂತೆ ಋಷಿಗಳು. ಅದಕೇ ನೋಡು ಮಾವಿನಮರ, ಹಲ್ಸಿನಮರ ಯಲ್ಲ ಯಾಪಾಟಿ

ಗಟ್ಟಿಯಾಗಿ ನಿಂತಿರತ್ತೆ. ಭೂಮಿತಾಯಿ ಅದರ ಬೇರಿಗೆ ಅಮೃತ ಹುಯ್ತಾಳಂತೆ. ಇವೆಲ್ಲ ದೇವತೆಗಳಲ್ವಾ ? ಅದಕ್ಕೇ ಅವಕ್ಕೆ ದೆವ್ವ, ಪಿಶಾಚಿ, ಬೂತ ಯಂತದರದ್ದೂ ಹೆದರ್ಕಿಲ್ಲ. ಅಮಾಸೆ, ಕತ್ಲೆ, ಗ್ರ್ಹಾಣ, ಗುಡ್ಗು, ಶಿಡ್ಲು, ಮಿಂಚು ಯಂತದು ಬಂದ್ರೂ ಅವಕ್ಕೆ ಹೆದರ್ಕಿಲ್ಲ. ಯಲ್ಲ ಸುಸೂತ್ರ. ಮನೆ ಬ್ಯಾಡ, ಅಡ್ಗೆ, ಗಂಡ, ಮಕ್ಳು, ಸಂಸಾರ, ಮದ್ವೆ, ಮುಂಜಿ, ಪ್ರಸ್ತ, ಬಸ್ರು, ಬಾಣಂತನ ಯಂತ ತಾಪತ್ರೇನೂ ಇಲ್ಲ. ಅದಕ್ಕೆ ಚಳಿಯೂ ಆಗುಲ್ಲ. ಬಿಸ್ಲು ಸುಡಲ್ಲ. ಮಳೆ ಬಂದ್ರೆ ಶೀತ–ಜ್ವರ ಯಂತದೂ ಬರುಲ್ಲ. ವರ್ಷಕ್ಕೊಂದಪ ಸಾವ್ರಾರು ಹಣ್ಣು ಕೊಡುತ್ತೆ. ಯಾರು ಕಿತ್ಕಂಡ್ರೂ ಅದೇನು ಅಳುಲ್ಲ. ಯಾಪಾಟೆ ಜನ ತಿಂದು ಸಂತೋಷಪಡ್ತಾರಲ್ವ ? ನಮ್ಹಂಗೆ ಅದ್ಕೇನು ಸೀರೆ–ಕುಬ್ಸ ಯಂತದೂ ಬ್ಯಾಡ. ಗಾಳಿ ಬಂದಾಗ ಮೈ ಅಲ್ಲಾಡ್ಸತ್ತೆ. ಅದರಮ್ಯಾಲೆ ಕೋಗಿಲೆ ಕೂತ್ಗಂಡು ಕೂಗುತ್ತೆ. ಗಿಣಿ ಹಣ್ಣು ತಿನ್ನತ್ತೆ. ನಾವೂ ಮಾವಿನ ಮರ ಆಗಿ ಹುಟ್ಟಿದ್ರೆ ಹಿಂಗೇ ಸುಸೂತ್ರ ಇರಭೋದಲ್ವ ?"

ಅಚ್ಚಿಗೆ ಸೀತೆಯ ಅಮೋಘ ಲೋಕಜ್ಞಾನದ ಬಗೆಗೆ ಅಚ್ಚರಿಯಾಯಿತು. ತನಗೆ ಯಾರೂ ಇಂತಹ ವಿಷಯಗಳನ್ನ ಹೇಳಿಯೇ ಇಲ್ಲವಲ್ಲಾ ಅನಿಸಿತು. ಅವಳು ವಿಸ್ಮಯವನ್ನು ಮುಖದಲ್ಲಿ ಸೂಸುತ್ತ, ಪ್ರಶ್ನಾರ್ಥಕ ಚಿನ್ಹೆಯಾಗಿ ಮೊಳಕೈಯನ್ನು ತಲೆಗೆ ಊರೆಗೊಟ್ಟು – ಮುಂದೆ ಸೀತೆಗೆ ಏನಾದರೂ ಜಾಣತನದ ಪ್ರಶ್ನೆ ಹಾಕಬೇಕೆಂದು ಚಿಂತಿಸಿದಳು.

## ೬

ತಾನು ಪೂರಾ ಪೆದ್ದಿಯೆನಿಸಿಕೊಳ್ಳಲು ಅಚ್ಚಿಗೆ ಮನಸ್ಸಿಲ್ಲ. ಮುಂದೆ ಏನು ಹೇಳಬೇಕೆಂದೂ ತೋರದು. ಆದರೂ ಹೇಳಿದಳು

"ಆದ್ರೂ ದೇಜಾರಲ್ಲವೆ ಅವಕ್ಕೇ ನಿಂತಲ್ಲೇ ನಿಂತು ? ನಿದ್ರಿಲ್ಲ,

ಊಟಿಲ್ಲ, ಕೆಲ್ಸಿಲ್ಲ. ಕೂರು ಹಂಗಿಲ್ಲ, ಮಲಗೂ ಹಂಗಿಲ್ಲ, ಓಡಾಡು ಹಂಗಿಲ್ಲ."

"ಮನೆ, ಗದ್ದೆ, ತ್ವಾಟ ಎದ್ದು ಓಡಾಡತ್ವಾ ? ಎಲ್ಲ ಇದ್ದಲ್ಲೇ ಇರ್ತ್ವಾವೆ. ಗಾಳಿ, ಗಂಗೆ, ಸೂರ್ಯ, ಚಂದ್ರ ಯಲ್ಲ ನಿದ್ದೆ ಮಾಡ್ತಾರಾ ? ಅವರಿಗೆಲ್ಲ ಕಣ್ಣು ಮುಚ್ಕೊಕೇ ಆಗುಲ್ಲಂತೆ ಹಿಂಗೆ ಯಾವಾಗ್ಲೂ ಕಣ್ಣು ಬಿಟ್ಕಂಡೇ ಇರ್ತಾರಂತೆ "

ಸೀತೆ ಕಣ್ಣುಗಳನ್ನು ದೊಡ್ಡದಾಗಿ ಅರಳಿಸಿ ತೋರಿಸಿದಳು. ಅಜ್ಜಿ ಸುಸ್ತಾದಳು.

"ನಿಂಗೆ ಯಾರೆ ಇದ್ನೆಲ್ಲ ಹೇಳಿದ್ದು ?"

"ರಾಂಭಟ್ರು."

"ನಮ್ಮನೆ ಅಯ್ಯಣ್ಣ ಭಟ್ರು ಯಂತದಿಲ್ಲ. ಮೂರ್ದಿನ, ನಾಕ್ದಿನ ಊಟ ಹೊಡಕಂಡು, ಹೊಗೆಸೊಪ್ಪು ಹಾಕ್ಕಂಡು, ತ್ವಾಟದಾಗಿರು ತರಗು ಪಟಗೂ ಗಂಟು ಕಟ್ಕಂಡು ಹೊರಡ್ತಾರೆ. ಸ್ತೈ, ಪುರಾಣ ಅವರಿಗೆ ಚೂರೂ ತಿಳೀದು."

"ಅವರು ಹೇಳ್ದೇದ್ರೇನಾತು. ನಿಮ್ಮಜ್ಜಂಗೆ ಗೊತ್ತಿಲ್ಲ."

"ನಮ್ಮನೇಲಿ ಯಾರೂ ಕತೇನೆ ಹೇಳುಲ್ಲ, ಯಾವಾಗ ನೋಡಿದ್ರೂ ಮಾತು, ಮಾತು....ಅತಲ್ಲ ಈಗ ನೀನು ಉರಟ್ಣೆ-ಉಯ್ಯಾಲೆ ಹಾಡು ಕಲೀಬಕು. ಈ ನಳಚರಿತ್ರೆ ನಂಗೆ ಪೂರಾ ಯಾವಾಗ ಹೇಳ್ಕೊಡ್ತಿ ?"

"ತುಸ ಈ ಮದ್ವೆ ಗದ್ಲ ಕಳೀಲಿ ತಡಿ ಹೇಳ್ಕೊಡ್ತ್ತಂತೆ. ಗಂಗೇನ್ನೆ, ವಾಸಿ ಗಂಡು ಹುಡುಗ್ರನ್ನ ನೋಡಿ ಅ, ಆ, ಊ ಎಲ್ಲ ಓದೂದ ಕಲ್ತದಾಳೆ. ಆಟ, ಊಟ, ಓಟ ಸತೀಗ ಓತ್ತಾಳೆ. ಈಗ ಸೀಸಕಡ್ಡಿ, ಕಾಪಿಬುಕ್ಕು ತಗಂಡು ಅವಳು ಕಲ್ತಿರೂ ಹಾಡೆಲ್ಲ ಬುಕ್ಕಿನಾಗೆ ಬರದಿಟ್ಕಂಡದಾಳಂತೇ ಕಾಡತ್ತೆ ಹೇಳಿದ್ರು."

"ಹಾಡ್ಯಾರಾರು ಬುಕ್ಕಿನಾಗೆ ಬರೀತಾರನೇ ?"

"ಓ ಬರೀದೇ ಏನು ? ಒಂದಪ ಬರದಿಟ್ಕಂಬಿಟ್ರೆ ತುಂಬ ಸುಲಬಂತೆ. ಪದ್ಮಾವ್ತಿ ಹೇಳಿದ್ಲು. ತೀರ್ಥಳ್ಳಿ ತೇರ್ಕೊಟ್ಗೆ ಬೀದೀಲಿ ಯರಡ್ಮೂರು ಮನೆ ಯೋರೂ ಹಂಗೆ ಮಾಡಿದಾರಂತೆ. ಒಂದಪ ಧ್ವನಿ ಹೇಳಿಸ್ಕಂಡ್ರೆ ಸಾಕಂತೆ.

ಆಮೇಲೆ ಬುಕ್ಕು ನೋಡಿ ಕಲ್ತ್ಕೋಬೋದಂತೆ. ನಮಗೆ ಅಕ್ಷರಾನೂ ಬರದೂ, ಬುಕ್ಕು, ಸೀಸಕಡ್ಡಿ ತಂದುಕೊಡೂದೂ ಇಲ್ಲ. ಕ್ವಾಣಂದೂರಾಗೆ ಒಂದು ಗಂಡ್ಹುಡುಗರ ಇಸ್ಕೂಲದೆ. ಯಲ್ಲ ಹುಡುಗ್ರು ಕೋಟು, ಟೋಪಿ ಹಾಕ್ಕಂಡು ಹೋಗ್ತಾವೆ. ಸ್ಲೇಟು, ಬುಕ್ಕು, ಬಳಪ ಯಲ್ಲ ಬೇಕು ಇಸ್ಕೂಲಿಗೆ."

ತಾನು ಸೀತೆಯ ಸಮಕ್ಕೆ ಬರಲು ಸಾಧ್ಯವಿಲ್ಲವೆಂದು ಅರಿತಳು ಅಚ್ಚಿ. ಪ್ರಶ್ನೆ–ಉತ್ತರ ಎರಡೂ ಇರಲಿಲ್ಲ. ಸೀತೆ ಕಡೆ ನೋಡಿದಳು.

"ಯಂತದೆ ಮಡ್ಯಾಗೆ ಅಪಾಟ ದಪ್ಪ ?" ನಿಜವಾಗಿ ಸೀತೆಗೆ ಮರೆತೇ ಹೋಗಿತ್ತು.

"ಅಯ್ಯೋ ! ಯರಡು ಹಲಸಿನ ಹಪ್ಪ ಇಸ್ಕಂಬಂದೆ ಅಜ್ಜಿ ಕೈಲಿ, ತಿನ್ನೂದೇ ಮರ್ತ್ಹೋತು. ತಗ ನೀ ಒಂದು ಮಡ್ಡ ಹಿಡಿ ಭದ್ರ."

ಅಚ್ಚಿಯ ಮನೆಯಲ್ಲೂ ಹಲಸಿನ ಹಪ್ಪಳ ಇದೆ. ದಿನಾ ತಿನ್ನುತ್ತಾಳೆ. ಆದರೆ ಇಲ್ಲಿ ತೋಟದ ತೋಡಿನ ಬುಡದಲ್ಲಿ ಸೀತೆಯ ಜೊತೆ ಹರಟುತ್ತ ಕದ್ದು ತಿನ್ನುವುದರಲ್ಲಿ ರುಚಿ ಹೆಚ್ಚು. ಅವಳು ಮಡಿಲು ಚಾಚಿದಳು, ಇವಳು ಎಸೆದಳು.

"ಒಳ್ಳೆ ಪುಣ್ಯಾಗ್ತಿತ್ತಿ ನೀನು. ಯಾಪಾಟ ಯಣ್ಣೆ ಹಾಕಿದ್ದೀ. ಹಂಗೇ ಮಡ್ಯಾಗಿಟ್ಕಂಡಿದ್ದೀ ಯಲ್ಲ. ಬಾಳೆಕಾಯೆಲ್ಲ ಯಣ್ಣೆ ಆಗೂದಿಲ್ಲವ ?"

"ಆದ್ರಾತು. ನಾಳೆ ಶೀಗೆ ಪುಡಿ ಹಾಕಿ ಒಗೀತನಿ." ಸೀತೆ ನಿರ್ಲಕ್ಷ್ಯವಾಗಿ ಅಂದಳು.

"ಕರುಗಳು ಯಾಪಾಟ ದೂರ ಹೋಗಿದಾವಲ್ಲೇ ?"

"ಇಲ್ಲೆಲ್ಲ ಯಳೇಹುಲ್ಲು ಮುಗೀತು. ನಾಳೆ ತೂಬಿನ ಕೆರೆ ಹಂಕ್ಲಾಗೆ ತಗಂಡ್ಹೋಗಿ ಕಟ್ತನಿ. ಅಲ್ಲಿ ತುಂಬ ಹುಲ್ಲಿದೆ."

"ಹಂಗಾರೆ ನಾಳೆ ನೀ ಇಲ್ಲೀಗೆ ಬರುಲ್ವ ?"

"ಉಹುಂ. ಹ್ಯಂಗೂ ಬಟ್ಟೆನೂ ಅಲ್ಲೇ ಒಗೀ ಬಕಲ್ಲ. ಅಲ್ಲೇ ಇರ್ತನಿ, ನೀನೂ ಬಾ ಅಲ್ಲೀಗೆ."

"ನಿಮ್ಮನೆ ಹುಚ್ಚ, ಲಕ್ಕಿ, ಮಂಜ ಯಲ್ಲ ಅಲ್ಲೇ ಓಡಾಡ್ತಿರ್ತಾವೆ.

ಬ್ರು ಮಾತಾಡೂದ ಕಂಡ್ರೆ ನಮ್ಮನೇಗೆ, ನಿಮ್ಮನೆಗೆ ಯರಡ್ಕೂಡೀಕ್ರ ಳ್ತಾವೆ."

"ನಿನ್ಪಾಡಿಗೆ ನೀ ಬಟ್ಟೆ ಒಗೀತಿರು. ನಾ ಬರ್ತನಂತೆ. ಆಮ್ಯಾಲೆ ನೋಡಾಣ "

"ಬಿಸ್ಲು ಅಡಿಕೆ ನುರದ ತುದೀಗೆ ಹೋತಲ್ಲೀ ಇನ್ನು ಯರಡು ಮನೆ ಯೋರೂ ಕೂಕ್ಯಾತಾರೆ"

"ಇಕಾ ನಾನೂ ಹೊರಟೆ ಹಾಳಾದ್ದು ಹಂಡಕರ ಕಣ್ಣೆ ಕಿತ್ಕಂಡು ಯತ್ಲಾಗೋ ಹೋಗ್ಯದೆ. ಸೈ ಮಾವಿನ ಮರವೇ ನೀ ಸಾಕ್ಷಿ ಇದ್ದೀ. ಹಪ್ಪ. ಕೊಡೂವಾಗ ನಾನೇನು ಅವಳ ಕೈ ಮುಟ್ಟಿಲ್ಲ ಕೆಂಡದಾಗೆ ಸುಟ್ಟದ್ದು ಅದಕ್ಕೆ ದೋಷಿಲ್ಲ."

ಎಲ್ಲಾ ತೀರ್ಪನ್ನೂ ತಾನೇ ಹೇಳಿಯಾಯಿತು ಸೀತೆ. ಅಚ್ಚಿಯೂ ಮನೆ ಕಡೆ ನಡೆಯುತ್ತಾ :

"ನಾಳೆ ಬೆಳಗ್ಗೆ ತೂಬಿನ ಕೆರೀಗೆ ಬಟ್ಟೆ ಒಗೆಯೂಕೆ ಹೋಗ್ತನೀಂತ ಹೇಳು ಮರವೆ" ಎಂದಂದು ಹೆಜ್ಜೆ ಹಾಕಿದಳು.

ಸೀತೆ ಕರುಗಳನ್ನು ಕೊಟ್ಟಿಗೆಗೆ ಕಟ್ಟಿ, ಹಲಸಿನ ಮೇಣ ಮೆತ್ತಿದ ತೂತು ಕೊಡಪಾನಿಗಳಲ್ಲಿ ಬಚ್ಚಲು ಮನೆಯ ಪಕ್ಕದ ಅಂಗಳದ ನೆಲಬಾವಿಯಿಂದ ನೀರು ಸೇದಿ ದೊಡ್ಡ ಹಂಡೆಗಳಿಗೆ ತುಂಬಿ ದೀಪ ಹಚ್ಚಿಟ್ಟು ದನ ಕರೆಯಲು ಹೋದಳು. ಹಾಲು ಕರೆದು ದೇವರಿಗೆ ನಮಸ್ಕಾರ ಮಾಡಿ ಕಾಡಿಯ ಮುಂದೆ ಹೋಗಿ ಕೂತ ಕೂಡಲೇ ಅವಳಂದಳು :

"ನಾ ಹೇಳ್ಕೊಟ್ಟ ಹಾಡೆಲ್ಲ ಗ್ಯಾಪ ಅದೆಯನೇ ? ಮತ್ತೊಂದಪ ಯಲ್ಲ ಹೇಳಿಸ್ಕಳ್ಳೆ."

ಅಂದಿನಿಂದಲೇ ಮತ್ತೆ ಉರುಟಣೆ ಹಾಡಿನ ಅಭ್ಯಾಸ ಪ್ರಾರಂಭ ವಾಯ್ತು. ಮರುದಿನ ತೂಬಿನ ಕೆರೆಯ ಪಕ್ಕದ ಹಂಕಲಿನಲ್ಲಿ ಸೀತೆ–ಅಚ್ಚಿ ಯರು ಭೇಟಿಯಾದರು. ಕೆರೆದಂಡೆಯ ರಂಜದ ಹೂವಿನ ಮರ ಅವರ ಮಧ್ಯೆ ಸಾಕ್ಷಿಯಾಗಿ ನಿಂತಿತು. ಸೀತೆ ಮರದ ಬುಡ ನೋಡಿದಳು. ಹೇಮಂತ ಋತುವಿನಲ್ಲಿ ಧರೆಗುದುರಿದ ನಕ್ಷತ್ರದಂತೆ ಹಸಿರುಗರಿಕೆಯ ಮೇಲೆಲ್ಲಾ ಹರಡಿರುತ್ತಿದ್ದ ರಂಜದ ಹೂವು ಈಗಿಲ್ಲ. ಶಿಶಿರ ಕಳೆದು ವಸಂತ ಹುಟ್ಟಿಯಾಗಿತ್ತು.

ಚಟಪಟಿಯ ಹೂವು ಕಿತ್ತು ಚಟ್‌ಪಟ್ ಎಂದು ಹಣೆಗೆ ಚಚ್ಚಿ ಸದ್ದು ಮಾಡುತ್ತಾ ಕರುಗಳನ್ನು ಆಡು ಸೋಗೆ ಸೊಪ್ಪಿನ ಉದ್ದವಾದ ಹಗ್ಗಗಳಿಂದ ಕಟ್ಟಿದಳು ಸೀತೆ.

ಮಡಿಕೆ ಹೊತ್ತು ಕೆರೆಯ ನೀರಿಗೆ ಬಂದ ಲಕ್ಕಿ ತನ್ನ ಬಿಳಿಯ ಹಲ್ಲು ಕಿರಿದಳು :

"ಓ ! ಯಂತದು ಸೀತವ್ವಾರು, ಅಚ್ಚವ್ವಾರು ಹತ್ರ ನಿಂತದೀರಿ. ದೊಡ್ಡೋರು ಕಂಡ್ರೆ ಬಯ್ಯಾಕಿಲ್ಲ ?"

ಸೀತೆ ಗದರಿದಳು :

"ಏ ಕುರದೇ ! ಆಚೆ ಮನೆಯೋರು ಬಟ್ಟೆ ಒಗೆಯೂಕೆ ಬಂದದಾರೆ. ನಾ ಕರಾಕಟ್ಟಾಕೆ ಬಂದದನಿ ನಿಂಗೇನಾತೀಗ ? ಸುಮ್ಮಗೆ ಸುಳ್ಳೇನಾರಾ ಹೇಳ್ಬಕಂತೆ ನೋಡ್ತ್ರಿರು ನಿಂಗೆ. ಉಪ್ಪಿನಕಾಯೂ ಇಲ್ಲ, ಅಡಕೇನೂ ಇಲ್ಲ."

ಉಪ್ಪಿನಕಾಯಿ ಹೆಸರು ಕೇಳಿಯೆ ಲಕ್ಕಿಯ ಬಾಯಲ್ಲಿ ಬುಳಬುಳ ನೀರು ಬಂದಿತು. ಅವಳು ಪ್ರಮಾಣ ಮಾಡಿದಳು :

"ಇಲ್ಲ ಅವ್ವಾರೆ, ಪೇವ್ರಾಣೆ ನಾ ಹೇಳಾಕಿಲ್ಲ. ಈಗ ಬರ್ಲಾ ವ ನೇ ತಾಕೆ. ಕೊಟ್ಟೇರಾ ಉಪ್ಪಿನ್ಕಾಯಾ ?"

"ನಾ ಅಜ್ಜೀ ಕೈಲಿ ಇಸ್ಕಾಬಕು ಇನ್ನು. ನೀ ಹ್ಯಾಗೂ ಗುಡ್ಡಕ್ಕೆ ಹೋಗ್ತೀಯಲ್ಲ. ಒಂದಷ್ಟು ಖರ್ಜ ಹಣ್ಣು ತಗಂಬಾ. ಆಗ ಕೊಡ್ತನಿ."

ಉಪ್ಪಿನಕಾಯಿ ಆಸೆ ಹೊತ್ತು, ನೀರಿನ ಗಡಿಗೆಯನ್ನು ಹೊತ್ತು ನಡೆದಳು ಲಕ್ಕಿ

ಬಟ್ಟೆಯ ಸೋಪು ಎಂಬುದು ಶಿವಮೊಗ್ಗೆಯಿಂದ ತೀರ್ಥಹಳ್ಳಿಯವರೆಗೆ ಬಂದಿತ್ತು ನಿಜ. ಈ ಹಳ್ಳಿಗಳವರೆಗೆ ದಯಮಾಡಿಸಿರಲಿಲ್ಲ. ಪಾಚಿ ಕಲ್ಲಿನ ಮೇಲೆ ಪಚಪಚನೆ ಬಟ್ಟೆ ಒಗೆಯುತ್ತಿದ್ದ ಅಚ್ಚಿಯನ್ನು ನೋಡಿ ಪ್ಯಾರಲ ಮರದ ಮೇಲೆ ಕೂತು ಹೀಚು ಕಡಿಯುತ್ತಿದ್ದ ಸೀತೆಯೆಂದಳು :

"ಗಂಡಸರ ಬಟ್ಟೆಗೆ ಸಬಕಾರ ಹಚ್ಚಿ ಒಗದ್ರೆ ಯಾಪಾಟ ಬೆಳ್ಳಗಾಗತ್ತೆ. ತೀರ್ಥಳ್ಳಿ ಊರಾಗೆ ಈಗ ಸಾವಕಾರ್ರ ಮನೇಲೆಲ್ಲ ಹ್ವಳೀಗ್ಬಂದು ಸಬಕಾರ ಹಚ್ಚೇ ಒಗೀತಾರೆ."

ಪಂಚೆ ಜಾಲಾಡುತ್ತ ಅಚ್ಚಿಯೆಂದಳು :

"ಸಬಕಾರಕ್ಕೆ ಸುಣ್ಣ, ಹಂದಿಕೊಬ್ಬು ಯಲ್ಲ ಹಾಕಿರ್ತಾರಂತೆ. ಬಾಂಬ್ರು ಅದ್ನ ಮುಟ್ಬಾರ್ದಂತೇಂತ ಹೇಳು ಪ್ಯಾರಲ ಮರವೇ."

"ಯಂತದಿಲ್ಲ. ಈಂಗೆಲ್ಲ ಬಾಂಬ್ರೂ ಸಬಕಾರ ಹಚ್ತಾರೆ. ಮೈತ್ವಳಿಯೂ ಸಬಕಾರ ಬ್ಯಾರೆ ಅದೆ. ಅದ್ನ ಹಚ್ಚಿ ಮೈ ತ್ವಳದ್ರೆ ಮೈ ಬೆಳ್ಳಗಾಗತ್ತಂತೆ. ಕಿತ್ತಂದೂರೋರ ಮನೆ ನೀಲವೇಣಿ ದಿನಾ ಅದರಾಗೇ ಮೈತ್ವಳೀತಾಳಂತೆ ಅವಳು ಎಷ್ಟು ಬೆಳ್ಳಗದಾಳೆ ಗೊತ್ತನು ?"

"ನೀಯೇನು ಸಬಕಾರ ಹಚ್ತಿಯೇನು ? ಬೆಳ್ಳಗಿದ್ದೀಯಲ್ಲ ?"

"ನಮ್ಮಮ್ಮ ನಂಗಿಂತ ಬೆಳ್ಳಗಿದ್ಲಂತೆ. ಕಾಡತ್ತೆ ಹೇಳಿದ್ರು."

"ನೈಮತ್ತೆ ಸಬಕಾರ ಯಾಕೆ ಹಚ್ಚಕು ?"

"ನಾಯೇನಾರ ಕುರುವಳ್ಳೀಗೆ ಲಗ್ನಾದ್ರೆ ಬಟ್ಟೆ ಸಬ್ಕಾರ ತರಿಸ್ಕಾತನಪ್ಪ."

"ನಿಂಗೇನ್ಬಿಡು, ಸಾಪಕಾರ್ತಿ."

"ಸಾವಕಾರ್ರೂ ಇಲ್ಲ, ಗೀವಕಾರ್ರೂ ಇಲ್ಲ. ಅವರೂ ಶಾನುಬೋಗ್ರು ಅಷ್ಟೆ."

ಹಾಡು, ಹಸೆ, ಹಪ್ಪಳ ಸಂಡಿಗೆಗಳ ಮಾತು ಮುಗಿದು ಅಚ್ಚಿ ಕಲ್ಲು ಬಿಟ್ಟೊಡನೆ ಸೀತೆ ಮನೆಗೆ ಹೋಗಿ ಬಟ್ಟೆ ಕುಕ್ಕೆ ಹೊತ್ತು ಬಂದಳು.

ಮತ್ತೆ ಮೂರು ದಿನದಲ್ಲಿ ಮಹಾಬಲಯ್ಯ ಸೀತೆಯ ಲಗ್ನ ನಿಶ್ಚಯಿಸಿಕೊಂಡು ಬಂದಾಗಿತ್ತು. ಮದುವೆ ಬಹಳ ದೂರವೂ ಇರಲಿಲ್ಲ. ಕೇವಲ ಇಪ್ಪತ್ತೈದು ದಿನಗಳಿತ್ತು. ಮನೆಯಲ್ಲಿ ಗದ್ದಲ ಹತ್ತಿತ್ತು. ನೆಂಟರು ಬಂದರು. ಹಪ್ಪಳ—ಸಂಡಿಗೆಗಳಾದುವು. ಹತ್ತಿಪ್ಪತ್ತು ಜನ ಮುಡಿ ಹೆಂಗಸರು ಮನೆಯಲ್ಲಿ ತುಂಬಿಕೊಂಡರು. ಈಗ ಸೀತೆಗೂ, ಅಚ್ಚಿಗೂ ಭೇಟಿ ಸ್ವಲ್ಪ ಕಡಿಮೆಯಾಯಿತು. ಅಕ್ಷತೆ ಬಟ್ಟಲು ಹಳ್ಳಿ ಹಳ್ಳಿ ಅಲೆಯಿತು. ಚಪ್ಪರ, ತೋರಣಗಳಾದವು. ಏನಾದರೂ ನೆರೆಮನೆಯನ್ನು ಕರೆಯುವಂತಿಲ್ಲ. ಅಚ್ಚಿ ಮನದಲ್ಲೇ ಕೊರಗಿದಳು

ರಾಮಕ್ಕಮ್ಮನ ಬೀಗತನ. ಎಲ್ಲರಿಗೂ ಹೆದರಿಕೆಯೇ. ಶಿವಪ್ಪ

ನಾಯ್ಕನ ಶಿಸ್ತು ರಾಮಕ್ಕನದು. ಗಂಡು ಮಕ್ಕಳು ಸೊಸೆಯಂದಿರನ್ನು ತನ್ನ ಬಲಗೈ ಮುಷ್ಟಿಯಲ್ಲಿಟ್ಟುಕೊಂಡವಳು ಮಾಳೂರಿನಲ್ಲಿ ಶಾನುಭೋಗಿಕೆ ನೋಡಿಕೊಂಡು ಅಲ್ಲಿಯ ಗದ್ದೆ, ತೋಟ ನೋಡಿಕೊಂಡಿದ್ದವರು ಅವರಿಬ್ಬರು. ಈ ಕುರುವಳ್ಳಿಯ ದೊಡ್ಡ ಮನೆಯ ಮಗ ಕೊವಾರಿ, ರಾಮಕ್ಕನ ಸಂಸಾರ. ಹಿರಿಯ ಮಕ್ಕಳು ತಮ್ಮ, ಕಳಸು ತಾಯಿಯನ್ನು ಕಂಡರೆ ನಡುಗುತ್ತಿದ್ದರು ಸೊಸೆಯರು ಸಾತಿ, ಮಾನಿಯರು ಅತ್ತೆಯಿಂದ ಕಡಗೋಲು, ಸೌಟುಗಳಿಂದ ಹೊಡೆತ ತಿಂದು ತಿದ್ದಿಕೊಂಡವರು. ಈಗ ಇಬ್ಬರಿಗೂ ಎರಡು, ಮೂರು ಮಕ್ಕಳಾಗಿದ್ದವು.

ನಾಲ್ಕು ಕಮಾನುಗಾಡಿ ತುಂಬ ಬೀಗರ ದಿಬ್ಬಣ ಬಂದಿಳಿದಾಗ ಅಚ್ಚಿಯ ಅಜ್ಜ ಮುದುಕ ಮೈಲಾರಯ್ಯನವರೂ ಮಹಾಬಲನ ಬಗೆಗೆ ಮರುಗಿದರು.

"ಈ ಪಾಪದವ ಹೋಗಿ ಹೋಗಿ ಈ ಹರಾಮಕ್ಕನ ಕೈಲಿ ಸಿಕ್ಕಿ ಕೊಂಡ್ನಲ್ಲ. ಕಡಿಗೆ ಶಂಕರಭಟ್ರಾದರೂ ತುಸು ಯೋಚಿಸ್ಬಕಾಗಿತ್ತು. ಆ ಹುಡುಗಿಯಾದರೂ ಇನ್ನೂ ಕೂಸು. ಇವ ಏಗೂದು ಕಷ್ಟದೆ"

ಆದರೂ ಸೀತೆಯ ಮದುವೆ ಸಾರೋದ್ಧಾರ ಎಂಟು ದಿನ ನಡೆಯಿತು.

ದೇವರ ಸಮಾರಾಧನೆ, ನಾಂದಿ, ಧಾರೆ, ನಾಗೋಲಿ, ಉರುಟಣೆ—ಉಯ್ಯಾಲೆ, ಓಕಳಿ, ಮನೆ ತುಂಬಿಸಿಕೊಳ್ಳೋದು, ಬೀಗರ ಔತಣ ಇತ್ಯಾದಿ.

ಸೀತೆ ಕಲಿತ ಹಾಡೆಲ್ಲ ಹೇಳಿದಳು. ಬೀಗರ ಹಾಡಿನ ಪೈಪೋಟಿಗಳಾದವು. ರಾಮಕ್ಕನ ಹಿರಿಯ ಸೊಸೆಯರಿಗೆ ಶಾರೀರವೂ ಇಲ್ಲ, ಹಾಡೂ ಬರದು. ನೋಡಲೂ ತೀರಾ ಸುಮಾರಿನ ಹುಟ್ಟು. ಈ ಮೂರನೇ ಸೊಸೆ ರನ್ನದ ಬೊಂಬೆ, ಗಾನ ವಿಶಾರದೆ, ಹಿರಿಯ ಸೊಸೆಯರಿಬ್ಬರಿಗೆ ಸೀತೆ ತಮಗಿಂತ ರೂಪಿನಲ್ಲಿ ಚೆನ್ನಾಗಿದ್ದಾಳೆ ಎಂದೆನಿಸಿತು. ಇನ್ನು ಆಗಿನ ಕಾಲದ ಗಂಡಸರಿಗೆ ಹೆಣ್ಣಿನ ರೂಪು ಲಾವಣ್ಯದ ಒಗ್ಗೆ ಏನೂ ತಿಳಿಯದು. ಅದರಲ್ಲೂ ಹಳ್ಳಿಯ ಜನರಿಗೆ ಮನೆಗೆ ಬರುವ ಹೆಣ್ಣು. ಒಳ್ಳೆ ಮನೆತನದ್ದಾಗಿರಬೇಕು. ಗಟ್ಟಿಮುಟ್ಟಾಗಿರಬೇಕು. ದೊಡ್ಡ ದೊಡ್ಡ ಬಾನಬಸಿಯಲು,

ನೀರು ಸೇದಲು ರಟ್ಟೆಗಟ್ಟಿಯಾಗಿದ್ದರಾಯಿತು. ದೊಡ್ಡ ಮನೆಯ ತುಂಬಾ ಓಡಾಡಿಕೊಂಡು ಹತ್ತಾಳು ಕೆಲಸ ನಿಭಾಯಿಸುವಂತಿರಬೇಕು. ಪೂಜೆ-ಪುನಸ್ಕಾರ, ಮಡಿ-ಮೈಲಿಗೆ ತಿಳಿದಿರಬೇಕು. ಇಷ್ಟೇ ಮುಖ್ಯ.

ಅವರು ಯಾರೂ ಶೃಂಗಾರ ಕಾವ್ಯಗಳನ್ನು ಓದಿದವರಲ್ಲ. ಹೆಣ್ಣಿನ ಚಲುವಿಕೆಯ ಬಗ್ಗೆ ತಲೆ ಕೆಡಿಸಿಕೊಂಡವರೂ ಅಲ್ಲ. ಅಪ್ಪ-ಅಮ್ಮ ತಂದು ಗಂಟು ಹಾಕಿದ್ದನ್ನ ಲಗ್ನವಾಗಿ ಲಕ್ಷಣವಾಗಿ ಎಂಟು-ಹತ್ತು ಮಕ್ಕಳನ್ನ ಹೆತ್ತು ಅಚ್ಚುಕಟ್ಟಾಗಿ ಸಂಸಾರ ಮಾಡುವುದು ಮಾತ್ರ ಮುಖ್ಯ.

ಕನ್ಯೆಯರಿಗಂತೂ ತನ್ನ ಗಂಡನ ಬಗ್ಗೆ ಏನಾದರೂ ಕೇಳಬೇಕೆಂಬ ವಿಷಯವೇ ತಿಳಿಯದು. ಮದುವೆಯಾಗಿ ಮೂರು ನಾಲ್ಕು ವರ್ಷದ ಮೇಲೇನಾದರೂ ಗಂಡನ ಮುಖ ಸರಿಯಾಗಿ ನೋಡುತ್ತಿದ್ದರೋ ಏನೋ.

ಅವನು ಗಂಡ. ಗಂಡ, ಅತ್ತೆ, ಮಾವ ಹೇಳಿದಂತೆ ಕೇಳಿಕೊಂಡಿರಬೇಕು. ಅದಕ್ಕಿಂತ ಹೆಚ್ಚಿನ ಸುಖ ಅವರು ಬಯಸಿದವರೇ ಅಲ್ಲ.

ಈಗ ಸೀತೆಯೂ ಹಿರಿಯರು ಹೇಳಿದಂತೆ ಕೇಳಿದಳು. ಗಂಡನ ಮುಖ ನೋಡಲೇ ಇಲ್ಲ. ಮದುವಣಗಿತ್ತಿ ಕತ್ತು ಬಗ್ಗಿಸಿ ಹಸೆ ಮಣೆಯ ಮೇಲೆ ಕೂತಿರಬೇಕಲ್ಲವೇ ? ಕೂತಿದ್ದಳು. ನಾಚಿಕೊಳ್ಳಬೇಕು. ಆದರೆ ಯಾಕೋ ಸೀತೆಯ ಸ್ವಭಾವಕ್ಕೆ ಅದು ಬರಲಿಲ್ಲ. ನಾಟಕೀಯ ನಾಚಿಕೆ ಅವಳಿಗೆ ಬರಲಿಲ್ಲ. ಗಂಡನ ಹೆಸರು ಹೇಳು-ಅಂದ ಕೂಡಲೇ ಹೇಳಿ ಬಾಗಿಲು ದಾಟಿ ನಡೆದಳು. ಗಂಡನಿಗೆ ಗುಬ್ಬಿ ಹೊಡೆದಳು. ಅವಳಿಗೆ ಅವೆಲ್ಲ ಸಂಪ್ರದಾಯವೆನಿಸಿತೇ ಹೊರತು ಕುಚೋದ್ಯ ಅನಿಸಲಿಲ್ಲ. ಎಲ್ಲರೂ ಹಾಸ್ಯ ಮಾಡಿದರು, ನಕ್ಕರು. ಅವಳಿಗೇನೂ ನಗುಬರಲಿಲ್ಲ. ತನ್ನ ಗಂಡ ಬೆಳ್ಳಗೆ ಎತ್ತರವಾಗಿದ್ದಾನೆ—ಎಂಬುದು ಮಾತ್ರ ತಿಳಿಯಿತು ಸೀತೆಗೆ. ಅತಿ ಶಿಸ್ತಿನ ರಾಮಕ್ಕ ಕೆಲವು ನೆವ ತೆಗೆದು ಬೀಗಿತ್ತಿಯ ಸಂಪ್ರದಾಯದಂತೆ ಜಗಳವಾಡಿದಳು. ಶಂಕರಭಟ್ಟರು ಅದಕ್ಕೆ ಶಾಂತಿ ಮಾಡಿದರು. ಮದುವೆಯಲ್ಲಿ ಹಾಡು ಹೇಳಲೆಂದೇ ಬಂದ ಇಬ್ಬರು ಮುತ್ತೈದೆಯರು ಬೀಗರ ಹಾಡು ಹೇಳಿದರು.

"ಹೋಳಿ ಗೆ ತಾರೇ ಮೋಟೇ ಬಲು ಘಾಟಿ."

ಸೌಭದ್ರೆ, ಕಾಡಿಯರೇನೂ ಸೋಲಲಿಲ್ಲ.

"ಕರಕು ತಲೆಗೆ ತಾಳೆಯ ಹೂ ಮುಡಿದು, ಹರಕು ಸೀರೆಯ ನೆರೆ ಹಿಡಿದುಟ್ಟು, ಅತ್ತೀಗೆ ಬಂದಳು ನೋಡಿ. ಕತ್ತೀಯ ಮರಿಗಳ ಕೂಡಿ.

ಅಕ್ಕಮ್ಮ ಬಂದಳು ನೋಡಿ, ಬೆಕ್ಕೀನ ಮರಿಗಳ ಕೂಡಿ"

ಇತ್ಯಾದಿ ಆಶು ಕವಿತೆಗಳನ್ನು ಅಗಿಂದಾಗಲೇ ರಚಿಸಿ ಹಾಡಿ ಸೇಡು ತೀರಿಸಿಕೊಂಡರು.

ಒಬ್ಬಟ್ಟು, ಹುಳಿಯನ್ನ, ಪಾಯಸದಲ್ಲಿಯೇ ಎಂಟು ದಿನದ ಮದುವೆ ಮುಗಿಯಿತು. ಐದನೇ ದಿನ ಗಂಡನ ತೊಡೆಯ ಮೇಲೆ ಕೂತು ಮೂಗು ಚುಚ್ಚಿಸಿಕೊಂಡಳು ಸೀತೆ. ಕೊಮಾರಿಯಾದರೂ ಹದಿನೆಂಟು ವರ್ಷದ ಹುಡುಗ. ತನ್ನ ಹೆಂಡತಿ ಲಕ್ಷಣವಾಗಿದ್ದಾಳೆ ಅಂದುಕೊಂಡ.

ಸುಬ್ಬನ ಹೆಂಡತಿ ತಿಮ್ಮ ತಾಯಿಯಂತೆ ತೆಳ್ಳಗೆ ಬೆಳ್ಳಗಿದ್ದಳು ಅಷ್ಟೆ ಅವಳಲ್ಲಿ ಚೆಲುವಿಕೆ ಏನೂ ಇರಲಿಲ್ಲ.

ತಾಮ್ರದ ಪಂಚಪಾತ್ರೆ, ಉದ್ಧರಣೆ, ತಟ್ಟೆ, ಸಂಕಲ್ಪೆ ಪಂಚೆ. ಅದೂ ಒಬ್ಬಟ್ಟಂಚಿನ ಒರಟು ಪಂಚೆ, ರುಮಾಲು. ಮುಗಿಯಿತು ವರೋಪಚಾರ. ಕಾಶಿಯಾತ್ರೆಗೆ ಎರಡಾಣೆ ಮೆಟ್ಟು ; ಆರುಕಾಸಿನ ಕೋಲು ; ಆರು ಕಾಸಿನ ವಾಲೆ ಕೊಡೆ. ಆಯಿತು ಸಕಲ ಸೌಭಾಗ್ಯ.

ವಧುವಿಗೆ ಒಂದೆರಡು ಕುತ್ತಾಲದ ಸೀರೆ, ಒಂದು ಬಿಳೀ ಸೀರೆ, ಎರಡು ಕೊರನಾಡು ಸೀರೆ, ಸೊಂಟಕ್ಕೆ ಬೆಳ್ಳಿಪಟ್ಟಿ, ಕಿವಿಗೆ ಚಿನ್ನದ ವಾಲೆ ಬಟ್ಟು, ಕೈಗೆ ಬೆಳ್ಳಿ ಕಡಗ, ತಾಳಿ. ಇವೇ ಸಕಲಾಭರಣ. ಸೀತೆಗೆ ಬಂದದ್ದೂ ಅಷ್ಟೆ.

ಬೀಗರ ಕಡೆಯವರಿಗೆಲ್ಲಾ ಕೊರನಾಡ ಕಣ, ಶಲ್ಯ ಕಣ ಒಂದಾಣೆ. ಶಲ್ಯ ನಾಕಾಣೆ.

ಅಂತೂ ಬೀಗರು ಮದುವೆ ಮುಗಿಸಿಕೊಂಡು ಉಂಡೆ, ಚಕ್ಕುಲಿ ಹೊತ್ತು ಊರಿಗೆ ಹೊರಟರು. ಆಗಲೂ ಕೊಮಾರಿಗೆ ಹೆಂಡತಿಯ ಮುಖ ನೋಡುವ ಸ್ವತಂತ್ರವಿಲ್ಲ. ನೋಡಬೇಕೆಂದು ಅವನಿಗೆ ಅನಿಸಲೂ ಇಲ್ಲ. ಎಲ್ಲರೂ ಗಾಡಿ ಏರಿ ಕೂತಾಗ ಅರಿಸಿನ ಮೈಯಿನ, ಕುತ್ತಾಲದ ಸೀರೆಯ ಸೀತೆ ಸೌಭದ್ರಮ್ಮನ ಹಿಂದೆ ನಿಂತು ಬೀಗರ ದಂಡನ್ನು ನೋಡಿದಳು. ಸೀತೆಗೆ ಆಗ ಅನಿಸಿದ್ದು ಇಷ್ಟೆ.

ಇನ್ನೂ ನಾನು ಮೈನೆರೆದು ಪ್ರಸ್ತಾಗಿ ಗಂಡನ ಮನೆಗೆ ಹೋಗೂದಕ್ಕೆ ಮೂರು ನಾಲ್ಕು ವರ್ಷಾದರೂ ಬೇಕು. ನೋಡ್ಕಳಾಣ ಅಲ್ಲಿತಂಕ.

## ೧೦

ಹತ್ತಿರದ ಮನೆಯ ಮದುವೆಯ ಗದ್ದಲ, ಸಂಭ್ರಮ, ಅಪಸ್ವರದ ವಾಲಗ ಕೇಳಿ ಮನದಲ್ಲೇ ಕೊರಗಿದವಳು ಅಚ್ಚಿ. ಮದುವೆ ಮುಗಿದು ನಾಲ್ಕು ದಿನಗಳವರೆಗೆ ಬಂದ ನೆಂಟರನ್ನು ಬೀಳ್ಕೊಡುವ ಸಂಭ್ರಮವಾಯ್ತು ಮನೆಯಲ್ಲಿ.

"ಹಸೀ ಮೈಯಾಗೆ ಬಿಸ್ಲಾಗೆ ಅಲೆಯಾಕೆ ಹೋಗಬ್ಯಾಡ ಕಣೇ"

ಎಂದು ಸೌಭದ್ರಮ್ಮ ಗದರಿಕೆ ಹಾಕಿದ್ದರಿಂದ ಸೀತೆ ಬಲು ಕಷ್ಟದಿಂದ ನಾಲ್ಕು ದಿನ ಮನೆಯಲ್ಲೇ ಉಳಿದಳು. ಇನ್ನು ಮೈನೆರೆಯದ ಗಂಗೆಯೂ ಜೊತೆಗಿದ್ದದ್ದರಿಂದ, ಅವರೆಲ್ಲ ಹೊರಟ ಮರುದಿನವೇ ಸೀತೆ ತೋಟಕ್ಕೆ ಹೊರಟಳು.

ಬೇಗರಿಗೆ ಇಡಲು ಮಾಡಿದ್ದ ಬಿಸಿ ಲಡ್ಡುಗೆ ವಿಭಾಗದ ಉಂಡೆ, ಚಕ್ಕುಲಿ, ಕಾಯಿ ಹೋಳಿಗೆ ಒಂದು ಹಿಂಗಾರದ ದೋಣಿಯ ತುಂಬಾ ತುಂಬಿ ಕೊಂಡಳು. ಅದೂ ಮೋಟಿಯ ಕಣ್ಣು ತಪ್ಪಿಸಿ ಕದ್ದದ್ದು. ಈಗ ಕರು ಗಳನ್ನ ಕಟ್ಟುವ ನೆವ ಇಲ್ಲದಿದ್ದರೂ ಈಗ ತುರುಬೇ ಹೂವಿನ ಕಾಲವಾದ್ದ- ರಿಂದ ಮೌನ ಗೌರಿ ಪೂಜೆಗೆ ತುರುಬೇಹೂವು ಸಂಗ್ರಹಿಸಿ ಅದನ್ನು ಮರಳಿ ನಲ್ಲಿಟ್ಟು ಒಣಗಿಸಿ, ತೆಗೆದಿಟ್ಟುಕೊಳ್ಳಬೇಕಾದ್ದರಿಂದ ಆ ನೆವ ಹೇಳಿದರಾಯಿ ತೆಂದು ತೋಟಕ್ಕಿಳಿದಳು ಸೀತೆ. ಅಲ್ಲಿ ಅಚ್ಚಿ ಮೂರು ದಿನದಿಂದ ದಿನಾ ಬಂದು ಬಂದು ಅಡಿಕೆ ಮಾವಿನ ಮರ, ತೋಡಲು ನೀರು ನೋಡಿ ಹಿಂದಿರುಗು ತ್ತಿದ್ದಳು.

ಹದಿನೈದು ದಿನಗಳ ನಂತರ ಗೆಳೆಯರ ಭೆಟ್ಟಿಯಾಯ್ತು. ಎಷ್ಟೊಂದು

ಮಾತಾಡಬೇಕು. ಪಗಡೆ ಮನೆಯ ಕುತ್ತಾಟದ ಸೀರೆ, ಕೈ ತುಂಬ ಕರೀಪಟ್ಟೆ ಬಳೆ, ಬೆಳ್ಳಿ ಕಡಗ, ಸೊಂಟದ ಪಟ್ಟಿ, ಮುಡಿಯುಂಗುರ, ಚಿನ್ನದ ಬೆಂಡೋಲೆ, ಮೈ ತುಂಬ ಅರಶಿನ, ಮೂಗಿನಲ್ಲಿ ಕೆಂಪಿನ ಬೊಟ್ಟು. ಈ ಅಲಂಕಾರದಲ್ಲಿ ಅಚ್ಚಿಯ ಕಣ್ಣಿಗೆ ಸೀತೆ ಅಪ್ಸರೆಯಾಗಿಯೇ ಕಂಡಳು. ಹೊಸ ಮದುವಣ ಗಿತ್ತಿಯ ಖಳೆ. ಕಾಲುಂಗರ, ಕರೀಮಣಿಸರ ಸೌಮಂಗಲ್ಯದ ಶೋಭೆ ತಂದಿತ್ತು. ಅಚ್ಚಿ ಆನಂದದಿಂದ ಸ್ವಲ್ಪ ಗಟ್ಟಿಯಾಗಿಯೇ ಮಾತಾಡಿದಳು:

"ಮಾವಿನ ಮರವೇ, ಹೊಸ ಮದುವಣಗಿತ್ತಿ ಇಪ್ರೀತ ಚಂದಾಗಿ ಕಾಣ ಸ್ತಾಳೆ. ಮನಿಗ್ಹೋದ್ಮೇಲೆ ಅಜ್ಜಿ ಕೈಲಿ ದೃಷ್ಟಿ ತೆಗೆಸ್ಕಾಬಕಂತೇಂತ ಹೇಳು."

ಮುಂದೆ ಮಾವಿನ ಮರ ಹಿಂದುಳಿಯಿತು. ನೇರ ಸಂಭಾಷಣೆ ಪ್ರಾರಂಭ ವಾಯಿತು. ಮದುವೆ ಸುದ್ದಿ. ಬೀಗರ ಸುದ್ದಿ. ಅಡಿಗೆ-ಊಟ ಎಲ್ಲಾ ಸುದ್ದಿ ಮುಗಿಯಿತು. ತಿಂಡಿಯನ್ನು ಅವಳ ಮಡಿಲಿಗೆ ಎಸೆದಾಯಿತು

"ಈಪಾಟ ತಿಂಡಿ ಇವತ್ತೇ ಹ್ಯಾಂಗೆ ತಿನ್ನುದೇ ? ಒಂದ್ರಾಶಿ ಅದೆ. ಮನಿಗೆ ತಗಂಡು ಹೋಗೂ ಹಂಗಿಲ್ಲ."

"ಹಂಗಾರೆ ಯರಡು ಉಂಡೆ, ಚಕ್ಲಿ ಇತ್ಕಾಗ್ಗಾಕು. ನಾಳೆ ತಂದ್ಕೊಡ್ತ ನಂತ" ಮತ್ತೆ ಸೀತೆಯ ಮಡಿಲಿಗೆ ಬಂತು ತಿಂಡಿ.

"ನಳಚರಿತ್ರೆ ಮರ್ತ್ಹೋತು ಮತ್ತೆ ಮದ್ಲಿಂದ ಹೇಳಸ್ಕಾಬಕು."

"ಸೈ. ನಿನ್ನ ಲಗ್ನದಾಗೆ ಗಂಡನ ಮುಂದೆ ನಳಚರಿತ್ರೆ ಹಾಡು ಹೇಳ್ತೀಯಾ ? ಮದ್ಲು ಉರಟ್ಣೆ ಹಾಡು ಕಲ್ತಕಾ. ಲಗ್ನಾದಮ್ಯಾಲೆ ನಳ ಚರಿತ್ರೆ, ರಾಸಕ್ರೀಡೆ, ಮೂರುವರೆ ವಜ್ರದ ಹಾಡು ಕಲ್ತ್ರಾತು."

"ನಾಯಂತ ಕಲೀತನಿ, ಮಂಗಳಗೌರಿ ಹಾಡು, ಭೀಮನ ಅಮಾಸೆ ಹಾಡು ಯಲ್ಲ ಕಲೀಬಕಲ್ಲ."

"ನಿಧಾನ ಕಲ್ತರೆ ಸೈ"

ಈಗ ಬಹಳ ಹೊತ್ತು ತೋಟ ತಿರುಗಿದರೆ ಮನೆಯಲ್ಲಿ ಬಯ್ಯುತ್ತಾರೆಂದು ಸೀತೆ ಬೇಗ ಮನೆಗೆ ಬಂದಳು. ಮೊದಲಿನಂತೆ ಈಗ ಅವಳು ಮರ ಹತ್ತುವುದು, ಈಜುವುದು ಇಂಥ ಚೇಷ್ಟೆ ಮಾಡುವಂತಿರಲಿಲ್ಲ. ಮನಸ್ಸು ಕಿಶೋರತನದ್ದಾದರೂ ಈಗ ಕೊರಳಿಗೆ ಮಾಂಗಲ್ಯ ಬಿದ್ದು ಅವಳು ಮದುವೆ

ಯಾದ ಹುಡುಗಿ ಎನಿಸಿಕೊಂಡಿದ್ದರಿಂದ ದಿನಾ ಬೆಳಗ್ಗೆ ಮುಂಚೆ ಮೈತೊಳೆ ಗೌರಿ ಪೂಜೆ, ತುಳಸೀ ಪೂಜೆ, ಮಡಿ–ಹುಡಿಗಳನ್ನು ಅಭ್ಯಾಸ ಮಾಡಿಕೊಳ್ಳ ಬೇಕಾಗಿತ್ತು. ಇನ್ನು ಶ್ರಾವಣ ಮಾಸ ಬಂದರೆ ಇಡೀ ತಿಂಗಳು ವ್ರತ–ನಿಯಮಗಳು ಇವೆ ಅವಳಿಗೆ. ಮೊದಲ ವರ್ಷವಾದ್ದರಿಂದ ಎಲ್ಲಾ ಸಾಂಗ ವಾಗಿ ಮಾಡಬೇಕು. ಐದು ವರ್ಷ ಎಲ್ಲಾ ವ್ರತ ಮಾಡಬೇಕು. ಹತ್ತಿ–ಬತ್ತಿ ಮಾಡಬೇಕು. ಏನೋ ಗರತಿತನ ಅವಳಲ್ಲಿ ಸೇರಿಕೊಂಡಿತು. ಹಾಗೆಯೇ ಸದಾ ಗರಿಬಿಚ್ಚಿ ಹಾರಾಡುತ್ತಿದ್ದ ಅವಳ ಬಾಲ್ಯದ ಚೇತನ ಪಕ್ಷಿಯ ರೆಕ್ಕೆ ಕತ್ತರಿಸಿದಂತಾಯಿತು. ಆದರೆ ವಿಧಿಯಿಲ್ಲ. ಆಗ ಪ್ರತಿ ಹೆಣ್ಣಿನ ಜೀವನದಲ್ಲಿ ಬಂದೇಬೇಕಾದ ಘಟ್ಟಗಳಿವು ಅಂತೂ ಸೀತೆ ಬದುಕಿನ ಎರಡನೇ ಮಜಲಿಗೆ ಕಾಲಿರಿಸಿದಳು

ಮತ್ತೆ ಎಂಟು ದಿನದಲ್ಲಿ ಕಾಡಿ ಗಂಡು ಮಗು ಹಡೆದಳು. ಶ್ರಾವಣ ಮಾಸವೂ ಬಂತು. ಜಡಿ ಮಳೆಯೂ ಹಿಡಿಯಿತು. ಈ ಅನೇಕ ಕಾರಣ ಗಳಿಂದ ಸೀತೆ–ಅಚ್ಚಿಯರ ಭೆಟ್ಟಿ ಆಗಲಿಲ್ಲ.

ಈಗ ಸೀತೆ ಮತ್ತು ಮೋಟಮ್ಮ ಇಬ್ಬರಿಗೂ ಸಂತೋಷವಾಗುವಂಥ ಸುದ್ದಿಯೊಂದು ಬಂತು. ಸೌಭದ್ರಮ್ಮನ ಮಗಳು ಗಂಗೆ ಮತ್ತಿಬ್ಬರು ಹುಡುಗಿ ಯರು ವ್ರತಗಳನ್ನು ಮಾಡಬೇಕಾಗಿದ್ದರಿಂದ ಸೀತೆಯನ್ನು ಅಲ್ಲಿಗೆ ಕಳಿಸಿ ಕೊಡಬೇಕೆಂದು ಸೌಭದ್ರಮ್ಮ ಹೇಳಿ ಕಳಿಸಿದ್ದಳು. ಇದು ಎಲ್ಲರಿಗೂ ಸಮಾ ಧಾನದ ಸಂಗತಿ. ಇಲ್ಲಿ ಕಾಡಿ ಬಾಣಂತಿ ; ಮಳೆಗಾಲ ; ವಾರವಾರ ಪುರೋ ಹಿತರು ಬರಬೇಕು. ದಾರಿಯಲ್ಲಿ ನಾಲ್ಕಾರು ಹಳ್ಳಗಳು ಕಟ್ಟಿ ಕೊಳ್ಳುತ್ತಿತ್ತು. ಮೋಟಮ್ಮನಿಗೆ ಬಾಣಂತಿ ಕೆಲಸ, ಮನೆಗೆಲಸ, ಪೂಜೆ–ಪುನಸ್ಕಾರಗಳು ಎಲ್ಲಾ ನಿರ್ವಹಿಸುವುದು ಕಷ್ಟವೂ ಇತ್ತು. ಖರ್ಚೂ ಇತ್ತು. ಸೀತೆಗಂತೂ ಪುತ್ತರಡು ಕಾಲು ಮೂಡಿತು. ಇಲ್ಲಿ ಈ ಚಿಕ್ಕಮ್ಮನ ಲೊಟಕಣೆಗಿಂತ ಅಲ್ಲಿ ಜೊತೆಯ ಹುಡುಗಿಯರೊಂದಿಗೆ ವ್ರತ ಮಾಡುವುದು ಎಷ್ಟು ಚಂದ ಅನಿಸಿತು. ಅಂತೂ ಒಂದು ದಿನ ಮಹಾಬಲಯ್ಯನೇ ಕಮಾನುಗಾಡಿಯಲ್ಲಿ ಕೂರಿಸಿ ಕೊಂಡು ಸೀತೆಯನ್ನು ಕೋಣಂದೂರಿಗೆ ಕರೆತಂದ

ಜಡಿಮಳೆ ಗುಂಡಿ–ಗೊಟರು, ಕೆಸರು, ಗಾಡಿಯ ಕುಲುಕಾಟ, ಕತ್ತಲು ಗುಡಿಸಿದ ಮೋಡ, ಮಿಂಚು, ಗುಡುಗು, ಸಿಡಿಲು. ಗಳಿಗೆಗೊಂದು ಬಾರಿ

ಗಾಡಿಯ ಚಕ್ರ ಕೆಸರಿನಲ್ಲಿ ಹೂತುಕೊಂಡು ಎತ್ತುಗಳು ಒದ್ದಾಡುತ್ತಿದ್ದವು. ಆಗ ಮಹಾಬಲಯ್ಯ ಕೆಳಗಿಳಿದು ಗಾಡಿಯ ಚಕ್ರವನ್ನ ಹಿಡಿದೆತ್ತುವಾಗ ಸೀತೆ ಎತ್ತುಗಳ ಮೂಗುದಾರ ಚಾವಟಿ ಹಿಡಿದು ಸಾರಥಿಯಾಗಿ 'ಹೇಯ್ ಹೇಯ್' ಅನ್ನುವಳು. ಮಳೆಯ ಇರಿಚಲಿನಿಂದ ಮೈಪೂರಾ ಒದ್ದೆಯಾಗಿತ್ತು. ಮಲೆನಾಡಿನ ಹಳ್ಳಿಯ ಜನರಿಗೆ ಇವೆಲ್ಲ ತೀರಾ ಸಣ್ಣ ವಿಷಯ. ಸೀತೆಗಾದರೂ ಇದು ಅನುಭವಜನ್ಯ. ಅವಳಿಗೇನೂ ಬೇಸರವಿರಲಿಲ್ಲ ಸೋದರತ್ತೆಯ ಮನೆ, ಗಂಗೆ ಮತ್ತು ಓರಗೆಯ ಗೆಳತಿಯರು, ಅಲ್ಲಿಯ ಪರಿಸರ ಪ್ರೀತಿಯಿಂದ ಕಾಣುವ ಅತ್ತೆ-ಮಾವ ; ಅಲ್ಲಿಯ ಸಂಭ್ರಮದ ಸುಖದ ಕಲ್ಪನೆಯಲ್ಲಿ ಸೀತೆಗೆ ಈ ತಾತ್ಕಾಲಿಕ ತೊಂದರೆ ಗಣನೆಗೆ ಬರಲಿಲ್ಲ. ಅಂತೂ ತೀರಾ ಕತ್ತಲಾದ ಮೇಲೆಯೇ ಅವರು ಕೋಣಂದೂರು ತಲುಪಿದ್ದು. ಮರುದಿನವೇ ಮಹಾಬಲಯ್ಯ ಹಿಂದಿರುಗಿ ಬಂದೂ ಆಯ್ತು.

ಮುಂದಿನ ಎರಡು ತಿಂಗಳು ಸೀತೆಗೆ ದಿನವೂ ಹಬ್ಬವೇ ಹಾಡು-ಹಸೆ, ಹೂವು-ಪತ್ರೆ. ಪೂಜೆ-ಪುನಸ್ಕಾರಗಳ ಸರಮಾಲೆ. ದಿನದಿನವೂ ಭಕ್ಷ್ಯ-ಭೋಜ್ಯ. ಮನೆಯಲ್ಲೇ ಪುರೋಹಿತರಿದ್ದುದರಿಂದ ಎಲ್ಲವೂ ಸುಗಮವಾಯಿತು. ಮೊದಲ ವರ್ಷದ ಗೌರಿ ಪೂಜೆಯಾದುದರಿಂದ ಹದಿನಾರು ಮೊರದಬಾಗಿನ ಕೊಡಿಸಿದಳು ಸೌಭದ್ರಮ್ಮ. ಆರುಕಾಸಿಗೆ ಒಂದು ರವಿಕೆ ಕಣದ ಕಾಲ. ಹದಿನಾರು ರವಿಕೆ ಕಣಕ್ಕೆ ಎಂಟಾಣೆ. ಅಂತೂ ಎಲ್ಲ ಹಬ್ಬಗಳೂ ಸಂತೋಷವಾಗಿ ಸಾಂಗವಾಗಿ ನಡೆಯಿತು. ನವರಾತ್ರಿಗೆ ಮತ್ತೆ ತೌರಿಗೆ ಬಂದಳು. ಮೊದಲ ದೀಪಾವಳಿಗೆ ಅಳಿಯನಿಗೆ ಕರೆಹೋಯಿತು. ಕೊಮಾರಿ ಇನ್ನೊಬ್ಬ ಗೆಳೆಯನೊಂದಿಗೆ ಬಂದ ಆ ವೇಳೆಗೆ ಕಾಡಿ ಗಂಡನ ಮನೆಗೆ ಹೋಗಿದ್ದರಿಂದ ಮೋಟಮ್ಮ ಸಂಭ್ರಮದಿಂದ ದೀಪಾವಳಿ ನಡೆಸಿದಳು. ಈಗ ಕೊಮಾರಿ ಕಸೆಯಿಂದ ತುಂಬುತೋಳಿನ ಶರಟು ತೊಡುವ ಯುವಕನಾಗಿದ್ದ. ಕಾಲರಿಲ್ಲದ ಶರಟಿಗೆ ಬಿಳೀ ಹರಳಿನ ಗುಂಡಿ ಹಾಕಿಕೊಂಡಿದ್ದ. ಅವು ಕತ್ತಲೆಯಲ್ಲೂ ಥಳಥಳ ಹೊಳೆಯುತ್ತಿದ್ದವು. ಮೊಳದುದ್ದ ಜುಟ್ಟನ್ನು ಹಿಂಬದಿಯಲ್ಲಿ ಪಪ್ಪಗಂಟು ಹಾಕಿದ್ದ. ಕಿವಿಯಲ್ಲಿ ತ್ರಿಕೋನ ಕೆಂಪು ಹರಳಿನ ಒಂಟಿ. ಹೊಸಪ್ರಾಯದ ಕೊಮಾರಿ ಲಕ್ಷಣವಾಗಿದ್ದ.

ಮಹಾಬಲಯ್ಯನ ಪಾಲಿಗೆ ಅಳಿಯ ತೀರ್ಥಹಳ್ಳಿಯ ಷಹರಿನ ನಾಗರಿಕ

ಯುವಕ. ನಾಲ್ಕು ದಿನದ ದೀಪಾವಳಿಗೆ ಅಳಿಯನಿಗೆ ದೊರೆತದ್ದು ಅಭ್ಯಂಜನ, ಊಟ ಒಂದು ಶಲ್ಯ ಈಗಲೂ ಸೀತೆ ಗಂಡನೊಂದಿಗೆ ಹಸೆಮಣೆಯ ಮೇಲೆ ಕೂತು ಆರತಿ ಎತ್ತಿಸಿಕೊಂಡಳು. ಆದರೂ ಗಂಡನ ಮುಖ ನೋಡಲಿಲ್ಲ. ಕೊಮಾರಿಗೇನೋ ಹೆಂಡತಿಯ ಮುಖ ನೋಡುವ ಆಸೆ. ಹಿರಿಯರ ಹೆದರಿಕೆ ಜೊತೆಗೆ ಮದುವೆಯಾದ ಗೆಳೆಯ ಶೇಷನಿದ್ದಾನೆ. ಎಲ್ಲಕ್ಕಿಂತ ಹೆಚ್ಚಾಗಿ ತಾಯಿಯ ಹೆದರಿಕೆ.

ಅಳಿಯ ಮಾವನ ಮನೆಗೆ ನಡೆದೇ ಬಂದಿದ್ದ. ನಡೆದೇ ಹೊರಟ. ಈ ಬಾರಿ ಅಚ್ಚಿ ಬೇಲಿಯ ಬದಿಯಲ್ಲಿ ನಿಂತು ಎರಡು ಮೂರು ಬಾರಿ ಕೊಮಾರಿಯನ್ನು ನೋಡಿದ್ದಳು.

ಅವನು ಹೊರಟುಹೋದ ಮರುದಿನ ಅಚ್ಚಿ ಸೀತೆಯರು ಕೆರೆಯಾಚೆಯ ಗುಡ್ಡದ ಮೇಲೆ ಭೆಟ್ಟಿಯಾದರು.

"ನಾಗಸಂಪ್ಗೆ ಮರವೇ, ಆಚೆಮನೆಯೋರ ಮಗಳ ಗಂಡ ಚಂದಾಗ ದಾನಂತೇಂತ ಹೇಳು. ಮನ್ನೆ ದೀವಳಿಗೇಲೆ ಬಂದಾಗ ಗ್ಯಾಡೆ ಬದೀಲಿ ನಿಂತ್ಕಂಡು ನೋಡ್ದೆ ಅವರನ್ನ"

"ನಾನಂತೂ ಸಮನಾಗಿ ನೋಡಿಲ್ಲಾನ್ನು ಮರವೇ. ಅದೂ ಅಲ್ದೆ ಗಂಡನ ಮನೀಗೆ ಹೋಗೂತಂಕ ಹೆಂಡ್ತಿ ಗಂಡನ ಮಕ ನೋಡ್ಬಾರ್ದಂತೆ. ನೀನೂ ಬ್ಯಾರೆ ಗಂಡಸ್ರನ್ನ ನೋಡ್ಬಾರ್ದಂತೇನ್ನು. ಅವರ ಮಕಾದಾಗೆ ಯಂತದು ಕೂತಿರುತ್ತೆ ? ಯಲ್ಲಾರ ಹಾಂಗೆ ಕಣ್ಣು, ಮೂಗು, ಬಾಯಿ ಇರತ್ತೆ ಸೈ."

ಸಂಪಿಗೆ ಮರ ಹಿಂದುಳಿಯಿತು. ಅಚ್ಚಿಯ ಕೈಯಿನ ಗೇರು ಹಣ್ಣು ಸೀತೆಯ ಕೈಗೆ ಹಾರಿತು. ಇಬ್ಬರೂ ತಿಂದರು. ದೀಪಾವಳಿಯ ಹಬ್ಬದ ವಿಷಯವಾಯ್ತು ಸೀತೆಯ ಬೆಳ್ಳಗಿನ ದುಂಡುತೋಳಿನ ಮೇಲೆ ಒಪ್ಪವಾಗಿ ಕುಳಿತ ರವಿಕೆ ಅಚ್ಚಿಯ ಕಣ್ಸೆಳೆಯಿತು.

"ಯಾರೆ ಈ ಕುಬುಸ ಹೊಲ್ಕಟ್ಟದ್ದು ?! ಯಾಪಾಟಿ ಚಂದಾಗದೆ"

"ಕ್ವಾಣಂದೂರು ಅತ್ತೆ ಮೆಟ್ಕತ್ತೀಲಿ ಕತ್ತರಿಸಿಕೊಟ್ರು. ನಾನೇ ಚಕ್ ದಾರದಾಗೆ ಹೊಲಕಂಡೆ ಸೌಭದ್ರತ್ತೆ ಒಂಬತ್ತುಂಡಿನ ಕುಬುಸಾನ

ಚಂದಾಗಿ ಕತ್ತರಿಸ್ತಾರೆ. ಕ್ವಾಣಂದೂರಾಗೆ ಯಲ್ಲ ಹೆಂಗಸ್ರೂ ಕುಬ್ಸಾನ ಅವರ ಹತ್ರನೇ ಕತ್ತರಿಸ್ಕಳ್ಳೂದು."

ಅಚ್ಚಿ ಮುಖ ಜೋಲುಬಿಟ್ಟಳು.

"ನಮ್ಮನೇಲಿ ಚೀಟಿಬಟ್ಟೆ ಕುಬ್ಸಾ ತೊಟ್ರೆ ಅಜ್ಜ ಬಯ್ಯತ್ತೆ. ಸೀತೆ ಉಡೂ ಹುಡುಗೀರು ಕಣಾನೇ ತೊಡಬಕಂತೆ."

"ಗೊರಟು ! ಯಂತದಿಲ್ಲ. ಈಗ ಕ್ವಾಣಂದೂರಾಗೆ ಯಲ್ಲ ಹೆಂಗಸ್ರೂ ಚೀಟಿಬಟ್ಟೆ ಕುಬುಸ ತೊಡ್ತಾರೆ."

"ಮತ್ತೊಂದು ಸುದ್ದಿ ನಿಂಗೆ ಹೇಳೂದೇ ಮರ್ತಿದ್ದೆ. ಮೇಗರವಳ್ಳೀಲಿ ನಂಗೊಂದು ಗಂಡು ನೋಡಿದಾರಂತೆ. ಹುಡಗ್ಗೆ ಬಲಗಾಲು ಕುಂಟಂತೆ. ನನ್ನಾಗೆ ಕರ್‍ರಗೆ, ಸಣ್ಣಕ್ಕದಾನಂತೆ"

"ಯಂತದೇ ಇದೂ ?! ಕುಂಟನ್ನ ಲಗ್ನಾಗ್ತೀಯಾ ನೀನು ?"

"ಬ್ಯಾಡಾಂದ್ರೆ ಕೇಳೋರ್‍ಯಾರು ? ನಂಗೆ ಸಮಾ ಗೊತ್ತಿಲ್ಲ. ಮನೇಲಿ ಮಾತಾಡ್ತಿದ್ರು."

ಸೀತೆ ಅಚ್ಚಿಯ ಮುಖ ನೋಡಿದಳು. ಕರ್‍ರಗಿನ ಕುದುರೆ ಮುಖದ ಈ ಅಚ್ಚಿಗೆ ವರ ಸಿಗುವುದೂ ಕಷ್ಟ ಅನಿಸಿತು ಅವಳಿಗೂ. ಆದರೆ ಅಷ್ಟೆಲ್ಲ ಜಿಜ್ಞಾಸೆ ಮಾಡುವಷ್ಟು ಲೋಕಜ್ಞಾನ ಇಬ್ಬರಿಗೂ ಇರಲಿಲ್ಲ.

"ಹಂಗಾರೆ ಯಾವಾಗ್ಲೆ ಲಗ್ನಾ ?"

"ಗೊತ್ತಿಲ್ಲಪ್ಪ. ಈಗೀಗ ತುಸು ಹೊಳವಾಗ್ತದೆ. ಇನ್ಮೇಲೆ ಹಪ್ಪ-ಸಂಡ್ಗೆ ಮಾಡ್ತಾರು."

"ಮಾಘ, ಪಾಲ್ಗುಣದಾಗೆ ಮದುವೆ ಲಗ್ನ ಆದೆಯಲ್ಲ. ಆಗ್ಲೇ ಮಾಡ್ತ್ಯಾರು."

"ಇದ್ದೀತು" ಎಂದಳು ಅಚ್ಚಿ.

ಹೆಣ್ಣಿನ ಬದುಕಿನಲ್ಲಿ ಮದುವೆಯೆಂಬ ಕರ್ಮಕಾಂಡ ಒಂದು ನಡೆಯಲೇ ಬೇಕು ಎಂಬುದಷ್ಟು ಮಾತ್ರ ಅವರಿಗೆ ಗೊತ್ತಿತ್ತು.

ಆ ಹಳ್ಳಿಯ ಗುಗ್ಗು ಅಜ್ಜಿಗೂ ಸೀತೆಯ ಚೆಲುವಿಕೆ ಕಂಡು ಕೌತುಕ ಪಡುವಂತಾಯಿತು. ನಳಚರಿತ್ರೆಯ ದಮಯಂತಿಯ ಸೌಂದರ್ಯ ವರ್ಣನೆ

ಯನ್ನು ಅವರು ಹಾಡಿನಲ್ಲಿ ಕಲಿತಿದ್ದಳು. 'ಸುಮಾರು ದಮಯಂತಿ ಈ ಸೀತೆ ಹಾಗೇ ಇದ್ದಳನೋ ?' ಅಂದುಕೊಂಡಳು ಮನದಲ್ಲೇ.

ಮುಂದೆ ಸೀತೆಯ ಊಹೆಯಂತೆ ಮಾಘ ಮಾಸದಲ್ಲಿ ಅಚ್ಚಿಯ ಮದುವೆಯಾಯಿತು. ಅಚ್ಚಿಯ ಅಪಸ್ವರದ ಉರುಟಣೆ ಹಾಡೂ ಆಯಿತು. ಅಂತೂ ಎಂಟು ದಿನ ಮದುವೆ ನಡೆಯಿತು. ಸೀತೆ ಧೈರ್ಯವಾಗಿಯೇ ಮುಂಚೆ ಕಡೆ ಜಗುಲಿಗೆ ಬಂದು ನಿಂತು ಚಪ್ಪರದಲ್ಲಿ ನಡೆಯುತ್ತಿದ್ದ ಕಾಶಿಯಾತ್ರೆ ನೋಡಿದಳು. ಕೋಲಿಯ ಕಾಲಿನಂತಿದ್ದ ಕರ್ರಗಿನ ಸೊಣಕಲು ಎಡಗಾಲನ್ನು ಎಳೆದೆಳೆದು ಹಾಕುತ್ತ ಕಾಶಿಯಾತ್ರೆ ಹೊರಟ ಚನ್ನಭಟ್ಟ. ಮಾವ ಕೊಟ್ಟ ಕೋಲು ಅವನಿಗೆ ನಿಜವಾಗಿ ಉಪಯೋಗವಾಗಿತ್ತು.

ಒಳಗೆ ಮೋಟಮ್ಮ ಗಂಡನ ಕೈಲಿ ಹೇಳುತ್ತಿದ್ದಳು :

"ಸ್ಕೈ, ಆ ಹಂದಿಮೂತಿ ಹುಡುಗೀಗೆ ಇನ್ನೆಂಥ ಗಂಡು ಸಿಕ್ಕೀತು. ಕಂತೆಗೆ ತಕ್ಕ ಬೊಂತೆ. ಸಮನಾತಲ್ಲ."

ಆ ಗಳಿಗೆಗೆ ಮೋಟಿಗೆ ತನ್ನ ಮಕ್ಕಳು ಬಾನಿ, ಶೀಲಕ್ಕಿಯರ ವಿಷಯ ಮರೆತುಹೋಗಿತ್ತು. ಮಹಾಬಲಯ್ಯನಿಗೆ ನೆನಪು ಬಂದರೂ ಹೆಂಡತಿಯ ಎದುರು ಹೇಳಲು ಧೈರ್ಯ ಬರಲಿಲ್ಲ. ಬದಲಾಗಿ ಮಾತಾಡಿದ :

"ಸ್ಕೈ, ಹುಟ್ಸ್ ನಾವು ಮಾಡ್ಕಳೂದಾ ? ಅಂತೂ ಹುಡುಗೀಗೆ ಲಗ್ನಾತಲ್ಲ. ಅವರವರ ಹಣೇಲಿ ಬರೆದ ಹಾಂಗೆ ಆಗುತ್ತೆ."

ಸೀತೆ ಶೀಲಕ್ಕಿಯ ತಲೆಯನ್ನು ಬಾಚುತ್ತಿದ್ದಾಗ ಮೋಟಿಗೆ ಜ್ಞಾನೋದಯವಾಯಿತು. ತನ್ನ ಮಕ್ಕಳೇನು ರಂಭೆ–ಊರ್ವಶಿಯರೇ ? ಅಚ್ಚಿಯ ಹಾಗೇ ಇವರ ಹುಟ್ಟೂ. ಚಟ್ಟೆಕಂಡೆ, ಡೊಳ್ಳು ಹೊಟ್ಟೆ. ಮೋಟು ಜಡೆ, ಕರ್ರಗೆ ಕುಳ್ಳಗಿದ್ದ ಹುಡುಗಿಯರು.

ಸಾಮಾನ್ಯವಾಗಿ ಹಳ್ಳಿಯ ಹುಡುಗರಿಗೆಲ್ಲಾ ಇರುತ್ತಿದ್ದ ಆಭರಣಗಳು ತಲೆ ತುಂಬ ಹೇನು, ಕಜ್ಜಿ, ಸದಾ ಜೋಡಿ ಧಾರೆಯಾಗಿ ಇಳಿಯುವ ನಾಸಿಕ ಜಲಪಾತ !

ಈ ಸಂಪ್ರದಾಯಕ್ಕೆ ಮೋಟಿಯ ಮಕ್ಕಳೂ ಹೊರತಾಗಿರಲಿಲ್ಲ. ಪ್ರಾಯಕ್ಕೆ ಬರುತ್ತಿದ್ದ ಸೀತೆಯ ಮುಂದೆ ಕೂತ ತನ್ನ ಮಗಳು ಶೀಲಕ್ಕಿಯನ್ನ ನೋಡಿದಾಗ ಮೋಟಿಗೆ ಹೊಟ್ಟೆ ಉರಿಯಿತು. ಸವತಿಯ ಮಗಳು ಸೀತೆಯ

ಕುತ್ತಿಗೆ ಹಿಸುಕಲೇ ಎಂಬಷ್ಟು ಮತ್ಸರ ಕುದಿಯಿತು. ಆದರೆ ತಂಗಿಗೆ ತಲೆ ಬಾಚುತ್ತಿದ್ದ ಸೀತೆಗೆ ಇದೊಂದೂ ತಿಳಿಯದು. ಅವಳು ಮರದ ಹಣಿಗೆಯಲ್ಲಿ ಶೀಲಕ್ಕಿಯ ಮೋಟು ಕೂದಲನ್ನು ಕೀಳುತ್ತ :

"ಸಮನಾಗಿ ಕೂತ್ಕಳ್ಳೆ, ತಲೆ ತುಂಬ ಒಂದ್ರಾಶಿ ಹೇನದೆ. ನಿನ್ನ ಮಗ್ಲಾಗೆ ಮಲಗೀ ಮಲಗೀ ನಿನ್ತಲೆ ಹೇನೆಲ್ಲ ನನ್ತಲೀಗೆ ಬಂದದೆ."

ಎನ್ನುತ್ತ ಕೆಳಗೆ ಉದುರಿದ ಹೇನನ್ನು ಕುಕ್ಕಿದಳು. ಮೋಟಿಗೆ ಮಾತಾಡಲು ಅವಕಾಶ ಸಿಕ್ಕಿತು.

"ಸಾಕು ಸುಮ್ಮಗೆ ಕೂತ್ಕಳ್ಳೆ. ನಾ ಲಗ್ನಾಗಿ ಬಂದಾಗ ನಿಂಗೂ ಹಿಂಗೇ ಮೈಯಲ್ಲ ಕಜ್ಜಿ, ತಲೇಲಿ ಇರುವೆ ಗೂಡಿನ ಹಾಗೆ ಹೇನು. ನಿನ್ನ ಕೆಪ್ಪಜ್ಜಿ ಆರೈಕೆ ಬಲ್ಚಂದಾಗಿ ಮಾಡ್ತಿತ್ತು. ನಿನ್ತಲೇಲಿ ಹೇನು ತಪ್ಪಿದ್ದೆಂದು ?"

ಮೋಟಿಯ ಮಾತು ಸುಳ್ಳೇನಲ್ಲ. ಈಗಲೂ ಸೀತೆಗೆ ಕಜ್ಜಿ ಇರಲಿಲ್ಲವಾದರೂ ತಲೆಯಲ್ಲಿ ಹೇನಿತ್ತು. ಆದರೂ ಸೀತೆ ಸೋಲಲಿಲ್ಲ.

"ನಾನು ಯಳೇಮಗೀನಾಗೇ ನಮ್ಮಮ್ಮ ಸತ್ಹೋದ್ಲು. ತಲೆ ಬಾಚೋರು ಯಾರಿದ್ರು ? ಅದಕ್ಕೆ ಹೇನಿತ್ತು. ಈಗ ನೀವಿದ್ದೀರಲ್ಲ ? ವಾರ ವಾರ ಯರೆಯಲ್ವ ? ತಲೆ ಬಾಚುಲ್ವ ? ಯಾಕೆ ಬಂದದೆ ಹೇನು ?"

ಮೋಟಿಗೆ ಅರ್ಥವಿಲ್ಲದ ಸಿಟ್ಟು ಬಂದಿತು. ಅರಚಿದಳು :

"ನಿನ್ನ ದಿಂಡೆತನ ಮುಂಡಾಮೋಚಾ ? ನೀನು ಇಲ್ಲಿ ನನ್ನ ಮುಂದೆ ಬಾಯಿ ಮಾಡಿದ್ಹಾಗಲ್ಲ. ನಿಮ್ಮತ್ತೆ ಆದಾಳೆ ತಾಟಕಿ. ನಿನ್ನ ಸೊಕ್ಕೆಲ್ಲ ಇಳಸ್ತಾಳೆ ನೋಡ್ತಿರು. ಹಿಂಗೆಲ್ಲ ಹರಟಿದ್ರೆ ಸೊಂಟ ಮುರಿದು ಕೂರಸ್ತಾಳೆ."

ಸೀತೆ ಮೂತಿ ಉದ್ದ ಮಾಡಿದಳು :

"ಮುರದ್ರೆ ಮುರೀಲಿ. ಹೆಂಗಿದ್ರೂ ಗಂಡನ ಮನೀಗೆ ಹೋಗ್ಲೇಬೇಕಲ್ಲ. ಯಲ್ಲಾರ ಮನೆ ಅತ್ತೇನೂ ಅಷ್ಟೇ ಸೈ."

ಸೀತೆಯ ನಿರೀಕ್ಷೆ ದೂರವಾಗಲಿಲ್ಲ. ಮುಂದಿನ ವಾರವೇ ಸೀತೆ ಮೈನೆರೆದಳು. ಗಂಡನ ಮನೆಗೆ ಸುದ್ದಿ ಹೋಯಿತು. ಇನ್ನು ಆರು ತಿಂಗಳು ನಿಷೇಕ ಬೇಡವೆಂದು ರಾಮಕ್ಕ ನಿರೂಪ ಕಳಿಸಿದಳು.

## ೧೧

ಮೂರು ದಿನ ಆರು ತಿಂಗಳು ಸೀತೆಗೆ ಬಂಧನ. ಮೈ ನೆರೆದ ಹುಡುಗಿಯೆಂದು ಅವಳು ಮೊದಲಿನಂತೆ ತೋಟ, ಗುಡ್ಡ ಅಲೆಯುವಂತಿರಲಿಲ್ಲ. ಇದ್ದ ಒಬ್ಬಳು ಗೆಳತಿ ಅಚ್ಚಿಯ ಭೇಟಿಯೂ ತಪ್ಪಿಹೋಯಿತು. ಸೀತೆಯ ಅಜ್ಜಿಯ ಆರೈಕೆ ಪ್ರಾರಂಭವಾಯ್ತು. ಮೊದಲ ತಿಂಗಳು ಸಜ್ಜಿಗೆ ತುಪ್ಪ; ಎರಡನೇ ತಿಂಗಳು ರಸಬಾಳೆ ಹಣ್ಣು ಸಕ್ಕರೆ ತುಪ್ಪ; ಮೂರನೇ ತಿಂಗಳು ಅವಲಕ್ಕಿ ಮೊಸರು; ನಾಲ್ಕನೆ ತಿಂಗಳು ಮೆಂತ್ಯದ ದೋಸೆ.

ಪ್ರತಿ ಶುಕ್ರವಾರ, ಮಂಗಳವಾರ ಹರಳೆಣ್ಣೆ, ಸೀಗೆಪುಡಿ ಅಭ್ಯಂಜನ. ಸೀತೆ ಆರು ತಿಂಗಳಲ್ಲಿ ಸಿಡಿದೊಡೆಯುವಂತೆ ಬೆಳೆದಳು. ಕೂದಲು ಸೊಂಪಾಗಿ ಬೆಳೆಯಿತು. ಕೆನ್ನೆ, ಹಿಮ್ಮಡಿಗಳಲ್ಲಿ ರಕ್ತ ಚಿಮ್ಮಿ ಬರುವಂತಾಯಿತು.

‘ನೀನು ಈಗ ಮೊದಲಿಗಿಂತ ಚೆನ್ನಾಗಿ ಆಗಿದ್ದೀಯ’ ಎಂದು ಅವರ ಮನೆಯ ಪುಟ್ಟ ಕನ್ನಡಿ ಹೇಳುತ್ತಿದ್ದರೂ ಆಗಿನ ಹುಡುಗಿಯರಿಗೆ ತಮ್ಮ ಸೌಂದರ್ಯದ ಬಗ್ಗೆ ಅಸಂಭಾವವಂತೂ ಇರಲಿಲ್ಲ. ದೊಡ್ಡ ಕನ್ನಡಿ ಅವರ ಮನೆಯಲ್ಲಿ ಇರಲಿಲ್ಲ. ಭೋಜನ ಶಾಲೆಯ ಗೋಡೆಯಲ್ಲಿ ಹೂಳಿದ ಅಂಗೈಯಗಲ ಕನ್ನಡಿ ನೋಡಿಕೊಂಡು ಅಲ್ಲಿಯೇ ಗೂಡಿನಲ್ಲಿರುತ್ತಿದ್ದ ಕುಂಕುಮದ ಭರಣಿಯಿಂದ ಒಂದು ಬೊಟ್ಟು ಕುಂಕುಮ ಇಟ್ಟುಕೊಂಡರಾಯ್ತು. ಅಜ್ಜಿ ಗಿರಿದು ಗಿರಿದು ಐದು ಕಾಲು ಜಡೆ ಹಾಕಿ, ಹೂಮುಡಿಸಿ ಮುಂದಲೆಗೆ ನೀರು ಹಚ್ಚಿ, ಎಡಗೈಯಿಂದ ಅವಳ ಕೆನ್ನೆ ಹಿಡಿದು ತೀಡಿ ತೀಡಿ ತಗ್ಗಿಸಿ ಮುಂದಲೆ ಬಾಚುವುದು. ಅದು ಸರಿಯಿಲ್ಲವೆಂದು ಸೀತೆ ತಾನೇ ಆ ಮಾಸಲು ಕನ್ನಡಿ ಹಿಡಿದುಕೊಂಡು ಮತ್ತಷ್ಟು ಊರಿ ಊರಿ ಮುಂದಲೆ ಬಾಚಿಕೊಂಡರೆ ಮೋಟಿ ಸಿಡಿದೇಳುತ್ತಿದ್ದಳು.

“ಸಾಕು ತೆಗೆಯೇ, ತುಸ ಹುಳ್ಳಗೆ–ಬೆಳ್ಳಗೆ ಆದನೀಂತ ಮೂರ್ಹೊತ್ತೂ ನಾಯಕ ಸಾನೀರ ಹಾಗೆ ಕನಡೀ ಹಿಡಕಂಡು ಕೂತ್ಕಾಬಾರ್ದು. ಹಿಂಗೆಲ್ಲ ಮಾಡಿದ್ರೆ ನಿಮ್ಮತ್ತೆ ಹಿಡಕಂಡು ಬಡದಾಳು.”

ಸೀತೆಗೆ ಗೊತ್ತಿದ್ದ ವಿಷಯ ಒಂದೇ. ಮಲಕಾಯಿಗೆ ಹಿರೀ ಹೆಂಡತಿ ಮಕ್ಕಳನ್ನ ಕಂಡರೆ ಆಗುವುದಿಲ್ಲ ಎಂಬುದು.

ಇತ್ತಲಿನ ಎರಡು ವರ್ಷಗಳಲ್ಲಿ ಸೀತೆಗೆ ಸ್ವಲ್ಪ ತಿಳಿವಳಿಕೆ ಬಂದಿತ್ತಾದರೂ ತನ್ನ ಮಾಮೂಲಿ ಒರಟುತನದಿಂದಲೇ ಮಾತಾಡಿದಳು.

"ಅಜ್ಜಿ ನಿಮ್ಮನ್ನ ಯಾವತ್ತಾರಾ ಹೊಡದದೆಯಾ ? ಅಪ್ಪಸತೀಗಾ ನಿಮಗೆ ಒಂದೇಟು ಹಾಕುಲ್ಲ. ಸುಮ್ ಸುಮ್ನೆ ಯಾಕೆ ಹ್ವಡೀತಾರೆ ?"

"ಅದೇ ನಾ ಅಂದದ್ದು. ನಿನ್ಹಾಗೆ ನಾಯಂತದೂ ಮಂಗಾಟ ಮಾಡುಲ್ಲ. ಅದ್ಕೇ ಹೊಡಿಯೂದಿಲ್ಲ. ನೀ ಇಲ್ಲಿ ಮಾಡಿದ ಹಾಂಗೇ ಅಲ್ಲೂ ಮಾಡಿದ್ರೆ ಗಂಡ, ಅತ್ತೆ ಇಬ್ರೂ ಹೇರ್‍ತ್ತಾರೆ ತಿಳ್ಕಂಡಿರು."

"ಹೊಡದ್ರೆ ಹೊಡೀಲಿ. ಗಂಡ–ಅತ್ತೇನೇ ಸ್ವೈಯ್ಲ್ಲ ಇಲ್ಲಿ ನೀವು ಹೋಡೀತಿರಲಿಲ್ವ ? ಈಗ ತುಸು ದಿನದಿಂದ ಬಿಟ್ಟಿದೀರಿ ಅಷ್ಟೆ !"

"ನಿನ್ನ ಹಣೇಬರ, ಯತ್ಲಾಗಾರ ಸಾಯಿ."

ಎಂದು ಆಶೀರ್ವದಿಸಿ ನಡೆದಳು ಮೋಟಿ. ಮುಂದೆ ಒಂದು ತಿಂಗಳಲ್ಲಿಯೇ ಸೀತೆಯ ನಿಷೇಕ ನಿಶ್ಚಿತವಾಯಿತು. 'ಕುರವಳ್ಳಿಗೇ ಬಂದು ಮಾಡಿಕೊಡಬೇಕೆಂದೂ, ತಗ್ಗಿನ ಮನೆ ಕೊಂಪೆಗೆ ತಾವು ಬರಲಾಗುವುದಿಲ್ಲವೆಂದೂ' ರಾಮಕ್ಕನ ಆಜ್ಞೆಯಾಗಿತ್ತು. ಮಹಾಬಲಯ್ಯ ಶಿರಸಾವಹಿಸಿದ. ಮೋಟನಿಗೂ ಅದೇ ಸೂಕ್ತ ಕಂಡಿತು.

ಮುಂದೆ ಉಂಡೆ, ಚಕ್ಕುಲಿ, ಲಡ್ಗಿಗೆಗಳ ಅವಾಂತರವಾಯಿತು. ಕಮಾನುಗಾಡಿಯಲ್ಲಿ ಎಲ್ಲ ಸರಂಜಾಮು ಹೊತ್ತು ಮಹಾಬಲಯ್ಯನ ಕುಟುಂಬ ಕುರುವಳ್ಳಿದಾರಿ ಹಿಡಿಯಿತು. ಮನೆಯ ಕಾವಲಿಗೆ ಶಿವುಡಮ್ಮ, ಮನೆಯ ಆಳುಗಳು ಇದ್ದರು.

ಹೊರಡುವ ಹಿಂದಿನ ದಿನ ಸೀತೆ, ಅಚ್ಚಿಯರು ಗುಡ್ಡಕ್ಕೆ ಹೋದಾಗ ಭೆಟ್ಟಿಯಾದರು. ಇಬ್ಬರೂ ಎಡಗೈಲಿ ತಂಬಿಗೆ ಹಿಡಿದು ಮಟ್ಟಿನ ಮರೆಯಲ್ಲಿ ನಿಂತು ಮಾತಾಡಿದರು. ಅಚ್ಚಿಗೆ ಅಳು ಬಂದಿತ್ತು. ಅಳುತ್ತಲೇ ಅಂದಳು.

"ನಿಂಗೆ ಅಡ್ಡಿಲ್ಲ ಕಣೆ, ತೀರ್ಥಳ್ಳಿ ಪಟ್ಣಕ್ಕೆ ಹೋಗ್ತಿ. ನೆರೆಹೊರೆ

ತುಂಬಾ ಅದಾರಂತೆ. ಮನೆ ಮುಂದೆ ಹೊಳೆ ಅದೆಯಂತೆ. ಹೆಂಗಾರೆ ಹೊತ್ಹೋಗತ್ತೆ. ಇಲ್ಲಿ ನನ್ಹತ್ರ ಮಾತಾಡೋರು ಯಾರದಾರೆ ?"

ಆಚ್ಚಿಯ ಸ್ಥಿತಿಯನ್ನು ಕಂಡು ಸೀತೆಗೂ ಮರುಕವೆನಿಸಿತು :

"ಯಾಕಳ್ತಿ ಬಿಡೆ ? ಇನ್ನಾಕ್ದಿನ ಹೋದ್ರೆ ನೀನೂ ಮೈನೆರೀತಿ, ಪ್ರಸ್ತಾಗತ್ತೆ, ಗಂಡನ ಮನೀಗೆ ಹೋಗ್ತಿ. ಮೇಗರವಳ್ಳಿ ಕುರುವಳ್ಳೀ ಹಾಗೇ ಅದೆಯಂತೆ. ನಿಮ್ಮಲ್ಲೂ ತುಂಬಾ ಜನಿದ್ದಾರು. ಆ ಮೇಲೆಲ್ಲಾ ಸಮಾಗತ್ತೆ. ಕುರುವಳ್ಳೀಗೂ ಮೇಗರವಳ್ಳಿಗೂ ಹತ್ರಲ್ವ ? ಒಂದ್ಸಲಾನಾರಾ ಎಳ್ಳಮಾಸೀಗೆ ಬಂದಾರು. ಆಗ ನಮ್ಮನೀಗೆ ಬಾ. ಈಗ ನಿಂಗೆ ಲಗ್ನಾಗಿರೂದರಿಂದ ನಂಗೂ, ನಿಂಗೂ ಆಣೆ-ಪ್ರಮಾಣ ತಗ್ಲೂದಿಲ್ಲ ಕಣೆ. ನಾ ಬರ್ತ್ನಿ ಇನ್ನು. ನಾಳೆ ಬೆಳಗಿಂಜಾವಕ್ಕೇ ಗಾಡಿ ಕಟ್ತಾರೆ."

ಎಂದು ಗೆಳತಿಯನ್ನು ಬೀಳ್ಕೊಟ್ಟಳು. ಪಕ್ಕದ ಕರ್ಜ ಹಣ್ಣಿನ ಗಿಡವನ್ನು ಹಿಡಿದು ನಿಂತ ಆಚ್ಚಿ ಅಂದಳು.

"ಫಲಕೊಡು ಗಿಡವೇ, ನೀನೇ ಸಾಕ್ಷಿ. ಈಗ ನಾವಿಬ್ರೂ ಬ್ಯಾರೆ ಮನೆಯೋರು. ಧರ್ಮಸ್ಥಳದ ಮಂಜ್ನಾಥ ನಮಗೆ ದೋಷ ಕೊಡೂದು ಬ್ಯಾಡ."

"ಯಂತದೂ ಇಲ್ಲ, ಹೋಗೆ ಅಳಬ್ಯಾಡ."

ಎಂದು ಹಿಂದಿರುಗಿದಳು ಸೀತೆ.

ಮರುದಿನ ಇವರೆಲ್ಲ ಕುರುವಳ್ಳಿ ಸೇರುವಾಗ ಮಧ್ಯಾಹ್ನದ ಮೂರು ತಾಸಾಗಿತ್ತು. ಇಳಿದದ್ದು ಶಂಕರಭಟ್ಟರ ಮನೆಯಲ್ಲಿ. ಹಸಿದ ಹೊಟ್ಟೆಗೆ ಭರ್ಜರಿ ಊಟವಾಯಿತು ಇಷ್ಟರಲ್ಲಿ ಸಂಜೆಯಾಯ್ತು. ಶಂಕಭಟ್ಟರು, ಮೋಟ, ಮಹಾಬಲಯ್ಯ ಬೀಗರ ಮನೆಗೆ ಹೋದಾಗ ಸೀತೆ ಭಟ್ಟರ ಎರಡನೆಯ ಸೊಸೆ ಸಂಕುವಿನೊಡನೆ ಮನೆಯ ಹಿತ್ತಲಿಗೆ ಬಂದು ಕೆಳಗೆ ನೋಡಿದಳು.

ಭಟ್ಟರ ಮನೆ ಕುರುವಳ್ಳಿ ಗುಡ್ಡದ ಮೇಲೆ ಅದಕ್ಕಿಂತ ಕೆಳಗೆ ಅಗ್ರಹಾರ. ವೃತ್ತಿಗೆ ಮಠ, ರಾಮಕ್ಕನ ಮನೆ ಇಲ್ಲಿರುವುದು. ಸಂಜೆಯ ಹೊಂಬಿಸಿಲಿನಲ್ಲಿ ಕೆಳಗಿನ ಅಗ್ರಹಾರ; ಅದಕ್ಕೂ ಕೆಳಗೆ ಹರಿಯುತ್ತಿರುವ ತುಂಗೆ ಹೊಳೆ. ರಾಮಮಂಟಪ, ಪಾಪನಾಶಿನಿ, ಅರೆಕಲ್ಲು ಬಂಡೆ. ಅದರಾಚೆ

ದೂರದಲ್ಲಿ ಜಾರು ಬಂಡೆ, ಸಾಲು ಅರಳಿ ಮರಗಳು, ಭೀಮನ ಬುತ್ತಿ ಕಲ್ಲು; ಅನಂತಯ್ಯನ ಅಗ್ರಹಾರದ ಕಡೆಯ ದಿಬ್ಬದ ಮೇಲೆ ಒಂದೆರಡು ವರ್ಷಗಳ ಹಿಂದೆ ಎದ್ದು ನಿಂತ ಮಂಗಳೂರು ಹೆಂಚು ಹೊದಿಸಿದ ವಿಸ್ತಾರವಾದ ಮುಸಾಫಿರಖಾನೆ. ಇತ್ತ ರಾಮೇಶ್ವರ ದೇವಾಲಯದ ಹಿತ್ತಾಳೆಯ ಶಿಖರ!

ಎಲ್ಲವೂ ಸಂಜೆಯ ಚಿನ್ನದ ಬಿಸಿಲಿನಲ್ಲಿ ಅಪೂರ್ವ ದೃಶ್ಯವಾಗಿ ಕಂಡವು ಸೀತೆಗೆ. ಕವಿಗಳಿಗೆ ಸ್ಫೂರ್ತಿದಾಯಕವಾದ ಆ ನೋಟ ಸೀತೆಯ ಮನಸ್ಸಿಗೆ ಅಪ್ಯಾಯಮಾನವಾಯಿತು ನಿಜ. ಆದರೆ ಅದನ್ನು ಅವಳು ಅಮರಾವತಿ, ಅಲಕಾನಗರಿಗೆ ಹೋಲಿಸಿ ನೋಡಲಿಲ್ಲ ಆ ವರ್ಣನೆಗಳು ಅವಳಿಗೆ ತಿಳಿಯದು. ಮನಕ್ಕೆ ಮುದವೆನಿಸಿತು. 'ತನ್ನ ತೌರು ತಗ್ಗಿನಮನೆಗಿಂತ ಅತ್ತೆಯ ಮನೆ ಕುರುವಳ್ಳಿ, ಎದುರಿನ ತೀರ್ಥಹಳ್ಳಿ ಚಂದ' ಅನಿಸಿತು. ಧುಮ್ಮಿಕ್ಕಿ ಹರಿದು ಮುಂದೆ ಜುಳು ಜುಳುನೆ ಹರಿವ ಪ್ರವಾಹವನ್ನು ನೋಡಿದಳು. ಇನ್ನು ಮುಂದೆ ತಾನು ಈ ಹೊಳೆಯಲ್ಲಿ ಪಾತ್ರೆ ತೊಳೆಯಬೇಕು, ಬಟ್ಟೆ ಒಗೆಯಬೇಕು. ಕೆರೆಗಿಂತ ಹೊಳೆ ನೀರು ಬಾಳ ಚಂದ-ಅಂದು ಕೊಂಡಳು.

ಆಗಲೇ ಹೊಳೆಯ ಎರಡು ದಡಗಳಲ್ಲಿ ಬಿಳಿ ಬಟ್ಟೆಯ ಗಂಡಸರು, ಹೆಂಗಸರೂ ಕಾಣಿಸಿಕೊಂಡರು. ಗಂಡಸರು ಸಂಧ್ಯಾವಂದನೆಗೆಂದು ಬಂದವರು. ಹೆಂಗಸರು ಬೆಳ್ಳಗೆ ಬೆಳಗಿದ ಪಾತ್ರೆ, ತಾಮ್ರದ ಕೊಡಗಳನ್ನು ಹೊತ್ತು ಮನೆಯ ಕಡೆ ಹೊರಟಿದ್ದರು. ನದೀ ದಂಡೆಯಲ್ಲಿ ಬೆಳ್ಳಕ್ಕಿ, ತೇನೆ ಹಕ್ಕಿಗಳು ಕಾಣಿಸಿಕೊಂಡವು. ಉದ್ದ ಗರಿಯ ಪಿಕರಾಳಗಳು ಬಂಡೆಗಳ ತುದಿಯಲ್ಲಿ ಕೂತು ಗರಿ ತೂಗಿ ಉಲ್ಲಾಸಪಟ್ಟವು. ಕೋಗಿಲೆ, ಕಾಜಾಣಗಳು ಸೊಕ್ಕಿನಿಂದ ಹಾಡುತ್ತಿದ್ದವು. ಇವೆಲ್ಲವನ್ನು ಸೀತೆ ತಗ್ಗಿನ ಮನೆಯ ತೋಟ, ಕೆರೆಗಳಲ್ಲಿ ಕಂಡಿದ್ದಳಾದರೂ ಅವೇ ಹಕ್ಕಿಗಳು ಈ ನದೀ ತಟಾಕಗಳಲ್ಲಿ 'ಕುಹೂ' ಮಾಡಿದಾಗ ಅದಕ್ಕೆ ಏನೋ ಮಹತ್ವ ಕಂಡಿತು. ಅದೇ ಗುಂಗಿನಲ್ಲಿ ಅವಳು ಮನೆಯ ಹಿಂಭಾಗ ನೋಡಿದಳು. ಭಟ್ಟರ ಮನೆಯ ಎರಡು ಎಳೆಗರುಗಳು ಬಾಲದಿಂದ ನೊಣ ಓಡಿಸುತ್ತ ಎಳೆಗರಿಕೆ ಮೇಯುತ್ತಿದ್ದವು. ತಟ್ಟನೆ ಅವಳಿಗೆ ತನ್ನ ಮನೆಯ ಕರುಗಳು ನೆನಪಿಗೆ ಬಂದವು. ಹಿಂದೆಯೇ ಆ ಅಡಿಕೆ ತೋಟ ತೋಡಲು, ಮಾವಿನ ಮರ, ಆಚ್ಚೆ ಎಲ್ಲಾ ಸಾಲಾಗಿ ನೆನಪಿಗೆ

ಬಂದವು. ಆ ಗಳಿಗೆಯಲ್ಲಿ ಅವಳಿಗೆ ಎದುರಿನ ದೃಶ್ಯ ಮರೆತು ಹೋಯಿತು. ತನ್ನ ತಾಯಿಯ ತೌರಿನಿಂದ ಹೊಡೆಸಿ ಕಳಿಸಿದ ಗೋಪಿ ದನದ ಮೊಮ್ಮಗಳು ಗೌರಿ ದನ ಈಗ ಚೊಚ್ಚಲ ಕರು ಹಾಕಿದೆ. ತನ್ನ ತಾಯಿಯ ತೌರಿನ ತಳಿ ಅದು. ಅದನ್ನ ತಾನು ಇಲ್ಲಿಗೆ ತರಿಸಿಕೊಳ್ಳಬೇಕು ಎಂದುಕೊಂಡಳು. ಗೌರಿ ದನ ಮನದ ಮುಂದೆ ಬಂದಿತು. ನಾಟಿ ದನವಾದರೂ ಹಳ್ಳಿಯ ಸೊಂಪಾದ ಹಸಿಹುಲ್ಲು ಮೆಯ್ದು ದುಂಡಗೆ ಮೈ ತುಂಬಿಕೊಂಡ ಬಿಳೀ ದನ. ಹೆಚ್ಚು ಉದ್ದವಲ್ಲದ ಅರ್ಧಚಂದ್ರಾಕಾರದ ಕೋಡು, ಹಣೆಯ ಮೇಲಿನ ಕರಿಯ ದಾಸು, ಉದ್ದವಾದ ಬಾಲದ ಕೊನೆಯ ಕಪ್ಪು ಕುಚ್ಚು ಗೌರಿಯ ಸೌಂದರ್ಯವನ್ನು ಸಾರುತ್ತಿತ್ತು ಸಂಜೆ ಮೇದು ಮನೆಗೆ ಬರುವಾಗ ತುಂಬಿದ ಕೆಚ್ಚಲನ್ನು ತೊನೆಯುತ್ತ ಒಯ್ಯಾರಿಯಂತೆ ಬಳುಕುತ್ತ ಬಾಲ ಬೀಸಿ ಬರುವ ಗೌರಿಯನ್ನು ನೋಡಲೇ ಚಂದ. ಅದರ ಸರ್ವಾಂಗವೂ ಹಂಸದ ಬಣ್ಣ. ಸೀತೆಗೆ ಅದರ ಮೇಲೆ ಪ್ರೀತಿ ಬಹಳ. ಗೌರಿಯ ಅಂದ ಮತ್ತು ತನ್ನ ತಾಯಿಯದೆಂಬ ವಾಂಛೆ.

'ನನ್ನ ಅತ್ತೆ ಮನೇಲೂ ದನಗಳು ಇದ್ದಾವು. ಆದರೇನಂತೆ ನಮ್ಮ ಮ್ಮನ ಮನೆ ತಳೀನ ನಾನು ಇಲ್ಲೀಗೆ ಹೊಡಿಸಿಕೊಂಡು ಬರಬೇಕು. ಅಪ್ಪ ನಿಗೆ ಹೇಳಿದರೆ ಅವನೇ ಹೊಡಕೊಂಡು ಬರ್‍ತಾರೆ. ಗೌರಿಯ ಮಗಳು ರುಕ್ಮಿಣಿ ಕೆಂಪು ಹಂಡಕವುವಾದರೂ ಯಾಪಾಟಿ ಚಂದಾಗದೆ ಅಂದು ಕೊಂಡಳು. ಸಂಕುವಿನ ಮಾತು ಅವಳನ್ನ ಎಚ್ಚರಿಸಿತು.

"ನೀ ಯಾವಾಗಾರಾ ಈ ಊರಿಗೆ ಬಂದಿದ್ಯಾ ?"

"ಹೂಂ, ತುಂಬಾ ದಿನಾತಪ್ಪ. ನಾ ತುಂಬಾ ಸಣ್ಣಾಗಿದ್ದಾಗ ಅಪ್ಪ, ನಾನು, ಚಿಕ್ಕಮ್ಮ ಎಳ್ಳಾಮಾಸೀಗೆ ಬಂದಿದ್ವಿ. ತೇರು ಕ್ವಟ್ಟಿಗೆ ಪಕ್ಕ ವೆಂಕಟ ಭಟ್ರ ಮನೇಲಿ ಉಳಕಂಡಿದ್ವಿ. ಭಾಗವತ್ರಾಟ, ದೊಂಬ್ರಾಟ ಎಲಾ ನೋಡಿದ್ದೆ."

"ಆಗ್ಗಿಂತ ಈಗ ಇನ್ನೂ ಚಂದ ಎಳ್ಳಮಾಸೆ. ಕಳದ ಪಟ ಒಂದುನಾಟ್ಕದ ಕಂಪ್ನಿ ಬಂದಿತ್ತು. ಅಬ್ಬಬ್ಬ ಯಾಪಾಟಿ ಚಂದ ನಾಟ್ಕ, ಹಾರ್ಮೃಣಿ, ಗ್ಲಾಸ್ ಲೈಟು ಇಲ್ಲಾ ಇರತ್ತೆ. ದೇವಲೋಕ, ವೈಕುಂಟ ಯಲ್ಲ ಬರುತ್ತೆ. ನಾಟಕ

ದಾಗೆ. ನೆಲಕ್ಕೆ ಅರ್ರ್ಯಾಸು ಕೊಟ್ರೆ ಸೈ. ಜೇಗತನ್ನ ನೋಡ್ಬ್ಯೋದು ನಾಟ್ಕ್ಯಾನ. ಭಾಗ್ವತ್ರಾಟದ್ಹಂಗೆ ಧಿಮಿದಿಮಿ ಕುಪ್ಚುಟ್ ಹೊಡಕಂಡು ಕುಣಿಯುಲ್ಲ ಇವರು. ಚಂದಾಗಿ ಅಲಂಕಾರ ಮಾಡ್ಕಂಡು ಯಾಪಾಟ ಚಂದಾಗಿ ಹಾಡೇಳ್ತಾರೆ."

ಸೀತೆಗೆ ಯಾರೋ ಈ ವಿಷಯ ಹೇಳಿದ್ದರು. ಜ್ಞಾಪಿಸಿಕೊಂಡಳು. ಗಂಗೆ ಎಂಬುದು ನೆನಪಿಗೆ ಬಂತು.

"ಹೌದು ಗಂಗೆ ಹಂಗದಿದ್ಲು. ಸಗಾರಿ ಬ್ಯಾಂಡು ಎಲ್ಲ ಬಾರಸ್ತಾರಂತೆ."

"ಇನ್ನೇನು ತಾಗ ಇಲ್ಲೇ ಇತ್ತಿಯಲ್ಲ. ಇನ್ನು ಮೂರ್ತಿಂಗ್ಳದೆ ಎಳ್ಳ ಮಾಸೆ ನೀನೂ ನೋಡ್ಬೋದು ನಾಟ್ಕಾನ. ಆದ್ರೆ ನಿಮ್ಮತ್ತೆ ಬಲು ಕಟಪಿಟಿಯಪ್ಪ. ಗಂಡು ಮಕ್ಳನ್ನೇ ನಾಟ್ಕ ನೋಡಬ್ಯಾಡೀಂತ ತಾಕೀತು ಮಾಡ್ತಾರೆ. ಇನ್ನು ಸೊಸೇರನ್ನ ಕಳಿಸ್ತ್ಯಾರಾ ? ನೀನಂತೂ ಇಲ್ಲೇ ಇರೋಳು. ಅಪರಂಜ್ರಿಗಿಂತ ಚಂದಾಗಿದ್ದಿ. ನಿನ್ನ ಕಳಿಸ್ತ್ಯಾರಾ ?"

ಕಿಸಕ್ಕನೆ ನಕ್ಕಳು ಸಂಕು. ಯಾಕೆ ನಕ್ಕಳೆಂದು ಸೀತೆಗೆ ತಿಳಿಯಲಿಲ್ಲ. ಸುಮ್ಮನೆ ಅವಳ ಮುಖ ನೋಡಿದಳು.

"ಕಳ್ಳ ದೇವರಿಗೆ ಸುಳ್ಳು ನೇವೇಧ್ಯಾಂತರಲ್ಲ ಹಾಂಗೆ. ಮದ್ಲ ಪಟ ನಾಟ್ಕ ಬಂದಿರೂದು. ಜಾತ್ರೆ ಜನವೆಲ್ಲ ನಾಟ್ಕ ನೋಡಿದ್ರು. ಅದ್ಕೇ ನಿನ್ನ ಭಾವಂದ್ರು, ವಾರಗಿತ್ತೀರು ಎಳ್ಳಮಾಸೆ ಎರಡ್ದಿನ ಅನ್ನೊವಾಗ್ಲೆ ಮಾಳೂರಿಂದ ಮಧ್ಯಾನ ನಡಕೊಂಡು ಹೊರಟ್ರು. ರಾತ್ರೆ ಇಲ್ಲೀಗೆ ಬಂದು ಛತ್ರದ ಬೀದಿ ಗಣೇಶಭಟ್ರ ಮನೇಲಿ ರಾತ್ರಿ ಉಂಡ್ರಂತೆ. ಅವರ ಮನೆಯೋರ ಜೊತೆ ಧ್ರುವ ಚರಿತ್ರೆ ನಾಟ್ಕ ನೋಡ್ಕಂಡು ಮಾರ್ನೇ ದಿನ ಬೆಳಗ್ಗೆ ಹತ್ತು ತಾಸಿನ ಹೊತ್ಗೆ ಕಲ್ಸಾರದಾಟ ಮನೀಗೆ ಬಂದ್ರಂತೆ. ಬೆಳಗಿಂಜಾವ ಮಾಳೂರಿನಿಂದ ಹೊರಟ್ವಿ ಅಂದ್ರಂತೆ. ಭಟ್ರ ಮನೇಲಿ ತಾಕೀತು ಮಾಡಿ ಬಂದಿದ್ರಂತೆ. ನಮ್ಮತ್ತೆ ಕೂಟ ಹೇಳಬ್ಯಾಡೀಂತ. ರಾಮಕ್ಕಂಗೆ ಯಂತದು ಗೊತ್ತಾತು ಗ್ವರಟು. ಯಲ್ಲಾರ ಮ್ಯಾಲೂ ಶರ್‌ಬುರ್ ಅಂತ ಹಾರಾಡೂಕೇ ಸೈ. ನಿನ್ನ ವಾರಗಿತ್ತಿ ಮಾನಿ ನನ್ನ ಕೈಲಿ ಅಂದ್ಲು. ಇನ್ನು ತಂಕ ನಿಮ್ಮತ್ತೆಗೆ ಈ ಸುದ್ದಿ ತಿಳೀದು."

ಈ ಬಾರಿ ಎಳ್ಳಮಾವಾಸ್ಸೇಲಿ ಹೆಂಗಾಡ ಮಾಡಿ ನಾಟ್ಕ ನೋಡ್ಕಂಡು ಒರಬೇಕು. ಅಂದುಕೊಂಡಳು ಸೀತೆ.

"ನಿಮ್ಮತ್ತೆ ಅಡ್ಡಿಲ್ಲ ಅಲ್ವಾ ?"

"ಮಡಿ ಮೈಲ್ಗೆ ಕೆಲ್ಸ-ಭೋಷ ಸಮನಾಗಿ ಮಾಡ್ದೆ ಇದ್ರೆ ಕಟ್ಟಿಗೆ ಬೈತಾರಪ್ಪ. ಅದ್ರೆ ತುಂಬ ಒಳ್ಳೋರು ನಮ್ಮತ್ತೆ. ಹೊಟ್ಟೇಗೆ ಹಾಕೂದ ರಾಗಂತೂ ನಾಲ್ಕುಕೈಯಿ ಅವರ್ಗೆ "

ಆ ವೇಳೆಗೆ ಭಟ್ಟರ ಹೆಂಡತಿ ಕೂಗಿದರು :

"ಲೇ ಸೀತೆ, ಹಶೀ ಮೈನ ಹುಡುಗಿ. ಅಲ್ಯಾಕೆ ಹೋಗಿ ನಿಂತದೀಯೇ ಸಂಕೂ ನೀನೂ ಸಮ. ಮುಚ್ಚಂಜೆಯಾಗ್ತಾ ಬಂತು. ಅಲ್ಲೇ ಹರಟ್ತಾ ನಿಂತ್ಕಂಡ್ಯಾ, ಬಾ ದನ ಬಿಡೂ ಹೊತ್ತಾತು. ಬನ್ರೇ ಒಳಗೇ."

ಇಬ್ಬರೂ ಕೆಳಗೆ ಇಳಿದು ಬಂದರು. ಸೂರ್ಯನೂ ಪಶ್ಚಿಮದ ಮನೆ ಹೊಕ್ಕಾಗಿತ್ತು. ಬಾನಂಚಿನ ಕಪ್ಪು ಛಾಯೆ ತೀರ್ಥಹಳ್ಳಿ ಕುರುವಳ್ಳಿಯನ್ನೆಲ್ಲಾ ಮಾಯಿಸಿತ್ತು.

ಮರುದಿನ ಬೆಳಗಿನಿಂದಲೇ ಕಲಾಪಗಳು ಪ್ರಾರಂಭವಾಗಿ ಎಲ್ಲಾ ಮುಗಿ ಹಾಗ ಸಂಜೆ ಐದು ಗಂಟೆ. ಕುರುವಳ್ಳಿ ಅಗ್ರಹಾರದ ಜನ ಮಾಳೂರಿನ ಮಕ್ಕಳು-ಸೊಸೆಯರು ಸೇರಿ ಅರವತ್ತು ಜನದ ಊಟ. ಸಂಜೆ ಕಲಾಪಗಳು ಹೆಂಗಸರದು. ರಾಮಕ್ಕನ ಕೂಗಾಟದ ನಡುವೆ ಎಲ್ಲಾ ಮುಗಿಯಿತು. ಸಜ್ಜೆ ಮನೆ ಅಲಂಕೃತವಾಗಿತ್ತು. ಕರಿದ ತಿಂಡಿಗಳು, ಲಡ್ಡಿಗೆ ಗೋಪುರಗಳು, ಹಣ್ಣು-ಹಂಪಲುಗಳು ಕೋಣೆಯ ಬೆಂಚಿನ ಮೇಲೆ ಹರಿವಾಣಗಳಲ್ಲಿ ಸಾಲಾಗಿ ಕೂತಿದ್ದವು ಸೀತೆ ಹೊಸ ಸೀರೆ ಕಸ್ತೂರಿ ಮಲ್ಲಿಗೆ ದಂಡೆ, ದವನ, ಕೆಂಪು ಗುಲಾಬಿ ಹೂವಿನಿಂದ ಶೃಂಗಾರವಾಗಿದ್ದಳ. ಅಲಂಕರಿಸಿದವಳು ಸಂಕುವೇ. ಸಜ್ಜೆ ಮನೆ ಒಳಕ್ಕೆ ಹೋಗುವಾಗ ಶಂಕರಭಟ್ಟರ ಹೆಂಡತಿ ಸೀತೆಯನ್ನು ಒಂದು ಮೂಲೆಗೆ ಕರೆದೊಯ್ದು ಕಿವಿಯಲ್ಲಿ ಪಿಸುಗುಟ್ಟಿದರು

"ಇವತ್ತು ಕೊಮಾರಿ ಮಗ್ಳಾಗೇ ಮಲಗ್ಬೇಕು ಕಣೇ. ಅವನು ಮೈಕೈ ಮುಟ್ಟಿದ್ರೆ ಕೊಸ್ರಾಡ್ಬಾರ್ದು. ಗದ್ಲ ಮಾಡ್ಬಾರ್ದು. ಬೆಳಗಿಂತನ್ಕ ಬಾಗಲ್ತೆ ಕ್ಕಂಡು ಬರಬಾರ್ದು. ಬೆಳಗಿಂಜಾವಕ್ಕೇ ನಿನ್ನ ವಾರಗಿತ್ತಿ ಬಾಗ್ಲ ಸದ್ಮಾ ಡ್ತಾಳೆ. ಆಗ್ಲೇ ಈಚೆಗೆ ಬಂದ್ಬಿಡು ತಿಳೀತಾ ?"

ಏನು ಉತ್ತರ ಕೊಡಬೇಕೆಂದು ಸೀತೆಗೆ ತಿಳಿಯಲಿಲ್ಲ. ಸೌಭಾಗ್ಯಮ್ಮನ ನಾದಿನಿಯ ಪ್ರಸ್ತದಲ್ಲಿ ಒಂದು ಸಾರಿ ನೋಡಿದ್ದಳು. ಆದರೆ ರಾತ್ರಿ ಕಲಾಪದ ಹೊತ್ತಿಗೆ ಇವಳು ಮಲಗಿ ನಿದ್ರೆ ಹೋದಾಗಿತ್ತು.

ಈಗ ಸೀತೆಗೆ ಸಿಟ್ಟು ಬಂದಿತ್ತು. ಆದರೆ ಹಿರಿಯರು ಹೇಳಿದಂತೆ ಕೇಳಲೇ ಬೇಕಿತ್ತು ಅತ್ತ ಕೊಮಾರಿಗೂ ಯಾರೋ ಮದುವೆಯಾದ ಗೆಳೆಯ ಉಪದೇಶ ಮಾಡಿದ್ದ.

ಮಂಚದ ಆರತಿಯಾಗಿ ಮಡಿಲು ತುಂಬಿ ಸೋಬಾನೆ ಹಾಡಿ ಮುತ್ತೈದೆಯರು ಹೊರಬಂದು ಬಾಗಿಲು ಹಾಕಿಕೊಂಡರು. ಸಜ್ಜೆ ಮನೆಯಲ್ಲಿ ಎರಡು ಕಾಲು ದೀಪವಲ್ಲದೆ ನವ್ಯವಾಗಿ ಮಲೆನಾಡ ಹಳ್ಳಿಗಳಿಗೂ ದಯಮಾಡಿಸಿದ್ದ ಗಾಜಿನ ಬುರುಡೆಯ ಗೋಡೆದೀಪ ಕೊಮಾರಿಯ ಮನೆಯನ್ನು ಬೆಳಗಿತ್ತು ಎಲ್ಲರ ಮನೆಗಳಲ್ಲಿಯೂ ಹರಳೆಣ್ಣೆಯ ಕಾಲು ದೀಪಗಳೇ ಇದ್ದದ್ದು. ಇದೊಂದು ಹೊಸ ಶ್ರೀಮಂತಿಕೆಯ ಕುರುಹು. ಆರ್ಧಾಣೆಗೆ ಬಾಟ್ಲಿ ಸಿಗುತ್ತಿದ್ದ ಚಿಮಣಿ ಎಣ್ಣೆಯ ಬುಡ್ಡಿಗಳು ನಾಲ್ಕಾರು ವರ್ಷಗಳಿಂದ ಚಾಲ್ತಿಯಲ್ಲಿದ್ದರೂ ಗಾಜಿನ ಬುರುಡೆಯ ದೀಪಗಳು ಬಂದದ್ದು ಈಗ ತೀರ್ಥಹಳ್ಳಿಯ ಶ್ರೀಮಂತರ ಮನೆಯ ಗೋಡೆಗಳನ್ನು ಅಲಂಕರಿಸಿತ್ತು ಈ ದೀಪ. ಈಗ ಸಜ್ಜೆ ಮನೆಗೂ ಇದರ ಪ್ರವೇಶವಾಗಿತ್ತು. ಅದನ್ನು ದೊಡ್ಡದು ಚಿಕ್ಕದು ಮಾಡುವ ಚಮತ್ಕಾರವನ್ನು ಕೊಮಾರಿ ಅರಿತಿದ್ದ. ರಾಮಕ್ಕನ ದರ್ಬಾರಿನಲ್ಲಿ ಈಗ ಮಸಿಕಾರುವ ಬುಡ್ಡಿಯ ಬದಲು ಮದುವಣಿಗನಂತೆ ಸುರಕ್ಷಿತವಾಗಿ ಕೂತ ಗಾಜಿನ ಬುರುಡೆಯ ಲಾಟೀನು ಇತ್ತು. ಚೌಕಿಯ ತೊಲೆಗೆ ತೂಗ ಹಾಕಿದ ಲಾಟೀನನ್ನು ನೋಡಿ ತನ್ನ ಬೀಗರ ಮನೆಯ ಶ್ರೀಮಂತಿಕೆಯನ್ನು ಅಳೆದ ಮಹಾಬಲ.

ಮರುದಿನವೂ ಕೆಲವು ಸಂಪ್ರದಾಯಗಳಿದ್ದವು. ಸೀತೆ ಮುಖ ಊದಿಸಿಕೊಂಡೇ ಹಸೆಯ ಮೇಲೆ ಕೂತಿದ್ದಳು. ಓರಗಿತ್ತಿಯರು ಮುಸಿ ಮುಸಿ ನಕ್ಕರು. ರಾಮಕ್ಕನ ನೂರೆಂಟು ಆಕ್ಷೇಪಗಳನ್ನು ಕಿವಿಗೆ ಹಾಕಿಕೊಳ್ಳದೆ ಮಹಾಬಲ ಶುಭಕಾರ್ಯ ಮುಗಿಸಿದ. ತುಟಿ 'ಪಿಟ' ಎನ್ನಬಾರದೆಂದು ಶಂಕರಭಟ್ಟರು ಮೋಟಗೆ ಮೊದಲೇ ತಾಕೀತು ಮಾಡಿದ್ದರು. ಈ ನಿಷೇಕದ

ಖರ್ಚಿಗಾಗಿ ಮೂವತ್ತು ಬೆಳ್ಳಿಯ ರೂಪಾಯಿಗಳು ಧೂಳಾಗಿಹೋಯಿತೆಂದು ಪೋಟಿ ಸಂಕಟಪಟ್ಟಳು.

ತಂದೆ ಚಿಕ್ಕಮ್ಮ ಹೊರಟು ನಿಂತಾಗ ಸೀತೆ ಅಳುತ್ತಾಳೇನೋ ಎಂದು ಎಲ್ಲರೂ ನಿರೀಕ್ಷಿಸಿದರು. ಆದರೆ ಸೀತೆ ಅಳಲಿಲ್ಲ. ಬದಲು ಚಿಕ್ಕಮ್ಮನಿಗೆ ಹೇಳಿದಳು :

"ಇನ್ನೊಂದಪ ಅಪ್ಪ ಇಲ್ಲಿಗೆ ಬರೂವಾಗ ಗೌರಿ ದನಾನೂ ಅದರ ಕರೂನೂ ಇಲ್ಲಿಗೆ ಹೊಡೆಸಿ ಕಳಿಸಿ, ನಂಗೆ ಅದ್ನ ಬಿಟ್ಟಿರೂಕೇ ಆಗುಲ್ಲ."

ಪೋಟಿ ಮನದಲ್ಲೇ ಲೊಟಗುಟ್ಟಿಕೊಂಡಳು—

'ಸುಪನಾತಿ, ಬಿಟ್ಟಿರೂಕಾಗುದಿಲ್ಲಂತೆ. ಅಪ್ಪ ಅಮ್ಮ ಹೊರಟು ನಿಂತಿದ್ದೀವಿ. ಕಣ್ಣಾಗೆ ಒಂದ್ಹನಿ ನೀರಿಲ್ಲ. ಇದಕ್ಕೆ ದನ ಬಿಟ್ಟಿರೂಕಾಗಲ್ಲ. ತನ್ನ ತಾಯಿ ತೌರು ಮನೇದೂಂತ ಹಕ್ದಾರ್ಕೆ. ಇದರ ಅತ್ತೆ ಇದಕ್ಕೆ ಸಮ ನಾಗದೆ. ಇದರ ಸೊಕ್ಕೆಲ್ಲ ಇಳಿಸತ್ತೆ ಈ ದೂರ್ಘಟಿ'

ಈ ನೆಪದಲ್ಲಿ ಮತ್ತೊಂದು ಮಾತು ಪೋಣಿಸಿದರು ಭಟ್ಟರು—

"ಮಾಬಲಯ್ಯ ಅತ್ತೆ ಮನೀಗೆ ಬಂದ ಹುಡುಗೀನ ಒಂತಿಗ್ಳುಬಿಟ್ಟು ಮತ್ತೆ ತೌರ್ಮನೀಗೆ ಕರಕೊಂಡು ಹೋಗ್ಬೇಕು. ಮತ್ತೆ ಕರಕಂಬರೂವಾಗ ಜತೀಗೇ ದನಾನೂ ಹೊಡಕಂಡು ಬಂದ್ರಾತು ಎರಡೂ ಕೆಲ್ಸಾಗುತ್ತಲ್ಲ."

ಪೋಟಿಗೆ ಇದೆಲ್ಲ ಗೊತ್ತಿದ್ದದ್ದೇ. ರಾಮಕ್ಕನ ಮುಂದೆ ಇವಳ ಆಟ ವೇನೂ ನಡೆಯುವಂತಿರಲಿಲ್ಲ. ನಗು ಬರಲಿಲ್ಲವಾದರೂ ಹಲ್ಲು ಕಿರಿದು ಹೇಳಿದಳು—

"ಅದೂ ಸಮ ಎರಡೊಂದ್ಕೆಲ್ಸ. ಬರ್ತ್ನಿ ರಾಮಕ್ಕಮ್ಮ "

ಎಂದು ರಾಮಕ್ಕನಿಗೊಂದು ಡೊಂಕು ನಮಸ್ಕಾರ ಹೊಡೆದು ಗಾಡಿ ಹತ್ತಿದಳು. ನಿಜವಾಗಿ ಈಗ ದುಃಖವಾದದ್ದು ಮಹಾಬಲನಿಗೆ. ಅವನು ಅಂಗವಸ್ತ್ರದಿಂದ ಕಣ್ಣು ಒತ್ತಿಕೊಂಡ. ಈಗ ಪೋಟಿಯೂ ಅಳಬೇಕಾಯ್ತು. ಎಡಸೆರಗಿನಿಂದ ಮೂಗಿನ ಸಿಂಬಳ ಸೀಟಿಕೊಂಡಳು. ಸೀತಕ್ಕ ಬರಲಿಲ್ಲವೆಂದು ಜೋರಾಗಿ ಅತ್ತದ್ದು ಶೀಲಕ್ಕಿ, ಬಾನಿ.

"ಅವಕ್ಕೆ ಯಂತದೂ ತಿಳೀದು ತುಸ ತಿಳಿವಳಿಕೆ ಹೇಳ್ಬೇಕು ನೀವು."

ಗೊಗ್ಗರ ದನಿಯಲ್ಲಿ ಹೇಳಿದ ಮಹಾಬಲ. ಒರಟಾಗಿ ಉತ್ತರ ಬಂತು ಠಾಮಕ್ಕನಿಂದ–

"ಹೇಳೂದೆಂತದು ತನ್ನಷ್ಟಕ್ಕೆ ಬರುತ್ತೆ ಜಾಣತನ. ಈಗಿನ ಕಾಲ್ದ ಹುಡುಗೀರೇನು ಕಮ್ಮಿಯಾ ? ನಮಗೇ ತಿಳಿವಳಿಕೆ ಹೇಳ್ತಾವೆ ಬೇಕಾರೆ."

ಮೃದುಭಾವನೆಗಳಿಗೆ ರಾಮಕ್ಕನ ತನು–ಮನಗಳಲ್ಲಿ ಸ್ಥಾನವೇ ಇರಲಿಲ್ಲ.

ಕೊಮಾರಿಯೂ ಬಾಯಿಗೆ ಎಲೆಡಕೆ ಒತ್ತರಿಸಿ ಅಲ್ಲಿಯೇ ನಿಂತಿದ್ದ ನಾದ್ದರಿಂದ ಸೀತೆ ಹಿರಿಯರೆದುರು ಗಂಡನ ಮುಂದೆ ನಿಲ್ಲಬಾರದಾಗಿದ್ದರಿಂದ ಜಗಲಿಯ ದಪ್ಪ ಕಂಬದ ಮರೆಗೆ ನಿಂತು ತಲೆ ಮಾತ್ರ ಹೊರ ಚಾಚಿದಳು. ಮಹಾಬಲ ಗಾಡಿಯ ಮೂಕಿನ ಮೇಲೆ ನೆಗೆದು ಕೂತು :

"ಸೈ ಬರ್ತ್ವಿ ನಾವು. ಏನಾರ ತಿಳಸೂದಿದ್ರೆ ಅಂಚೆ ಶೇಷಪ್ಪನ ಕೈಲಿ ಹೇಳಿ ಕಳಿಸಿದ್ರಾತು."

ಎಂದು "ಕ್ಲಕ್ಲ ಹೈ ಹೈ !" ಎಂದು ಎತ್ತುಗಳ ಬೆನ್ನು ಚಪ್ಪರಿಸಿದ. ಕೋಡಣಸು ಕೊರಳುಲಿಗಳ ಸದ್ದು ಮಾಡುತ್ತ ಗಾಡಿ ಹೊರಟಿತು.

ಅತ್ತೆ ಹೇಳುವುದಕ್ಕೆ ಮೊದಲೇ ಸೀತೆ ಊಟದ ಮನೆ ಸೇರಿದ್ದಳು. ಎರಡು ರಾತ್ರಿ ಗಂಡನ ಜೊತೆ ಮಲಗಿದ್ದರೂ ಯಾಕೋ ಅವಳಿಗೆ ಗಂಡನ ಬಗ್ಗೆ ಒಳ್ಳೆಯ ಭಾವನೆಯಾಗಲೀ, ಗೌರವವಾಗಲೀ ಬರಲಿಲ್ಲ. ಎಲ್ಲ ಮನೆಯ ಸೊಸೆಯರೂ ಅತ್ತೆ ಹೇಳಿದಂತೆ ಕೇಳಬೇಕು, ಗಂಡನ ಮನೆಯಲ್ಲಿ ಮರ್ಯಾದೆ ಯಾಗಿ ಬಾಳಬೇಕು ಎಂಬುದಿಷ್ಟೇ ಅವಳಿಗೆ ಗೊತ್ತಿದ್ದದ್ದು. ಮಕ್ಕಳಾಗುವವ ರೆಗೂ ಹಗಲು ಹೊತ್ತು ಗಂಡನ ಮುಖವನ್ನು ನೋಡಬಾರದು ಎಂದು ತಿಳಿದು ಕೊಂಡಿದ್ದಳು. ನಿಜ ಅಂದರೆ ಅವಳಿಗೆ ಅತ್ತೆ, ಗಂಡನ ಹೆದರಿಕೆ ಏನೂ ಇರಲಿಲ್ಲ. 'ಕೆಲಸ ಸಮನಾಗಿ ಮಾಡದಿದ್ರೆ ಏನಾರ ಬೈದಾರು ; ಹೆಚ್ಚು ಅಂದ್ರೆ ಎರಡೇಟು ಹೊಡದಾರು ಅಷ್ಟೇ ಸೈಯಲ್ಲ' ಎಂದುಕೊಂಡಿದ್ದಳು.

ಮತ್ತೆ ಸ್ವಲ್ಪಹೊತ್ತಿಗೆ ಜಗಲಿಯಲ್ಲಿದ್ದವರೆಲ್ಲ ಒಳಗೆ ಬಂದರು. ಸಾತಿ, ಮಾನಿಯರೂ ಬಂದು ಸೀತೆಯನ್ನು ಕೂಡಿಕೊಂಡರು. ಕಳಸು ಹಿಂದಿನ ದಿನ ಮಧ್ಯಾಹ್ನವೇ ಮಾಳೂರಿಗೆ ಹೊರಟಾಗಿತ್ತು 'ಮನೆಕಡೆ ಯಾರಿಲ್ಲ, ದನಕರು

ನೋಡ್ಕಳೂದು ಯಾರು ?" ಎಂಬ ನೆವದಿಂದ. ಮುಖ್ಯ ಕಾರಣ ಈ ಮಹಾ ತಾಯಿಯ ಕೈಯಿಂದ ತಪ್ಪಿಸಿಕೊಳ್ಳುವುದು. ಮರುದಿನ ಹೊರಡುವ ಟಪಾಲು ಗಾಡಿಗೆ ಮುಂಗಡವಾಗಿ ಹೇಳಿ ಬಂದಾಗಿತ್ತು. ತಮ್ಮ ಮೂರು ಮಕ್ಕಳನ್ನು ಹೊತ್ತು ಹದಿನೈದು ಮೈಲಿ ನಡೆಯುವುದು ಕಷ್ಟವಾಗಿತ್ತು.

ಆ ದಿನ ಮೂರು ಜನ ಸೊಸೆಯರೂ ಒಂದಾಗಿ ಸೇರಿ ಗುಸಪಿಸ ಮಾತಾಡಿದರು ಸೀತೆಗೆ ಅದೆಲ್ಲ ಅಭ್ಯಾಸವಿಲ್ಲ. ಸಾತಿ ಅಂದಳು–

"ಮಾರಾಯ್ತಿ, ನಾವಿಬ್ರೂ ಬಚಾವಾದ್ವು. ನೀನು ಮೂರನೇ ಮುದ್ದಿನ ಸೊಸೆ ಈ ಹದ್ದಿನ ಕೈಲಿ ಸಿಕ್ಕಂಡಿದ್ದಿ. ನಿನ್ನ ಚರ್ಮ ಎಬ್ಬಸ್ತಾರೆ ನೋಡ್ಕಂಡಿರು. ನೀನೇನು ಮಾಳೂರಿಗೆ ಬರೂಹಂಗಿಲ್ಲ ಬಂದ್ರೂ ನಾಕ್ದಿನ ಸೈ. ಇಷ್ಟು ದಿನ ಕೊಮಾರೀನೂ ಅಲ್ಲಿಗೂ ಇಲ್ಲಿಗೂ ತಾರಾಡ್ಕಂಡಿದ್ದ. ಇನ್ಮೇಲೆ ಇಲ್ಲೇ ಬಿದ್ದಿರ್ಬೆಕಲ್ಲ. ಅವಗೂ ಅದೆ ಯುಜ್ಞ."

ಸೀತೆಗೆ ಏನೂ ಅರ್ಥವಾಗಲಿಲ್ಲ. ತನ್ನ ಅತ್ತೆಯ ಬಾಯಿ ಜೋರೆಂದು ಗೊತ್ತು. ಆದರೆ ಎಲ್ಲರೂ ಹೇಳುವುದು ನೋಡಿದರೆ ಇವರೇನು ರಾಕ್ಷಸಿಯೋ ಏನೋ ಅನ್ನು ಹಾಗಿದೆ ಅಂದುಕೊಂಡಳು. ತಾನಿನ್ನು ಹೊಸದಾಗಿ ಒಂದ ವಳು, ಏನು ಉತ್ತರ ಕೊಡಲೂ ಗೊತ್ತಾಗಲಿಲ್ಲ. ನಗುತ್ತಾ ಅಂದಳು :

"ನಿಮಗೆಲ್ಲಾ ಆದ್ದೇ ನಂಗೂ ಸೈಯಲ್ಲ."

ಸೀತೆಯ ಮುಖದಲ್ಲಿ ಯಾವ ಹೆದರಿಕೆ, ದುಃಖ, ಉದಾಸೀನ, ಲಜ್ಜೆಯ ಭಾವನೆಯೂ ಇರಲಿಲ್ಲ. ಅವಳು ಸಹಜವಾಗಿದ್ದಳು. ಆದರೂ ಸಾತಿ, ಮಾನಿಯರಿಗೆ ಎಂಥದೋ ಹೊಟ್ಟೆಕಿಚ್ಚು ಸೀತೆಯ ಮೇಲೆ. ಬಹುಶಃ ಅವಳ ಅಮಾಯಕ ಚಲುವಿನ ಮೇಲಿರಬಹುದು.

ತನ್ನ ಅತ್ತಿಗೆಯರಿಗಿಂತ ತನ್ನ ಹೆಂಡತಿ ಚಂದ ಎಂದಷ್ಟು ತಿಳಿಯಿತು ಕೊಮಾರಿಗೆ. ಈಗ ಸದ್ಯಕ್ಕೆ ಅವನಿಗೆ ಮಾಳೂರು ಬೇಡವಾಗಿತ್ತು. ಅಣ್ಣ, ಅತ್ತಿಗೆಯರು ಪೋಸ್ಟ್ ಜಟಕಾ ಹತ್ತುವಾಗ ಕೊಮಾರಿ ಹತ್ತಿರ ನಿಂತಿದ್ದ. ಸಾತಿ ಹಾಸ್ಯ ಮಾಡಿದಳು :

"ಸೈ, ಇನ್ನೇನು ಕೊಮಾರಿ ಮಾಳೂರು ಕಡಿಗೆ ಬರೂದಿಲ್ಲ. ಹೌದಾ ?"

ಕೊಮಾರಿ ನಿರ್ಭಾವದಿಂದ ಹೇಳಿದ–

"ಬರ್ದೀ ಏನು ? ಅಮ್ಮ ಹೋಗೂಂದಗತಿಗೆ ಹೊರಡ್ಬಕಲ್ಲ."

"ನೀ ಬರೂವಾಗ ಸೀತೇನೂ ಕರ್ಕ್ಯಂಬಾರಾ ?"

"ಮನೇಲಿ ಅಮ್ಮನ ಹತ್ರ ಹೇಳೂಕಿಲ್ಲ ? ಇಲ್ಲಿ ನನ್ಹತ್ರ ಹೇಳಿದ್ರೆ ಯಂತದು ?"

"ಅದೂ ಸಮ ಅನ್ನು. ಹ್ಯಾಂಗೂ ಅವಳು ಒಂದಪ ತೌರ್ಮನೀಗೆ ಹೋಗಿ ಬರ್ಬಕಲ್ಲ. ಆಮ್ಯಾಲಿ ನಿಮ್ಮಣ್ಣನೇ ಬಂದು ಹೇಳ್ತಾರೆ. ಅಗ ಕರ್ಕ್ಯಂಬಾ. ಪಾಪ ಇನ್ನೂ ಎಳೀ ಹುಡುಗಿ, ತುಸ ಸಮನಾಗಿ ನೋಡ್ಯಾ. ನಿಮ್ಮಮ್ಮನ ಮಾತ ಕಟ್ಕಂಡು ಹೊಡ್ದುಗಿಡ್ಬೀಯಾ !"

"ಆತು ಹೊರಡಿ" ಎಂದ ಕೊಮಾರಿ.

ಗಾಡಿ ಹೊರಟಿತು. ಆಗಿನ ಕಾಲಕ್ಕೆ ಅದು ಭಾರೀ ಸುಖದ ಪ್ರಯಾಣ. ಮಕ್ಕಳು ಕೇಕೆ ಹಾಕಿದವು. ಪೋಸ್ಟಾಫೀಸಿನ ಹತ್ತಿರದಿಂದಲೇ ಗಾಡಿ ಹೊರಟದ್ದು. ಅಲ್ಲಿಗೂ, ಕುರುವಳ್ಳಿಗೂ ಸುಮಾರು ಮುಕ್ಕಾಲು ಮೈಲಿ ಕೊಮಾರಿ ನಿಧಾನವಾಗಿ ನಡೆದು ಹಿಂದಿರುಗಿದ. ಕಚೇರಿಯ ಹಗ್ಗಿನಲ್ಲಿ ಕೇಶವಯ್ಯನ ಹೋಟೆಲು ಪ್ರಾರಂಭವಾಗಿ ವರ್ಷವಾಗಿತ್ತು. ತೀರ್ಥಹಳ್ಳಿಗೆ ಅದೊಂದು ಮಹಾಕ್ರಾಂತಿ. ಕಳೆದ ಎಳ್ಳಮಾಸೇಲಿ ಕೇಶವಯ್ಯ ಪೂರಾ ದುಡ್ಡು ಮಾಡಿದ ಎಂದು ಊರವರೆಲ್ಲ ಹೇಳಿಕೊಂಡರು. ಅದು ಮಡಿ ಹೋಟೆಲು. ನಾಗರಿಕರು, ಗೌಡರು, ಇತರೆಯವರು ಎಲ್ಲರಿಗೂ ಬೇರೆ ಬೇರೆ ಏರ್ಪಾಡು. ಕೊಮಾರಿ ತಾಯಿಗೆ ಗೊತ್ತಿಲ್ಲದಂತೆ ಒಂದೆರಡು ದಿನ ಮಡಿ ಕೋಣೆಯಲ್ಲಿ ಕೂತು ಬಿಸಿ ಇಡ್ಲಿ, ಬೆಣ್ಣೆ, ಚಟ್ಣಿ ತಿಂದು ಬಂದಿದ್ದ. ರಾಮಕ್ಕನ ಕಡಬು, ಬೆಣ್ಣೆ, ಚಟ್ಣಿಯ ಮುಂದೆ ಇದೇನೂ ಅಲ್ಲ. ಆದರೂ ಸಂಜೆಯ ಮೈಸೂರುಪಾಕು, ಕಾರಾಸ್ಯಾವೆ, ಪಕೋಡ ಇಡೀ ತೀರ್ಥಹಳ್ಳಿಯನ್ನೇ ಸೆರೆ ಹಿಡಿದಿತ್ತು. ಒಂದೊಂದು ದಿನ ಕೇಸರಿಭಾತು. ಅದೂ ಆಗಿನ ಕಾಲಕ್ಕೆ ಅಪರೂಪವೇ.

ಕೊಮಾರಿ ಮೆಲ್ಲಗೆ ಪಕ್ಕದ ಬಾಗಿಲಿಂದ ಹೋಟೆಲಿಗೆ ನುಸಿದ. ಮಡಿ ಕೋಣೆ ಹೊಕ್ಕ. ಯಾರಾದರೂ ಗುರುತಿನವರು ಕಂಡು ತಾಯಿಗೆ ಹೇಳಿ ಬಿಟ್ಟರೆ ? ಸೊಂಟದಲ್ಲಿ ಅವನದೇ ಆದ ಎಂಟಾಣೆ ಚಿಲ್ಲರೆ ಇತ್ತು. ಸದ್ದಿಲ್ಲದೆ ಮಣೆಯ ಮೇಲೆ ಕೂತು :

"ಒಂದು ಕಾಫಿ ಕೊಡ್ತೀರಾ ಕೇಶವಯ್ಯ ?" ಎಂದ.

"ಆಯ್ತು. ಮನೆಗೆ ಹೆಂಡ್ತಿ ಬಂದಾತಂತಲ್ಲ. ನನ್ನೇನು ಕರೀಲಿಲ್ಲ. ಇದ್ದಿಲ್ಲ. ಬರೀ ಕಾಪಿ ಯಾಕೆ ಕುಡೀತೀರಿ ? ಇವತ್ತು ಸೀಸಜ್ಜಿಗೆ, ಮಸಾಲೆ, ಆಂಬೋಡೆ ಹೊಸ ತಗಳ್ಳಿ"

ಬೇಡ ಎನ್ನಲು ಮನ ಬರಲಿಲ್ಲ ಮನೆಯಲ್ಲಿ ವಿಶೇಷಕ್ಕಾಗಿ ಮಾಡಿದ ರಾಶಿ ತಿಂಡಿ ಬಿದ್ದಿದ್ದರೂ ಅವೆಲ್ಲ ತನ್ನ ಅತ್ತೆ ಮಾಡಿದ್ದು ಆ ಮೋಟಮ್ಮ ಯಂತ ಮಾಡುತ್ತೆ. ಎರಡು ರಾತ್ರಿ ಸಾಲಾಗಿ ಕುಳಿತ ಗೋಪುರ, ಚಕ್ಲಿ, ಉಂಡೆಗಳನ್ನು ನೋಡಿದ್ದೇ ಹೊರತು ಅವು ಬಾಯಿನ ತನಕ ಬಂದಿರಲಿಲ್ಲ. ತಿಂಡಿಗಿಂತ ರುಚಿಯಾದ ಒಡತಿ ಬಗಲಲ್ಲಿದ್ದರಿಂದ.

ಈಗ ಕಾಫಿ–ತಿಂಡಿ ಮುಗಿಸಿ ನಾಲ್ಕಾಣೆ ಕೊಟ್ಟು ಮತ್ತೆ ಬಾಯಿಗೆ ಹೊಗೆಸೊಪ್ಪು ತುಂಬಿ ಮಳ್ಳಿಯಂತೆ ನಿಧಾನವಾಗಿ ನಡೆದು ಬಂದ. ಈಗ ತೀರ್ಥಹಳ್ಳಿ ಪೇಟೆ ನಾಗರಿಕವಾಗುತ್ತ ಬಂದಿತ್ತು ಅತ್ತಿತ್ತ ನೋಡುತ್ತ ತೇರು ಕೊಟ್ಟಿಗೆ ಮಾರ್ಗವಾಗಿ ಬಂದು ಕಲ್ಲು ಸಾರದಾಟಿ ಬಂದ. ಹಾಗೇ ಹೊಳೆಯಲ್ಲಿ ಸಂಧ್ಯಾವಂದನೆ ಕೆಲಸ ಮುಗಿಸಿಯೇ ಮನೆಗೆ ಕಾಲಿಟ್ಟ.

"ತೀರ್ತಳ್ಳಿ ಪ್ಯಾಟೆಗೆ ಹೋಗೂ ನೆವ ಸಿಕ್ರ್ಯಾತು, ಆ ಓಟ್ಲೆಗೆ ನುಗ್ಗೂದು. ಅವನೊಬ್ಬ ಹೋಟ್ಲೆಟ್ಟು ಬಾಂಬ್ರ ಕುಲ ಎಲ್ಲ ನಾಶ್ನ ಮಾಡ್ಬಿಟ್ಟ. ಇಷ್ಟು ಹೊತ್ತು ಬೇಕಾ ಅವರನ್ನ ಗಾಡಿ ಹತ್ಸಿ ಬರೂಕೆ ?"

'ದಾರೀಲಿ ಯಾರೋ ಸಿಕ್ರು. ಮಾತಾಡ್ತಾ ತುಸು ತಡಾತು' ಅಂತ ಸುಳ್ಳು ಹೇಳುವ ಮನಸ್ಸಾಯಿತು ಕೊಮಾರಿಗೆ. ಆಕಸ್ಮಾತ್ ಯಾರಾದರೂ ಹೋಟ್ಲಲ್ಲಿ ಕಂಡು ಅಮ್ಮನಿಗೆ ಹೇಳಿದ್ದರೆ ಅದು ಮತ್ತೂ ಭಯಂಕರ. ಸುಳ್ಳು ಹೇಳುವ ಧೈರ್ಯವಾಗಲಿಲ್ಲ. ಚೌಕಿಯ ಕಂಬ ಒರಗಿ ತೆಪ್ಪಗೆ ಕೂತ. ಸೀತೆ ಅತ್ತಿತ್ತ ಓಡಾಡುತ್ತಿದ್ದಳು. ತಾಯಿಯೂ ಓಡಾಡುತ್ತಿದ್ದಾಳೆ. ತಲೆ ಎತ್ತಿ ಹಗಲಲ್ಲಿ ಹೆಂಡತಿಯನ್ನು ಸರಿಯಾಗಿ ನೋಡಲೂ ಸ್ವತಂತ್ರವಿಲ್ಲ.

"ಚಿಮಣಿ ಒರಸೂದು ಮರತ್ಹೋತನಾ ? ಕೂತ್ಬಿಟ್ಯಲ್ಲ ಭಿಮ್ಮಗೆ ?" ಕೂಗು ಹಾಕಿದಳು ರಾಮಕ್ಕ. ಕೊಮಾರಿ ಮೆಲ್ಲಗೆ ಎದ್ದ. ಲಾಟೀನು

ಗೋಡೆ ದೀಪ ಒರೆಸಿ, ಚಿಮಣಿ ಎಣ್ಣೆ ಹಾಕಿಡುವ ಕೆಲಸ ಕೊಮಾರಿಯ ದಾಗಿತ್ತು.

ರಾತ್ರಿ ಹತ್ತು ಗಂಟೆಯವರೆಗೂ ಸೀತೆ ಅತ್ತೆಯ ಹಿಂದೆ–ಮುಂದೆ ಓಡಾಡಿದಳು. ಗಂಡನಿಗೆ ಬಡಿಸುವ ಕೆಲಸ ಸೀತೆಯ ಪಾಲಿಗೆ ಬಂದಿತು. ಪ್ರತಿ ಕೆಲಸದಲ್ಲಿಯೂ ತಪ್ಪು ಹುಡುಕಿ ಕೂಗಾಡುವುದು ರಾಮಕ್ಕನ ಜಾಯ ಮಾನ ಅದು ಇಡೀ ಕುರುವಳ್ಳಿ, ತೀರ್ಥಹಳ್ಳಿಗೆ ತಿಳಿದ ವಿಷಯ. ಸೀತೆಗೂ ತಿಳಿದುಹೋಯಿತು.

ಗಡಿಯಾರ ಎಂಬ ವೇಳಾಸೂಚಿ ರಾಮಕ್ಕನ ಮನೆಯಲ್ಲಿರಲಿಲ್ಲವಾದರೂ ಯಾವುದೋ ಕೆಲವು ನಿಸರ್ಗ ಸೂಚನೆಗಳಿಂದ ಆಕೆ ಕರಾರುವಾಕ್ಕಾಗಿ ಸಮಯ ಹೇಳುತ್ತಿದ್ದಳು. ಹಗಲಲ್ಲಿ ಬಿಸಿಲಿನ ಚಲನೆ, ಸಂಜೆ ಬಾನಾಡಿಗಳು ಗೂಡು ಸೇರುವ ಸಮಯ, ನಂತರ ದನದ ಕರುವಿನ ಕೂಗು, ರಾತ್ರಿ ಒಂಭತ್ತಕ್ಕೆ ತೀರ್ಥಹಳ್ಳಿಯಿಂದ ಕುರುವಳ್ಳಿ ಮನೆಗೆ ಬರುವ ಕಾಳಿಂಗಯ್ಯನ ಗೂರಲು ಕೆಮ್ಮು, ನಂತರ ಮರದ ತೊಗಟೆಗಳಿಗೆ ಅಂಟಿಕೊಂಡು ಕರ್ಕಶವಾಗಿ ಜಿರಿಜಿರಿಗುಟ್ಟುವ ಜೀರುಂಡೆ, ಭರಣಿ, ಲಕ್ಕವಕ್ಕಿಗಳ ಸದ್ದು ! ಹೀಗೆ ಗಡಿಯಾರ ಕ್ಕಿಂತ ಕರಾರುವಾಕ್ಕಾಗಿ ಸಮಯ ತಿಳಿಸುತ್ತಿದ್ದದ್ದು ನಿಸರ್ಗ. ಮಳೆಗಾಲದಲ್ಲಿ ಇವೆಲ್ಲ ಏರುಪೇರಾದರೂ ಆ ಜನರಿಗೆ ಗಡಿಯಾರದ ಅವಶ್ಯಕತೆ ಇರಲಿಲ್ಲ. ಕೆಲವು ಮುದುಕರಿಗೆ ಬೆರಳ ಸಂದಿನಿಂದ ಸೂರ್ಯನನ್ನು ನೋಡಿ ಇಷ್ಟೇ ಸಮಯವೆಂದು ಹೇಳುವ ಪರಿಪಾಠವಿತ್ತು.

ಅಂತೂ ಒಂದು ವಾರದಲ್ಲಿ ಸೀತೆಗೆ ಅತ್ತೆಯ ವ್ಯಕ್ತಿತ್ವದ ಪೂರ್ಣ ಪರಿಚಯವಾಯಿತು.

ವಾರಕ್ಕೆ ಎರಡು ಬಾರಿ ಹನ್ನೆರಡು ಕಂಬದ ಅಷ್ಟು ದೊಡ್ಡ ಚೌಕಿ ಮನೆ ಯನ್ನು ಪೂರಾ ಕರಿ, ಸಗಣಿ, ಹಾಳೆಕುಂಟೆನಿಂದ ಸಾರಿಸಿ ರಂಗವಲ್ಲಿ ಇಡ ಬೇಕು. ಓತ್ತಾಳೆ, ಕಂಚು, ತಾಮ್ರದ ಪಾತ್ರೆಗಳು ಸದಾ ಕಳಕಳವಾಗಿರ ಬೇಕು ಮನೆಯಲ್ಲಿ ಚೂರಾದರೂ ಕೊಳಕು ಬಟ್ಟೆ ಇಲ್ಲ. ಮಡಿವಾಳರು ಸದಾ ರಾಮಕ್ಕನ ಹತ್ತಿರ ಬೈಸಿಕೊಂಡಿದ್ದರು.

"ನಿಮ್ಮ ಸೊಡ್ಡಿಗಷ್ಟು ಬೆಂಕಿಹಾಕಾ. ಅಗಸ್ರ ಜಾತೀಲಿ ಯಾತಕ್ಕೆ

ಹುಟ್ಟಿದ್ದೀರಿ. ಹೊಳೇಲಿ ಆಪಾಟಿ ನೀರು ಹರೀತದೆ. ಯಂತ ಬಟ್ಟೆ ಒಗೀ ತೀರಿ ನಿಂ ತಲೆ."

ಎಂದು ಕೂಗು ಹಾಕಿದರೂ ಯಾರೂ ಆಕೆಗೆ ಎದುರಾಡಿದವರಲ್ಲ. ಕಾರಣ ಆಕೆಯ ಬಾಯಿಯಷ್ಟೆ ಕೈಯೂ ಅಗಲ. ಬಾಯಲ್ಲಿ ಕೂಗಾಡುತ್ತ ಕೈ ತುಂಬಾ ನೀಡುತ್ತಾಳೆ. ಗೋಕುಲಾಷ್ಟಮಿ ತಿಂಡಿ, ಗೌರಿ ಹಬ್ಬದ ಕಾಯಿ ಆಗಾಗ ತನಗೆ ಧಾರಾಳವಾಗಿ ಸಿಕ್ಕುವ ಅಪ್ಪೆಮಿಡಿ, ಜೀರಿಗೆಮಿಡಿಯ ಉಪ್ಪಿನ ಕಾಯಿಗಾಗಿ ಎಲ್ಲರೂ ರಾಮಕ್ಕನ ಸಹಸ್ರನಾಮ ಸಹಿಸಿಕೊಳ್ಳುತ್ತಿದ್ದರು.

ಸೀತೆಗೂ ತಿಳಿಯಿತು. ತನ್ನ ಅತ್ತೆಯ ಬಾಯಿ ಜೋರೇ ಹೊರತು ಮನಸ್ಸು ಜೋರಲ್ಲವೆಂದು. ಊಟ ತಿಂಡಿ ಕೊಡುವುದರಲ್ಲಿ ಧಾರಾಳ. ಮತ್ತು ಅಡಿಗೆ ತಿಂಡಿಯ ರುಚಿಯೂ ತಾಲ್ಲೂಕು ಪ್ರಸಿದ್ಧಿ.

ಗೋಡೆ, ಬಾಗಿಲು, ಕಿಟಕಿ, ಕಂಬ, ಬಚ್ಚಲು, ಅಡಿಗೆಮನೆ, ದೇವರ ಕೋಣೆ ನೆಲ ಸದಾಕಾಲ ಪರಿಶುಭ್ರ. ಮನೆಗೆ ಬಂದವರು ಯಾರಾದರೂ ಕ್ಯಾಕರಿಸಿದರೆ, ಮೂಗು ಸೀಟಿದರೆ ಆಗಲೇ ದಾಪುಗಾಲು ಹಾಕುತ್ತಾ ರಾಮಕ್ಕ ಹಾಜರು.

"ಯಾರದು ಮೂಗು ರ್‍ಷಾಡ್ತೋದು ? ಮುಂಚೇಕಡೆ ಚರಂಡಿ ಹತ್ರ ಹೋಗಿ, ಇಲ್ಲ ಇತ್ಲಕಡೆ ಗೊಬ್ಬರ ಗುಂಡಿ ಹತ್ರ ಹೋಗಿ. ಗೋಡೆಗೋ, ಕಂಬಕ್ಕೋ ಸೀಟಿದ್ರೆ ಮತ್ತೆ ನಿಮ್ಮ ಕೈಲೇ ತ್ವಳಸ್ತೀನಿ ತಿಳೀತಾ ?"

ಮೊಮ್ಮಕ್ಕಳು ಸಹಾ ಹೇಲು–ಉಚ್ಚೆಗೆ ಬಹು ದೂರ ಹೋಗಬೇಕು. ರಾಮಕ್ಕನ ಗೋಡೆಗಳು ಸದಾ ಬೆಳ್ಳಗೆ. ಕಂಬಗಳು, ಹೊಸ್ತಿಲುಗಳು ಕೆಂಪು. ನೆಲ ಕಪ್ಪು ಸಾರಣೆ–ಕಾರಣೆಗಳಿಂದ ಹಬ್ಬದ ಮನೆಯಂತೆ ಶುಭ್ರ. ಇರುವೆ, ತೊಂಡಂಗಿ, ಇಲಿ, ಹೆಗ್ಗಣಗಳು ರಾಮಕ್ಕನ ಮನೆಯಲ್ಲಿರಲಿಲ್ಲ. ಅವುಗಳ ಮರ್ಧನಕ್ಕೆ ರಾಮಕ್ಕನ ವಿಧಾನಗಳು ಬಹಳ.

ಒಂದು ವಾರದಲ್ಲೇ ಸೀತೆಗೆ ಅತ್ತೆಯ ಕೆಲಸ, ಅಡಿಗೆ, ನಡವಳಿಕೆ ಮೆಚ್ಚುಗೆಯಾಯಿತು. ತಾನೂ ಸಾಧ್ಯವಾದ ಮಟ್ಟಿಗೆ ಆಕೆಯಂತೆ ಕೆಲಸ ಮಾಡಲು ಕಲಿತಳು. ರಾಮಕ್ಕ ಹೇಳುತ್ತಿದ್ದುದು ಸರಿ ಅನಿಸಿತು.

"ಆ ಮೋಟೀಗೆ ಏನಾಗ್ಬ್ಯಾಕಾಗದೆ ? ಒಂದ್ಕೆಲಸಾನಾರಾ ಸಮನಾಗಿ ಕಲ್ತಿಲ್ಲ. ಮದ್ವೆ ಅದಕ್ಕೆ ಬಂದ್ರಲ್ವ ? ಆ ಹಳ್ಳಿ ಕೊಂಪೇಲಿದ್ಗಂಡು ಹಳ್ಳದ

ನೀರಿನ ಅಭಿಷೇಕ ಮಾಡ್ಕಂಡು, ನುಚ್ಚಕ್ಕಿ ಅನ್ನ, ಉಕ್ತಿಳಿ, ದಿಂಡಿನ ಕಾಯಿ ಗೊಜ್ಜು, ಮೆರಿಟ್ಕಂದು ತಿಂದ್ರೆ ಗೆದ್ರು. ನೆಟ್ಟಗೆ ಒಂದು ಬ್ಯಾಳೆ ಸಾರು ಮಾಡೂಕೆ ಬರುತ್ತಾ ಅದಕೇ ?"

ತನ್ನ ಅತ್ತೆ ಹೇಳುವ ಮಾತು ಸರಿ ಅನಿಸಿತು ಸೀತೆಗೆ. ದಿನಾ ಗಂಜಿ ಮಜ್ಗೆ, ಉಕ್ತಿಳಿ, ಹುಣಸೇ ಸಾರು, ಮೆಣಸಿನ ಸಾರು, ಟೊಕ್ಕು, ನೆಲ್ಲಿ ಚಟ್ನಿ ಗೊಜ್ಜುಗಳು. ತರಕಾರಿಗಳ ಸಾಸ್ಮೆ, ಪಲ್ಯ, ಬೇಳೆ ಸಾರು, ಹುಳಿ ಅಂದರೆ ತೀರಾ ಅಪರೂಪ. ಇಲ್ಲಿ ಅತ್ತೆಯ ಮನೆಯಲ್ಲಿ ಇರುವುದು ಮೂರು ನಾಲ್ಕು ಜನರಾದರೂ ದಿನಾ ಬೇಳೆ ಸಾರು, ಹುಳಿ, ತಂಬುಳಿ, ಕಾಯಿರಸ ಇತ್ಯಾದಿ ಸೊಗಸಿನ ರುಚಿಕಟ್ಟಿನ ಅಡಿಗೆಗಳು

ಒಟ್ಟಿನಲ್ಲಿ ಸೀತೆಗೆ ಅತ್ತೆಯ ಮನೆ ಅಪ್ಯಾಯಮಾನ. ಕಾರಣ ದಿನವೂ ಶಂಕರಭಟ್ಟರ ಸೊಸೆಯರ ಜೊತೆಗೆ ಮುಸುರೆ, ಉಪಕರಣೆ, ಬಟ್ಟೆ ಹೊತ್ತು ಹತ್ತಿರದ ಹೊಳೆಗೆ ಹೋದರೆ ಕುರುವಳ್ಳಿ ಅಗ್ರಹಾರದ ಹೆಂಗಸರೆಲ್ಲ ಅಲ್ಲಿ ನೆರೆದಿರುತ್ತಿದ್ದರು. ರಾಮತೀರ್ಥದೆಡೆಯಲ್ಲಿ ಸಾಲಾಗಿ ತಮ್ಮ ತಮ್ಮ ಸ್ಥಳ ಕಾದಿರಿಸಿಕೊಂಡು ಬಟ್ಟೆ ಒಗೆದು, ಬೆಳ್ಳಗೆ ಪಾತ್ರೆ ಬೆಳಗಿಕೊಂಡ ಕೆಂಪಗಿನ ಕೊಡಪಾನಿಗಳಲ್ಲಿ ನೀರು ಹೊತ್ತು ಸಾಲು ಸಾಲಾಗಿ ಮನೆಗೆ ಬರುವುದು. ಆ ಸಮಯ ಎಷ್ಟು ಆಹ್ಲಾದಕರ !

ಹನುಮಕೊಂಡಕ್ಕೆ ಹಾರಿ ಬಂಡೆಯ ಸುರಂಗದಿಂದ ತೂರಿ ಪುಷ್ಕರಣಿಗೆ ಬಂದು ಈಜು ಹೊಡೆಯುವ ಲಂಗೋಟಿ ಪೋಕರಿಗಳನ್ನ ನೋಡಿದಾಗ, 'ನಾನು ಗಂಡಾಗಿದ್ದರೆ ಹೀಗೇ ಈಜು ಹೊಡೀಬಹುದಿತ್ತು' ಎಂದುಕೊಳ್ಳುವಳು ಸೀತೆ ಭೋರ್ಗರೆಯುವ ಜಲರಾಶಿ. ಸ್ನಾನಕ್ಕೆ ಬಂದ ನೂರಾರು ಗಂಡಸರು, ಮುದುಕಿಯರು, ತೀರ್ಥಹಳ್ಳಿಯ ಯುವಕರು ಎಲ್ಲರ ಮಾತು, ವಿನೋದ, ಜಲಕ್ರೀಡೆ ಸೀತೆಯ ಮನಕ್ಕೆ ಮುದ ತರುತ್ತಿತ್ತು. ತೌರಿನ ನೆನಪು ಬರುತ್ತಿರಲಿಲ್ಲ. ಆದರೆ ತಿಂಗಳು ತುಂಬುವುದರಲ್ಲಿ ಮಗಳನ್ನು ಮೊದಲ ಬಾರಿ ತೌರಿಗೆ ಕರೆಯಲು ಗಾಡಿ ಕಟ್ಟಿಕೊಂಡು ಶಂಕರಭಟ್ಟರೊಂದಿಗೆ ಬಂದ ಮಹಾಬಲ ಎಲ್ಲರ ಮನ ಹಗುರಾಗುವಂತಹ ಸಂತಸದ ಸುದ್ದಿ ತಂದಿದ್ದ. ಸೀತೆ ಕುಪ್ಪಳಿಸಿದಳು.

ಸೀತೆಗೆ ಈಗ ತೌರಿಗೆ ಹೋಗುವ ಹಂಬಲವಿರಲಿಲ್ಲವಾದರೂ ಮಹಾಬಲ

ಹೇಳಿದ ಸುದ್ದಿಯಿಂದ ಈಗ ಹೋಗಿ ಅಜ್ಜಿಯನ್ನು ಕಂಡು ತನ್ನ ಗಂಡನ ಮನೆ ಸುದ್ದಿ ಹೇಳಬೇಕೆಂದು ಆಸೆಯಾಯಿತು.

"ಒಂತಿಂಗ್ಳಿಟ್ಕಂಡು ಮತ್ತೆ ತಂದು ಬಿಟ್ಬಿಡು. ಗಳಿಗ್ಗೊಂದಪ ನಾ ಹೇಳಿ ಕಳ್ಸೂದಿಲ್ಲ ತಿಳೀತಾ ?"

ಎಂದು ಆಜ್ಞೆ ಮಾಡಿದಳು ರಾಮಕ್ಕ. ಸೀತೆ ಭಟ್ಟರ ಮನೆಯವರಿಗೆಲ್ಲ ಹೇಳಿ ಬಂದು ಗಾಡಿ ಹತ್ತಿದಳು. ಕೊಮಾರಿ ಗಾಡಿಯ ಹಿಂದೆ ಬಂದು ನಿಂತಿದ್ದ. ಪ್ರಸ್ತವಾಗಿ ತಿಂಗಳಾಗಿದ್ದರೂ ಅವನು ಬಹಿರಂಗದಲ್ಲಿ ಹೆಂಡತಿಯೊಡನೆ ಮಾತಾಡುವಂತಿರಲಿಲ್ಲ. ರಾತ್ರಿ ಹೆಂಡತಿ ಮಗ್ಗುಲಿಗೆ ಬಂದಿದ್ದರೂ ಮಾತಾಡಲು ಇಬ್ಬರಿಗೂ ವಿಷಯವೇ ಇರಲಿಲ್ಲ. ಸೀತೆಯಾದರೂ ಏನು ಮಾತಾಡಬೇಕು ? ಹೆಂಡತಿಗೆ ಏನಾದರೂ ತಂದು ಕೊಡುವಂತಿಲ್ಲ ; ಎಲ್ಲಿಗಾದರೂ ಕರೆದೊಯ್ಯುವಂತಿಲ್ಲ. ಬೆಳಗಿನತನಕ ಅವಚಿ ಮಲಗುವುದಷ್ಟೇ ಸುಖ.

ರಾಮಕ್ಕನಲ್ಲಿ ಅದಕ್ಕೂ ಕೆಲವು ನಿಯಮಗಳಿದ್ದವು. ಅಮಾವಾಸ್ಯೆ ಸಂಕ್ರಮಣ ಇಂಥ ದಿನಗಳಲ್ಲಿ ಗಂಡ–ಹೆಂಡಿರು ಒಟ್ಟಿಗೆ ಮಲಗಬಾರದು. ಮುಟ್ಟು ನೀರಾಗಿ ನಾಲ್ಕು ದಿನಗಳ ನಂತರ ಗಂಡನ ಕೋಣೆಗೆ ಹೋಗಬೇಕು. ಹಗಲೆಲ್ಲ ಹೆಂಡತಿ ಹಿಂದೆ ತಿರುಗಬಾರದು. ಇವು ರಾಮಕ್ಕ ತನ್ನ ಅತ್ತೆಯಿಂದ ಕಲಿತ ಶಾಸನಗಳು.

ಕೆಲವು ದಿನ ರಾತ್ರಿ ಊಟವಾದ ಮೇಲೆ ಕೊಮಾರಿ ಹೆಂಡತಿ ಕೋಣೆಗೆ ಒರಲಿ ಎಂದು ಚೌಕಿಯ ಕಂಬ ಒರಗಿ ಕೂತರೆ ಅಥವಾ ಅತ್ತಿತ್ತ ಸುಳಿದಾಡುತ್ತಿದ್ದರೆ ರಾಮಕ್ಕ ಅದರ ಸುಳು ತಿಳಿದು ಗುಡುಗುತ್ತಿದ್ದಳು.

"ಯಾಕಿನ್ನ ಇಲ್ಲೇ ತ್ವಾಳೆ ಹುಳೀನ ಹಾಗೆ ನುಸೀತೀಯೋ ? ಮುಹೂರ್ತ ಆತೂಂತ ಬೆಳತನಕ ಕದ್ರೂಂತ ಗಾದೆ ಆದೆ. ಪ್ರಸ್ತಾದ ಮಾತ್ರಕ್ಕೆ ದಿನಾ ಹೆಂಡ್ತಿ ಕ್ವಾಣೆಗೆ ಬರಬಾರ್ದು. ಇವತ್ತು ಅಮಾಸೆ. ಕಚ್ಚಿ ಛಿಮ್ಮಗೆ ಬಿಕ್ಕಂಡು ಬಿದ್ಗಾ ಹೋಗು. ಇವತ್ತು ಅದನ್ನ ನನ್ನ ಮಗ್ಗಾಲ್ಗೇ ಮಲಗಿಸ್ಕ್ಯಾತನಿ."

ಕೊಮಾರಿಯ ಮನ ಮುದುರುತ್ತಿತ್ತು. ಸೀತೆಗೆ ಖುಷಿಯಾಗುವುದು. ತಾಯಿಯ ಮುಂದೆ ಕೈ ಬಾಯಿ ಎತ್ತಲಾರದ ಕೊಮಾರಿ ಮನದಲ್ಲೇ, 'ಸೀ

ಬ್ಯಾಗ ನೆಗೆದು ಬಿದ್ಹೋಗು' —ಎಂದು ತಾಯಿಗೆ ಶಪಿಸಿ ತನ್ನ ಕತ್ತಲು ಕೋಣೆ ಸೇರಿ ಕಂಬಳಿಯಲ್ಲಿ ಕೈಕಾಲು ಮುದುರುವ.

ಸೀತೆ ದೊಡ್ಡ ಬಾಗಿಲ ಮರೆಯಲ್ಲಿ ತಂತಾನೇ ಪಿಸಕ್ಕನೆ ನಕ್ಕು ಸಂತಸ ಪಡುವಳು. ಮತ್ತೆ ಅತ್ತೆಯ ಮಗ್ಗುಲಲ್ಲಿ ತನ್ನ ದಟ್ಟಿದ ಹಾಸಿಗೆ ಹಾಸಿ ಕೊಂಡು ಮುಮುರಿ ಕ್ಷಣದಲ್ಲಿ ನಿದ್ದೆ ಹೊಡೆಯುವಳು.

ಈ ಒಂದು ತಿಂಗಳಲ್ಲಿ ಹೀಗೆ ಮೂರು ನಾಲ್ಕು ದಿನ ಹೆಂಡತಿಯ ಸಹ ವಾಸ ತಪ್ಪಿಹೋಗಿತ್ತು ಕೊಮಾರಿಗೆ. ಸೀತೆ ತೌರಿಗೆ ಹೊರಟ ದಿನ ಮಧ್ಯಾಹ್ನವೇ ಟಪಾಲು ಗಾಡಿಯಲ್ಲಿ ಕೊಮಾರಿ ಮಾಳೂರಿಗೆ ಹೊರಟ—

"ನಾ ಮಾಳೂರಿಗೆ ಹೋಗಿ ಬರ್‍ತಂತೆ."

ಎಂದ. ತಾಯಿಯ ಉತ್ತರ ಕಾಯದೆ ಕಲ್ಲುಸಾರ ದಾಟಿದ.

"ಮೈಗಳ್ಳ ಮುಂಡೇದು. ಇಲ್ಲಿದ್ರೆ ಕೆಲ್ಸ ಮಾಡ್ಬೇಕಾಗುತ್ತೇಂತ ಎರಡೆರಡು ದಿನಕ್ಕೊ ಮಾಳೂರು–ಮಾಳೂರೂಂತ ಓಡುದು. ಆ ಸುಪನಾ ತೀರು ಖುಮ್ಮಾಗೆ ಮಾಡಿ ಒಟ್ತಾರೆ. ಹೊಟ್ಟೆ ಬಿರಿಯ ತಿನ್ನೂದ, ಜಗ್ಲಿ ತುದೀಲಿ ಗಳಿಗ್ಗೊಂವಪ ಪಿಚಕ ಪಿಚಕ ತಂಬ್ಕ ತುಪ್ತಾ ಕುಕ್ಕರ ಒಡಿಯೂದು! ಇಷ್ಟೇ ಸೈ ನಿನ್ನ ಹಣೇಬರ."

ರಾಮಕ್ಕ ಇದಿಷ್ಟನ್ನು ಸ್ವಗತವಾಡುವುದರಲ್ಲಿ ಕೊಮಾರಿ ಕಲ್ಲುಸಾರ ದಾಟಿಯಾಗಿತ್ತು. ಅಮ್ಮನ ತಾರಸ್ವರದ ಬೈಗಳು ಒಮ್ಮೊಮ್ಮೆ ಹೊಳೆ ದಾಟಿ ಭೀಮನ ಬುತ್ತೀಕಲ್ಲಿಗೂ ಬಡಿಯುತ್ತದೆಂದು ಅವನಿಗೆ ಗೊತ್ತಿತ್ತು.

"ನಾ ಯಂತದಾರಾ ಮಾಡ್ಕತನಿ ನಿಂಗೇನಂತೆ ?"

ಎಂದು ಅವನೂ ಸ್ವಗತವಾಡಿಕೊಂಡು ಜುಟ್ಟು ಕುಣಿಸುತ್ತ ದಾಪು ಗಾಲು ಹಾಕಿದ.

ಸೀತೆ ತಗ್ಗಿನಮನೆ ಮುಟ್ಟಿದಾಗ ಪೂರ್ತಿ ಕತ್ತಲಾಗಿತ್ತು. ಆದರೇನು ತಗ್ಗಿನಮನೆ, ಕಟ್ಟೆಮನೆ ಎರಡೂ ಬೆಳಕಾಗಿದೆ. ಹಲವಾರು ವರ್ಷಗಳಿಂದ ಶಾಪದ ಕತ್ತಲೆ ಮುಚ್ಚಿದ ಮನೆಗಳನ್ನು ಈ ಬಾರಿ ಶಂಕರಭಟ್ಟರು ಪಟ್ಟು ಹಿಡಿದು ಕೂತು ಎರಡು ಮನೆಯವರನ್ನು ಧರ್ಮಸ್ಥಳಕ್ಕೆ ಕರೆದೊಯ್ದು ಇಬ್ಬ ರಿಂದಲೂ ತಪ್ಪು ಕಾಣಿಕೆ ಕಟ್ಟಿಸಿ ಇಟ್ಟುಕೊಂಡ ಆಣೆ ಬಿಡಿಸಿ ಅಲ್ಲಿಯೇ ಸಹ ಪಂಕ್ತಿ ಭೋಜನ ಮಾಡಿಸಿ, ಮಾತಾಡಿಸಿ ಕರೆ ತಂದರು.

ಸೀತೆಗೆ ಎಷ್ಟು ಹೊತ್ತಿಗೆ ಅಚ್ಚಿಯನ್ನು ನೋಡೇನು ಅನ್ನಿಸಿತ್ತು. ಮನೆಯ ಬಾಗಿಲಲ್ಲಿ ಗಾಡಿ ನಿಂತೊಡನೇ ಸೀತೆ ಕೆಳಕ್ಕೆ ಹಾರಿದಳು. ಅಚ್ಚಿ ಎದುರಿಗೇ ನಿಂತಿದ್ದಾಳೆ. ನಾಟಕೀಯವಾಗಿ ಒಬ್ಬರನ್ನೊಬ್ಬರು ಅಲಂಗಿಸಿ ಕೊಳ್ಳುವ ಹುಚ್ಚುತನ ಅಲ್ಲಿ ಯಾರಿಗೂ ಇರಲಿಲ್ಲವಾದ್ದರಿಂದ ಅಚ್ಚಿ ಓಡಿ ಬಂದು ಸೀತೆಯ ಕೈ ಹಿಡಿದಳು. ಸಾವಿರ ಭಾವನೆ, ಮಾತುಗಳು ಬಾಯೊಡೆದು ಬರವಂತಾಗಿದೆ.

ಮುಂದಿನ ಕೆಲವು ಗಂಟೆಗಳ ವಿಷಯ ವಾಚನಾನೀತ. ಆ ಮನೆಯವರು ಈ ಮನೆಯಲ್ಲಿ, ಈ ಮನೆಯವರು ಆ ಮನೆಯಲ್ಲಿ ಮಲೆನಾಡಿನ ಹಳ್ಳಿಯ ಕೊಂಪೆ ಮನೆಯಲ್ಲಿ ಎಂಥದೊ ಸಂಭ್ರಮ ಕುಣಿಯುತ್ತಿದೆ. ಕೆಪ್ಪು ಮಹಾಲಕ್ಷ್ಮಮ್ಮನ ಮುಂದೆ ಅರೆ ಕುರುಡು ಅಮ್ಮಣ್ಣಕ್ಕ ಕೂತು ಬಹಳ ವರ್ಷದ ಮಾತಾಡುತ್ತಿದ್ದಾರೆ.

ಹರಳೆಣ್ಣೆ ಕಾಲುದೀಪದ ಬೆಳಕಿನಲ್ಲೂ ಸೀತೆ ಒಂದು ತಿಂಗಳಲ್ಲಿ ಮೊದಲಿಗಿಂತ ಚಂದವಾಗಿ ಮೈ ಕೈ ತುಂಬಿಕೊಂಡಿದ್ದಾಳೆಂದು ಎಲ್ಲರಿಗೂ ತಿಳಿಯಿತು. ಅಚ್ಚಿ ಸೀತೆಯನ್ನು ಎಳೆದುಕೊಂಡೇ ಹೋದಳು ತನ್ನ ಮನೆಗೆ. ಹಿರಿಯರಿಗೆ ನಮಸ್ಕಾರವಾಯಿತು. ಸೀತೆ ಅತ್ತೆ ಮನೆಯ ಸುದ್ದಿಯಾಯ್ತು. ಮನೆಗೆ ಬಂದಳು

ಮರುದಿನ ಸೀತೆ ಕಣ್ಣುಬಿಡುವುದರಲ್ಲೇ ಅಚ್ಚಿ ಹಾಜರು. ಆ ಮನೆಯ ಮಕ್ಕಳೆಲ್ಲಾ ಇಲ್ಲೇ

ಅರಮನೆಯಾದರೂ ಒಂದು ನೆರೆಮನೆ ಬೇಕು ಎಂಬ ಗಾದೆ ಇದೆ. ಇಲ್ಲಿ ನೆರೆಮನೆ ಇದ್ದೂ ಇಲ್ಲದಂತಾಗಿತ್ತು ಕಷ್ಟ-ಸುಖ, ಶುಭಾಶುಭ ಏನೇ ಆದರೂ ಎರಡು ಮನೆಯವರೂ ಒಂಟಿಯೇ. ಈಗ ಒಂದು ಸಂಕಟ ಪರಿಹಾರವಾಗಿತ್ತು.

ಮರುದಿನ ಅಚ್ಚಿ ಸೀತೆಯರು ಗುಡ್ಡದಲ್ಲಿ ಹರಟೆಗೆ ಸೇರಿದಾಗ ಅಚ್ಚಿ ಕೇಳಿದಳು :

"ಎಷ್ಟು ದಿನ ಇರ್ತೀಯೇ ಇಲ್ಲಿ ?"

"ಒಂತಿಗ್ಳೂ ಅಂದದಾರೆ ಅತ್ತೆ."

"ನಿಮ್ಮತ್ತೆ ಇಪ್ರೀತ ಜೋರಂತೆ ಹೌದಾ ?"

"ಜೋರೇ. ಯಾವಾಗ್ಲೂ ಕರಾಕರಾ ರಗೈ."

"ನಿಂಗೂ ಬೈದೂ ಹೊಡ್ದು ಮಾಡ್ತಾರಾ ?"

"ಬೈಯೂಕೇನಡ್ಡಿಲ್ಲ. ಯಲ್ಲಾರನ್ನೂ ಬೈತಾರೆ. ನಂಗೂ ಒಂದಪ ಎರಡೇಟು ಕೊಟ್ರು."

"ನಿನ್ನ ಗಂಡನೂ ಹೊಡೀತಾರನೇ ?"

"ಹೊಡಿಯೂಕೆ ನಾ ಅವರ ಹತ್ರ ಹೋದರಲ್ವ."

"ಹಂಗಾರೆ ರಾತ್ರೆ ಅವರ್ಜೊತೆ ಮಲಗೂದಿಲ್ಲನೇ ?"

"ಮಲಗ್ತನಿ."

"ಹಂಗಾರೆ ಅವರು ಒಳ್ಳೇರು ಅಲ್ವಾ ?"

"ಇದ್ದೀತು ಆದರೆ ಥೂ ! ಬರೀ ಪುಂಡು "

"ಹಂಗಂತ್ರೆಂತದೇ ? ನಗೆಚಾಟ್ಕೆ ಮಾಡ್ತಾರಾ ?"

ಸೀತೆ ಅಚ್ಚಿಯ ಮುಖ ನೋಡಿದಳು. ಅವಳೂ ತನ್ನ ವಯಸ್ಸಿನವಳೇ ಆದರೂ ಅವಳು ತನ್ನಂತೆ ಬೆಳದಿಲ್ಲ. ಇನ್ನು ಮೈ ನೆರೆದಿಲ್ಲ. ತನ್ನ ಹಾಗೆ ಅವಳಿಗೆ ಎದೆ ತುಂಬಿಕೊಂಡಿಲ್ಲ 'ಇದನ್ನು ಯಾರ ಹತ್ರಾನೂ ಹೇಳ ಬಾರ್ದೂಂತ' ಭಟ್ರ ಹೆಂಡ್ತಿ ಅಂದಿದ್ದು ನೆನಪಿಗೆ ಬಂತು. ಮಾತು ತೇಲಿಸಿ ದಳು ಸೀತೆ.

"ಹೂಂ ಕಣೆ, ಗಂಡಸ್ರೆಲ್ಲ ಹಂಗೆಯೋ ಯಂತದೋ ನಾಚ್ಕಿಲ್ಲ-ಹೇಸ್ಕಿಲ್ಲ."

"ನಿನ್ಗಂಡ ಸೂಳೆ ಇಟ್ಕಂಡಾದರನೇ ?"

ಮನೆಯಲ್ಲಿ ಹಿರಿಯರು ಆಗಾಗ ಸಾಹುಕಾರರ ಸುದ್ದಿ ಮಾತಾಡುವಾಗ ಹೇಳುತ್ತಿದ್ದ ಸುದ್ದಿ. ಒಬ್ಬ ಗಂಡಸಿಗೆ ಮೂರು ನಾಲ್ಕು ಜನ ಹೆಂಡತಿಯರು ; ಹಣ ಹೆಚ್ಚಿದ್ದವರು, ನೆಣ ಹೆಚ್ಚಾದವರು ಸೂಳೆ ಇಟ್ಟುಕೊಳ್ಳುವುದು ಅಲ್ಲಿಯ ಪರಿಸರದಲ್ಲಿ ಸಾಮಾನ್ಯ. ಅಂಥವರನ್ನು ಸಾಮಾನ್ಯವಾಗಿ ಪುಂಡ, ಪೋಕರಿ ಎನ್ನುವುದು ರೂಢಿ. ಅಚ್ಚಿ ಯಾವ ಸೂಳೆಯನ್ನೂ ನೋಡಿರಲಿಲ್ಲ ವಾದರೂ ಸೂಳೆಯರು ಬಿನ್ನಾಣಗಿತ್ತಿಯರು ಎಂದು ತಿಳಿದಿದ್ದಳು.

ಅಚ್ಚಿಯ ಪ್ರಶ್ನೆ ಸೀತೆಗೆ ಬೇಜಾರನ್ನೇನೂ ತರಲಿಲ್ಲ. ಅವಳು ಸಹಜ ವಾಗಂದಳು—

"ಅಯ್ಯಾ! ಅವರ ಸೊಡ್ಡಿಗೆ ಸೊಳೆ ಒಂದು ಕೇಡು. ಅದೆಲ್ಲ ಯಂತೆದಿಲ್ಲ. ನಿಂಗೆ ಅದ್ನೆಲ್ಲ ಈಗ್ಲೆ ಹೇಳ್ಬಾರ್ದಂತೆ ಕಣೆ. ನೀ ಮೈನೆರದು ಪ್ರಸ್ತಾದಾಗ ನಿಂಗೇ ತಿಳಿಯುತ್ತೆ. ಅಂದ್ಹಾಗೆ ನೀ ಯಾಕೆ ಇನ್ನೂ ನೆರದಿಲ್ಲ. ನನ್ನಷ್ಟೇ ವರ್ಷಲ್ಲವೆ ನಿಂಗೆ?"

ಅಚ್ಚಿ ಪೆಚ್ಚಾಗಿ ಅಂದಳು :

"ಅದು ನಂಗೇನ್ಗೊತ್ತೆ? ಅಗ್ಲೆ ನಮ್ಮತ್ತೆ ಮನೇಲಿ ಯಂತೆಂತೆದೋ ಹೇಳಿ ಕಳ್ಸಿದಾರೆ. ಹುಡ್ಗಿ ಇನ್ನೂ ನೆರೀಲಿಲ್ಲ. ಹದ್ನಾಕ್ವರ್ಷ ತುಂಬಿ ಹೋತು. ಇನ್ನು ಆರ್ತಿಂಗ್ಳಾಗೆ ನೆರೀದಿದ್ರೆ ಹುಡಗ್ಗೆ ನಾವು ಬ್ಯಾರೆ ಲಗ್ನ ಮಾಡ್ತವಿ. ಲಂಗು–ಲೊಸ್ಕೂಂತ"

"ಅವರ ಹಿಂದೇಕೂಳು. ಆ ಕುಂಟನ್ನ ಲಗ್ನ ಮಾಡ್ಕಳೊಕೆ ಕಾದು ಕೂತದಾಳೆ ರಂಭೆ. ಸುಮ್ನೆ ನಿಮ್ಮನ್ನ ಹೆದಸ್ರೂಕೆ. ಮಾಡಿದ್ರೆ ಮಾಡ್ಕಳ್ಳಂತೆ ಬಿಡೆ."

"ಉಂಟನೇ ಹೆಣ್ಮಕ್ಳು ಲಗ್ನಾದ ಮ್ಯಾಲೆ ಎಷ್ಟು ದಿನಾಂತ ತೌರ್ಮನೇಲಿ ಕೂತಿರೂಕಾಗತ್ತೆ. ಆ ಮ್ಯಾಲೆ ಯುಲ್ಲಾರೂ ತಲಾ ತಟ್ಟಿಗೆ ಒಂದೊಂದು ಅಂತಾರೆ"

ಒಬ್ಬೊಬ್ರು ಬ್ಯಾಗ ನೆರೀತಾರೆ. ನೀ ಸಣ್ಣಗಿದ್ದೀ. ತುಸು ತಡಾದೀತು ಸೈ."

ಮುಂದೆ ವಿಷಯ ಬದಲಾಯಿತು ಸೀತೆ ತೀರ್ಥಹಳ್ಳಿ, ಕುರುವಳ್ಳಿಯ ಸುದ್ದಿ ಎಲ್ಲಾ ಹೇಳಿದಳು. ತನ್ನ ಅತ್ತೆಯ ಕೆಲಸದ ಅಚ್ಚುಕಟ್ಟು, ಶುಭ್ರತೆ, ಅಡಿಗೆ–ತಿಂಡಿಗಳ ರುಚಿ, ಆಕೆಯ ಧಾರಾಳ ಎಲ್ಲವನ್ನೂ ದಿನದಿನವೂ ವರ್ಣಿಸ ತೊಡಗಿದಳು.

ಎರಡು ಮನೆಗಳು ಒಂದಾದ್ದರಿಂದ ಹಳ್ಳಿಗೇ ಹೊಸ ಸಂಭ್ರಮ. ಈಗ ಮೋಟಿಯೂ ಸೀತೆಯನ್ನು ಬೈಯುವುದನ್ನು ಬಿಟ್ಟಿದ್ದಳು ಸೀತೆ, ಅಚ್ಚಿ ಗುಡ್ಡ, ತೋಟ, ಕೆರೆ, ಬಯಲು ಅಲೆದರು. ಹಣ್ಣು–ಹಂಪಲು ತಿಂದರು. ಚೌಕಾಬಾರ, ಚನ್ನೆಮಣೆ ಆಡಿದರು. ಉಯ್ಯಾಲೆ ತೂಗಿದರು. ಅಜ್ಜಿಯರು ಮಾಡಿಕೊಟ್ಟ ತಿಂಡಿ ತಿಂದರು. ನಕ್ಕು ನಲಿದರು.

ತಿಂಗಳು ಕಳೆಯುವುದರಲ್ಲಿ ಅಂಚೆ ಶೇಷಪ್ಪನವರು ಖುದ್ದಾಗಿ ಬಂದು ಸೀತೆಯ ಅತ್ತೆ ಹೇಳಿ ಕಳಿಸಿದ ಮಾತನ್ನ ತಿಳಿಸಿದರು. ಸೀತೆಗೆ ಪಾಯಸದ ಊಟವಾಯ್ತು. ಮದುವೆಯಲ್ಲಿ ಕರೆದಿರಲಿಲ್ಲವಾದ್ದರಿಂದ ಈಗ ವೈಲಾರಯ್ಯನವರ ಮನೆಯವರಿಗೂ ಇಲ್ಲೇ ಸಿಹಿಯೂಟ. ಸೀತೆಗೊಂದು ಕೊರನಾಡ ಸೀರೆ ಉಡುಗೊರೆ. ಈ ಬಾರಿ ಗೌರಿವನ ಸೀತೆಯ ಜೊತೆ ಹೊರಟಿತು. ಅದರ ಹಿಂದಿನ ಕರುವನ್ನು ಕುರ್ಕ ಹಿಡಿದಿತ್ತಾದ್ದರಿಂದ ನಾಲ್ಕು ತಿಂಗಳ ಗಬ್ಬದ ದನವನ್ನು ಗಾಡಿಯ ಹಿಂದೆ ಕಟ್ಟಿಯಾಯಿತು. ಸೀತೆ ತಿಂಡಿಯ ಗಂಟನ್ನು ನೋಡಿ ಅಂದಳು—

"ಚಿಕ್ಕಮ್ಮ, ಈಪಾಟಿ ತಿಂಡಿ ಬ್ಯಾಡಿತ್ತು. ನಂಗೊಬ್ಬಿಗೆ ತುಸ ಕೊಡಿ. ನಮ್ಮತ್ತೆ ಈ ತಿಂಡಿ ಎಲ್ಲ ಕಲಗಚ್ಚಿನ ಬಾನೀಗೆ ಸುರಿಯುತ್ತೆ. ಇಪ್ರೀತ ಜಂಬ ಅದಕ್ಕೆ. ಭೋನಚ್ಚು, ಮತ್ತೆ ಅವರು ಕೋಡ್ಬಳೆ, ಚಕ್ಲಿ, ರೊಟ್ಟಿ, ದ್ವಾಸೆ, ಕಡಬು ಮಾಡಿದ್ಹಾಂಗೆ ಮತ್ತೆ ಯಾರಿಗೂ ಮಾಡೂಕೆ ಬರೂದಿಲ್ಲ ಸಮ. ಇಲ್ಲಿ ಹುಡುಗ್ರಾರೂ ತಿಂದ್ಕಳ್ಳಿ."

ಈಗ ಮೋಟಿಗೆ ಸೀತೆಯ ಮೇಲೆ ಸಿಟ್ಟು ಬಂದಿತು. ಹೊರಡುವ ಸಮಯ ಅನ್ನುವುದನ್ನೂ ಮರೆತು ಕೂಗಾಡಿದಳು :

"ನಿಮ್ಮತ್ತೆ ಹಂಗಿರ್ಲಿ, ನೀ ಏನು ಕಮ್ಮಿಯಾ? ಇನ್ನೂ ನೆಟ್ಟಗೆ ತಿಂಗ್ಳಾಗಿಲ್ಲ ಅತ್ತೆ ಮನಿಗ್ಹೋಗಿ. ಆಗ್ಲೇ ಯಾಪಾಟಿ ಚೂಪುಗಾರಿಕೆ ಕಲ್ತಿದ್ದಿ. ಇರ್ಲಿ ತೆಗಂಡ್ಹೋಗು. ಕಟ್ಟಿದ ಗಂಟು ಬಿಚ್ಬಾರ್ದು."

ಸೀತೆ ಎರಡು ಮನೆಯ ಹಿರಿಯರಿಗೂ ನಮಸ್ಕರಿಸಿ ಗಾಡಿ ಏರಿದಳು. ಗಬ್ಬದ ಗೌರಿ ಒಯ್ಯಾರದಿಂದ ನಡೆಯುತ್ತಾ ಗಾಡಿಯ ಹಿಂದೆ ಹೊರಟಿತು. ನಿಜವಾಗಿ ಗೌರಿಯನ್ನು ಕಳಿಸುವುದು ಮೋಟಿಗೆ ಇಷ್ಟವಿರಲಿಲ್ಲ. ಆದರೆ ಅದು ತನ್ನ ಸವತಿಯ ಗೌರಿನ ತಳಿ. ತೆಪ್ಪಗಾದಳು. ಸೀತೆ ಅಳದಿದ್ದರೂ ಅಜ್ಜಿ ಗಾಡಿಯ ಹಿಂದೆ ನಡೆದು ಬರುತ್ತಾ ತುಂಬಾ ಅತ್ತಳು.

"ನೀ ಇನ್ನು ಯಾವಾಗ ಬರ್ತೀಯೋ ಏನೋ ಕಣೆ. ಆಗ ನಾ ಇಲ್ಲಿ ಇರ್ತನೋ ಇಲ್ಲೋ. ನಮ್ಮತ್ತೆ ಮನೆ ಜನ ಒಂದು ನಮೂನೆ."

ಸೀತೆಗೆ ಕನಿಕರವಾಯಿತು ನಿಜ. ಆದರೆ ಅಳು ಬರಲಿಲ್ಲ. ಆ ಗಳಿಗೆಗೆ ತೋರಿದ್ದು ಅಂದಳು.

"ಆಳಬ್ಯಾಡ ಸುಮ್ನಿರೆ. ಒಂದ್ವರ್ಷ ನಾ ಬಂದಾಗ ನೀ ಇಲ್ಲಿ ಇಲ್ದಿದ್ರೆ ನಾನೇ ಒಂದಪ ನಿನ್ನ ಗಂಡನ ಮನೀಗೆ ಬರ್ತ್ನನಂತೆ. ಹ್ಯಾಂಗೂ ಕುರುವಳ್ಳೀಗೆ ತುಸು ಹತ್ರನೇ ಮೇಗರವಳ್ಳಿ."

ಮಾವಿನತೋಟ ದಾಟಿ ದರೆ ಇಳಿಯುವವರೆಗೂ ಅಚ್ಚಿ ಗಾಡಿಯ ಹಿಂದೆ ನಡೆದುಹೋದಳು. ಅವಳ ಹಿಂದೆ ನಾಲ್ಕು ಮಕ್ಕಳೂ ಬಂದಿದ್ದವು ಅಚ್ಚಿಗೆ ಸೀತೆಯ ಮಾತಿನಲ್ಲಿ ಖಚಿತವಾದ ಯಾವ ನಂಬಿಕೆಯೂ ಬರಲಿಲ್ಲ. ಅವಳು ಅಲ್ಲಿಯೇ ಬಾಂದು ಗುಡ್ಡೆಯ ಬಳಿ ಕೂತು ಅತ್ತಳು. ಅವಳ ತಮ್ಮ ತಂಗಿಯರು ಪೆಟ್ಟುಕಾಯಿ ಕಿತ್ತರು. ಗಾಡಿ ಕಾನಿನ ನಡುವೆ ಚಿಕ್ಕದಾಗುತ್ತ ಹೋಗುತ್ತಿತ್ತು. ಆಗ ಸೀತೆಗೂ ಅನಿಸಿತು. ಕುರುವಳ್ಳಿ ಒಂಥರ ಚಂದ. ನಮ್ಮೂರೂ ಒಂಥರ ಚಂದ. ಅಚ್ಚಿಯ ಒಣಕಲು ಶರೀರ ತೋಟದ ಕಡೆಯ ಉಣುಗೋಲು ದಾಟಿದ್ದು ಕಾಣಿಸಿತು ಸೀತೆಗೆ. ಏನೊಂದೂ ಅರ್ಥವಾಗದಿದ್ದರೂ ಅಚ್ಚಿಯ ಭವಿಷ್ಯ ಅಷ್ಟು ಒಳ್ಳೆಯದಾಗಿ ಕಾಣಿಸಲಿಲ್ಲ ಸೀತೆಗೆ. ಆದರೆ ಯಾವುದರ ಬಗ್ಗೆಯೇ ಆದರೂ ಬಹಳ ಹೊತ್ತು ಯೋಚಿಸುವ ಸ್ವಭಾವವಲ್ಲ ಸೀತೆಯುದು. ಗಾಡಿಯ ಹಿಂದೆ ತಲೆದೂಗುತ್ತ ಬರುತ್ತಿದ್ದ ತನ್ನ ಪ್ರೀತಿಯ ಗೌರಿಯ ಮೂತಿಗೆ ಕೈ ನಿವಾಳಿಸಿ ಲಟಪಟ ಲಟಿಕೆ ಮುರಿದಳು. ಈಗ ತ ರು ಪೂರಾ ಮರೆತುಹೋಯಿತು.

ದೀಪ ಹಚ್ಚುವ ವೇಳೆಗೆ ಗಾಡಿ ಕುರುವಳ್ಳಿ ಮನೆಯ ಮುಂದೆ ನಿಂತಿತು. ಮಧ್ಯೆ ಮಧ್ಯೆ ಗಾಡಿ ನಿಲ್ಲಿಸಿ ಕೆರೆತೊರೆಗಳಲ್ಲಿ ನೀರು ಕುಡಿಸಿ ಬಂದಿದ್ದರೂ ನಾಲ್ಕು ತಿಂಗಳ ಗಬ್ಬದ ಗೌರಿ ನಡೆದು ನಡೆದು ದಣಿದಿತ್ತು. ಗಾಡಿಯ ಹಿಂಭಾಗದಲ್ಲಿ ಕೂತ ಸೀತೆ ತಾನು ತೌರಿನ ಕೋಡುಬಳೆ, ಹೆಸರುಂಡೆ ತಿನ್ನುತ್ತಾ, ಗೌರಿಯ ಬಾಯಿಗೆ ಒಣಹುಲ್ಲು ತುರುಕುತ್ತ ಊರು ತಲುಪಿದ್ದಳು. ಹೆಂಡತಿ ಬರುವ ಹೊತ್ತಿಗೆ ಕೊನೂರಿ ಹಾಜರಾಗಿದ್ದ. ಸೀತೆ ಅತ್ತೆಯ ಮುಲಾಜು ನೋಡದೆ ಗೌರಿಯ ಕಾಲು ತೊಳೆದು ಪಂಚವಾಳ ತಂದು ಕುಂಕುಮ ಹಣೆಗಿಟ್ಟು ಅಕ್ಕಿಬೆಲ್ಲ ತಿನ್ನಿಸಿ ಓಣಿಯ ಕಡೆಯಿಂದ ಕೊರಳಕಣ್ಣಿ ಹಿಡಿದು ತಂದು ಕೊಟ್ಟಿಗೆಗೆ ಕಟ್ಟಿದಳು. ರಾಮಕ್ಕನ ಮನೆಯ ಬೃಂದೆ, ಸೀತೆಯ ಗೌರಿ ಒಂದನ್ನೊಂದು ಮೂಸಿ ಪರಿಚರ ಮಾಡಿಕೊಂಡವು. ದಣಿದ ಗೌರಿ ಕಲಗಚ್ಚು ಕುಡಿದು ಮೆಲುಕು ಹಾಕುತ್ತ ಅರೆಗಣ್ಣು ಮುಚ್ಚಿ ಮಲಗಿತು.

ಮರುದಿನ ಮಧ್ಯಾಹ್ನದ ಊಟ ಮುಗಿಸಿ ಹಾಗೇ ತೀರ್ಥಹಳ್ಳಿ ಪೇಟೆಯಿಂದ ಒಯ್ಯಬೇಕಾದ ಕೆಲವು ಸಾಮಾನುಗಳೊಂದಿಗೆ ಕೇಶವಯ್ಯನ ಹೋಟೆಲು ಮೈಸೂರು ಪಾಕು, ಕಾಪದ ಕಡ್ಡಿ ಮಹಾಬಲಯ್ಯನ ಪಾಣಿಪಂಚೆಯಲ್ಲಿ ಗಂಟಾಗಿ ಗೋಣೀಚೀಲದ ತಳ ಸೇರಿತು. ರಾಮಕ್ಕನ ಮೂಗು ಅಂದರೆ ನಾಯಿಯ ಮೂಗು. ಆದರಿಂದ ಗೋಣಿಚೀಲ ನೇರವಾಗಿ ಗಾಡಿಗೇರಿತು. ಮಗಳಿಗೆ ಚೂರು ಮೈಸೂರುಪಾಕು ಕೊಡಬೇಕೆಂಬ ಹಂಬಲವಾದರೂ ರಾಮಕ್ಕನ ಕಹಳೆ ಬಾಯಿಗೆ ಹೆದರಿ ತೆಪ್ಪಗಾದ ಮಹಾಬಲ. ತಂದೆ ಹೊರಟಾಗ ಸೀತೆಗೇನೂ ಅಳುಬರಲಿಲ್ಲ. ಸುಮಾರಾಗಿ ಹೆಣ್ಣುಮಕ್ಕಳು ಅತ್ತೆಮನೆಗೆ ಹೋಗುವಾಗ ಅತ್ತುಕೊಂಡೇ ಹೋಗುವುದು ಆಗಿನ ಪದ್ಧತಿ. ಆದರೆ ಸೀತೆಗೇಕೋ ಅಂತಹ ಕೋಮಲ ಭಾವನೆಗಳು ಉದಿಸುತ್ತಲೇ ಇರಲಿಲ್ಲ. ಪಾತಿ, ಮಾನಿಯರು ಅವಳಿಗಾಗಲೇ 'ಒರಟು ಹೆಣ್ಣು' ಎಂಬ ಬಿರುದು ಕೊಟ್ಟಾಗಿತ್ತು. ಒಂದು ರೀತಿಯಲ್ಲಿ ಅವಳು ವಾಸ್ತವವಾದಿ, ದಿಟ್ಟೆ, ಧೀಮಂತೆ. ಯಾವುದೇ ನಾಟಕೀಯತೆ ಅವಳಿಗೆ ಬೇಕಿಲ್ಲ. ತಗ್ಗಿನ ಮನೆಯಂಥ ಕೂಪದಿಂದ ; ಬಾಲ್ಯದ ಬಾಲಿಶ ಭಾವನೆಗಳಿಂದ ತಾರುಣ್ಯದ ಜಗತ್ತಿಗೆ ; ಆಗಿನ ಕಾಲಕ್ಕೇ ನಾಗರಿಕ ಎನಿಸಿಕೊಂಡಂಥ ತೀರ್ಥಹಳ್ಳಿ–ಕುರುವಳ್ಳಿಯ ನಿಸರ್ಗ ರಮ್ಯ ಮುಕ್ತ ವಾತಾವರಣಕ್ಕೆ ಬಂದಾಗ ಸೀತೆಯ ದೇಹ, ಮನಸ್ಸು, ವಯಸ್ಸುಗಳು ವಿಕಾಸನ ಹೊಂದಿ ಅವಳು ತನ್ನಂತೇ ಪರಿವರ್ತನೆಗೊಂಡಳು.

## ೧೨

ದುಂಡು ಮಲ್ಲಿಗೆ ದಂಡೆ ಮುಡಿದು ಕೆಂಪಂಚಿನ ಕಾಗಿನ ಸೀರೆಯುಟ್ಟು ಉಪಕರಣಿ ಕುಕ್ಕೆ, ತಾಮ್ರದ ಕೊಡಹೊತ್ತು ಶಂಕರಭಟ್ಟರ ಸೊಸೆ ಸಂಕುವಿನೊಂದಿಗೆ ಹೊಳೆಗೆ ಬಂದ ಸೀತೆ ಹೊಳೆದಂಡೆಯಲ್ಲಿದ್ದವರೆಲ್ಲರ ಗಮನ ಸೆಳೆದಳು.

ಸಂಜೆಯ ಪಶ್ಚಿಮ ಚಿನ್ನದ ಬೆಳಕು ನದೀ ತಟಾಕವನ್ನೆಲ್ಲ ಬೆಳಗಿದೆ. ಸಂಧ್ಯಾವಂದನೆಗೆಂದು ಬಂಧ ಮುದುಕರ ತಂಡ ಒಂದು ಕಡೆಗಾದರೆ ವಿಹಾರಕ್ಕಾಗಿ ಬಂದ ಯುವಕರ ತಂಡ ರಾಮಮಂಟಪದಲ್ಲಿ. ಅವರೆಲ್ಲರ ಕಣ್ಣು ಹೊಳೆಗೆ ಬಂದ ಪ್ರಾಯದ ಹುಡುಗಿಯರ ಮೇಲೆ. ಈಗ ಪ್ರಧಾನವಾಗಿದ್ದವಳು ಸೀತೆ. ಇಡೀ ತೀರ್ಥಹಳ್ಳಿಯ ಪ್ರಮುಖ ಪೋಕರಿ ಎನಿಸಿಕೊಂಡಿದ್ದ ಇಪ್ಪತ್ತು ವರ್ಷದ ಅಪ್ಪು ಕುಚೇಷ್ಟೆಯಲ್ಲಿ ಅಗ್ರಗಣ್ಯ. ಅವನ ಪಟಾಲಂ ಸ್ವಲ್ಪ ದೊಡ್ಡದೇ. ಬಾಕಿಯವರಿಗೆ ಊರಿನ ಹಿರಿಯರ, ಸಾಹುಕಾರರುಗಳ ಹೆದರಿಕೆ ಸ್ವಲ್ಪ ಇತ್ತು. ಆದರೂ ವಯೋಧರ್ಮ. ಅಪ್ಪು ಸಹವಾಸ ಅಂದರೆ ಒಂದು ಮನರಂಜನೆ.

ಸೀತೆ ಉಪಕರಣೆ ತೊಳೆಯುತ್ತಿದ್ದಾಗ ರಾಮ ಮಂಟಪದ ಮೇಲಿನಿಂದ ಅಪ್ಪುವಿನ ಕುಚೋದ್ಯ ಕೇಳಿತು—

"ಅಂತೂ ಮಾಳೂರು ಶಾನುಭೋಗ್ರು ಒಂದು ಒಳ್ಳೆ ಕೇಪು ಹೊಡದ್ರಪ್ಪ. ಆ ರಾಮಕ್ಕಮ್ಮನ ಬುರ್ಡೆ ಇರೂತಂಕ ಅಡ್ಡಿಲ್ಲ. ಆ ಮ್ಯಾಲೆ ಈ ಬಳ್ಳಕ್ಕೆ ಯಾವ ಸಾವಕಾರ್‍ರ ಪಾಲೋ ?"

ಕಲ್ಲುಸಾರದ ಕೆಳಗೆ ಭೋರ್ಗರೆದು ಧುಮ್ಮಿಕ್ಕುತ್ತಿದ್ದ ತುಂಗೆಯ ರಭಸದಲ್ಲೂ ಈ ಮಾತು ಸೀತೆ, ಸಂಕ.ಗಳ ಕಿವಿತಾಗಿತು. ಸೀತೆ ಕತ್ತೆತ್ತಿ ನೋಡಿದಳು. ಒಂದು ವಾನರ ಸೇನೆಯೇ ಇದೆ ಅಲ್ಲಿ. ಇವಳು ಕತ್ತೆತ್ತಿದೊಡನೆ ಅವೆಲ್ಲ ಒಟ್ಟಾಗಿ ಘೊಳ್ಳೆಂದು ನಕ್ಕವು. ಸೀತೆಗೆ ಮೈ ಉರಿಯಿತು. ಸಂಕುವಿನೊಡನೆ ಕೇಳಿದಳು.

"ಯಾವುದ್ರೀ ಸಂಕಮ್ಮಾ ಈ ಮಂಗಗಳು ? ದಿನಾ ಹೀಗೇ ಬಂದು ಕೂತ್ಗಾತಾವಾ ?"

ಸಂಕು ಪಿಸುಗುಟ್ಟಿದ್ದಳು

"ಅವರ ಸುದ್ದಿ ನಮಗೆ ಬ್ಯಾಡ ಕಣೆ ಸೀತೆ. ಆ ಅಪ್ಪು ಅದಾನಲ್ಲ ಅವ ಶುದ್ಧ ಪುಂಡ. ನಾಳಿಂದ ಅತ್ಲಾಕಡೀಗೆ ಹೋಗಾಣಂತೆ ಪಾತ್ರೆ ತೊಳೆಯೂಕೆ. ನಿಮ್ಮತ್ತೆಗೋ, ನಮ್ಮತ್ತೆಗೋ ತಿಳದ್ರೆ ಕಡೀಗೆ ದೊಡ್ಡರಾದ್ಧಾಂತ ಆದೀತು. ಯಂತವ ಜೇಕಾರ ಹುಟ್ಟಿಸ್ತಾನೆ ಪುಂಡ ಮುಂಡೆಗಂಡ. ನೀನೋ ಇವತ್ತು ಕಾಗಿನ ಸೀರೆ ಉಟ್ಟು ಬಂದಿದ್ದಿ. ನಿನ್ನ ಬಿಳೀ ಮೈಗೆ

ಕಾಸೀರೆ ಎದ್ದು ಬಡಿಯೂ ಹಂಗದೆ. ವೃಷ್ಟಿಯಾದೀತು ಕಡೀಗೆ. ನಡೀ ಬ್ಯಾಗ" ಎಂದಳು.

ಸೀತೆ ಮತ್ತೊಂದು ಬಾರಿ ಕತ್ತೆತ್ತಿ ನೋಡಿದಳು. ಗುಂಪಿನ ಮಧ್ಯೆ ನಾಯಕನಂತೆ ಕೂತಿದ್ದ ಅಪ್ಪು ಮಂಗನಂತೆ ಹಲ್ಲು ಕಿರಿದ. ಸೀತೆ ಕೊಡ ಪಾನ ಉಜ್ಜುತ್ತ ಗಟ್ಟಿಯಾಗಿ ಅಂದಳು :

"ಸೈ ಕೂರೀಗಂಜಿ ಸೀರೆ ಬಿಟ್ರೊಂತ. ಅವಗ್ಯಾಕೆ ಹೆದರ್ಬೆಕು ನಾವು. ನಮ್ಮ ಕೆಲಸ ನಾವು ಮಾಡ್ಕಂಡು ಹೋದರಾತು."

ಮರುದಿನ ಅದೇ ಜಾಗಕ್ಕೆ ಬರಲಿಲ್ಲ ಸಂಕು ಪುಷ್ಕರಣಿಯನ್ನು ದಾಟಿ ಮತ್ತೂ ಮುಂದೆ ಹೋದರು ಅಲ್ಲಿದ್ದವರೆಲ್ಲಾ ಕುರವಳ್ಳೀ ಹೆಂಗಸರೇ. ಅಗ್ರ ಹಾರದ ಸುದ್ದಿಯೆಲ್ಲಾ ನಡೆಯುತ್ತಿತ್ತು. ಅಪ್ಪೂರಾಯನ ತಂಡ ಯಥಾ ಪ್ರಕಾರ ರಾಮಮಂಟಪದಲ್ಲಿತ್ತು. ಶೀರಾ ಹೆಂಗಸರಿದ್ದಲ್ಲಿಗೆ ಬರುವ ಸಾಹಸ ಮಾಡಲಿಲ್ಲ. ಕೂತಲ್ಲೇ ಟೀಕೆ ಟಿಪ್ಪಣಿ ನಡೆದಿತ್ತು.

ಕಾಳಿಂಗಯ್ಯನವರ ಮಗಳು ಅನ್ನಪೂರ್ಣೆ ಸೀತೆಯೊಡನೆ ಹರಟುತ್ತ ಚಿಕ್ಕ ಚಿಕ್ಕ ಪಾತ್ರೆಗಳನ್ನು ಉಜ್ಜಿ ನೀರಲ್ಲಿ ಮುಳುಗಿಸಿದವಳು ಕೊಡಪಾನ ವನ್ನೂ ಕೆಂಪಗೆ ತಿಕ್ಕಿ ನೀರಿಗೆ ಬಿಟ್ಟಳು. ಅವಳ ಲೆಕ್ಕದಲ್ಲಿ ನೀರಲ್ಲಿ ಮುಳು ಗಿಸಿದೆ ಎಂದಾಗಿತ್ತು. ಯಾರೂ ಅತ್ತ ನೋಡಲಿಲ್ಲ. ಅದು ಖಾಲಿ ಯಾಗಿದ್ದರಿಂದ ನಿಧಾನವಾಗಿ ತೇಲುತ್ತ ಹತ್ತು ಮಾರು ದೂರ ಹೋದ ಮೇಲೆ ಅಪ್ಪೂರಾಯನ ಗುಂಪಿನಿಂದ ಕೂಗು ಬಂತು.

"ಕಾಳಿಂಗಯ್ನೋರ ಕೊಡ ಅನಂತಯ್ಯನ ಅಗ್ರಹಾರಕ್ಕೆ ಹೋಗ್ತಾ ಅದೇ."

ಕೇಕೆ, ನಗು ! ಸೀತೆ, ಅನ್ನಪೂರ್ಣ ನೋಡುತ್ತಾರೆ ! ಅದು ನದಿಯ ತರಂಗದಲ್ಲಿ ಒಳುಕುತ್ತ ತೇಲುತ್ತ ನಡುಹೊಳೆಯಲ್ಲಿ ಓಡುತ್ತಿದೆ. ಅನ್ನ ಪೂರ್ಣೆ ಬಾಯಿ ಬಡಿದುಕೊಂಡಳು—

"ಯಾರಾರ ಕೊಡ ಹಿಡಕೊಡ್ರೋ ! ಮುಂದೆ ಸೆಳವದೇ ಬ್ಯಾಗ ಬನ್ರೋ"

ಎಲ್ಲರಿಗೂ ಕಕ್ಕಾಬಿಕ್ಕಿಯಾಗಿ ಸುಮ್ಮನೆ ನೋಡುತ್ತಾ ನಿಂತರು.

ಮುದುಕರಿಗೆ ಸಾಧ್ಯವಿಲ್ಲ. ಯುವಕರು ದೂರದಿಂದ ತಮಾಷೆ ನೋಡಿ ನಕ್ಕು ಚಪ್ಪಾಳೆ ಹೊಡೆದರು.

ಸೀತೆ ಮಾತ್ರಾ ಏನೂ ಯೋಚಿಸಲಿಲ್ಲ. ಹೊಳೆಯ ದಂಡೆಯಲ್ಲಿ ಗಂಡು ಹುಡುಗರಂತೆ ಓಡಿದಳು. ಕೊಡಪಾನಿ ನಡುಹೊಳೆಯಲ್ಲಿ ಓಡುತ್ತಿದೆ ಅದಕ್ಕಿಂತ ಮುಂದೆ ಓಡಿ ಹೊಳೆಗೆ ಧುಮಕಿ ಈಜುತ್ತ ಕೊಡಕ್ಕೆ ಅಡ್ಡ ವಾದಳು. ಅಂಗಾತವಾಗಿ ತೇಲುತ್ತಿದ್ದ ಕೊಡವೇನೋ ಸೀತೆಯ ಕೈಗೆ ಸಿಕ್ಕಿತು. ಆವಳು ಅಲ್ಲಿಯೇ ನೆಲಕ್ಕೆ ಕಾಲುಕೊಟ್ಟು ನಿಲ್ಲಲು ಯತ್ನಿಸಿದಳು. ಕೊರಳ ತನಕ ನೀರು ಬಂದರೂ ನೆಲ ಕಾಲಿಗೆ ಸಿಗಲಿಲ್ಲ. ಪ್ರವಾಹ ಅನಂತ ಯ್ಯನ ಅಗ್ರಹಾರದತ್ತ ಸೊಳಸೊಳನೆ ತಳ್ಳುತ್ತಿದೆ. ಸೀತೆ ಕೊಡಪಾನಿ ಯನ್ನು ಕವುಚಿ ಹಿಡಿದು ನಿಧಾನವಾಗಿ ದಡದ ಕಡೆಗೆ ಈಜಿದಳು. ಅನ್ನ ಪೂರ್ಣೆ ಲಬೋಲಬೋ ಬಡಿದುಕೊಂಡಳು—

"ಯಾರಾರ ಗಂಡಸ್ರು ಬಂದು ಸೀತಮ್ಮನ್ನ ಉಳಸ್ರಪ್ಪಾ."

ಹೊಳೆ ದಂಡೆಯ ಗಂಡಸರೆಲ್ಲಾ ಎದರು ದಂಡೆಯಲ್ಲಿ ಸೇರಿದರು ನಿಜ. ಅಪ್ಪೂರಾಯನ ತಂಡವೂ ಬಂದಿತು ಆದರೆ ಅಷ್ಟರಲ್ಲಿ ಸೀತೆ ಕೊಡಪಾನಿ ಯೊಂದಿಗೆ ದಡ ಸೇರಿಯಾಗಿತ್ತು. ಅವಳ ಸೀರೆ ಪೂರಾ ಮೈಗೆ ಅಂಟಿ ಕೊಂಡಿದೆ. ಜಡೆ ಒದ್ದೆ. ಅವಳು ಕೊಡಪಾನಿಯನ್ನು ಅನ್ನಪೂರ್ಣೆಗೆ ಕೊಡುತ್ತಾ ಗದರಿದಳು

"ಯಾತಕ್ಕೆ ಆಪಾಟಿ ಅರಚ್ಕಾತೀಯೇ? ಬೆಳಗಿಂದ ಸಂಜೆತನಕ ಲಂಗೋಟಿ ಹಾಕ್ಕಂಡು ಈಜು ಹೊಡೀತಾರೆ. ಈಗ ನೋಡು ಮಂಗನಾಟ ನೋಡೋರ ಹಾಂಗೆ ಸುತ್ತುವರಕಂಡು ನಿಂತಿರೂದ. ಇವರ ಗಂಡಸ್ತನ ಮುಂಡಾಮೋಚ್ತು. ನಡಿ ಮನೀಗ್ಹೋಗ್ವಾಣ." ಅನ್ನಪೂರ್ಣೆ ಕೊಡಪಾನಿ ನೀರು ತುಂಬಿ ಸೀತೆಯನ್ನು ನೋಡಿದಳು.

"ಯಂತದ ಮಾಡೂದ್ರಿ ಸೀತಮ್ಮ ನೀವು ಹಿಂಗೆ ಹೊಳೀಗೆ ಬಿದ್ದು ಈಜಿದ್ದು ತಿಳದ್ರೆ ರಾಮಕ್ಕ ಒನಕೆ ತಗಾತಾರೋ ಏನೋ. ಹಿಂಗೇ ಹೋಗೂದಾ ಮನೀಗೆ. ನಮ್ಮನೀಗಾರಾ ಬನ್ನಿ. ಬ್ಯಾರೆ ಸೀರೆ ಕೊಡ್ತನಿ."

"ಸೈ ನಡಿಯೇ ಈಪಾಟಿ ಜನ ನೋಡಿದಾರೆ. ಯಾರಾರ ಹೇಳೇ ಹೇಳ್ತಾರೆ. ಒನಕೆನಾರಾ ತಗಳ್ಳಿ, ಒರಳ್ನಾರಾ ತಗಳ್ಳಿ."

ಸೀತೆ ಅಗ್ರಹಾರದ ಕಡೆಗೆ ಮುಖ ಮಾಡಿ ನಿಂತು ಸೀರೆಯ ನೆರಿಯನ್ನು ಹಿಂಡಿಕೊಂಡಳು.

"ಸೀತಮ್ಮಾ, ನಿಮ್ಮೂರಾಗೆ ಹ್ವಳೆ ಇಲ್ಲ. ನೀವು ಈಜೂದ ಹೆಂಗೆ ಕಲತ್ರಿ ?"

ಎದುರು ದಡದ ಗಂಡಸರ ಕಲಕಲ ಮಾತಿನ ಕಡೆ ಹೋಯಿತು ಸೀತೆಯ ಗಮನ.

"ಯಂತದಾರ ಆಗ್ಲಿ ಗಟ್ಟಿಹೆಣ್ಣು !" ಹೋದ್ರೆ ಹೋಗ್ತಿತ್ತು ಒಂದು ಕೊಡಪಾನ. ಅದಕ್ಕೆ ಈ ದಿಂಡೆ ಬಸ್ವಿ ಈಪಾಟಿ ಗಂಡಸ್ರ ಮುಂದೆ ಈಜು ಹೊಡೀಬಕಾಗಿತ್ತ ?"

"ಪ್ರಾಯದ ಹುಡುಗಿ, ರಾಮಕ್ಕನ ಸೊಸೆ, ಈ ಒದ್ದೆ ವ್ಯೆಯಾಗೆ ಮನೀಗ್ಹೋಗ್ಲಿ ಆದೆ ಹಬ್ಬ ಅದಕ್ಕೆ "

"ಶ್ಯಾನುಭೋಗ್ರ ಹೆಣ್ಣ ಹೆಂಗದೆ ನೋಡಿದ್ಯನೋ ?"

ಸೀತೆ ತಿರುಗಿದಳು. ಅಪ್ಪು ಹಲ್ಲು ಕಿಸಿಯುತ್ತಿದ್ದ. ಬೇಗ ಬೇಗ ಪಾತ್ರೆ, ನೀರು ಹೊತ್ತು ಸೀತೆ ಗೊಣಗಿದಳು.

"ನಾ ಹೆಂಗಾರ ಕಲ್ತಿರ್ತನಂತೆ. ಈಗ ನಿಂಗೆ ಕೊಡಪಾನಿ ಬಂತೋ ಇಲ್ಲೋ ? ನಡೀ ಮನೀಗೆ ತೆಪ್ಗೆ."

ಹೆಂಗಸರು ತಲಾತಟ್ಟಿಗೆ ಒಂದೊಂದು ಮಾತಾಡುತ್ತಾ ಪಾತ್ರೆ ಹೊತ್ತು ಬಂದರು. ಭಟ್ಟರ ಸೊಸೆಗೆ ಹೆದರಿಕೆ. ರಾಮಕ್ಕನ ಸಹವಾಸ.

"ಬರ್ಲೀನೆ ಸೀತೆ ನಿಮ್ಮನೀಗೆ ?" ಹೆದರುತ್ತ ಕೇಳಿದಳು.

"ಬ್ಯಾಡ ನಡೀರಿ, ಯಂತದ ಮಾಡ್ಯಾರು. ಏರಡೇಟು ಹೊಡದಾರ ? ಇದ್ದಸಂಗ್ತಿ ಹೇಳಿದರಾತಪ್ಪ."

ಪಂಕಜಾಗೆ ಅಷ್ಟೆ ಸಾಕಾಗಿತ್ತು. ಮನೆಗೆ ನಡೆದಳು. ಸೀತೆ ಮನೆಯೊಳಗೆ ಹೋಗುವುದರೊಳಗೆ ರಾಮಕ್ಕನಿಗೆ ಯಾರೋ ವಿಷಯ ತಿಳಿಸಿಯಾಗಿತ್ತು.

ಬೆಳ್ಳಗಿನ ನೀಳದೇಹದ ಮಡಿ ಹೆಂಗಸು ರಾಮಕ್ಕ. ತಲೆಯ ಮೇಲೆ ಸೆರಗು ಹಾಕುತ್ತಿದ್ದುದು ಅಪರೂಪ. ಸೆರಗು, ನೆರಿ ಸಿಕ್ಕಿಸಿ ದಾಪುಗಾಲು

ಹಾಕುತ್ತ ಸದಾ ದುಡಿಯುವ ಜೀವ. ಕೈಯಲ್ಲಿ ಕಟ್ಟಿಗೆ ತುಂಡು ಹಿಡಿದು ಬೀಸುಗಾಲು ಹಾಕಿ ಬಂದು ಸೀತೆಯ ಜುಟ್ಟು ಹಿಡಿದಳು.

"ಪರದೇಶಿ ರಂಡೇಕುರದೇ, ಅವರ ಮನೇ ಕೊಡಪಾನ ಹಿಡಿಯೂಕೆ ನೀನು ಹ್ವಳೀಲಿ ಈಜು ಬಿದ್ಯ. ಒಲೆ ಗುಪ್ಪಿನ ಹಾಗೆ ಮೊಲೆ ಬಿಟ್ಕಂಡು ಒದ್ದೆ ಮೈಯಾಗೆ ನಿಂತಿದ್ಯಾ ಆಪಾಟಿ ಗಂಡಸ್ರ ಎದುರಿಗೆ. ನಿಂಗೇನಾರ ನಾಚ್ಕೆ ಅದ್ಯನೇ ?"

ಒದ್ದೆ ಮ್ಯೆಯಿಗೆ ಕಟ್ಟಿಗೆಯ ಏಟುಗಳು ಬಿದ್ದವು. ಅಷ್ಟರಲ್ಲಿ ಕೊಮಾರಿ ಹಾಜರಾದ. ತಾಯಿಯ ಮುಂದೆ ತನ್ನದೂ ಪೌರುಷ ಇರಲೆಂದು ತನ್ನ ಕೈಯೂ ಎರಿಸಿದ :

"ಮತ್ತೆರಡು ಹಾಕು ಹೇಳ್ತನಿ ಅದಕೆ. ಮಂತನವ ಮರ್ಯಾದೆ ಕಳೆಯುತ್ತೆ. ನಾಳಿಂದ ಹ್ವಳೀಗೆ ಕಳಸಬ್ಯಾಡ ಅದ"

ಸೀತೆ ಎಡಗೈಲಿ ಗಂಡನ ಕೈಯನ್ನು, ಬಲಗೈಯಲ್ಲಿ ಅತ್ತೆಯ ಕಟ್ಟಿಗೆ ಯನ್ನು ಹಿಡಿದಳು—

"ತುಸ ಸವ್ಗರಿ ಮತ್ತೆ. ಅತ್ತೆ ಒಡೆಯೂದು ಸಾಕು ನಂಗೆ. ನಾನೇನು ಅಲ್ಲಿ ದೊಂಬರಗಣೆ ಹತ್ತಿರಲಿಲ್ಲ. ಕೊಡಪಾನ ತೇಲಿ ಹೋಗ್ತಿತ್ತು ಹಿಡದು ತಂದುಕೊಟ್ಟೆ. ಒಂದ್ವಾಡ್ಗ ಜನ ಇದ್ರಲ್ಲ, ಯಾರಾರ ತಂದ್ಕೊಡಬಕಾಗಿತ್ತು"

ಸೀತೆ ನೋಡಲು ಕೋಮಲೆಯಾದರೂ ಜಟ್ಟಿಯಂತೆ ಗಟ್ಟಿ. ಇಬ್ಬರ ಕೈಯನ್ನೂ ಬಲವಾಗಿ ಹಿಡಿದಿದ್ದಳು.

"ಬಿಡ್ತೀ ಇಲ್ಲೇ ಕೈನಾ ?" ಅರಚಿದಳು ರಾಮಕ್ಕ.

ಸೀತೆ ಕೈ ಒದರಿದಳು.

"ನನ್ನ ಹೊಡೀಬಕು ಸ್ಯೆಯಲ್ಲ. ಹೊಡೀರಿ ನಿಮಗೆ ಬೇಕಾದಷ್ಟು."

ಒದ್ದೆ ಮೈಯಲ್ಲಿ ಕಂಬದಂತೆ ನಿಂತ ಸೀತೆಯ ತೊಡೆ, ಬೆನ್ನು, ಕುಂಡೆ ಗಳ ಮೇಲೆ ದುಪುದುಪು ಕಟ್ಟಿಗೆಯ ಏಟುಗಳು ಬಿದ್ದವು. ಅಷ್ಟರಲ್ಲಿ ಕಾಳಿಂಗಯ್ಯನವರ ಹೆಂಡ್ತಿ ವಾಗ್ದೇವಮ್ಮ ಏದುತ್ತ ಮೆಟ್ಟಲೇರಿ ಓಡೋಡಿ ಬಂದು ರಾಮಕ್ಕನ ಕೈ ಹಿಡಿದು ಗದರಿದರು :

"ರಾಮಕ್ಕ ಯಂತದಿದು ನಿಮ್ಮ ಕೆಲಸ ! ನಮ್ಮನೆ ಕತ್ತೇ ಲೌಡಿ ಮೈ

ಮ್ಯಾಲೆ ಗ್ಯಾನಿಲ್ದೆ ಕೊಡಪಾನ ತೇಲಿಬಿಟ್ಟದ್ದು. ಹೋದ್ರೆ ಹೋಗಿತ್ತು ಒಂದು ಕೊಡಪಾನ ಸೈಯಲ್ಲ. ನೀರಿಗೆ ಬಿದ್ದದ್ದು ಈ ಹುಡುಗಿ ತಪ್ಪು ಒಪ್ಗಾ ತನಿ. ಅದು ಬಾಯ್ಬಡ್ಕಂತಲ್ಲಾಂತ ಇದು ಹಿಡಕೊಡ್ತು ಪಾಪ. ಆದರೆ ಈಪಾಟಿ ಹೊಡಿಯೂದ ಈ ಪರದೇಶಿ ಮಗಿನ್ನ. ಬಿಡಿ ಅತ್ಲಾಗಿ. ನಿಮಗಂಥಾ ಸಿಟ್ಟಿದ್ರೆ ನಂಗೆ ಹೊಡೀರಿ ನಾಕೇಟ."

ವಾಗ್ದೇವಮ್ಮ ಸೀತೆಗೆ ಅಡ್ಡನಿಂತಾಗ ರಾಮಕ್ಕನ ಕೈ ನಿಂತಿತು. ಕೂಗಾಡಿದಳು :

"ಹಾಂ ! ಇದಾ ಪರದೇಶಿ ? ಈ ಕುರುವಳ್ಳೀನ ಅಡ್ಡಾಡ್ಡ ನುಂಗೀತು ಕುರದೆ. ನೀವೆಲ್ಲ ಹೀಂಗೆ ವೈಶಿಕಂಡು ಬರೂದು ಬ್ಯಾಡ. ನಾನದನಿ, ಅವ ಅದಾನೆ. ನಮ್ಮನೆ ಸೊಸೆ ನಾವು ತಿದ್ದಬಕಾ ಬ್ಯಾಡ್ವಾ ? ತೀರ್ಥಹಳ್ಳಿ ಪೋಕ್ರಿ ಮುಂಡೇ ಗಂಡ್ರೆಲ್ಲ ಬಂದಿರ್ತಾವೆ ಹೊಳೀಗೆ. ನಿಮ್ಮನೆ ಹೆಣ್ಣು ಮದಿವೀಗೆ ಬಂದದೆ ಗ್ಯಾಪ್ಗ ಇಟಳ್ಳಿ "

ಕಟ್ಟಿಗೆ ತುಂಡು ಮೂಲೆಗೆ ಎಸೆದು ಸೊಸೆಗೆ ಆಜ್ಞೆ ಮಾಡಿದಳು ರಾಮಕ್ಕ :

"ಹೋಗೆ, ಮದ್ಲು ಸೀರೆ ಬದ್ಲಾಯ್ಸಿ ವಾಗ್ದೇವಮ್ಮಗೆ ಕುಂಕ್ಮ ಕೊಡು. ಕೂದ್ಲ ಸಮ ಒರಸ್ಕಾ. ಇನ್ನೊಂದಪ ಇಂಥಾ ಚಾಷ್ಟೆ ಮಾಡೀಯಂತೆ ಆಗ ಕಾಣಿಸ್ತೀನಿ ಗಶೀನ."

ಸೀತೆ ಅಳಲಿಲ್ಲ. ಮೂತಿ ಊದಿಸಿಕೊಂಡು ನಡಮನೆಗೆ ಹೋಗಿ ಸೀರೆ ಬದಲಿಸಿ ಬಂದಳು. ಅಲ್ಲಿಯವರೆಗೂ ವಾಗ್ದೇವಮ್ಮ ಕೂತಿರಲೇಬೇಕಾಯ್ತು. ಸೀತೆ ಮರದ ಪಂಚವಾಳ ಮುಂದೆ ಹಿಡಿದಾಗ ಆಕೆ ಆಪಳ ಮುಖ ನೋಡಿದರು. ಚೂರೂ ಬೇಸರವಿಲ್ಲದ ಮುಖ. ಕೊಮಾರಿ ತೆಪ್ಪಗೆ ಕಂಬ ಒರಗಿ ಕೂತಿದ್ದ.

"ನಾ ಬರ್ತೆನ್ರೆ ರಾಮಕ್ಕ"

ಎನ್ನುತ್ತಾ ಆಕೆ ಹೊಸಿಲು ದಾಟಿದರು. ಅದೇ ವೇಳೆಗೆ ಕೊಕ್ಕರೆ ಕತ್ತಿನ ದೋಟಿ ಸುಬ್ಬ ಮುಂಚೆ ಕಡೆಯು ಗಿಡ್ಡ ಬಾಗಿಲಿನಲ್ಲಿ ತನ್ನ ಉದ್ದ ದೇಹ ಬಾಗಿಸಿ ಒಳಗೆ ನುಸಿದ. ಸೀತೆಗೆ ಯಾಕೋ ದೋಟಿ ಸುಬ್ಬನನ್ನು ಕಂಡರೆ ಆಗದು. ಯಾಕೆಂದು ಅವಳಿಗೇ ತಿಳಿಯದು. ನಾದಿನಿಯ ಗಂಡ, ಮನೆ ಅಳಿಯ ; ಹತ್ತಿರ ಇರುವವನು ಆಗಾಗ ಬರುತ್ತಿದ್ದ. ರಾಮಕ್ಕನ

ಮಗಳು ಶಿವಮ್ಮ ಎರಡು ಮಕ್ಕಳೊಂದಿಗೆ ಬರುತ್ತಿದ್ದುದುಂಟು. ರಾಮಕ್ಕನಿಗೆ ಮಗಳು, ಸೊಸೆ ಎಲ್ಲಾ ಒಂದೇ.

"ಏನು ಕೆಲಸವೇ ಗಳಿಗ್ಗೊಂದಪ ಇಲ್ಲಿ ತುರುಕೂಕೆ. ಬ್ಯಾರೆ ಕಸಬಿಲ್ಲವ ನಿಮಗೆ ?" ಇದೇ ಸ್ವಾಗತ ಮಗಳಿಗೆ.

ಶಿಮ್ಮಾಗೆ ಬೇಜಾರಾದಾಗ ಮಾಳೂರಿಗೆ ಹೋಗಿ ಬರುತ್ತಿದ್ದಳು. ಈಗ ಸೀತೆ ಮನೆಗೆ ಬಂದ ಮೇಲೆ ಆಗೀಗ ಬರುತ್ತಿದ್ದಳು. ಆಗಲೂ ಬೈಗಳವೇ :

"ಎಡಗ್ಕೆ ಕುಂಡೆಗೆ ಹತ್ರಾಂತ ಗಾದೆ. ತೌರ್ಮನೆ ಹತ್ರಾಂತ ಮಕ್ಳ ಮರಿ ಕಟ್ಕೊಂಡು ಬರೂದು ಯಾಂತ ಚಂದವೇ ?"

ಅನ್ನುವಳು ರಾಮಕ್ಕ ಅಳಿಯನಿಗೂ ಅದೇ ಆಶೀರ್ವಾದ :

"ಹೊಳೆ ಈಪಾಟ ಹತ್ರ ಅದೆ. ಒಂದು ಸಾಬೂನು ತದ್ಕಂಡು ಶುಭ್ರಾಗಿ ಪಂಚೆ–ಶಲ್ಯ ಒಕ್ಕಳೂಕೆ ಏನಾದ್ಡಿ. ಒಪ್ಪತ್ತಿಗೆ ಪರ್ಕ್ಯಾಸೇಠಕ್ಕೆ ಅನ್ನ ಹೊಡಿಯೂಕೆ ಆಗತ್ತೆ. ಯರಡು ಬಟ್ಟೆ ಒಕ್ಕಾಳೂಕೆ ಆಗದಾ ? ಕೊಳೆತ ಬಾಯಿ, ಕೊಳೆತ ಬಟ್ಟೆ, ಹೇಸಿಕೆ ಆಗೂದಿಲ್ವಾ ನಿಂಗೆ ?"

ಅತ್ತೆಯ ಕಾಫಿಗಾಗಿ ಅವನು ಆಕೆಯ ಬೈಗುಳ ಸಹಿಸುತ್ತಿದ್ದ. ಈ ದಿನವೂ ಬೈಸಿಕೊಂಡು ಕಾಫಿ ಕುಡಿದು ಹೊರಟ

ಸೀತೆ ಹೊರಗೆ ಒರಲಿಲ್ಲ ಕೊಮಾರಿಯೂ ಗುಮ್ಮನ ಹಾಗೆ ಕೂತಿದ್ದ,

ಸೀತೆಗೆ ಮೈ ತುಂಬಾ ನೋವಾಗಿತ್ತು. ಆದರೂ ಅವಳೇನೂ ರಾತ್ರಿಯ ಊಟ ಬಿಡಲಿಲ್ಲ ಅಳಲಿಲ್ಲ. ತನ್ನ ಪಾಲಿನ ಎಲ್ಲಾ ಕೆಲಸ ಮುಗಿಸಿ ಅತ್ತೆಯ ಹಾಸಿಕೆಯ ಪಕ್ಕ ತನ್ನ ಹಾಸಿಕೆ ಬಿಚ್ಚಿದಾಗ ರಾಮಕ್ಕ ಗದರಿದಳು :

"ಹೋಗೇ ಕ್ವಾಣೇಲಿ ಮಲಕ್ಕಳೇ. ಇಲ್ಯಾಕೆ ಹಾಕ್ಕಂಡೆ ಹಾಸ್ಕೇನ."

ರಾಮಕ್ಕನ ಲೆಕ್ಕಾಚಾರದ ಪ್ರಕಾರ ಈ ದಿನ ಸೀತೆ ಗಂಡನ ಜೊತೆ ಮಲಗಬೇಕು. ಈ ದಿನ ಮಂಗಳವಾರ. ಅಮಾವಾಸ್ಯೆ, ಸಂಕ್ರಮಣ ಇಂಥ ದಿನಗಳಲ್ಲಿ ಗಂಡನ ಹತ್ತಿರ ಹೋಗಬಾರದು. ಸೀತೆ ನಿರ್ಭಯವಾಗಿ ಒರಟಾಗಿ ಅಂದಳು :

"ನಾ ಇವತ್ತು ಕ್ವಾಣೇಲಿ ಮಲಗೂದಿಲ್ಲ. ಅವರ ಹತ್ರ ಮಲಕ್ಕಂಡ್ರೆ ಅವರು ಸುಮ್ಮಗಿರೂದಿಲ್ಲ. ನನ್ನ ತೊಡೆ, ಬೆನ್ನು, ರಟ್ಟೆ, ಕಾಲು ಯಲ್ಲ ಬಾಸುಂಡೆ ಒಂದದ ಭುಗಭುಗ ಉರೀತದೆ. ನಾ ಇಲ್ಲೇ ಮಲಗ್ತನಿ."

ಈಗ ರಾಮಕ್ಕನಿಗೆ ಚಾವಟಿ ಏಟು ಬಿದ್ದಂತಾಯಿತು. ಏನೂ ತಪ್ಪು ಮಾಡದ ತಪ್ಪಲಿ ಹುಡುಗಿಗೆ ತಾನೇ ಹೊಡೆದಿದ್ದು. ಈಗ ಯಾರ ಮೇಲೂ ಹಾರಾಡುವಂತಿಲ್ಲ. ಅವರೂ ಜಗ್ಗುವ ಜೀವವಲ್ಲ.

"ಹೋಗಿ ಬಿದ್ಗ."

ಎಂದು ಒಳಗೆ ಹೋಗಿ ಕೊಬ್ಬರಿ ಎಣ್ಣೆ, ಕುಂಕುಮ ಕಲಸಿ ತಂದ್ರು "ಎಲ್ಲಿ ತುಸ ಸೀರೆ ಸರಸು ಹಚ್ತೀನಿ" ಎಂದಳು.

ಸೀತೆ ನಿರ್ದಾಕ್ಷಿಣ್ಯವಾಗಿ ಸೀರೆ ಎತ್ತಿ ತನ್ನ ತೊಡೆಯ ಬಾಸುಂಡೆಗಳನ್ನು ತೋರಿದಳು. ಬೆಳ್ಳಗಿನ ದುಂಡು ತೊಡೆ, ಮಿಾನು ಖಂಡ, ಬೆನ್ನು, ದಿಂಡು, ರಟ್ಟೆ ಎಲ್ಲಾ ಕಡೆಯೂ ಬರೆಹಾಕಿದಂಥ ಬಾಸುಂಡೆಗಳು. ತೊಡೆ ದಿಂಡುಗಳಲ್ಲಿ ಚರ್ಮ ಸುಳಿದು ರಕ್ತ ಒಸರುತ್ತಿತ್ತು.

## ೧೩

ರಾಮಕ್ಕ ಒರಟು ಹೆಂಗಸು ನಿಜ. ಆದರೆ ಈಗ ಆಕೆಗೇ ಜೀವ ಪುಕ ಪುಕ ಅಂದಿತು. ಕನಿಕರವೂ ಆಯಿತು. ನಿಧಾನವಾಗಿ ಔಷಧಿ ಸವರಿದಳು. ಆದರೂ ಸೀತೆಗೆ ಉರಿಯಾಯಿತು.

"ಅಯ್ಯಪ್ಪ ಯಾಪಾಟಿ ಉರಿಯತ್ತೆ. ನಾನೇ ಹಚ್ಕಾತನಿ ಬಿಡಿ" ಎಂದು ಎದ್ದು ಕೂತಳು.

ಕೊಮಾರಿ ಕೋಣೆ ಬಾಗಿಲಲ್ಲಿ ಬಂದು ನಿಂತ. ಸೀತೆ ಗಾಯಗಳಿಗೆ ಎಣ್ಣೆ ಸವರಿಕೊಂಡಳು.

"ಬಿದ್ಗಳ್ಯಾ ಹೋಗಾ. ನಿಂಗೇನ್ಕೆಲ್ಸ ಇಲ್ಲಿ ?" ರಾಮಕ್ಕನ ಅಬ್ಬರ.

"ಈ ಗಾಯ ಯ.ಲ್ಲ ವಾಸಿಯಾಗೂ ತನ್ಕ ನಾ ಅವರ್ಜ ಶೀಗೆ ಮಲಕ್ಕಳೂ ದಿಲ್ಲ. ಹಂಗಂತ ನೀವೇ ಹೇಳಿ" ಸೀತೆ ಅತ್ತೆಗೇ ಆಜ್ಞೆ ಇತ್ತಳು.

"ನಿಂಗ್ಯಾಕೆ ಅದೆಲ್ಲ ಪಾರ್ಪತ್ತೆ ನೀನ್ಪಾಡಿಗೆ ನೀ ಕ್ಸೃಷ್ಗಿರು"

ಸೀತೆ ಸುಮ್ಮನಾದಳು. ಕೊಮಾರಿಗೆ ವಿಷಯ ತಿಳಿಯಿತು. ಅವನು ಸದ್ದಿಲ್ಲದೆ ತನ್ನ ಕೋಣೆಗೆ ಹೋಗಿ ಗೊರ್ರನೆ ಜೋರಾಗಿ ಬಾಗಿಲು ಸದ್ದು ಮಾಡಿ ಹಾಕಿ ಬಿದ್ದುಕೊಂಡ. ತಾಯಿಯ ಮೇಲೆ ಸಿಟ್ಟು ಬಂದಿತ್ತು ಅವನಿಗೆ

"ನೀ ಬ್ಯಾಗ ಅತ್ಲಾಗೆ ಒರಗಿಹೋಗು" ಎಂದು ಕೋಣೆಯೊಳಗೆ ಗೊಣಗಿಕೊಂಡ. ತಾಯಿಯೆದುರು ತುಟಿಬಿಚ್ಚುವ ತಾಕತ್ತಿರಲಿಲ್ಲ. ತಾಯಿ ಸತ್ತರೆ ತಮಗೆಲ್ಲ ಪೂರ್ಣ ಸ್ವಾತಂತ್ರ್ಯ ಸಿಗುವುದೆಂಬ ಒಂದು ನಂಬಿಕೆ ಮಾತ್ರ ಇತ್ತು ಎಲ್ಲರಿಗೂ. ಅಂಥ ಯೋಚನೆ ಮಾಡದಿದ್ದವಳು ಸೀತೆಯೊಬ್ಬಳೇ.

ಮರುದಿನ ಬೆಳಗ್ಗೆ ಸೀತೆ ಹೊರಗೆ ಕೂತಳು ಹೊರಗೆ ಕೂತರೂ ಅವಳಿಗೆ ಕೆಲಸವೇನೂ ತಪ್ಪಿದ್ದಲ್ಲ. ಎಲ್ಲ ಸೊಸೆಯರೂ ಅನುಭವಿಸಿದ ಹಳೆಯ ಕತೆಯಿದು. ಕೊಟ್ಟಿಗೆ ಸಗಣಿ ಎತ್ತುವುದು. ಹಿತ್ತಲ ಅಂಗಳ ಗುಡಿಸುವುದು. ಬತ್ತ ಕುಟ್ಟುವುದು, ಅಕಿ ಮಾಡುವುದು, ಬೀಸುವುದು ಇತ್ಯಾದಿ ಕೆಲಸಗಳು. ಸೀತೆ ಮೈ ನೋವೆಂದು ನರಳಲಿಲ್ಲ. ಚೌಕಿಯ ಕಂಬಕ್ಕೆ ಹೇಳಿದಳು.

"ಚೌಕಿ ಕಂಬವೇ, ಅತ್ತೆಮ್ಮಗೆ ಹೇಳು ಬತ್ತ ಕುಟ್ಟೋದಿದ್ರೆ ಪಣತದಿಂದ ತೆಗೆಸಿ ಹಾಕ್ಬಕಂತೇಂತ."

"ಲಾ ಕೊಮಾರಿ ಅಷ್ಟು ಬತ್ತ ತೆಗದು ಹಾಕಾ. ಇನ್ಮೂರ್ದಿನ ಏನು ಖಡಿಬಕು ಅದು."

ಕೊಮಾರಿ ದುಮುಗುಟ್ಟುತ್ತ ಬತ್ತ ತೆಗೆದು ಹಿತ್ತಲ ಜಗಲಿಗೆ ಸುರಿದ. ನಾಲ್ಕು ಹೆಡಿಗೆ ಬತ್ತ. ಬೆಳಗಿನ ಹತ್ತು ಗಂಟೆಗೆ ಕಂಚಿನ ಲೋಟದ ತುಂಬ ಕಾಫಿ ಬಂದಿತು. ಸೀತೆಗೆ ಗಾಯದ ನೋವೆಲ್ಲ ಹೊರಟು ಹೋಯ್ತು. ಅತ್ತೆಯ ಕಾಫಿ, ಅಡಿಗೆಯಿಂದ ಅವಳು ಎಲ್ಲ ಕಷ್ಟವನ್ನು ಮರೆಯುತ್ತಿದ್ದಳು. ಹಿತ್ತಲ ಜಗಲಿಯ ಮೂಲೆಯದು ಮುಟ್ಟಾದವರ ಕೋಣೆ. ಅಲ್ಲಿಯ ಚಾಪೆ, ಲೋಟ, ತಂಬಿಗೆಗಳಿಗೆ ಪ್ರತಿ ತಿಂಗಳು ಹೊಳೆಯ ಸ್ನಾನವಾದರೂ ಅವಕ್ಕೆ ಅಸ್ಪೃಶ್ಯತೆ. ಅವು ಹೊಳೆಯಲ್ಲಿ ಮಿಂದು, ಬಿಸಿಲುಕಾದರೂ ಯಥಾಪ್ರಕಾರ ಮುಟ್ಟಿನ ಕೋಣೆಯ ನಾಗೊಂದಿಗೆಯ ವಾಸವೇ. ಈಗ ಕಂಬದ ಮರೆಯಲ್ಲಿ ಸೀತೆ ಇಟ್ಟ ಲೋಟಕ್ಕೆ ಕಾಫಿ ಹುಯಿದವನು ಕೊಮಾರಿ. ಸೀತೆ ನಿಧಾನ

ವಾಗಿ ಕಾಫಿ ಕುಡಿದು ಬತ್ತ ಕುಟ್ಟಲು ತೊಡಗಿದಳು. ಮಧ್ಯಾನ ಎರಡು ಗಂಟೆ ವೇಳೆಗೆ ಹತ್ತು ಕೊಳಗ ಬತ್ತ ಕುಟ್ಟಿ, ಚೊಳಿಸಿ, ಹನಕಲ್ಲು ಹಾಕಿ ಅಕ್ಕಿ ಸ್ವಚ್ಛ ಮಾಡಿಟ್ಟಳು. ಅಕ್ಕಿ, ಹೊಟ್ಟು, ತೌಡು, ನುಚ್ಚು ಸ್ವಚ್ಛವಾಗಿ ಬೇರೆ ಬೇರೆಯಾಗಿ ಕುಳಿತವು. ಸೀತೆಯ ಪ್ರತಿಯೊಂದು ಕೆಲಸವೂ ರಾಮಕ್ಕ ನಿಗೆ ಮೆಚ್ಚಿಕೆಯಾದರೂ ಅದನ್ನು ತಪ್ಪಿಯೂ ಬಾಯಲ್ಲಿ ಹೇಳುವ ಜಾಯ ಮಾನ ಆಕೆಯದಲ್ಲ. ಸಾಕಿ, ಮಾನಿಯರಿಗೆ ಈ ಅತ್ತೆಯ ಕಾಫಿ-ಅಡಿಗೆಯೂ ಸಾಕು ; ಈ ಹೊಡೆತ–ಒಯ್ಗಳೂ ಸಾಕು ಎನಿಸಿ ಅವರು ಉಪಾಯವಾಗಿ ದೂರಾಗಿದ್ದರು. ಈಗ ಕೊನೆಯಲ್ಲಿ ಸೀತೆ ಭಟ್ಟರ ಹೆಂಡತಿ ಎಂದಾವರೂ—

"ಅವರಿಬ್ರೂ ಹಗೂರ ದೂರಾದ್ರು ನೀನೊಬ್ಳು ಸಿಕ್ಕಂಡ್ಯಲ್ಲೇ ಹೆಣ್ಣೇ ಈ ದೂರ್ಘುಟಿ ಕೈಯಾಗೆ ?" ಎಂದರೆ ಸೀತೆ ಕೂಡಲೇ ಸಹಜವಾಗಿ ಅನ್ನುವಳು.

"ಭಟ್ರೇ ಅಲ್ವ ಈ ಮನೆ ಗೊತ್ಮಾಡಿದ್ದು ? ಯಾರಿಗೊತ್ತಿರತ್ತ ಹಿಂಗೇಂತ. ಭಟ್ರಿಗೆ ಗೊತ್ತಿದ್ರೂ ಮಾಡಿದ್ರು. ಅದಕೇನಂತೆ ಈಗ ಯಾವ ಅತ್ತೇ ಮನೀಗ್ಹೋದ್ರೂ ಇಷ್ಟೇ ಸೈಯಲ್ಲ. ಯಲ್ಲಾರೂ ನಿವ್ಹಾಗಿರುಲ್ಲ."

ನಿಜವಾಗಿ ಭಟ್ಟರ ಹೆಂಡತಿ ಸೊಸೆಯರಿಗೆ ಎಂದೂ ಬೈದವರಲ್ಲ. ಗಂಡಂದಿರು ಎರಡೇಟು ಕೊಟ್ಟಿದ್ದಾರು. ಸಂಕುವೇ ಅನ್ನುವಳು :

"ನಮ್ಮತ್ತೆ ಅಡ್ಡಿಲ್ಲಪ್ಪ. ನವ್ಕೆಲ್ಲಾ ನಾವು ಮಾಡಿದ್ರಾತು ಸೈ."

ಮಧ್ಯಾಹ್ನ ಮೂರು ಗಂಟೆಗೆ ತನ್ನ ಊಟವೂ ಆದ ಮೇಲೆ ಬಾಳೆ ಎಲೆ ಯಲ್ಲಿ ಒಂದೇ ಸಾರಿಗೆ ಒಂದಷ್ಟು ಅನ್ನ, ದೊನ್ನೆಗಳಲ್ಲಿ ಸಾರು, ಹುಳಿ ಕಾಯಿ ರಸ, ಮಜ್ಜಿಗೆ ಎಲ್ಲವನ್ನೂ ತಂದು ಹಿತ್ತಲ ಜಗಲಿಗಿಟ್ಟು ಕೂಗಿ ಹೇಳುವಳು ರಾಮಕ್ಕ,

"ಹಿತ್ತಲ ಬಾಗಿಲ ಕಂಬವೇ ಮುಟ್ಟಾದೋಳಿಗೆ ಹೇಳು. ವುರಾಯಲಗೆ ಬಡಿಸಿಟ್ಟಿದಾರೇಂತ."

ರಾಮಕ್ಕ ಅಡಿಗೆ ಮನೆ ಸೇರಿದ ನಂತರ ಸೀತೆ ಬಂದು ಎಲೆಯ ಮುಂದ ಕೂರಬೇಕು. ಬೆಳಗಿನಿಂದ ಹಸಿದಹೊಟ್ಟೆ, ಬತ್ತ ಕುಟ್ಟಿದ ದಣಿವು. ಆದರೂ ಊಟಕ್ಕೆ ಮುನ್ನ ಒಂದು ಸಾರಿ ಹೊಳೆಗೆ ಹೋಗಿ ತಣ್ಣಗೆ ಕೈಕಾಲು ಮುಖ ತೊಳೆದು, ತಂಬಿಗೆ ಲೋಟ ಬೆಳಗಿ ನೀರು ತುಂಬಿ ಬಂದರೆ, ಅರ್ಧ ಆಯಾಸ

ಕಡಿಮೆ. ನಂತರ ರಾಮಕ್ಕನ ಊಟ. ನಿರಾತಂಕವಾಗಿ, ನಿಧಾನವಾಗಿ ಎಲ್ಲ ಮೇಲೋಗರ ಕಲಸಿ ಕಲಸಿ ಉಂಡರೆ ರಸಭೋಜನ. ಕೇಸಕ್ಕಿ, ದಬ್ಬಣ ಸಾಲೆಯಾವರೂ ಗಂಜಿ ಬಸಿದ ಉದುರುದುರು ಅನ್ನ, ರಾಮಕ್ಕನ ರಸರಸ ಅಡಿಗೆ. ಸೀತೆ ಎಲ್ಲ ಕಷ್ಟ ಮರೆಯುತ್ತಿದ್ದಳು.

ಈಗಲೂ ಮೈ ಕೈ ಬಾಸುಂಡೆಗಳು ಉರಿಯುತ್ತಿದ್ದವು. ಗುಡ್ಡದ ಮುಳ್ಳು, ಹರಿವೆ ಸೊಪ್ಪಿನ ರಸ ಸವರಿಕೊಂಡು ಕೆಲಸ ಮಾಡುತ್ತಿದ್ದಳು. ಇವಳು ಮುಟ್ಟಾದ ದಿನವೇ ಕೊಮಾರಿ ಹೊರಗಿನ ಜಗುಲಿಯಲ್ಲಿ ನಿಂತು,

"ನಾ ತುಸ ಮಾಳೂರಿಗೆ ಹೋಗಿ ಬರ್ತನೆ" ಎಂದು ವೊಟ್ಟೆಲಿಳಿದ.

"ಹಾಂ ನಂಗೊತ್ತವೆ. ಈಗ ನಿಂಗೇನೂ ಕಸಬಿಲ್ಲ ಇಲ್ಲಿ. ನಡೀ ಅತ್ಲಾಗೆ"

ಇನ್ನು ನಿಂತರೆ ತಾಯಿಯ ಪ್ರವರ ಉದ್ದವಾದೀತೆಂದು ಸರಸರ ನಡೆದ ಕೊಮಾರಿ. ಸೀತೆ ನಿಶ್ಚಿಂತೆಯಾದವಳು.

ಮುಂದಿನ ತಿಂಗಳು ಸೀತೆಗೆ ಮಾಳೂರಿನ ಪಯಣ ಕೊಮಾರಿ ಕರೆದೊಯ್ದ. ಓರಗಿತ್ತಿಯರೊಡನೆ ಹರಟುತ್ತ, ಕೆಲಸ ಮಾಡುತ್ತ, ಮಕ್ಕಳೊಡನೆ ಮಕ್ಕಳಾದಳು ಸೀತೆ. ಹತ್ತಿರದ ಹೀರೇತೋಟ, ಗುಡ್ಡದ ಮಠಗಳಿಗೆ ಹೋಗಿ ಬಂದರು ಮೂರು ಜನ ಒಂದಾಗಿ. ಅಲ್ಲಿಯ ಹೆಂಗಳೆಯರಿಗೂ ಆನಂದ. ಗೆಲು ಮುಖದ ಚೂಟಿ ಚೆಲುವೆ ಸೀತೆಯನ್ನು ಕಂಡು, "ಯಲ್ಲಾರಿಗಿಂತ ಕೊಮಾರಿ ಹೆಂಡ್ತಿ ಚಂದ" ಎಂದು ತಮ್ಮೊಳಗೆ ಆಡಿಕೊಂಡರು, ಉಪಚರಿಸಿದರು. ಹದಿನೈದು ದಿನದೊಳಗೆ ಅತ್ತೆಯಿಂದ ಕರೆ ಬಂತು ಸೀತೆಗೆ. ಸೀತೆ ಒಂದು ದಿನವೂ ಅತ್ತೆಯ ಮೇಲೆ ದೂರು ಹೇಳದ್ದು ಕಂಡು ಮಾನಿ ಅಂದಳು :

"ಮಾರಾಯ್ತಿ ನೀ ಹೆಂಗಿದ್ದೀಯೇ ಆ ತಾಟ್ಕಿ ಕೈಯಾಗೆ. ನಮಗಂತೂ ಸಾಕಾತಪ್ಪ."

ಸೀತೆ ಹಗುರವಾಗಿ ಅಂದಳು :

"ಮಾಡೂದೆಂತದು. ಹೆಂಗಿದ್ರೂ ಅಲ್ಲೇ ಇರ್ಬೆಕಲ್ಲ. ಹುಟ್ಟಿಗಿಣ ಸುಟ್ರೂ ಹೋಗ್ದೂಂತ ತಿಳೀದ. ಇಷ್ಟು ದಿನ ಇಲ್ಲದ್ದು ಈಗ ಅವರು ಬದ್ಲಾದಾರ ? ಯಂತದಾರ ಮಾಡ್ಕಳ್ಳಿ ನಂಗೇನು."

ಸಿಹಿಯೂಟ ಉಂಡು ಟಪಾಲು ಗಾಡಿ ಹತ್ತಿದಳು ಸೀತೆ ಗಂಡನೊಡನೆ.

"ಇನ್ನೇನು ಎಳ್ಳಮಾಸೆ ಬಂತಲ್ಲ. ಈದಪ ನೀವೆಲ್ಲ ಬನ್ನಿ. ನೀವು ಬಂದ್ರೆ ನಾನೂ ಜಾತ್ರೆ ನೋಡ್ಬೋದು, ನಾಟ್ಕ ನೋಡ್ಬೋದು" ಎಂದು ಓರಗಿತ್ತಿಯರಿಗೆ ಕರೆಕೊಟ್ಟು ಹೊರಟಳು ಸೀತೆ. ತನ್ನ ಮಾತು ಎಷ್ಟರಮಟ್ಟಿಗೆ ನಡೆಯುತ್ತದೆ ಎಂಬ ವಿಚಾರ ಮಾಡಲಿಲ್ಲ ಅವಳು.

ಗಾಡಿಗಿಂತ, ಕುದುರೆ ಗಾಡಿಗಿಂತ ತಂಪಿನ ವೇಳೆಯಲ್ಲಿ ನಡೆದು ಬರುವುದೇ ಸೀತೆಗೆ ಹಿತ. ಕಾಲು ನಡಿಗೆಗೆ ಎಂದೂ ಹೆದರಿದವಳಲ್ಲ ಅವಳು. ಈ ಕುದುರೆಗಾಡಿ ಪಯಣ ವೇಗ ಎಂಬುದು ಮಾತ್ರ ನಿಜ.

ಈ ಬಾರಿ ಎಳ್ಳಮಾವಾಸ್ಯೆ ನಿಜವಾಗಿ ಬಹಳ ಸಂಭ್ರಮ ಊರಿನವರ ಪಾಲಿಗೆ ಮೊದಲ ಬಾರಿಗೆ ನಾಟಕದ ಕಂಪನಿ ಬಂದಿದೆ. ದೊಂಬರಾಟ, ಬಯಲಾಟ, ಯಕ್ಷಿಣಿ, ಹರಿಕಥೆ ಎಲ್ಲವೂ ಬಣ್ಣ ಬಣ್ಣದ ನಾಟಕದ ಚೀಟಿಗಳು ಹಳ್ಳಿಹಳ್ಳಿಗಳಿಗೂ ತಲ್ಪಿದ್ದವು. ರಾಮಕ್ಕನ ಮನೆಗೂ ಸಾಕಷ್ಟು ನೆಂಟರು ಬಂದರು. ಎಲ್ಲರೊಂದಿಗೆ ಸೀತೆಯೂ ಶಿರಹಟ್ಟಿ ಕಂಪೆನಿಯ ಪಾದುಕಾ ಪಟ್ಟಾಭಿಷೇಕ ನೋಡಿದಳು. ಹೊಸನೋಟ ಮನಸ್ಸಿಗೆ ಹಿಡಿಸಿತು. ಆದರೆ ಬಾಕಿಯವರೆಲ್ಲ ಜರಗಾದಷ್ಟು ಸೀತೆ ಆಗಲಿಲ್ಲ ಎಲ್ಲರ ಬಾಯಲ್ಲೂ ನಾಟಕದ ಮಾತೇ. ಆದರೆ ಸೀತೆ ಆ ಬಗ್ಗೆ ಏನೂ ಆಡಲಿಲ್ಲ. ಯಾರು ಕೇಳಿದರೂ 'ಚಂದಾಗಿತ್ತು' ಅನ್ನುವಳು.

ಜಾತ್ರೆಯ ಗದ್ದಲ ಕಳೆದು ಎಂಟು ದಿನಕ್ಕೆ ಮಾಳೂರಿನವರೂ ಹೊರಟರು. ಬಂದವರು ಹೊರಟರೆ ಬೇಸರಪಟ್ಟುಕೊಳ್ಳುವ ಸ್ವಭಾವ ಅವಳದಲ್ಲ. ಮೈಮುರಿಯುವ ಕೆಲಸವಾದರೂ ಒಂದಿಷ್ಟು ಬೇಸರವಿಲ್ಲ.

ಮುಂದಿನ ಒಂದು ವರ್ಷದಲ್ಲಿ ಎಲ್ಲಾ ಕೆಲಸಗಳಲ್ಲೂ ರಾಮಕ್ಕನನ್ನು ಮೀರಿಸಿದಳು ಸೀತೆ. ಜೊತೆಗೆ ಏಳು ತಿಂಗಳ ಬಸುರಿ ಬೇರೆ. ಮಧ್ಯೆ ಒಂದು ಸಾರಿ ಮಹಾಬಲಯ್ಯ ಬಂದಾಗ ಸೀತೆ ಮೊದಲು ವಿಚಾರಿಸಿದ್ದು ಅಚ್ಚಿಯನ್ನು. ಅಚ್ಚಿಯ ಸುದ್ದಿ ಕೇಳಿ ಸ್ವಲ್ಪ ಚಿಂತಿತಳಾದಳು

"ಇನ್ನೂ ಅಚ್ಚಿ ಮೈನೆರೆದಿಲ್ಲ. ಅವಳ ಗಂಡನ ಮನೆಯೋರು ಚನ್ನಭಟ್ಟನಿಗೆ ಬೇರೆ ಮದುವೆ ಮಾಡುವುದಾಗಿ ಹೆದರಿಸುತ್ತಿದ್ದಾರೆ. ಅದೂ ಮೂರೊತ್ತು ಅಳುತ್ತೆ."

ಅಂದಿದ್ದ ಮಹಾಬಲಯ್ಯ. ತನಗೆ ಮೂರನೇ ತಿಂಗಳಲ್ಲಿ ಚವ್ವಿ ಔಸ್ತಿ ಕೊಟ್ಟಿದ್ದ ಭಟ್ಟರ ಹೆಂಡತಿಯನ್ನೇ ವಿಚಾರಿಸಿದಳು ಸೀತೆ.

"ಈ ಅಚ್ಚಿಗೇನಾಗಿದ್ದೀತು. ಇನ್ನೂ ಮೈನೆರೀಲಿಲ್ಲ. ಇದಕ್ಕೆ ಯಂತದೂ ಔಸ್ತಿ ಇಲ್ವಾ ?"

"ಆ ಹೆಣ್ಣ್ ನೋಡಿದ್ರೆ ಸಿಕ್ಕಟ್ಟಿಗೆ ಹಂಗದೆ. ಒಂದಷ್ಟು ರಕ್ತವಾಳ ಚಕ್ಕೆ ರಸ ಕುಡಿಸಿದ್ರೆ ನೆರದೀತಪ್ಪ. ಅವರ ಮನಿಯೋರಿಗೆ ತಿಳೀದ ಇದು" ಅಂದರು.

ಏಳನೆಯ ತಿಂಗಳಲ್ಲಿ ಮಹಾಬಲಯ್ಯ ಗಾಡಿ ಕಟ್ಟಿಕೊಂಡು ಮೋಟಮ್ಮನೊಂದಿಗೆ ಬಂದ ಸೀತೆಯನ್ನು ಬಾಣಂತನಕ್ಕೆ ಕರೆದೊಯ್ದಳು. ಅತ್ತೆಯ ಮನೆಯ ಶಾಸ್ತ್ರಗಳು ಮುಗಿದಿದ್ದವು. ಮೊದಲ ಬಾಣಂತನಕ್ಕೆ ತೌರಿಗೆ ಹೋಗಲೇಬೇಕು. ನಿಜ ಅಂದರೆ ಸೀತೆಗೆ ತೌರಿಗೆ ಹೋಗಲು ಮನವೇ ಇರಲಿಲ್ಲ. ಭಟ್ಟರ ಸೊಸೆಯರು, ಕುರುವಳ್ಳಿಯ ಗೆಳತಿಯರು, ತುಂಗೆಯ ಹೊಳೆ, ಅಲ್ಲಿಯ ಪರಿಸರ ಅವಳಿಗೆ ಬಹಳ ಪ್ರಿಯವಾಗಿದ್ದವು. ಹಿರಿಯರು ಹೇಳಿಕೊಟ್ಟ ಎಲ್ಲಾ ನೋಪಿ-ವ್ರತ, ಹಬ್ಬ-ಹರಿದಿನ ಎಲ್ಲಾ ಸಾಂಗವಾಗಿ ಮಾಡುತ್ತಿದ್ದಳು. ಮಡಿ-ಹುಡಿ ನಡೆಸಲೇ ಬೇಕಾಗಿತ್ತು. ಆದರೆ ಅದರ ಬಗ್ಗೆ ದಡ್ಡ ನಂಬಿಕೆ, ಕಪಟ ಭಕ್ತಿ ಅವಳಿಗಿರಲಿಲ್ಲ. ಅಂತೂ ಎಲ್ಲಾ ನಡೆಸುತ್ತಿದ್ದಳು.

ಬೆಳದಿಂಗಳ ದಿನಗಳಲ್ಲಿ ಮುಂಚಿ ಕಡೆ ಜಗುಲಿಯಲ್ಲಿ ಕೂತರೆ ಆಯ್ತು ! ಆಗಿನ ವಾತಾವರಣ ದಿನದ ಆಯಾಸವನ್ನು ಮರೆಸುತ್ತಿತ್ತು. ತಿಂಗಳ ರಾತ್ರಿಯಲ್ಲಿ ಹೊಳೆಯ ನಡುವಿನ ಬಂಡೆಗಳ ಮೇಲೆ ಅಲ್ಲಲ್ಲಿ ಕೂತು ಹಾರಾಡುವ ಬೆಳ್ಳಕ್ಕಿ, ಹಾಲಕ್ಕಿಗಳು, ಕೋಗಿಲೆ, ಕಾಜಾಣಗಳ ಇಂಚರ ಸುಮ್ಮಾನದಿಂದ ದುಮ್ಮಿಕ್ಕುವ ತುಂಗೆ. ಪುತ್ತಿಗೆ ಮಠದ ಬದಿಯ ಅರಳಿಮರ ತೊಗಟೆಗಳಲ್ಲಿ ಕೂತು,

"ಕುಕ್ಕರಶಟ್ಟಿ ಕುರ್ರ್ರೋ ಕುರ್ರ್ರೋ ಕುರ್ರ್ರೋ."

ಎನ್ನುವ ಮರಕುಟಕ ಹಕ್ಕಿಗಳ ಯಕ್ಷಗಾನ. ಕಾವಕ್ಕಿ, ತೇನೆಗಳ

ಚೀಕ್-ಚೀಕ್ ಚೀಕಲಾಟ. ನಾನಾ ಬಗೆಯ ಖೇಚರಗಳ ಸಾಮೂಹಿಕ ಗಾನ.

ಸೀತೆ ವಿದ್ಯಾವಂತೆಯಲ್ಲ, ಪಂಡಿತೆಯೂ ಅಲ್ಲ. ಭಾವಜೀವಿಯಲ್ಲ, ಭ್ರಾಮಿಕೆಯೂ ಅಲ್ಲ. ಆದರೆ ಅನುದಿನ ತಾನು ನೋಡುತ್ತಿದ್ದ ಆ ದೃಶ್ಯಗಳು, ಕೇಳುತ್ತಿದ್ದ ಅಲ್ಲಿಯ ನಿಸರ್ಗ ಸಂಗೀತ ಅವಳ ಅಮಲ ಚರಿತದಲ್ಲಿ ಮಿಲಿನವಾಗಿ ಹೋಯಿತು. ತೌರಿನ ಬಗ್ಗೆ ಅವಳಿಗೆ ನೆನಪಾಗುತ್ತಿದ್ದುದು ತನ್ನ ಅಜ್ಜಿ ಮತ್ತು ಬಾಲ್ಯದ ಗೆಳತಿ ಅಚ್ಚಿ. ಅಚ್ಚಿಯ ಜೀವನ ಸಸಿಯಲ್ಲೇ ಮುರುಟುತ್ತಿರುವುದು ಅವಳಿಗೆ ಸ್ವಲ್ಪ ಚಿಂತೆ ತಂದಿತು. ಹೇಗೂ ಈಗ ಅಲ್ಲಿಗೇ ಹೋಗುತ್ತೇನಲ್ಲ ಎಂದು ಸಮಾಧಾನ ಮಾಡಿಕೊಂಡಳು.

ತೌರಿಗೆ ಹೊರಡುವ ಹಿಂದಿನ ದಿನ ಅತ್ತೆಯೊಡನೆ ಧೈರ್ಯವಾಗಿ ಅಂದಳು :

"ಅತ್ತೆ, ಇವತ್ತೇ ಕಡೇ ದಿನ ಅಲ್ವ. ಚಂದಾಗಿ ಬೆಳದಿಂಗ್ಳು ಬರತ್ತೆ ಇವತ್ತು ರಾತ್ರಿ ಹೊಳೆಯೂಟ ಮಾಡ್ತೀವಿ ?"

ರಾಮಕ್ಕರ ನಾಲಿಗೆಯ ತುದಿಯವರೆಗೆ ಬಂದ ಬೈಗಳು ಹಿಂದೆ ಸರಿಯಿತು. ತುಂಬಿದ ಬಸುರಿ ! ಕಣ್ಣು ಸಿಡಿಯುವಂತೆ ತುಂಬಿಕೊಂಡಿದ್ದಾಳೆ. ವಸಂತ ಋತುವಿನ ಶುದ್ಧ ತ್ರಯೋದಶಿ ಹೊಳೆ ದಂಡೆಗೆ ರಾತ್ರಿಯಲ್ಲಿ ಕಳಿಸಿದರೆ ಸರಿಯೇ ?

ಸೀತೆಯಂತೇ ರಾಮಕ್ಕನದು ಗಟ್ಟಿ ಜೀವ. ಮನಸ್ಸು ಜೋಲು ಬಿಡಲಿಲ್ಲ. ಚೊಚ್ಚಲ ಬಸಿರು. ಹುಡುಗಿ ಬಯಸಿದ್ದನ್ನ ಬೇಡ ಅನ್ನಬಾರದು. ಇಷ್ಟಕ್ಕೂ ಒಂದೇ ಹುಡುಗಿಯನ್ನೇನೂ ಕಳಿಸೂದಿಲ್ಲವಲ್ಲ ಅಂದುಕೊಂಡಳು. ಆದರೂ ನಯವಾಗಿ ಮಾತಾಡಿ ಅಭ್ಯಾಸವೇ ಇಲ್ಲ. ಮಹಾಬಲಯ್ಯ, ಮೋಟಮ್ಮನ ಮುಲಾಜೇನೂ ಆಕೆಗಿಲ್ಲ. ಒಂದು ರೀತಿಯ ಪ್ರೀತಿಯ ಗದರಿಕೆಯಲ್ಲಂದಳು :

"ದಿನಾ ನೀನೂ ಸಂಕು ಹ್ವಳೀಗೆ ಮುಸ್ರೆ ತೊಳೆಯೂಕೆ ಹೋದಾಗ ಮುಸ್ರೆ ಪಾತ್ರೇಲಿ ಅನ್ನ, ಹುಳಿ, ಗೊಜ್ಜು ಕಲಸ್ಕಂಡು ಹೋಗಿ ಹೊಳೆ ಕಲ್ಲೆ ಮ್ಯಾಲೆ ಕೂತ್ಕಂಡು ತಿಂತಿದ್ದದ್ದ ನಾಕಾಣ್ನ ? ಮತ್ತೊಂದಪ ಬ್ಯಾರೆ ಆಗ್ಬಕ

ಹೋಳಿಯೂಟ ? ಸೈ ಹ್ಯಾಂಗೂ ಬಂದದಾರ್ಲ್ಲ ನಿಮ್ಮಪ್ಪ ಅಮ್ಮ ಅವರ್ಜ್ತೀಗೆ ಹೋಗಿ ಉಂಡ್ಕಂಡ್ಬಾ. ಕಡೀಗೆ ನಿನ್ನ ಮಗ್ಗೆ ಕಿಮಿ ಚೊಟ್ಟಾದೀತು. ಹಾಂಗೇ ಭಟ್ರ ಸೊಸೇರನ್ನ ಕರಕಂಡ್ಹೋಗು."

ಅಂದು ರಾತ್ರಿಯ ಹೋಳಿಯೂಟಕ್ಕೆ ಹುಳಿಯನ್ನ, ಮೊಸರನ್ನ, ಅಂಬೊಡೆ, ಪಾಯಸ ತಯಾರಾಯ್ತು. ಭಟ್ಟರ ಸೊಸೆಯರು ಖುಷಿಯಿಂದ ಬಂದರು. ಹಿರಿಯರು ಊಟ ಹೊತ್ತು ನಡೆದರು. ಮನೆಯಲ್ಲಿ ಉಳಿದದ್ದು ರಾಮಕ್ಕ ಒಬ್ಬಳೇ. ಕಲ್ಲುಸಾರ ದಾಟಿ ವಿಸ್ತಾರವಾದ ಅರೆಕಲ್ಲು ಬಂಡೆಗೆ ಬಂದು ಕಲ್ಲು ತೊಳೆದು ವೃತ್ತಾಕಾರವಾಗಿ ಕೂತರು ಎಲ್ಲರೂ. ರಾಮಕ್ಕ ಇಲ್ಲದ್ದು ಎಲ್ಲರ ಬಾಯಿಯ ಕಡಿವಾಣ ಕಿತ್ತಿತ್ತು. ಹರಟುತ್ತ, ನಗುತ್ತ, ಕೆಲೆಯುತ್ತ ಊಟವಾಯಿತು. ಬಡಿಸಿದವರು ಭಟ್ಟರ ಹೆಂಡತಿ. ಉಂಡು ಕೂತಲ್ಲೇ ಕೈ ತೊಳೆದು ಬಾಯಿ ತುಂಬ ಎಲೆಯಡಿಕೆ ಮೆದ್ದರು. ಮುಸುರೆ ಪಾತ್ರೆ ತೊಳೆದುಕೊಳ್ಳಲು, ಎಲ್ಲರೂ ಎದ್ದು ನಿಂತಾಗ ಸೀತೆ ಸೊಂಟದ ಮೇಲೆ ಕೈಯಿಟ್ಟು, ನದೀ ತಟಾಕವನ್ನೆಲ್ಲಾ ವೀಕ್ಷಿಸಿದಳು. ಎಡದಂಡೆಯಲ್ಲಿ ತೀರ್ಥ ಹಳ್ಳಿ, ಬಲಗಡೆ ಕುರುವಳ್ಳಿ. ನಡುವೆ ತುಂಗಾತೀರ.

ನಡುವೆ ಸೀತೆಯನ್ನಿಟ್ಟುಕೊಂಡು ಎಲ್ಲರೂ ಕಾಲು ಹಾಕಿದರೂ ಸೀತೆಗೆ ಈಗಲೇ ಅಲ್ಲಿಯ ಚಿತ್ತೋಹಾರಿ ನಿಸರ್ಗ ಪರಿಸರವನ್ನು ಬಿಟ್ಟು ಹೊರಡಲು ಮನವೇ ಇರಲಿಲ್ಲ. ನಗರಗಳ ಬೆಡಗನ್ನು ಕಂಡವಳಲ್ಲ. ಆದರೂ ಅವಳಿಗೆ ತಾನಿರುವ ನೆಲೆಯೇ ಬಲು ಸುಂದರ ಎನಿಸಿತು. ಗಿರಿ, ವನ ನದಿ, ದೇವಾ ಲಯಗಳನ್ನು ನೋಡುತ್ತ ಕಲ್ಲುಸಾರ ದಾಟಿ ಪುತ್ತಿಗೆ ಮಠದ ಕಡೆಯಿಂದ ಎಲ್ಲರೂ ಮನೆ ಸೇರಿದರು. ಭಟ್ಟರ ಮನೆಯ ಅರಸಿನ-ಕುಂಕುಮವೂ ಬಂದಾಗಿತ್ತಾದ್ದರಿಂದ ಸಂಕು ಕೂಗಿ ಹೇಳಿದಳು :

"ಬೆಳಗ್ಗೆ ನೀ ಗಾಡಿ ಹತ್ತೂ ಹೊತ್ಗೆ ಬರ್ತ್ನಿ ಕಣೆ ಸೀತೆ."

"ಆತು" ಎಂದಳು ಸೀತೆ.

## ೧೬

ಮರುದಿನ ಬೆಳಗಿನ ಜಾವಕ್ಕೇ ಎದ್ದು ರಾಮಕ್ಕನ ರುಚಿ ಕಾಫಿ ಕುಡಿದು ತೌರಿಗೆ ಗಾಡಿಯೇರಿದಳು ಸೀತೆ. ಕೊಮಾರಿ ಗಾಡಿಯ ಹಿಂದೆ ಬಂದು ನಿಂತ ನಿಜ. ಆದರೆ ಆಗಿನವರಿಗೆ ವಿರಹ, ಪ್ರೇಮ, ಮುಣ್ಣು–ಮುಸಿಗಳ ಅರ್ಥವೇ ತಿಳಿಯದು. ಹೆಂಡತಿ ಬಾಣಂತನಕ್ಕೆ ತೌರಿಗೆ ಹೊರಟಿದ್ದಾಳೆ. ಇದು ಎಲ್ಲರ ಮನೆಯಲ್ಲೂ ಸಹಜ. ಇನ್ನು ತನ್ನ ಹೆಂಡತಿ ತನ್ನ ಕೈಗೆ ಸಿಗುವುದು ಎಂದರೆ ಆರೇಳು ತಿಂಗಳ ಮಾತು ಈಗ ತಿಂಗಳ ಹಿಂದಿನಿಂದಲೇ ರಾಮಕ್ಕ ಸೀತೆಯನ್ನು ಮಗನ ಹತ್ತಿರ ಕಳಿಸಿರಲಿಲ್ಲ. ತಾಯಿಯ ಮುಂದೆ ಉಸಿರೆತ್ತುವಂತಿಲ್ಲ. ಸೀತೆಯಾದರೂ ರಾತ್ರಿ ವಿನಾ ಹಗಲು ಹೊತ್ತು ಗಂಡನೊಡನೆ ಮಾತಾಡಿದ್ದಿಲ್ಲ. ಮಾತಾಡಲು ವಿಷಯವೇ ಇಲ್ಲ ಅವರಿಗೆ. ಎಲ್ಲರ ಮನೆಯ ಸೊಸೆಯರಂತೆ ಇವಳೂ ಇದ್ದಳು ಈಗಲೂ ಸೀತೆಗೆ ಗಂಡನನ್ನು ಬಿಟ್ಟು ಹೊರಡುತ್ತೇನೆಂಬ ವ್ಯಥೆಯೇನೂ ಇರಲಿಲ್ಲ.

ರಾಮಕ್ಕ ಕೂಗಿ ಹೇಳಿದಳು :

“ಲೇ ಸೀತೇ. ಇಲ್ಲಿ ಹಾಂಗೆ ಅಲ್ಲೂ ಕ್ಯರೆ, ತ್ವಾಟ, ಗುಡ್ಡಾಂತ ಅಲಿಯಾಕೆ ಹೋಗಬ್ಯಾಡ. ಜ್ವಾಕೆ ! ತಿಳೀತನೇ ?”

“ಹೂಂ ಕೇಳಸ್ತು”

“ಹಾಂ ಹೊತಡ್ತವಿ ಇನ್ನು. ಹಡದ ಕೂಡ್ಲೆ ಅಂಚೆ ಶೇಷಪ್ಪೋರ ಹತ್ರ ಹೇಳ್ಕಳಸ್ತನಿ. ನೀವು, ನಿಮ್ಮಗ ಖಂಡಿತ ಬನ್ನಿ ನಾಮಕರಣಕ್ಕೆ.”

ಎನ್ನುತ್ತಾ ನೊಗಕ್ಕೆ ಜಗಿದ ಮಹಾಬಲ. ಈಗ ಸೀತೆ ಗಂಡನ ಮುಖ ನೋಡಿ :

“ಹೋಗಿ ಬರ್ತನಿ” ಅಂದಳು. ಕೊಮಾರಿ ಬಾಯಿ ತಂಬುಲ ಉಗುಳಲು ಇಷ್ಟವಿಲ್ಲದೆ, ‘ಆಗಲಿ’ ಎಂಬಂತೆ ತಲೆಯಾಡಿಸಿದ.

"ಮಡ್ಳ್ ತುಂಬ ಗಂಡ್ಮಗಿನ್ನ ಎತ್ಕಂಬಾರೇ" ಎಂದಳು ಸಂಕು.

ಗಾಡಿ ಹೊರಟಿತು. ಸೀತೆ ಸ್ವಲ್ಪ ಹೊತ್ತು ಕೂತಿದ್ದು ನಂತರ ಮಲಗಿಬಿಟ್ಟಳು. ಅವರು ತಗ್ಗಿನ ಮನೆ ತಲ್ಪಿದಾಗ ಮಧ್ಯಾಹ್ನದ ಎರಡು ತಾಸು ಕಳೆದಿತ್ತು. ಗಾಡಿ ನಿಲ್ಲುತ್ತಿದ್ದಂತೆಯೇ ಮೊದಲು ಓಡಿ ಬಂದದ್ದು ಅಚ್ಚಿ. ಸೀತೆ ತಾನು ಬಸುರಿ ಎಂಬುದನ್ನು ಮರೆತು ನೊಗ ಇಳಿಸಿದೊಡನೆ ದೊಪ್ಪನೆ ಕೆಳಗೆ ಹಾರಿ ನಿಂತಳು.

"ಬಂದ್ಯನೆ ಸೀತೇ ?" ಎಂದು ಓಡಿ ಬಂದು ಸೀತೆಯ ಕೈ ಹಿಡಿದಳು ಅಚ್ಚಿ. ಒಬ್ಬರನ್ನೊಬ್ಬರು ಎವೆಯಿಕ್ಕದೆ ನೋಡಿಕೊಂಡರು.

"ಯಾಪಾಟ ಚಂದಾಗಿದ್ದೀಯೇ ಸೀತೆ ನೀನೂ. ನಿಮ್ಮತ್ತೆ ಕಟ್ಟೋರೂಂತಾರೆ ಯಲ್ಲಾರೂ. ಹಾಂಗೂ ನೀ ಚಂದಾಗಿದ್ದಿ. ಬಾರೇ ನಮ್ಮನೀಗೇ ?"

"ಯಾರಂದದ್ದು ನಮ್ಮತ್ತೆ ಕಟ್ಟೋರೂಂತ. ಒಬ್ಬೊಬ್ರು ಒಂದೊಂಥರ ಇರ್ತಾರಪ್ಪ. ತುಸ ಬಾಯ್ಜೋರು ಅವರದ್ದು. ಮಾಡೂದೆಂತದು ಅದಕ್ಕೆ. ಸ್ಯ !" ನೀ ಯಾಕೆ ಹೀಂಗೆ ಶೀಕಲಕಡ್ಡಿ ಹಂಗಾಗಿದ್ದೀ ? ನೀನೇ ಬಾ ನಮ್ಮನೀಗೆ. ನನ್ನ ಸೀರೆ, ತಲೆ ಹೆಂಗದೆ ನೋಡು. ಇನ್ನು ಮೈತ್ವಳದು ಊಟಾಗ್ಬಕು. ಆ ಮ್ಯಾಲೆ ಬಾಕಿ ಮಾತು ಬಾ. ಅಚ್ಚಿಗೆ ದುಃಖ ತಡೆಯ ಹಾಯಿತು. ಸೀತೆ ಅವಳನ್ನು ಎಳೆದುಕೊಂಡೇ ನಡೆದಳು. ಮೈತೊಳ, ಊಟ, ಮಾತು ಇದರಲ್ಲಿ ಸಂಜೆ ಐದು ತಾಸಾಯಿತು. ಸೀತೆ ಅಚ್ಚಿಯನ್ನು ಕರೆದುಕೊಂಡು ತೋಟಕ್ಕಿಳಿದಳು. ಹುಳಿದಾಳಿಂಬರೆ ಗಿಡದಡಿ ಕೂತು ಕಾಳು ಬಾಯಿಗೆಸೆಯುತ್ತಾ ಸೀತೆ ಕೇಳಿದಳು :

"ಹೌದನೇ ? ನಿನ್ನ ಗಂಡನ ಮನೆಯೋರು ನಿನ್ನ ಗಂಡಗೆ ಬ್ಯಾರೆ ಲಗ್ನಾ ಮಾಡ್ತಾರಂತೆ. ಬದ್ಧವಾ ?"

ಅಚ್ಚಿ ಮುಳುಮುಳು ಅತ್ತಳು.

"ಮತ್ತೆಂತದೆ ಸೀತೆ ? ನಿಂಗಾಗ್ಲೆ ಒಂದು ಮಗು ಆಗೂಕ್ಬಂತು. ನಾ ಇನ್ನೂ ನೆರದಿಲ್ಲ. ನಮ್ಮತ್ತೆ ಅಂತಾರಂತೆ. ಅದು ಹೆಣ್ಣೇ ಅಲ್ಲ. ನಮಗೆ ಮೋಸಮಾಡಿದ್ರು. ಹುಡುಗಿ ಹದ್ನೇಳು ವರ್ಷಾದ್ರೂ ನೆರೀಲಿಲ್ಲ. ನನ್ಮಗಂಗೆ ಬ್ಯಾರೆ ಲಗ್ನಾ ಮಾಡ್ತನಿ ಅಂತ. ಇತ್ಲಾಗಿ ಅಮ್ಮನೂ ಗಳಿಗ್ಗೊಂದಪ 'ನಿನ್ನ

ಅದೃಷ್ಟಕ್ಕಷ್ಟು ಬೆಂಕಿ ಹಚ್ಚಾ' ಅಂತ ಬೈತಾಳೆ. ನಾ ಕ್ಯರೆ ಬಿದ್ದು ಪ್ರಾಣ ಕಳ್ಕತನಿ ಕಣೆ ಸೀತೆ. ನಾ ಗಂಡನ ಮನೀಗೆ ಹೋಗೂ ಹಂಗೂ ಇಲ್ಲ ; ಇಲ್ಲಿ ಇರೂ ಹಂಗೂ ಇಲ್ಲ. ಏನ್ಸಾಯ್ಲಿ ನಾನು ?"

"ಸಾಕು ಸುಮ್ಗಿರೆ, ಸಾಯೂಕೇನಾಗದೆ ನಿಂಗೆ. ಇಕಾ ನಂಗೊಂದು ಔಸ್ತಿ ಗೊತ್ತದೆ. ಯಾರ ಕೂಟಾನೂ ಹೇಳಬ್ಯಾಡ. ನಾ ಮಾಡಿಕೊಡ್ತನಂತೆ. ನೀ ಕುಡಿ. ನಾಕು ದಿನದಾಗೆ ಮೈ ನೆರೀತಿ. ಆಮ್ಯಾಲೇ ಅವರಾಗೇ ಓಡಿ ಬರ್ತಾರೆ ನೋಡ್ತಿರು. ಅದಕೆ ಅಳೂದ್ಯಾಕೆ, ಸಾಯೂದ್ಯಾಕೆ ?"

"ಆಗ್ಲೆ ಒಂದಪ ಮುತ್ತಿಕೆರೆ ಮಂಜಿ ಹೆಗ್ಗಡತಿ ಹತ್ರ ಅಮ್ಮ ಔಸ್ತಿ ಕೊಡಿಸ್ಯಾತು. ಥು ! ದನಿನ ಉಚ್ಚ್ಲ ಇದ್ದಾಗಿತ್ತು ಆ ಸುಟ್ಟ ಔಸ್ತಿಲಿ ಇಷ್ಟುದ್ದ ಲೋಟೇಲಿ ಕುಡಿಯೂ ಹೊತ್ಗೆ ವಾಂತಿ ಬಂದ್ಹೋತು. ಅಷ್ಟು ಔಸ್ತೀಗೆ ಎಂಟಾಣೆ ಪಾವ್ಲಿ ಕಿತ್ಗಂಡ್ಹೋತು ಆ ಹೆಗ್ಗಡತಿ. ಆಗ್ಲೆ ಮೂರ್ತಿಂಗ್ಯಾತು ಔಸ್ತಿ ಕುಡ್ದು. ನ್ಯರೀಲೂ ಇಲ್ಲ, ಗಿರೀಲೂ ಇಲ್ಲ."

"ಸೈ ಬಿಡು, ಈಗ ನಾ ಒಂದು ಔಸ್ತಿ ಕೊಡ್ತನಿ ನೋಡಾಣಂತೆ. ಯಾರ ಕೂಟಾನೂ ಹೇಳಬ್ಯಾಡ ಈಗ್ಲೆ. ತಿಳೀತಾ ?"

ಸೀತೆಯ ಭರವಸೆಯಿಂದ ಅಚ್ಚಿ ಸ್ವಲ್ಪ ಗೆಲುವಾದಳು. ಕಟ್ಟೆ ಮನೆಯ ಮುದುಕರಿಬ್ಬರು ತೀರಿ ಹೋಗಿದ್ದರು. ಅಚ್ಚಿಯ ತಂಗಿಯಾಗಲೇ ಮದುವೆಗೆ ನೆರೆದಿದ್ದಾಳೆ. ಹಾಗೇ ಈ ಮನೆಯಲ್ಲೂ ಶ್ರೀಲಕ್ಷ್ಮಿಗೆ ಹನ್ನೊಂದು ತುಂಬಿ ಹೋಗಿತ್ತು. ಎರಡು ಮನೆಯಲ್ಲೂ ವರನ ಶೋಧ ನಡೆದಿತ್ತು. ಈಗ ಸೀತೆ, ಅಚ್ಚಿ ಆರಗಳಿಗೆ ಬಿಟ್ಟಿರುತ್ತಿರಲಿಲ್ಲ. ಎರಡನೆಯ ದಿನವೇ ಅಚ್ಚಿಯೊಡನೆ ಕೆರಿಯಾಚೆ ಹೋಗಿ ಗೊಲ್ಲರ ಹುಚ್ಚನನ್ನು ಕಂಡು ಔಷಧಿಗಾಗಿ ರಕ್ತವಾಳದ ಚಕ್ಕೆ ತರಲು ಹೇಳಿ ಬಂದಳು. ಅವನು ಗುಟ್ಟಾಗಿ ತಂದು ಕೊಟ್ಟದ್ದಕ್ಕೆ ಅವನಿಗೆ ಒಂದು ಪಾವು ಗೋಟಡಿಕೆ ಲಂಚ ಸಿಕ್ಕಿತು. ಅದನ್ನ ಹಳ್ಳದ ಬದಿಯ ಕಲ್ಲಿನ ಮೇಲೆ ಚೆನ್ನಾಗಿ ಜಜ್ಜಿ ಒಂದು ಲೋಟದಷ್ಟು ರಸ ತೆಗೆದು ಬೆಲ್ಲ ಹಾಕಿ ಅಚ್ಚಿಗೆ ಕುಡಿಯಲು ಕೊಟ್ಟಳು. ಅಚ್ಚಿ ಅದನ್ನ ನೋಡಿಯೇ ಹೆದರಿದಳು—

"ಅಯ್ಯೋ ಮಾರಾಯ್ತಿ, ಹೆಂಗೆ ಇದ್ನ ಕುಡಿಯೂದು ? ನಮ್ಮ ರಕ್ತ ಇದ್ದಾಗೇ ಅದೆಯಲ್ಲೇ ?"

ಮೊದಲೇ ಸೊಟ್ಟಾದ ಮುಖವನ್ನು ಮತ್ತಷ್ಟು ಸೊಟ್ಟ ಮಾಡಿದಳು.

ಕಣ್ಣುಚ್ಚಂಡು ಗಟಗಟ ಕುಡದ್ಬಿಡು. ವಾಸ್ನೆ ನೋಡಬ್ಯಾಡ. ಬೆಲ್ಲ ಹಾಕಿದನಿ."

ಗಂಡನ ಮನೆಗೆ ಹೋಗುವ ಆಸೆಯಿಂದಾಗಿ ಅಚ್ಚಿ ಬಿಗಿಯಾಗಿ ಕಣ್ಣು ಮುಚ್ಚಿ ಆ ರಕ್ತವರ್ಣದ ರಸವನ್ನ ಗಂಟಲಿಗೆ ಹುಯಿದುಕೊಂಡಳು. ಕೂಡಲೇ ಸೀತೆ ಮತ್ತಷ್ಟು ಬೆಲ್ಲವನ್ನು ಬಾಯಿಗೆ ತುರುಕಿದ್ದರಿಂದ ವಾಕರಿಕೆ ನಿಂತಿತು. ಆ ದಿನ ಸಂಜೆಯವರೆಗೂ ಹೊಟ್ಟೆ ತೊಳೆಸುತ್ತಲೇ ಇತ್ತು. ಸೀತೆ ಒಳ್ಳೆಯ ದಿನ ನೋಡಿ ಔಷಧಿ ಕೊಟ್ಟಿದ್ದಳು. ಕಿವಿಯಲ್ಲಿ ಕೇಳಿದಳು—

"ನೆರೆಯೂದು ಅಂದ್ರೆ ಯಂತದೂಂತ ಗೊತ್ತನೇ ಅಚ್ಚಿ ?"

"ಗೊತ್ತು ಕಣೆ. ಮಂಜ ಹೆಗ್ಗಡತಿ ಹೇಳಿತ್ತು."

ಇಬ್ಬರೂ ತೋಟದಲ್ಲಿ ಸದ್ದಿಲ್ಲದೆ ಈ ಕೆಲಸ ಮುಗಿಸಿ ಮನೆಗೆ ಬಂದರು. ಆ ದಿನ ಅಚ್ಚಿಗೆ ಊಟ ಮಾಡಲಾಗಲಿಲ್ಲ. ಹೊಟ್ಟೆ ತೊಳಸು. ಹೇಗೋ ಸಹಿಸಿಕೊಂಡಳು. ಆ ದಿನ ರಾತ್ರಿ ಸೀತೆಯ ಪಕ್ಕವೇ ಮಲಗಿದಳು.

ಫಕ್ಕನೆ ಬೆಳಗಿನ ಝಾವಕ್ಕೆ ಎಚ್ಚರವಾಯ್ತು. ಸೀತೆಗೆ ಗಡದ್ದು ನಿದ್ದೆ. ಅಚ್ಚಿ ಹಿತ್ತಲ ಬಾಗಿಲಿನಿಂದ ಮನೆಗೆ ಓಡಿದಳು. ಯಾಕೋ ಅವಳಿಗೆ ಹೆದರಿಕೆ. ಹಿತ್ತಲ ಅಂಗಳದಲ್ಲಿ ನಿಂತು ಬಿಕ್ಕಿಬಿಕ್ಕಿ ಅತ್ತಳು. ಅವಳ ತಾಯಿ ಬಂದು ಗದರಿದರು—

"ಯಾಕೆ ಏನಾತೆ ಅಳೂಕೆ ? ಅಲ್ಯಾಕೆ ನಿಂತಿದ್ದಿ ?"

"ನಾ ಮೈನೆರದನಿ. ನಂಗೆ ಹೆದರ್ಕೆ."

ಅಚ್ಚಿಯ ತಾಯಿಗೆ ಪರಮಾನಂದವಾಯ್ತು.

"ಈ ಕಡೆ ಬದೀಗೆ ಬಾರೆ. ಹಂಗೇ ಇರು ಬಂದೆ "

ಎಂದು ಬಹಳ ಸಂಭ್ರಮದಿಂದ ಒಳಗೆ ಓಡಿದರು. ಮತ್ತೆ ಅರ್ಧ ಗಂಟೆಯಲ್ಲಿ ಮನೆಯಲ್ಲಿ ಸಂಭ್ರಮ ತುಂಬಿತು. ಸೀತೆ ಮುಖ ತೊಳೆಯದೇ ಓಡಿ ಬಂದು ಅಚ್ಚಿಯ ಮುಖ ನೋಡಿ ಕಿಸಕ್ಕನೆ ನಕ್ಕಳು.

ಆಗಲೇ ಅಚ್ಚಿಯ ಕೈಗೆ ಹಾಲು-ತುಪ್ಪ ಬಿದ್ದು ಒಂದು ಕದಲಾರತಿ

ಯಾಗಿ ಅವಳು ಮಣೆಯ ಮೇಲೆ ಕೂತಾಗಿತ್ತು. ಮತ್ತೆ ಮೂರುದಿನ ಸಂಭ್ರಮ ಚಿಗಳಿ ಕುಟ್ಟಾಟ, ಚಟ್ಟು ಬಡಿಯಾಟ ಇತ್ಯಾದಿ. ಈಗ ಅಚ್ಚಿಗೆ ಧೈರ್ಯ ಬಂದಿತು. ಅವಳ ಗಂಡನ ಮನೆಗೆ ವರ್ತಮಾನವೂ ಹೋಯಿತು ಮೂರುದಿನ ಸೀತೆ ಹಾಡು ಹೇಳಿದ್ದೇ ಹೇಳಿದ್ದು. ಅಚ್ಚಿಯ ತಾಯಿ ಸೀತೆ ಯನ್ನು ಹೊಗಳಿಯಾಯ್ತು

"ನಿನ್ನ ಮುಕ ನೋಡಿದ ಗತೀಗೆ ನೆರೀತು ಕಣೆ ಹುಡುಗಿ. ದೇವರ ದಯ ಆದರ ಗಂಡನ ಮನೀಗೆ ಅದು ಹೋಗಿ ಬಿಟ್ರೆ ಸಾಕು."

"ಈಗ ಅವಳೇನೋ ಗಂಡನ ಮನೀಗೆ ಹೋಗ್ತಾಳೆ. ಇಲ್ಲಿ ನಂಗೆ ಬೇಜಾರು."

"ಸೈ ಹೋದ್ರೆ ನೀ ಹಡಿಯೂದರಾಗೆ ಮತ್ತೆ ಕರಕಂಬಂದ್ರಾತು. ಬಿಡು, ಸಧ್ಯ ಪುಣ್ಯಾತ್ಗಿತ್ತಿ ನ್ಯರದ್ಲಲ್ಲ. ಅವ ನಾ ಬ್ಯಾರೆ ಲಗ್ನಾಗ್ತನೀಂತ ಕೂತಿದ್ದ. ಯಂತದಾದ್ರೂ ಹೆಣ್ಮಕ್ಳು ಗಂಡನ ಮನೇಲಿರಬಕು"

ಸೀತೆ ಏಬು ತೋರಿಸಿಕೊಳ್ಳಲಿಲ್ಲ.

"ಅದೂ ಸಮಾ ಅನ್ನಿ. ಹ್ಯಾಂಗೂ ಇನ್ನು ನಾಕೈದು ತಿಂಗಳರ‍್ತನಲ್ಲ ಇಲ್ಲಿ."

ತರಾತುರಿಯಲ್ಲಿ ಹದಿನಾರನೇ ದಿನಕ್ಕೇ ನಿಷೇಕ ಇಟ್ಟಾಯ್ತು. ಕುಂಟ ಚನ್ನಭಟ್ಟನ ಪರಿವಾರ ಬಂತು ಅಚ್ಚಿ ಮೈನೆರೆದ ಹುಡುಗಿಯೆಂದು ಮೈಕೈ ತುಂಬಿಕೊಳ್ಳದಿದ್ದರು ಗೆಲುವಾದಳು. ಈಗ ಪಿಕೀಲು ಬಂದಿದ್ದು ಸೀತೆಗೆ. ಅವಳು ಗುಟ್ಟಾಗಿ ಕೇಳಿದ್ದಳು.

"ಸಮನಾಗಿ ಆಗಿದ್ಯನೇ ?" ಎಂದು. ಅಚ್ಚಿಯ ಉತ್ತರ ದಿಗಿಲು ತರುವಂಥಾದ್ದೇ ಆಗಿದ್ದರೂ ಸೀತೆ ಅವಳಿಗೆ ಧೈರ್ಯ ತುಂಬಿದಳು

"ಗೆದ್ದೆ ಬಿಡು ಒಂದಪ ಅತ್ತೆ ಮನೀಗೆ ಹೋದ್ರಾತು. ಮತ್ತೆಲ್ಲ ಸಮನಾಗತೆ."

ಆದರೆ ಅದು ಸೀತೆಯ ಮನದ ಎಣಿಕೆಯಂತೇ ಆಯಿತು. ಹವನ–ಹೋಮಗಳ ಹೊಗೆಯಲ್ಲಿ ಹಗಲು ಕಳೆದು ರಾತ್ರಿ ಸಜ್ಜೆ ಮನೆಗೆ ಕಳಿಸಿಯೂ ಆಯ್ತು. ಚನ್ನಭಟ್ಟ ಗಳಿಗೊಂದು ಸಾರಿ ಕಸಿಮಾವಿನ ಹಣ್ಣಿನಂತೆ ಕೆಂಪಗೆ ತುಂಬಿಕೊಂಡು ಕೆಂಪು ಚರ್ಕಿಸಾಣಿ ಬಳೆ, ಕಂಚಿ ಸೀರೆ, ಮಲ್ಲಿಗೆ ದಂಡೆಗಳಿಂದ

ಅಲಂಕೃತಳಾಗಿ ಮೈದೂಗುತ್ತ ಓಡಾಡುತ್ತಿದ್ದ ಸೀತೆಯನ್ನೇ ನೋಡುತ್ತಿದ್ದ. ಸೀತೆಗೂ ಅಚ್ಚಿಗೂ ಅರ್ಥಾರ್ಥ ಸಂಬಂಧವಿಲ್ಲ. ಮಧ್ಯಾಹ್ನವೇ ಅಚ್ಚಿಯ ಅತ್ತೆ ಬಂದು ಮೋಟಮ್ಮನ ಹತ್ತಿರ ಆಕ್ಷೇಪವೆತ್ತಿದರು—

"ಯಂತದ್ರೆ ಮೋಟಮ್ಮ? ಹದ್ನೆಂಟ್ವರ್ಷದ ಹೆಣ್ಣು ಹಿಂಗಾ ಇರೂದು? ಬದ್ಧಗೂ ಇದು ನರದದೆಯನ್ರೇ? ತುಸಾನಾರ ಯದೆ ಬದಿ ಕಾಣೆ. ಇದ್ಯಾವ ಸೀಮೆ ಹೆಣ್ಣೋ ನಾಬ್ಕಾರೆ ಕಾಣೆ?"

ಮೋಟಿ ತಿಪ್ಪೇ ಸಾರಿಸಿದ್ದಳು.

"ಸೈಬಿಡಿ. ನಾನೂ ಮದ್ಲು ಹಿಂಗೇ ಇದ್ದದ್ದು. ನಿಮ್ಮನೀಗೆ ಒಂದ್, ಮತ್ತೆಲ್ಲ ಸಮನಾಗತ್ತೆ. ನಮ್ಮ ಶೀಲಕ್ಕೆ ನೋಡಿ ಹನ್ನೊಂದಾತು ಇನ್ನೂ ಹೆಂಗದೆ. ಈ ಸೀತೆ ಅವರಮ್ಮನ ಹುಟ್ಟು. ಅಡ್ಡಾಡಿದಿಡ್ಡಿ ಬೆಳದದೆ ಅಷ್ಟೆ.

ಆದರೆ ಬೆಳಗಿನ ಜಾವವೇ ಅಚ್ಚಿಯ ಭವಿಷ್ಯ ತಿಳಿದಾಯಿತು. ಚೌಕಿಯಲ್ಲಿ ಬೆಚ್ಚಗೆ ಮಲಗಿದ್ದ ಸೀತೆಯ ಕಾಲ ಮೇಲೆ ತಲೆಯಿಟ್ಟು ಬಿಕ್ಕಿ ಬಿಕ್ಕಿ ಅಳುತ್ತಿದ್ದಾಳೆ ಅಚ್ಚಿ. ಸೀತೆಗೆ ತಟ್ಟನೆ ಎಚ್ಚರವಾಯಿತು. ಎದ್ದು ಕೂತು ನೋಡುತ್ತಾಳೆ ಅಚ್ಚಿ! ಕೂಡಲೇ ನಡೆದ ಸಂಗತಿ ಅವಳಿಗೆ ತಿಳಿಮುಹೋಯಿತು ಅವಳ ಮುಖ ಹಿಡಿದೆತ್ತಿ ತುಟಿಯ ಮೇಲೆ ತೋರ ಬೆರಳಿಟ್ಟು 'ಹುಷ್' ಎಂದು ಹೇಳಿ ಅವಳ ರಟ್ಟೆ ಹಿಡಿದು ಎತ್ತಿ ಸರಸರ ಹಿತ್ತಲ ಹಲಸಿನಮರದ ಮರೆಗೆ ಹೋದಳು. ಇನ್ನೂ ಬೆಳಗಿನ ಜಾವದ ಮಬ್ಬು. ಮೋಟಮ್ಮ ಹಿತ್ತಲು ಬಾಗಿಲು ತೆಗೆದಿದ್ದರಿಂದ ಅಚ್ಚಿ ಒಳಗೆ ನುಸುಳಿದ್ದಳು.

"ಏನಾತೇ? ಯಾಕೆ ಅಳ್ತಿ?"

ಸೀತೆಯ ಪ್ರಶ್ನೆಯಿಂದ ಅಚ್ಚಿಯ ಅಳು ಜೋರಾಯ್ತು. ಅವಳು ಉತ್ತರ ಕೊಡಲಿಲ್ಲ. ಬದಲು ಸೆರಗು ತೆಗೆದು ತೋರಿಸಿದಳು. ಅವಳ ತಟ್ಟೆ ಎದೆಯ ಮೇಲೆ ಚನ್ನಭಟ್ಟನ ಉಗುರುಗಳು ಮೂಡಿದ್ದವು. ಸೀರೆ ನೆರಿ ಎತ್ತಿ ತೋರಿಸಿದಳು. ಸೊಂಟಕಲು ತೊಡೆಯೆಲ್ಲಾ ಗಾಯ, ರಕ್ತ, ಸೀತೆಗೆ ವಿಷಯ ಪೂರ್ತಿ ತಿಳಿಯಿತು. ಈಗ ಪ್ರಶ್ನೆ ಇಲ್ಲದೆಯೇ ಉತ್ತರ ಬಂದಿತು. ಅಚ್ಚಿ ಬಿಕ್ಕುತ್ತಾ ವಿಷಯವೆಲ್ಲಾ ಹೇಳಿದಳು—

"ನೀ ಹೆಣ್ಣೇ ಅಲ್ಲಾಂತ ಬೆಳತನ್ಕ ಹೊಡದು, ಚೂಟಿ, ಗುದ್ದಿದ್ರು

ಕಣೆ ಸೀತೇ. ನೀ ನ್ಯರದದ್ದೇ ಸುಳ್ಳು. ನಿಮ್ಮಪ್ಪ, ಅಮ್ಮ ನಂಗೆ ಮೋಸ ಮಾಡಿದ್ರು. ನಿಂಗೆ ಯಲ್ಲಾ ಹೆಂಗಸ್ರ ಹಾಂಗೆ ಎದಿಲ್ಲ, ಅದಿಲ್ಲ, ಇದಿಲ್ಲ ಆ ಸೀತೆ ನೋಡು ಹ್ಯಂಗದಾಳ–ಅಂತ ಅಂದು ಇಂಪ್ರೀತ ಗೋಳ್ಹೊಯ್ಕಂಡು ಅರ್ಧರಾತ್ರೀಲೇ ಹೊರಕ್ಕೆ ದಬ್ಬಿ ಬಾಗ್ಲ ಹಾಕ್ಕಂಡ್ರು ನಾ ಹುಡುಗ್ರ ಜತೀಗೆ ಮಲಗಿದ್ದು ಈಗ ಬಂದೆ ಇಲ್ಲೀಗೆ. ಅವರ ಮನೀಗೆ ನನ್ನ ಕರ್ಕಂಡ್ಹ ಹೋಗಲ್ಲಂತೆ ಕಣೆ. ನಾ ಕ್ಯರೆ ಬಿದ್ದು ಸಾಯ್ತ್ನಿ ಕಣೆ ಸೀತೆ."

ಎಂದು ಗೋಳಗುಟ್ಟಿ ಅತ್ತಳು ಅಚ್ಚಿ. ಈಗ ಸೀತೆಗೆ ತನ್ನ ತಪ್ಪಿನ ಅರಿವಾಯಿತು. ಭಟ್ಟರ ಹೆಂಡತಿ ಹೇಳಿದಂತೆ ಮಾಡಿದ್ದಳು ಇವಳು.

ಅಂತೂ ಹೇಗೋ ಸಮಾಧಾನ ಮಾಡಿದ್ದಳು

"ಮದ್ಲು ಯಲ್ಲಾರೂ ಹಂಗೇ ಕಣೆ ನಂಗೂ ಹಂಗೇ ಮಾಡಿದ್ರು. ಹೆದರಬ್ಯಾಡ ಸುಮ್ಗಿರು."

ಅಷ್ಟರಲ್ಲಿ ಮೋಟಮ್ಮ ಕರೆದದ್ದರಿಂದ ಇಬ್ಬರೂ ಬರಬೇಕಾಯ್ತು ಆದರೆ ಆಗಬೇಕಾದ ರಾದ್ಧಾಂತ ತಪ್ಪಲಿಲ್ಲ.

ಚನ್ನಭಟ್ಟನ ಹಾರಾಟ. ಅಪನ ಅಮ್ಮನ ಆಕ್ಷೇಪ. ಶಂಕರಭಟ್ಟರ ಸಮಾಧಾನ ಇತ್ಯಾದಿ ಹದಿನಾರು ಸಂಧಾನಗಳಾದ ಮೇಲೆ ಮರುಪ್ರಸ್ತದ ಶಾಸ್ತ್ರವಾಯ್ತು. ಅಂದು ಅಚ್ಚಿ ಕೋಣೆಗೆ ಹೋಗಲೇ ಹೆದರಿದಳು ಸೀತೆ ಸಾಕಷ್ಟು ಧೈರ್ಯ ತುಂಬಿ ಕಳಿಸಿದ್ದಳು. ಆದರೂ ಪ್ರಯೋಜನವಾಗಲಿಲ್ಲ. ಅಂದೂ ಅಚ್ಚಿ ರಾತ್ರಿ ಹಿರಿಯರು ಮಲಗುವ ಮುನ್ನವೇ ಕೋಣೆಯಿಂದ ಹೊರಗೆ ಮಕ್ಕಳ ಸಾಲಿನಲ್ಲಿ ಮುದುರಿದ್ದಳು

ನಾಲ್ಕನೇ ದಿನ ಹೆಂಡತಿಯನ್ನು ಊರಿಗೆ ಕರೆದೊಯ್ಯುವುದಿಲ್ಲವೆಂದು ಒಂಟಿ ಕಾಲಲ್ಲಿ ಕುಣಿದ ಚನ್ನಭಟ್ಟ. ತಾಯಿಯೂ ಮಗನ ಪರ, ಕಡೆಗೆ ಅವನ ಅಪ್ಪ ಒಂದು ಅಬ್ಬರ ಹಾಕಿದ ಕೂಡಲೇ ತೆಪ್ಪಗಾದ.

ಹೊರಡುವಾಗ ಅಚ್ಚಿಯ ಗೋಳು ಅಸಾಧ್ಯ. ಈಗ ಮಾತ್ರ ಸೀತೆಯ ಕಣ್ಣಲ್ಲಿ ನೀರು ಬೊಟ್ಟಿಟ್ಟಿತು. ಅಚ್ಚಿಯ ತಾಯಿ ಮಗಳನ್ನು ಎಳೆದು ಗದರಿದರು.

"ನಡಿಯೇ ಸಾಕು. ಅವಳೂ ಗಂಡನ ಮನೀಗೆ ಹೊರಟಾಗ ಹಿಂಗೇ ಮಾಡಿದ್ಲಾ ? ಬಸ್ರಿ ಹುಡುಗಿ ಕಣ್ಣಾಗೆ ನೀರು ಹಾಕಸ್ತೀಯಾ ?"

ಸೀತೆ ಕಣ್ಣೊರಸಿಕೊಂಡಳು.

"ನಾಯೇನು ಅಳಲಿಲ್ಲ ಬಿಡಿ ದೊಡ್ಡವ್ವ. ಇನ್ನು ನಂಗೆ ಬೇಜಾರಿಲ್ಲ? ಅದ್ಕೆ ಒಂದನಿ ಕಣ್ಣೀರು ಬಂತು." ಅಚ್ಚಿ ಮೊದಲ ಬಾರಿಗೆ ತನ್ನ ತಂಪಿನ ತೌರನ್ನು ತೊರೆದು ತಾ ಪ ದಾ ಯ ಕ ಗಂಡನ ಮನೆಗೆ ಹೊರಟಳು.

ಕತ್ತಲೆ ಕೋಣೆಯಲ್ಲಿ ಸದ್ದಿಲ್ಲದೆ ಗಂಡು ಮಗುವನ್ನು ಹಡೆದು ಹಗುರಾದಳು ಸೀತೆ. ನಾಮಕರಣಕ್ಕೆ ಬಂದದ್ದು ಕೊಮಾರಿ ಮತ್ತು ವಿನಾನಿ ಇಬ್ಬರೇ. ಮಹಾಬಲನ ತಂದೆಯ ಹೆಸರು ಪಣಿಯಪ್ಪ. ಅದೇ ಹೆಸರು ಮೊಮ್ಮಗನದಾಯಿತು. ಸೀತೆಗೆ ತಿಂಗಳಾಗುವುದರೊಳಗೇ ಅಚ್ಚಿ ಅತ್ತೆಯ ಮನೆಯಿಂದ ಹಿಂದುರುಗಿ ಬಂದಾಗಿತ್ತು. ತಂದುಬಿಟ್ಟದು ಅವಳ ಮೈದುನ ಲಚ್ಚಣ್ಣ.

ಬಾಣಂತಿ ಕೋಣೆಯಲ್ಲಿ ಕೂತು ತನ್ನ ಕರ್ಮಕತೆಯನ್ನು ಹೇಳಿಕೊಂಡು ಅತ್ತಳು.

ಇತ್ತಲಿನ ನಾಲ್ಕು ತಿಂಗಳಲ್ಲಿ ಅವಳು ಮತ್ತೆ ಮುಟ್ಟಾಗಲೇ ಇಲ್ಲ. 'ನೀನು ಹೆಣ್ಣಿನ ಹುಟ್ಟೇ ಅಲ್ಲ. ನಡೀ ನಿನ್ನಪ್ಪನ ಮನಿಗೆ. ಮತ್ತೆ ಬರಬ್ಯಾಡ. ನಾ ಬ್ಯಾರೆ ಮದುವೆ ಮಾಡ್ಕ್ಯಾತನಿ'—ಎಂದು ದಿನವೂ ಹಿಂಸಿಸಿ, ಹೊಡೆದು-ಬಡಿದು ತೌರಿಗೆ ಅಟ್ಟಿಯಾಗಿತ್ತು ಚನ್ನಭಟ್ಟ.

ಇದನ್ನ ಮುಚ್ಚಿಟ್ಟು ಪ್ರಯೋಜನವಿಲ್ಲ. ಅಚ್ಚಿ ಎಲ್ಲವನ್ನೂ ತಾಯಿಯ ಹತ್ತಿರ ಹೇಳಿಯಾಗಿತ್ತು. ಸಂಪ್ರದಾಯದ ಕೂಪದೊಳಗೆ ಕೂತ ತಾಯಿ-ತಂದೆಯರ ಅನುಕಂಪವೂ ಅವಳ ಪಾಲಿಗಿಲ್ಲ.

"ಭಂಡನೋ, ಷಂಡನೋ ಯಂತದಾರಾ ಆಗ್ಲಿ, ಅವನ ಕಾಲಬುಡದಾಗೆ ಬಿದ್ದಿರಬಕು ಹೆಣ್ಣು. ಆಕಲ್ಲ ಮದ್ಲಪಟ ಬಂದದ್ದು. ಇನ್ನೊಂದು ಪಟ ನಾನೇ ಕರಕಂಡ್ಹೋಗಿ ಬಿಟ್ಟು ಬರ್ತನಿ. ಇದ್ದಾರು ಇರು, ಛಾವಿಗಾದ ಹಾರು"—ಎಂದು ನಿಷ್ಕರುಣೆಯಿಂದ ಆಶೀರ್ವದಿಸಿದರು ತಂದೆ.

ಅಚ್ಚಿಗೆ ಈಗಿನ ಪಾಟ್ಟಿಗೆ ತೌರುಮನೆಯೇ ಸ್ವರ್ಗವಾಗಿತ್ತು. ಅತ್ತೆಯ ಮನೆಯಲ್ಲಿ ಬಾಳಬೇಕು ಬದುಕುಬೇಕು—ಎಂಬ ಅವಳ ಆಸೆ-ಆಕಾಂಕ್ಷೆ

ಗಳೆಲ್ಲಾ ಸುಟ್ಟು ಬೂದಿಯಾಗಿತ್ತು. ಅವಳ ನೊಂದ ಎಳೆಯ ಜೀವಕ್ಕೆ ಒಂದಷ್ಟು ಧೈರ್ಯ, ಚೈತನ್ಯ ತುಂಬುತ್ತಿದ್ದವಳು ಸೀತೆಯೇ.

ಮೋಟಮ್ಮ ಸೀತೆಯ ಬಾಣಂತನವನ್ನೇನೋ ಮಾಡುತ್ತಿದ್ದಳು ನಿಜ ಅವಳಿಗೂ ಒಂದು ನೆನೆಗುದಿಯ ಸಂಕಟ.

ತನ್ನ ಸವತಿಯ ಮಗಳು ಸೀತೆ ಒಳ್ಳೆ ಮನೆ ಸೇರಿದಳು. ನೋಡಲ್ಲು ಚಲುವೆ. ತೀರ್ಥಹಳ್ಳಿಯಂಥ ನಾಗರಿಕ ಷಹರು ಅವಳ ಪಾಲಿಗಾಯಿತು. ಮುಖ್ಯವಾದ ಸಂಕಟ ಸೀತೆಯದು ಮೊದಲನೆಯದೇ ಮುದ್ದಾದ ಗಂಡು ಮಗು. ತನಗೆ ಮೂರು ಹೆಣ್ಣು ಹುಟ್ಟಿ ಒಂದು ಸತ್ತು ಎರಡು ಉಳಿದರೂ ನೋಡಲು ಸೀತೆಯಂತೆ ಚಂದಲ್ಲದ ಹುಡುಗಿಯರು ತನ್ನ ವಂಶ ಬೆಳೆಸಲು ಒಂದು ಗಂಡು ಬೇಕಾಗಿದೆ. ಅದಕ್ಕಾಗಿ ಆಕೆ ಅನೇಕ ನೋಹಿ-ವ್ರತ ಮಾಡಿದಳು. ಅಶ್ವತ್ಥ ಕಟ್ಟೆ ಸುತ್ತಿದಳು. ಕಡೆಗೆ ನಾಗರ ಪ್ರತಿಷ್ಠೆಯೂ ಆಯ್ತು ಶಂಕರಭಟ್ಟರ ನೇತೃತ್ವದಲ್ಲಿ. ಉಹುಂ! ಯಾವ ದೇವರೂ ಜಗ್ಗಲಿಲ್ಲ. ಎಲ್ಲಾ ಸೇವೆ ಮಾಡಿಸಿಕೊಂಡು ತೆಪ್ಪಗೆ ಕುಳಿತವು. ಮೋಟಮ್ಮ ಮತ್ತೆ ಬಸಿರಾಗಲಿಲ್ಲ.

ಖಾರ, ಮೆಣಸು, ಕಾಯಿ, ಶುಂಠಿ, ಅರಿಸಿನ, ಲೋಭಾನ, ಎಲೆ ಯಡಿಕೆ ವಾಸನೆಗಳ ಜೊತೆಗೆ ಎಳೆ ಮಗುವಿನ ಹೇಲು-ಉಚ್ಚೆ ಬಟ್ಟೆಗಳ ವಾಸನೆಯೂ ಸೇರಿದ್ದರೂ ಸೀತೆಯ ಬಾಣಂತಿ ಕೋಣೆಯ ವಾಸನೆ ಒಂದು ರೀತಿ ಶುಭದಾಯಕವಾಗಿತ್ತು. ಈಗ ಮಹಾಬಲನೂ ದೊಡ್ಡ ಮನಸ್ಸು ಮಾಡಿ ಒಂದು ಚಿಮಿಣಿ ಎಣ್ಣೆಯ ಲ್ಯಾಂಪು, ಲಾಟೀನು ಮನೆಗೆ ತಂದಿದ್ದರೂ ಅದನ್ನ ಸದಾಕಾಲ ಉರಿಸುವುದೆಂದರೆ ಅವರ ದೃಷ್ಟಿಯಲ್ಲಿ ದುಬಾರಿ ಎನಿಸಿತ್ತು. ಬಾಣಂತಿ ಕೋಣೆಗೆ ಯಥಾಪ್ರಕಾರ ಹರಳೆಣ್ಣೆ ದೀಪವೇ.

ಮಗು ತೊಟ್ಟಿಲಲ್ಲಿ ನಿದ್ದೆ ಹೊಡೆಯುತ್ತಿತ್ತು. ಅಚ್ಚಿ ಸೀತೆಯ ಕುಳ್ಳನೆಯ ಮಂಚದ ತಲೆದೆಸೆಯಲ್ಲಿ ಕೂತು ಮುಳು ಮುಳು ಅತ್ತಳು. ತನ್ನ ಗಂಡನ ಕಿರಾತ ಚರ್ಯೆಯನ್ನು ವಿವರಿಸಿದಳು ಸೀತೆಯ ಮುಂದೆ. ಸೀತೆಗಾದರೂ ಮನದಟ್ಟಾಯಿತು ಇನ್ನು ಅಚ್ಚಿಯ ಬಾಳಿನ ಇತಿಶ್ರೀಯಾಯಿತು ಎಂದು. ಆದರೂ ಅಪಶಬ್ದ ನುಡಿಯುವ ಬಾಯಲ್ಲ ಸೀತೆಯದು. ತಾತ್ಕಾಲಿಕವಾಗಿ ಸಮಾಧಾನ ಹೇಳಿದಳು.

"ಸುಮ್ಮಿರಿ ಯಾಕಳ್ತಿ ? ನೀನಂತೂ ಇಪ್ರೀತ ಅಳುಬುರ್ಕಿ. ಸೀ ಹೀಂಗೆ ಅಳೂದ ಕಂಡೇ ಅವ ಹಂಗ ಕುಣೀತಾನೆ. ನೀ ಅವನ್ನ ಮದಿವ್ಯಾದೆ ಅಂದ್ರೆ, ಮತ್ತಿನ್ಯಾರೂ ಆ ಕುಂಟ ಶಿಂಗಳೀಕನ್ನ ಮದುವ್ಯಾಗುಲ್ಲ ಬಿಡು. ಆಪ್ಯಾಲೆ ತಾನಾಗೀ ಒಂದು ಕವಕಂಡು ಹೋಗ್ತಾನೆ ನಿನ್ನ."

"ನಿಂಗೊಂದು ಹೊತ್ಹೋಗ್ದು ಕಣೆ ಸೀತೆ. ಒಂದಪ ಅಷ್ಟೀ ಕರ ಕೊಂಡ್ಹೋಗಿ ಬಿಟ್ಬಂದ್ರೂ ನಂಗೆ ದಿನಾ ಹೊಡ್ತ-ಬಡ್ತ ತಪ್ಪಿದ್ದಲ್ಲ. ಇತ್ಲಾಗೆ ಇವರಿಗೂ ಬ್ಯಾಡ, ಅತ್ಲಾಗೆ ಅವರಿಗೂ ಬ್ಯಾಡ ನೇಣ್ಹಾಕ್ಕಂಡು ಸಾಯ್ಬುಕು ನಾನು ಸೈ."

ಸೆರಗಿನಿಂದ ಸಿಂಬಳ ಒರೆಸಿಕೊಂಡಳು ಅಚ್ಚಿ.

"ಈಗಿಂದ ಅಷ್ಟು ದೂರ ಯಾಕಕ್ಕೆ ಯೋಚ್ನೆ ಮಾಡ್ತಿ ಬಿಡು." ಎಂದು ಮಾತು ಮುಗಿಸಿದಳಾದರೂ ಚನ್ನಭಟ್ಟ ಹೇಳುವ ಹಾಗೆ ಹೆಣ್ತನದ ಲಕ್ಷಣ ಗಳೇ ಇರಲಿಲ್ಲ ಅಚ್ಚಿಗೆ ಎಂಬುದು ಮನದಟ್ಟಾಯಿತು.

ಬಚ್ಚುಗಲ್ಲ, ಉಬ್ಬು ಹಲ್ಲು, ಗುಳಿಗಣ್ಣು, ಇಲಿ ಬಾಲದ ಜಡೆ, ತಟ್ಟೆ ಎದೆ, ಮೂರುತೊಲ ಮಾಂಸವಿಲ್ಲದ ದಿಂಡು, ಒಣಕಲು ಕೈ ಕಾಲುಗಳು, ಮುಖ್ಯ ಹೆಣ್ಣಿಗೆ ಇರಬೇಕಾದ ಯಾವ ಅಂಗಸೌಷ್ಠವವೂ ಇಲ್ಲ ಅಚ್ಚಿಗೆ. ಗಂಡತಾನೇ ಏನು ಮಾಡಿಯಾನು ? ಚನ್ನಭಟ್ಟ ಕುಂಟನಾದರೂ ಗಂಡಸು. ಗಂಡ-ಹೆಂಡಿರ ಕೂಡುವಿಕೆಗೂ ಅರ್ಹತೆ ಇರಬೇಕ. ಅದನ್ನೆಲ್ಲಾ ಬಿಡಿಸಿ ಕೇಳುವುದಾದರೂ ಹೇಗೆ ? ತಾನು ರಕ್ತವಾಗ ಚಕ್ಕೆರಸ ಕುಡಿಸಿದ್ದು ತಪ್ಪಾಯಿತು. ಏನೋ ಮಾಡಲು ಹೋಗಿ ಮತ್ತೇನೋ ಆಯಿತು.

ಸೀತೆಗೆ ನಾಲ್ಕು ತಿಂಗಳು ತುಂಬಿದನಂತರ ಕಮಾನು ಗಾಡಿಯಲ್ಲಿ ಗಂಡನ ಮನೆಗೆ ಹೊರಟಳು. ಅವಳ ಜೊತೆಗೇ ಅಚ್ಚಿ, ಅವಳ ತಂದೆಯೂ ಕುರುವಳ್ಳಿಯವರೆಗೂ ಒಂದು ಮುಂದೆ ಮೇಗರವಳ್ಳಿಗೆ ಹೊರಟರು. ಒಂದು ದಿನ ಮಟ್ಟಿಗೆ ಕುರುವಳ್ಳಿಯಲ್ಲಿ ಉಳಿದ ಅಚ್ಚಿಗೆ ಸೀತೆಯ ಅತ್ತೆಯ ಮನೆ, ಸಂಸಾರ, ನೆರೆಹೊರೆ, ತುಂಗೆ ಹೊಳೆ, ಅಲ್ಲಿಯ ಪರಿಸರ ನೋಡಿ ಸಂತೋಷದಿಂದ ಕಣ್ಣು ತುಂಬಿತು. ಸೀತೆ ತನ್ನ ಮುದ್ದು ಮಗುವನ್ನು ಅತ್ತೆಯ ಮಡಿಲಿಗೆ ಹಾಕಿ ಅಚ್ಚಿಯ ಕತೆ ಹೇಳಿದಳು. ರಾಮಕ್ಕನ ಸ್ವಭಾವ

ಎಂದೂ ಕಡ್ಡಿ ತುಂಡು ಮಾಡಿದಂತೆ. ಆಕೆ ಅಚ್ಚಿಯ ತಂದೆಗೆ ಅಂದಳು—

"ಇಕಳಾ ಸಣ್ಣಾ. ಈ ದಪಕ್ಕೆ ಕರಕಂಡ್ಹೋಗಿ ಬಿಟ್ಬ್ಯಾ ಮತ್ತೀ ನಾರಾ ಅವರು ಕರಕಂಬಂದು ನಿಮ್ಮನೀಗೆ ದೂಕಿಪ್ರೆ ಸುಮ್ನೆ ಹೆಣ್ಣಿಲ್ಲ ಗಂಡೂಂತ ಸಾಕು. ಮನೇಲಿ ಕೆಲ್ಸ ಮಾಡ್ಕಂಡು ಇರತ್ತೆ ಹುಡ್ಗಿ. ವ.ತ್ತೆ ಆ ಕಟಕರ ಕೈಗೆ ಕೊಡಬ್ಯಾಡ. ಅವಗೆ ಹೆಣ್ಣು ಕೊಡೋರು ಯಾರು ಕೂತದಾರೆ ಹಿಂದೇಕೂಳು !"

ಎಂದಾಗ ಅಚ್ಚಿಯ ತಂದೆಗೆ ಸ್ವಲ್ಪ ಧೈರ್ಯ ಬಂತು. ಮಹಾಬಲಯ್ಯ, ಮೋಟೆ ಜೊತೆಗೆ ಇವರಿಗೂ ಪಾಯಸದ ಊಟವಾಯಿತು. ಅಸರತ್ತ ಇವ ರಿತ್ತ ಹೊರಟಾಯ್ತು. ಬಾಣಂತನ ಮಾಡಿದ್ದಕ್ಕೆ ಮೋಟೆಗೆ ಒಂದು ರೂಪಾ ಯಿನ ಕೂನಾಡು ಸೀರೆಯೂ ಬಂತು.

ಈಗ ತೀರ್ಥಹಳ್ಳಿ ತುಂಬಾ ನಾಗರಿಕವಾಗಿತ್ತು ಗ್ರಗ್ರನೇ ಇಸವಿ ವೇಳೆಗೆ ತೀರ್ಥಹಳ್ಳಿಗೆ ಮೋಟಾರು ವಾಹನ ದಯಮಾಡಿಸಿತು. ಬೈಸ್ಕಲ್ಲು ಗಳು ಕುರುವಳ್ಳಿಯಲ್ಲೂ ಹರಿದಾಡುತ್ತಿದ್ದವು. ಎಲ್ಲಾ ರೀತಿಯ ನಾಗರಿಕತೆ ತೀರ್ಥಹಳ್ಳಿ ತುಂಬಿತ್ತು. ಕುರುವಳ್ಳಿಯಲ್ಲಿ ಪ್ರೈಮರಿ ಶಾಲೆ, ತೀರ್ಥಹಳ್ಳಿ ಯಲ್ಲಿ ಮಾಧ್ಯಮಿಕ ಶಾಲೆಗಳಾಗಿವೆ. ಊರ ತುಂಬ ಕ್ರಾಪಿನ ತಲೆಗಳು. ಹಜಾಮರ ಪುಟ್ಟ, ನರಸ ಶಿವಮೊಗ್ಗೆಗೆ ಬಸ್ಸಿನಲ್ಲಿ ಹೋಗಿ ಕ್ರಾಪು ಮಾಡು ವುದನ್ನು ಕಲಿತು ಬಂದರು. ಅವರ ಗ್ರೇಡು ಈಗ ಎತ್ತರವಾಗಿತ್ತು.

ಅಚ್ಚಿಯ ತಂದೆ ಊರಿಗೆ ಹಿಂದಿರುಗುವಾಗ ಚನ್ನಭಟ್ಟನ ಹಗರಣ ವನ್ನು ವಿವರಿಸಿದರು ಆದರೂ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂದು ನಿಷ್ಕರುಣೆಯಿಂದ ಅಲ್ಲೇ ಬಿಟ್ಟು ಬಂದಿದ್ದರು.

ಯಾವುದನ್ನೂ ಅತಿಯಾಗಿ ತಲೆಗೆ ಹತ್ತಿಸಿಕೊಳ್ಳದ ಸೀತೆಗೆ ಈಗ ಅಚ್ಚಿಯ ಚಿಂತೆಯೊಂದು ಕುಟ್ಟೆ ಹುಳುವಿನಂತೆ ಕೊರೆಯತೊಡಗಿತು.

ಈ ಬಾರಿ ಮಗನನ್ನೆತ್ತಿಕೊಂಡು ಮೋಟಾರು ವಾಹನವೇರಿ ಮಾಳೂ ರಿಗೆ ಹೋಗಿ ಬಂದಳು ಸೀತೆ. ತೀರ್ಥಹಳ್ಳಿಯಲ್ಲಿ ಈಗ ಮೋಟಾರಿನ ಪರಿಷೆ ಎನ್ನಬಹುದು. ಈಗ ಮೋಟಾರು ಟಿಕೆಟ್ಟು ಕೊಡುವ ಬಹದ್ದೂರು ಕೆಲಸ ಅಪ್ಪುವಿನದಾಗಿತ್ತು. ಅವನಿಗೆ ಮದುವೆಯಾಗಿ ಎರಡು ಮಕ್ಕಳೂ ಆಗಿತ್ತು.

ಆದರೂ ಹುಟ್ಟು ಮಂಗ ಬುದ್ಧಿ ಮಾತ್ರ ಹೋಗದು. ತಲೆಯ ಜುಟ್ಟು ಹೋಗಿ ಕ್ರಾಪು ಬಂದಿದೆ. ಕರಿಯ ಕೋಟು, ಟೊಪ್ಪಿಗೆ, ಜೇಬು ಗಡಿಯಾರ, ಉಂಗುರ, ಅವನ ಡೌಲೇಡೌಲು

ಸೀತೆ ಮುದ್ದು ಮಗುವಿನೊಂದಿಗೆ ಬಸ್ಸನ್ನೇರಿದಾಗ ಅಪ್ಪು ವಿಸ್ಮಯದಿಂದ ಕಣ್ಣರಳಿಸಿ ಸೀತೆಯನ್ನು ನೋಡಿ ಕೊಮಾರಿಯನ್ನು ಕೇಳಿದ :

"ಹೋ ಶ್ಯಾನುಬೋಗ್ರು ಏನು ಸಂಸಾರ ಸಮೇತ ಮಾಳೂರಿಗಾ? ನಮಗೆಂತದು ಕಲ್ಸಕ್ರೆ ಕೊಡೂದಿಲ್ಲವ?"

ಸೀತೆಗೆ ಏಕೋ ಅವನನ್ನು ಕಂಡರಾಗದು. ಅವಳು ಅತ್ತ ಮುಖ ತಿರುಗಿಸಿದಳು. ಕೊಮಾರಿಯಂದ–

"ನಮ್ಮನೇದೆಂತದು ಮಾರಾಜರ ಮಗನಾ ಬೀದಿಲೆಲ್ಲ ಕಲ್ಸಕ್ರೆ ಹಂಚೂಕೆ? ನೀ ಯಾವತ್ತಾರ ಮನೆಕಡೆ ಬಂದ್ರೆ ಕೊಡ್ತನಪ್ಪ"

"ಹ್ಹ. ಇವ ರಾಜಕುಮಾರನ್ಹಾಂಗೇ ಅದಾನಪ್ಪ. ನಿಮ್ಹಾಂಗಿಲ್ಲ. ಆತು ಬರ್‍ತನಿ ಒಂದಪ ನಿಮ್ಮನೀಗೆ"

ಸೀತೆಗೆ ಮೈಯೆಲ್ಲ ಉರಿಯಿತು. ಬಸ್ಸಿನ ಹತ್ತಿರ ತುಂಬಾ ಗದ್ದಲ. ಟಿಕೆಟಿಗಾಗಿ ಜನ ನುಗ್ಗಾಡುತ್ತಿದ್ದಾರೆ ಇವನದೇನು ಹುಚ್ಚಾಟ. ರಾಜಾರೋಷವಾಗಿ 'ನಿಮ್ಹಾಂಗಿಲ್ಲ' ಅನ್ನುವಂಥ ಸೊಕ್ಕೆ?

"ಆತು ಮದ್ಲು ತಿಕೀಟು ತಗಳಿ. ಅಮ್ಯಾಲೆ ಬಾಕಿ ಪಂಚಾತಿ" ಎಂದು ಹುಬ್ಬುಗಂಟಿಟ್ಟಳು. ಹೆಚ್ಚು ಮಾತಾಡಲು ಅವನಿಗೂ ಪುರಸೊತ್ತಿರಲಿಲ್ಲ. ಟಿಕೆಟ್ಟು ಕೊಟ್ಟ. ಬಸ್ಸು ಹೊರಡುವವರೆಗೂ ಸೀತೆ ಕೂತ ಸೀಟಿನ ಕೆಳಗಿನ ಫುಟ್ ಬೆಂಚಿನ ಮೇಲೆ ಎಡಗಾಲಿಟ್ಟು ಗಳಿಗೊಂದು ಬಾರಿ ತನ್ನ ಪಾಕೆಟ್ ವಾಚ್ ತೆಗೆದು ನೋಡುತ್ತ ರೈಟ್ ರೈಟ್! ಹೊರಡು ನಾಗಪ್ಪ ಹೊತ್ತಾತು ಎಂದು ಡ್ರೈವರನಿಗೆ ಆಜ್ಞೆ ಮಾಡಿದ. ಮುಂದೆ ಬಸ್ಸಿನ ಪ್ರಯಾಣದ ಯೋಚನೆಯಲ್ಲಿ ಸೀತೆ ಆ ಪ್ರಸಂಗವನ್ನು ಮರೆತಳು. ಹದಿನೈದು ದಿನ ಓರಗಿತ್ತಿಯರ ಜೊತೆ ಆನಂದವಾಗಿ ಕಳೆದು ಊರಿಗೆ ಹಿಂದಿರುಗಿದಳು. ಬಸ್ಸು ಇಳಿದಾಗಲೂ ಈ ಮಂಗ ಹಾಜರು.

"ತುಂಬಾ ದಣವಾತಾ ಸೀತಮ್ಮಗೆ?" ಎಂದು ಹಲ್ಲು ಕಿರಿದ ಅಪ್ಪು. "ಮೋಟಾರಾಗೆ ಬಂದ್ರೆ ದಣವೆಂತದು" ಎಂದಳು ಒರಟಾಗಿ ಸೀತೆ.

ಕೊಮಾರಿ ಟೋಪಿನಿಂದ ಬಾಳೆಗೊನೆ, ಬಾಳೆ ಎಲೆಕಟ್ಟು ಇಳಿಸಿ ಕೊಳ್ಳುತ್ತಿದ್ದ.

"ಛಿ ಕಳ್ಳ ! ಹೆಸರೇಂತದೋ ನೀಮು ?" ಎಂದು ಮಾತಾಡಿಸುವ ನೆವದಲ್ಲಿ ಸೀತೆಯು ತೀರಾ ಹತ್ತಿರ ಬಂದು ನಿಂತ. "ಅದಕೆ ಮಾತಾಡೂಕೆ ಬರತ್ತಾ ?"

ಎಂದು ಕಣ್ಣು ಕೆಕ್ಕರಿಸಿದಳು ಸೀತೆ. ಅಪ್ಪುಗೆ ತಿಳಿಯಿತು. ಹುಬ್ಬು ಕುಣಿಸಿದ. ಇರಲಿ ನಾನೂ ನೋಡ್ತನಂತೆ. ಈ ಕಸಿಮಾವಿನ ಹಣ್ಣಿನ ನೆಣ ಎಷ್ಟು ದಿನ ಅಂತ. ಅಂದುಕೊಂಡ.

ಸೀತೆ ಅಲ್ಲಿಗೆ ಆ ಪ್ರಸಂಗ ಮರೆತು ಮನೆಗೆ ಬಂದಳು. ಮಗುವಿಗೆ ಆರು ತಿಂಗಳು ತುಂಬಿದ ನಂತರ ಮೊದಲಿನಂತೆ ಸೀತೆ ಮಗುವನ್ನು ಅತ್ತೆಯ ಕೈಗೆ ಕೊಟ್ಟು ಹೊಳೆ ಕೆಲಸಕ್ಕೆ ಹೋಗುತ್ತಿದ್ದಳು. ಅಪ್ಪುವಿಗೆ ಹೆದರಿಕೊಂಡು ಆವಳೇನೂ ತನ ಜಾಗ ಬದಲಿಸಲಿಲ್ಲ. ಅಪ್ಪುವಿಗೆ ಹೆದರಿಕೊಂಡು ಆವಳೇನೂ ತನ್ನ ಜಾಗ ಬದಲಿಸಲಿಲ್ಲ. ಅಪ್ಪುವಿನ ಮೋಟಾರು ಟಿಕೇಟು ಕೊಡುವ ಕೆಲಸ ಮಧ್ಯಾಹ್ನ ಮೂರುಗಂಟೆಯೊಳಗೆ ಮುಗಿದು ಹೋಗುತ್ತಿತ್ತು. ಅದೇ ಒಂದು ದಿವಾನಗಿರಿಯಾಗಿತ್ತು ಅವನಿಗೆ. ನಂತರ ಕೇಶವಯ್ಯನ ಹೋಟೆಲ ದರ್ಶನ. ಆ ಮೇಲೆ ತನ್ನ ಪೋಲಿಪಟಾಲಂನೊಂದಿಗೆ ರಾಮಮಂಟಪಕ್ಕೆ ಬಂದು ಕೂತು ಸಿಗರೇಟು ಸೇದುತ್ತ ಊರ ಸಂಸಾರಗಳ ಹುಳುಕನ್ನೆತ್ತಿ ವ್ಯಂಗ್ಯವಾಗಿ ಆಡಿಕೊಳ್ಳುವುದು ಅವನ ಹುಟ್ಟುಗುಣ. ಅವನ ಹೆಂಡತಿ ಮೂಕಾಂಬಿಕೆ ಹತ್ತಾರು ಬಾರಿ ಅವನಿಗೆ ಬುದ್ಧಿ ಹೇಳಿದ್ದಳು—

"ಕಂಡೋರ ಮನೆ ಕಾಣದ ಸುದ್ದಿ ನಿಮಗೆ ಯಾಕೆಂತನಿ ? ನೀವು ಹೀಂಗೇ ಆಡ್ತಿದ್ರೆ ಒಂದಲ್ಲಾ ಒಂದಿನ ಯಾರಾರಾ ನಿಮ್ಮನ್ನ ಹಿಡ್ದು ಸಮನಾಗಿ ಜಪ್ತಾರೆ ತಿಳೀತ ?"

ಬದಲಿಗೆ ಅಪ್ಪು ಹೆಂಡತಿಗೆ ನಾಲ್ಕು ಜಪ್ಪಿ ಬಂದಿದ್ದ.

ಅಂದು ಸಂಜೆ ಪುಷ್ಕರಣಿಯ ಎದುರಿಗೆ ಕೂತು ಅಪ್ಪುವಿನ ಹರಟೆ ನಡೆದಿತ್ತು. ಅಗ್ರಹಾರದ ಹತ್ತಾರು ಮಂದಿ ಹೆಂಗಸರ ಜೊತೆ ಸೀತೆಯೂ

ಇದ್ದಳು. ಗಂಡಸರ ಕಡೆ ಬೆನ್ನು ತಿರುಗಿಸಿ ಕೂತು ಪಾತ್ರೆ ತೊಳೆಯು ತ್ತಿದ್ದಳು ಸೀತೆ. ಅಪ್ಪುವಿನ ಏರುದನಿ, ಕೇಕೆಯ ನಗು ಕೇಳಿಸುತ್ತಿತ್ತು.

"ಹೌದಲ್ಲ, ಕಮ್ಮರಡಿ ಶ್ಯಾಮಯ್ಯನವರ ಹೆಂಡ್ತೀಗೆ ಶೃಂಗಾರಕ್ಷಯ ಅಂತ ಶೇಷ ಪಂಡಿತರು ಗಟ್ಟಿಮಾಡಿ ಹೇಳಿಯಾತು. ಅಕ್ಲಾಗೆ ಶ್ಯಾಮಯ್ಯನ ಶೃಂಗಾರ ಚಾಷ್ಟೆ ಮತ್ತಷ್ಟು ಭದ್ರಾತು. ಪಾಪದೋರು ಅನ್ನಪೂರ್ಣಮ್ಮ ಮನೆ ತಂಬ ಮಕ್ಳನ್ನ ಹೆತ್ತು ಹಾಕ್ಯಾತು. ಆ ಪುಣ್ಯಾತಗಿತ್ತೀಗೆ ಇಂತ ಖಾಯ್ಲೆ ಬರೂದ? ಈಗ್ಲೂ ಪ್ರಾಣ ಗಂಡ–ಗಂಡ ಅಂತ ಒದ್ದಾಡತ್ತೆ. ಈಗ ಅವರಿಗೆ ಈ ಕಬ್ಬಿನ ಚರಟ ಯಾಕೆ ಬೇಕಾಗದೆ. ಅಲ್ಲಿ ಆ ರಸದಾಳಿ ಕಬ್ಬು ಶಾಂಭವಿ ಇವರನ್ನ ಬಿಟ್ರಲ್ವ ಮನೀಗೆ ಬರೂದು?"

ಯಾರದೋ ಉತ್ತರ:

"ಹೆಂಡ್ತಿ ಹ್ಯಾಂಗೂ ಬದ್ಕೂದಿಲ್ಲಾಂತ ತಿಳಿದಮ್ಯಾಲೆ ಅವರಾರ ಹತ್ರ ಇದ್ದಂಡು ಮಾಡೂದೆಂತದು. ಮನೆ ತುಂಬ ಜನ ಅದಾರೆ. ನೋಡ್ಕ್ಯಾ ತಾರೆ. ಶೇಷ ಪಂಡಿತ್ರು ಔಸ್ತಿ ಕೊಡ್ತದಾರಲ್ಲ?"

ಅಪ್ಪು ಬಾಯಲ್ಲಿ ಕನಿಕರದ ಮಾತು:

"ಇಶ್ಶಿ, ಯಂತದಾರಾ ಆಗ್ಲಿ. ಪ್ರಾಯದಾಗೆ ಹೆಂಗಿದ್ರು ಅನ್ನ ಪೂರ್ಣಮ್ಮ! ಆಗೆಲ್ಲ ಗಡದ್ದಾಗಿ ಉಂಡಾತು. ಈಗ ಕಾಯ್ಲೆ ಬಂತೂಂತ ಯಂಜಲ ಬಳ್ಳಿ ಯಸದ್ಹಂಗೆ ಯಸಡಬಿಡೂದ ಅವರನ್ನ. ಆರು ಮೊಮ್ಮಕ್ಳದಾವೆ ಮನೇಲಿ. ತುಸಾನಾರಾ ಹೇಸಿಗೆ ಬ್ಯಾಡ್ವಾ ಜೀವಕ್ಕೆ? ಮೈಯಾಗೆ ತುಸೂ ನೆಣ ಅದೆ, ಕೈಯಾಗೆ ರೊಕ್ಕ ಅದೆ. ಅದು ಮುಗಿಯೂತಂಕ ಶಾಂಭವಿ ಮನೆ. ಅಪ್ಲೇಲಾರ ಇದೇ ಮನೀಗೆ ಬರ್ಬೇಕಲ್ಲ. ಇಕಾ ಅಕಾ ಅಂದ್ರೆ ಸಾಯೂ ಜೀವ ಅದು. ಈಗ್ಲಾರ ಹೆಂಡ್ತಿ ಹತ್ರ ಇರಬಾರದ?"

"ಅದೂ ಸಮ. ಮದ್ಲು ದಿನಾ ಊಟಕ್ಕೆ ಬರ್ತಿದ್ರಂತೆ. ಆಮ್ಯಾಲೆ ವಾರಕ್ಕೊಂದಪ ಆತು ಈಗ ಹುಣ್ಣಿಮೆ, ಅಮಾಸೆ ಆಗಿದ್ದೀತು."

ಸೀತೆ ತಿರುಗಿ ನೋಡಲಿಲ್ಲ. ಹೆಂಗಸರೆಲ್ಲ ಪಾತ್ರೆಗಳನ್ನೆತ್ತಿಕೊಂಡು ಮಾತಾಡಿಕೊಳ್ಳುತ್ತಾ ಹೊರಟರು.

ಕಮ್ಮರಡಿ ಶ್ಯಾಮಯ್ಯನವರ ಸಂಸಾರದ ಸುದ್ದಿ ನಡೆದಿತ್ತು. ಅದು

ಊರಿಗೇ ತಿಳಿದ ವಿಷಯ. ಅನ್ನಪೂರ್ಣಮ್ಮನ ಔದಾರ್ಯ, ಪೂಜೆ-ಪುನಸ್ಕಾರ ಗಳು, ಪತಿಭಕ್ತಿ. ಆಕೆಗೆ ಬಂದ ಕಾಹಿಲೆ, ಈ ಮುದಿ ವಯಸ್ಸಿನಲ್ಲೂ ಅವರ ಶೃಂಗಾರಲೀಲೆ ಇತ್ಯಾದಿ.

ತನಗೆ ಶೃಂಗಾರ ಕ್ಷಯವೆಂದು ತಿಳಿದ ಮೇಲೆ ಅನ್ನಪೂರ್ಣಮ್ಮನ ದಾನ ಧರ್ಮ ಮತ್ತೂ ಹೆಚ್ಚಾಗಿತ್ತು. ಪ್ರತಿ ಶುಕ್ರವಾರ, ಮಂಗಳವಾರ ಮುತ್ತೈದೆ ಯರಿಗೆ ಅರಿಸಿನ-ಕುಂಕುಮ, ಮೊರದ ಬಾಗಿನ ಕೊಡುವುದು. ಕುಂಕು ಮಾರ್ಚನೆ, ಹೂ ವೀಳ್ಯಗಳನ್ನು ನಡೆಸುವರು. ಕರುಪಳ್ಳಿ ಮುತ್ತೈದೆಯರಿ ಗೆಲ್ಲ ಈಗೊಂದು ಸುಗ್ಗಿ. ಸೀತೆಗೆ ದಿನದಿನವೂ ಕರೆ ಇರುತ್ತಿತ್ತು.

ಬಾಲ್ಯದ ಗೆಳೆತನದ ಸಲಿಗೆಯಿಂದ ರಾಮಕ್ಕ ಅನ್ನಪೂರ್ಣಮ್ಮನನ್ನು ಬಯ್ಯುತ್ತಿದ್ದುದುಂಟು. ರಾಮಕ್ಕನಿಗೆ ಆಕೆಯ ಅತಿ ಪೋಲಿತನ ಸರಿಹೋಗು ತ್ತಿರಲಿಲ್ಲ.

"ಅಲ್ಲಕಣೆ ಅನ್ನಪೂರ್ಣೆ, ನಿನ ಗಂಡಗೆ ತುಸಾನಾರಾ ಮೈಮೇಲೆ ಗ್ಯಾನ ಬ್ಯಾಡ್ವ? ನೀನೋಡಿದ್ರೆ ಈ ಸ್ಥಿತೀಲಿದ್ದಿ. ಅವರನ್ನೋಡಿದ್ರೆ ಈ ವಯಸ್ಸಿಗೆ ಸರೀ ಮಕ್ಳು, ಸೊಸೇರು, ಅಳಿಯಂದ್ರುನುರ್ಗೆ ಸೂಳೇ ಮನೇಲಿ ಹೋಗಿ ಬಿದ್ಗಂಡದಾರೆ. ನಿನಗಾರಾ ಆತು ಮೂರಿದ್ದೂತ್ತು ಅವರದ್ದೇ ಯಂತ ಗ್ಯಾನ? ಪ್ರಾಯದಾಗೆ ಹತ್ತು ಮಕ್ಳನ್ನು ಹೆತ್ಹಾಕಿದ್ವ್ಯಲ್ಲ. ಆತು ಗಂಡ-ಹೆಂಡ್ತಿ, ಸಂಸಾರ ಎಲ್ಲ ನೆಟ್ಗದೆ. ನೀ ರೋಗದೋರು ಗಳಗ್ಗೊಂಡಪ ಅವರಿಗ್ಯಾಕೆ ಹೇಳಿಕಳಿಸೂದೂಂತನಿ. ಮನೇಲಿ ಮಕ್ಳು, ಸೊಸೇರು ನಿನ್ನ ಸೇವೆ ಮಾಡ್ತಾವೆ. ಆ ದಿಂಡೆ ಬಸವಿಗಾರಾ ಗ್ಯಾನಿಲ್ವ? ದಿನಕ್ಕೊಂದಪ ಮನೆಕಡೆ ಹೋಗ್ಬ ನ್ನಿಂತ ಹೇಳೂಕಾಗುಲ್ವ. ಅವರಮ್ಮ ಅದೆಯಲ್ಲ ಮುದಿಗೂಬೆ ದೂರ್ಖುಟಿ ಅದಕಾರ ತಿಳೀಬ್ಯಾಡ್ದ? ನೀ ಸ್ವಾಮ್ಗೋರು ಬಂದಾಗ ಒಂದ್ಕಳ್ಳಿ. ಮನಸ್ಸಿಗೆ ಇಲ್ಲದ ಮೋಹ ತಿನಿಕೆವರೆ ಬಂದೀತಾ?"

ತಾರುಣ್ಯದಲ್ಲಿ ಬಲು ಲಕ್ಷಣವಾಗಿದ್ದ ಅನ್ನಪೂರ್ಣಮ್ಮ ಈಗ ಕ್ಷಯ ರೋಗದಿಂದ ನವೆದು ಹಳೆ ಒಟ್ಟೆಯ ಚೀಲವಾಗಿದ್ದರು. ಅಚ್ಚ ಗೌರವರ್ಣ ಹಳದೀ ಬಣ್ಣಕ್ಕೆ ತಿರುಗಿದೆ. ಮೊದಲಿನಿಂದ ಮೈಮೇಲಿದ್ದ ನಗಗಳು ಭಾರ ವೆನಿಸಿ ಎಲ್ಲವನ್ನೂ ತೆಗೆದು ಗಂಡನ ವಶಕ್ಕೊಟ್ಟಿದ್ದರು. ಅದ್ದ ಕುಂಕುಮ, ಚೀಪರಿಶಿನ, ಚಂದ್ರ-ಕಸ್ತೂರಿ, ಚೌರಿಕೊಟ್ಟುಗಳಲ್ಲಿ ಆ ಸೋತ ಶರೀರ

ಶೃಂಗಾರ ಕ್ಷಯದಿಂದ ಖಳೆ ಖಳೆಯಾಗಿ ಬೆಳಗುತ್ತಿದೆ. ರಾಮಕ್ಕನ ಮಾತು ಕೇಳಿ ಮೆದುವಾಗಿ ನಕ್ಕರು ಅನ್ನಪೂರ್ಣಮ್ಮ.

"ಅಂತೂ ನಿನ್ನ ಬದುಕೆಲ್ಲ ಜೋರ್‍ನಾಗೇ ಕಳದೆಕಣೆ ರಾಮಕ್ಕ ನೀನು. ಈಗೇನಾರ ಅವರು ನಿನ್ನ ಕೈಗೆ ಸಿಕ್ಕಿದ್ರೆ ಅವರ ಸೊಡ್ಡಿನ ಮ್ಯಾಲೆ ಎರಡ್ಮ ಏಟ್ಗೊಟ್ಟು ಕೂಸ್ಸ್ಯ ಹೌದಾ ? ಯಾರಮೇಲಾರ ಯಾತಕ್ಕೆ ಸಿಟ್ಟಾಗ್ಬೇಕೆ ಈಗ ? ನನ್ನ ಖರ್ಮ ಸವೀತು ಬಿಡು. ನಂಗೆ ಅವರು ಯಾವ್ದಕ್ಕೆ ಕಮ್ಮಿ ಮಾಡಿದ್ರೆ ? ಮಕ್ಳು ಮರಿ, ಬಾಳು-ಬದುಕು ಯಲ್ಲ ಆತು. ಇದೊಂದು ರೋಗ ಅನುಭವಿ ಸೂಪು ನನ್ನ ಹಣೇಲಿ ಬರೆದಿತ್ತು ಅದೂ ಮುಗೀತ ಬಂತು ಬಿಡು. ಇದು ನನ್ನ ಖರ್ಮ ! ಅವರು ಸುಖ ಪಡಕೊಂಡು ಬಂದೋರು ಸುಖವಾಗಿರ್‍ಲಿ ಬಿಡು. ಯಾವ ಗಳಿಗ್ಗೆ ಪ್ರಾಣ ಬಿಡ್ತೆನೋ ತಿಳೀದು ಈ ಕಡೇ ದಿನದಾಗೆ ಎರಡ್ಡಿನ ಹತ್ರ ಇರ್‍ಲೀಂತ ತುಸ ಆಸೆ ಸ್ಯೆ. ನಂಗಿನ್ನೇಂತ ಆಸೆಯೂ ಇಲ್ಲ ಬಿಡು."

ಆಕೆ ಈ ಮಾತನ್ನಾಡುವಾಗ ಸೀತೆಯೂ ಅಲ್ಲಿಯೇ ಇದ್ದಳು. ಅವಳಿಗೆ ಈ ಪತಿಭಕ್ತಿಯ, ಭಾವುಕತೆಯ ಆಳ ತಿಳಿಯಲಿಲ್ಲ.

ಆಗಿನ ಕಾಲದಲ್ಲಿ ಶ್ರೀಮಂತರು ಡೌಲಿಗಾಗಿ ಸೂಳೆಯನ್ನಿಟ್ಟುಕೊಳ್ಳು ತ್ತಿದ್ದುದು ಸಾಮಾನ್ಯ. ಚೆಲುವೆ ಹೆಂಡತಿ ಮನೆಯಲ್ಲಿದ್ದರೂ ಈ ಹೊರ ಎಂಜಲು ಹೆರಕುವ ದೊಡ್ಡವರ ಸಣ್ಣತನ ಮಾಮೂಲು. ಅದು ಮನೆಯವರಿ ಗಾಗಲೀ, ಸಮಾಜಕ್ಕಾಗಲಿ 'ತಪ್ಪು' ಅನಿಸುತ್ತಿರಲಿಲ್ಲ. ತುಂಬಿದ ಮನೆಗಳಲ್ಲಿ ಹೆಂಡತಿಗೆ ಬಸಿರು-ಬಾಣಂತನ, ಮಕ್ಕಳು, ಮನೆಗೆಲಸಗಳು ಸದಾ ಇರು ತ್ತಿದ್ದವು. ಅವರು ಹಗಲೆಲ್ಲ ಗಂಡನ ಮುಂದೆ ನಲಿದಾಡಲು ಸಾಧ್ಯವಿರಲಿಲ್ಲ. ಶ್ರೀಮಂತರಲ್ಲಿ ರಸಿಕರು, ಶೃಂಗಾರ ಪ್ರಿಯರು, ಕಾಮುಕರು, ಕಲಾಪೋಷಕರು ಇರುತ್ತಿದ್ದರು. ಅಂಥವರಲ್ಲಿ ಶ್ಯಾಮಯ್ಯನವರು ರಸಿಕರೂ ಮತ್ತು ಕಾಮುಕರು ಎಂದರೆ ಸೂಕ್ತ.

ಇವೆಲ್ಲ ವಿಷಯಗಳು ಸೀತೆಗೆ ಅಷ್ಟಾಗಿ ತಿಳಿಯದು. ಅಂಥ ನಿರ್ದಯ್ಯ ಗಂಡನ ಮೇಲೆ ಈ ಮಹಾತಾಯಿಯ ಭಕ್ತಿ ಎಂಥದಪ್ಪ ಅನಿಸಿತ್ತು. 'ಆಕೆ ಸಾವು ಹತ್ತಿರ' —ಎಂದು ಶೇಷಪಂಡಿತರು ಪರೋಕ್ಷವಾಗಿ ತಿಳಿಸಿಯಾಗಿತ್ತು. ಸೀತೆಯನ್ನು ಕಂಡರೆ ಅನ್ನಪೂರ್ಣಮ್ಮನಿಗೆ ಅಮಿತ ಸಂತೋಷ. ಹೊ

ವೀಳ್ಯಕ್ಕೆ ಕರೆಸಿಕೊಂಡಾಗ ಆಕೆ ಸೀತೆಯನ್ನು ಹತ್ತಿರ ಕೂರಿಸಿಕೊಂಡು ಹೇಳಿದ್ದರು :

"ಸೀತೆ, ನಿವೃತ್ತಿಗೆ ಸಮನಾದ ಸೊಸೆಕಣೆ ನೀನು. ಗಟ್ಟಿಮುಟ್ಟಾಗಿ ಧೈರ್ಯಗಿರ್ಯಕು ಹೆಣ್ಮಕ್ಳು. ಆದ್ರೆ ಇಕಾ ನೀ ಭೋ ಚೆಂದೂಳ್ಳೆ ಹೆಣ್ಣು. ಹುಸಾ ಹುಷಾರಾಗಿರು ಕಂಡ್ಯಾ. ನಂಗೂ ದಿನ ಹತ್ರ ಬಂದದೆ. ನಾ ಹೇಳಿ ಕಳಿಸ್ದಾಗ ಬಂದು ಕುಂಕ್ಮ ಇಟ್ಕಂಡ್ಹೋಗ್ರೆ"

"ಆತು, ಬರ್ತಾನೇ ಅದೀನಲ್ಲ" ಎಂದಂದು ಮನೆಗೆ ಬಂದಳು. ಸೀತೆಗೆ ಸದಾ ಕೆಲಸದ ಕಡೆ ಗಮನ. ಯೋಚಿಸಲು ಅವಳಿಗೆ ತಿಳಿಯುತ್ತಿರಲಿಲ್ಲ. ಮುಂಗಾರು ಮಳೆ ಬಿದ್ದಾಗ ಕಟ್ಟಿಗೆ ಕೊಟ್ಟಿಗೆಯಲ್ಲಿ ಮಳೆ ನೀರು ಸೋರಿ ಒಣಗಿಸಿಟ್ಟ ಕಟ್ಟಿಗೆಯಲ್ಲ ನೆನೆದುಹೋಗಿತ್ತು. ಹೆಂಚು ಕೈಯಾಡುವ ಕಾಳನಿಗೆ ಮೂರು ಬಾರಿ ಹೇಳಿ ಬಂದಿದ್ದ ಕೊಮಾರಿ. ಅವನಿಗೆ ಈಗ ಕೈತುಂಬ ಕೆಲಸ. ಬಂದಿರಲಿಲ್ಲ.

ಅಂದೇ ರಾಮಕ್ಕ ಕಂದಾಯದ ಹಣ ನುಂಗಿ ಕೂತ ಪರಮೇಗೌಡನ ಹತ್ತಿರ ಜಗಳವಾಡಲು ಕೊಮಾರಿಯೊಂದಿಗೆ ಮಾಳೂರಿಗೆ ಹೊರಟಳು. ಬಸ್ಸಿನ ಹತ್ತಿರ ಹೋದಾಗ ಅಪ್ಪು ಹುಬ್ಬೇರಿಸಿದ :

"ಓ ಯಂತದು ಈಪಾಟಿ ಅಪ್ರೂಪ ರಾಮಕ್ಕ ಮಾಳೂರಿಗೆ ಹೊರಟಿದ್ದು ?"

"ಹುಸ ಕೆಲ್ಸದ ಹೋಗ್ತಿರ್ತನಿ"

ಎಂದಳು ರಾಮಕ್ಕ. ಆಕೆಗೆ ನಯದ ಮಾತು ತಿಳಿಯದು. ಟಿಕೇಟು ಕೊಡುತ್ತಾ ಯೋಚಿಸಿದ. ತಾಯಿ ಮಗ ಒಟ್ಟಾಗಿ ಹೊರಟಿದ್ದಾರೆ. ಮನೆಯಲ್ಲಿ ಸೀತಮ್ಮ ಒಬ್ಬಳೇ.

ಅಂದು ಸಂಜೆ ಗೆಳೆಯರ ಕಣ್ಣು ತಪ್ಪಿಸಿ ಪೇರಲ್ಹೋ ಹೋಗುವುದಾಗಿ ಹೇಳಿ ಕತ್ತಲು ಇಳಿಯುವ ವೇಳೆಗೆ ಕುರುವಳ್ಳಿಗೆ ಬಂದ. ಕುರುವಳ್ಳಿಗೆ ರಸ್ತೆಯ ದೀಪಗಳೂ ಇರಲಿಲ್ಲ. ಕತ್ತಲಾದ ಮೇಲೆ ಮೆತ್ತಗೆ ಅರಳಿಕಟ್ಟೆಯ ಕಡೆಯಿಂದ ರಾಮಕ್ಕನ ಮನೆ ಹತ್ತಿರ ಸುಳಿದಾಡಿದ. ವೈಶಾಖದ ಕೊನೆಯ ದಿನಗಳು. ಪೂರಾ ಕತ್ತಲು ಆವರಿಸಿತ್ತು. ಕಾಲು ರಸ್ತೆ ನಿರ್ಜನ ಹೊಳೆಯ

ಸದ್ದು, ಗಾಳಿಯ ಸದ್ದು ಅಷ್ಟೆ. ಒಬ್ಬಿಬ್ಬರು ಬ್ಯಾಟರಿ ಕೊಂಡವರು ಅದನ್ನ ಕೈಲಿ ಹಿಡಿದು ಓಡಾಡುತ್ತಿದ್ದರು.

ಸೀತೆ ಗೌರಿದನ ಕರೆದು ಒಳಗಿಟ್ಟು, ಮಗು ಮಲಗಿಸಿ, ದೇವರ ದೀಪ ಹಚ್ಚಿ ಚೌಕಿಗೆ ಬಂದಳು. ದೀಪ ಹಚ್ಚುವ ಹೊತ್ತಿನಲ್ಲಿ ಯಾಕೆ ಮುಂಬಾಗಿಲು ಹಾಕುವುದೆಂದು ತೆಗೆದಿದ್ದಳು. ಈಗ ಹೇಗೂ ದೋಟಿ ಸುಬ್ಬನ ಮಗ ನಂಜು ಮಲಗಲು ಬರುತ್ತಾನಲ್ಲ, ಆಮೇಲೆ ಹಾಕಿದರಾಯ್ತು ಅಂದುಕೊಳ್ಳುವುದರಲ್ಲಿ ದೂರದ ಮುಂಬಾಗಿಲಲ್ಲಿ ಬೆಳ್ಳಗಿನ ಪಂಚೆ ಕಾಣಿಸಿತು. ಸೀತೆ ದೀಪಕ್ಕೆ ಕೈ ಅಡ್ಡ ಹಿಡಿದು, "ಯಾರದು ?" ಎಂದಳು.

ದೋಟಿ ಸುಬ್ಬನ ಅವನ ಮಗನ ಪಂಚೆ ಅಷ್ಟು ಬೆಳ್ಳಗಿಲ್ಲ.

"ನಾನು ಹೀಂಗೇ ಹೊಸಗ್ರಾರಕ್ಕೆ ಹೋಗಿದ್ದೆ. ಇಲ್ಲಿ ಬಂದ್ನಲ್ಲಾ ಹಾಂಗೇ ಈ ಕಡೆ ಬಂದೆ. ಕೊಮಾರಯ್ಯ ಅದಾರಾ ಮನೇಲಿ ?"

ಸೀತೆಗೆ ಕೂಡಲೇ ಅರ್ಥವಾಯಿತು. ಅಪ್ಪು ಬೇಕೆಂತಲೇ ಬಂದಿದ್ದಾನೆಂದು. ಅವಳು ಅವನನ್ನು 'ಬನ್ನಿ' ಅನ್ನಲಿಲ್ಲ. ತಾನೇ ಸರಸರ ಬೀದಿ ಬಾಗಿಲ ಕಡೆಗೆ ನಡೆದಳು

"ಯಾಕೆ ಅವರು, ಅತ್ತೆ ಇವತ್ತು ಮಾಳೂರಿಗ್ಹೋಗಿದ್ದು ನಿಮಗೆ ತಿಳೀದಾ ? ಏನು ಕೆಲಸಿತ್ತು ಅವರ ಹತ್ರ ? ಈಗಿಲ್ಲ ಅವರು. ಹೇಳಿದ್ರೆ ಅವರನ್ನೇ ಕಳಸ್ತನಿ ನಿಮ್ಮ ಆಫೀಸಿನ ಹತ್ರ"

ಅಷ್ಟು ದೊಡ್ಡ ಚೌಕಿಗೆ ವಾಲ್‌ಲ್ಯಾಂಪಿನ ಬೆಳಕು ಏನೂ ಸಾಲದು. ಮಬ್ಬು ಮಬ್ಬಾಗಿ ಕಾಣುತ್ತಿತ್ತು.

"ಅಂಥಾದೆಂತದಿಲ್ಲ, ಇಲ್ಲಿ ಬಂದಿದ್ನಲ್ಲ ಸುಮ್ಮಗೆ ಬಂದೆ. ಹಂಗಾರೆ ಇವತ್ತು ನೀವೊಬ್ರೇ ಸೈಯಾ ಮನೇಲಿ. ಮಗು ಆಗ್ಲೆ ಮಲಗ್ತನಾ ?"

ಕರೆಸಿಕೊಳ್ಳದೇ ಉಯ್ಯಾಲೆ ಮಣೆಯಲ್ಲಿ ಪ್ರಸ್ಥ ಊರಿದ ಅಪ್ಪೂರಾಯ. ಸೀತೆಗೆ ಹೆದರಿಕೆಯಾಗಲಿಲ್ಲ. ಸಿಟ್ಟೇರಿತು :

"ಒಬ್ಬೇ ಯಾಕೆ ? ನನ್ನ ನಾದ್ನಿ, ಅವರ ಮಗ ನಂಜು ಇಬ್ರೂ ಬರ್ತಾರೆ ಈಗ ಮಲಗೂಕೆ. ಅವರು ಬಸ್ಸಿಗೆ ಹೋದದ್ದ ನೋಡ್ಕಂಡೇ ಅಲ್ವ ನೀವು ಇತ್ತ ಬಂದದ್ದು ? ಇನ್ನೆಂತ ಕೆಲಸವೂ ಇಲ್ಲ ನಿಮಗೆ. ಒಬ್ಬೇ ಅದನಿ

ಮನೇಲಿ, ನೀವು ಹೊರಡಿ ಇನ್ನು. ಯಾರಾರಾ ನೋಡಿದ್ರೆ ಏನಂ ದ್ಕಂಡಾರು ?"

"ಬಂದ್ರೆ ನಂಜು ಸೈಯಲ್ಲ ಬರೂದು. ಅಂದ್ಕಳೂಕೆ ಏನದೆ ಇಲ್ಲಿ ?" ಮುಲಾಜಿಲ್ಲದೆ ಉಯ್ಯಾಲೆಯಲ್ಲಿ ಕೂತು ಸಿಗರೇಟು ಹೊತ್ತಿಸಿದ ಅಪ್ಪು. ಸೀತೆ ಮೈ ಮರಿತಳು. ರತ್ನಿ, ಕಾಳಿಂದಿ, ಪದ್ದಿಯರು ಅಪ್ಪು ಬಗ್ಗೆ ಹೇಳಿದ ಮಾತುಗಳು ನೆನಪಿಗೆ ಬಂದವು. ಆದರೂ ಸಹನೆಯಿಂದ ಹಿರಿದಾಗಿ ಅಂದಳು :

"ಅಪ್ಪೂರಾಯ್ರೆ, ಗಂಡಸ್ರು ಮನೇಲಿಲ್ಲಾದ ನಿಮಗೆಂತ ಕೆಲಸದೆ ಇಲ್ಲಿ. ಎದ್ಹೋಳಿ ಮದ್ಲು. ನಮ್ಮತ್ತೆ ಇದ್ದಿದ್ರೆ ಸಜಾ ಮಾಡ್ತಿದ್ರು ತಿಳೀತ ? ನಿಮ್ಮ ಕತೆಯೆಲ್ಲ ನಂಗೊತ್ತದೆ. ಹೆಂಡ್ತಿ ಮಕ್ಕಿರೂ ಮನ್ಸ ಇಂಥ ಪುಂಡಾಟ್ಕೆ ಮಾಡೂದ ?" ಅಪ್ಪು 'ಹ್ಹಿಹ್ಹಿಹ್ಹಿ' ಎಂದು ಕಿರಿದಾಗಿ ನಕ್ಕು ತನ್ನ ಶರಟಿನ ಗುಂಡಿ ತಿರುಗಿಸಿದ. ದೂರದ ಲ್ಯಾಂಪಿನ ಬೆಳಕಿನಲ್ಲಿ ಅವನ ಬಿಳೀಹರಳಿನ ಗುಂಡಿಗಳು ಫಳಫಳನೆ ಹೊಳೆದವು.

"ನೀವು ಭಾರಿ ಜೋರು ಅಂಸ್ಕಂಡಿದ್ದೆ. ಇಷ್ಟ್ರೀತ ಪುಕ್ಲಪ್ಪ. ನಾ ಏನು ಹುಲಿಯಾ, ಕಿರುಬ್ನಾ ಹೆದರೂಕೆ. ಕಿತ್ತಂದೂರೋರ ಮನೇಲಿ, ತಿಪ್ಪೆ ಜೋಯಿಸ್ರ ಮನೇಲಿ ಯಂತದಾರ ಕಷೂತಿ ಸಾಮಾನ. ಬೇಕಾದ್ರೆ ನಂಗೆ ಹೇಳಿ ಕಳ್ಸಿ ನಮ್ಮಂಗಡೀಲೇ ತರಿಸ್ಕ್ಯಾತಾರಪ್ಪ. ಈ ಊರ ಸಾವ ಕಾರ್ರ ಮನೆ ಮಾಣಿ ಇದ್ದಂಗೆ ನಾನು. ನೀವೊಬ್ರೆ ಹಿಂಗನ್ನುದು."

ಸೀತೆ ಮತ್ತೆ ಮಾತಾಡಲಿಲ್ಲ. ಸರಸರ ಮೂಲೆಯ ಕಣದ ಒಡಿ ಯಲ್ಲಿದ್ದ ಈಚಲ ಹಿಡಿ ತಂದು ಅವನ ಮುಖ–ಮುಸುಡಿ ನೋಡದೆ ರಪರಪರಪ ಬಡಿದಳು. ಅಪ್ಪು ಕೂಗುವಂತಿಲ್ಲ. ತಪ್ಪಿಸಿಕೊಳ್ಳಲೂ ಆಗಲಿಲ್ಲ. ಅವನ ಟೊಪ್ಪಿಗೆ ಒಂದು ಕಡೆ, ಸಿಗರೇಟು ಪ್ಯಾಕು ಒಂದು ಕಡೆ ಬಿತ್ತು. ಕಚ್ಚೆ ಬಿಚ್ಚಿ ಪಂಚೆ ಹಿಡಿದು ಒಲಗ್ಯೆ ಎತ್ತಿದ, ಹೊಡೆದದ್ದು ಸಾಕು ಎಂಬಂತೆ. ಇನ್ನು ಹೊಡೆದರೆ ಅವನ ಪಂಚೆ ಪೂರಾ ಬಿಚ್ಚಿ ಅವನು ತನ್ನ ಮುಂದೆ ಬೆತ್ತಲೆ ನಿಂತರೆ ತನಗೆ ಹೇಸಿಗೆ ಎನಿಸಿ ಈಚಲ ಹಿಡಿಯಿಂದಲೇ ಬೀದಿ ಬಾಗಿಲ ದಾರಿ ತೋರಿದಳು ಸೀತೆ :

"ನಡೀರಿ ಮದ್ಲು ಆಚೀಗೆ. ಇನ್ನೊಂದಪ ಏನಾರಾ ?"

ಸೀತೆಯು ಮಾತು ಪೂರೈಸುವುದರೊಳಗೆ ಅಪ್ಪು ಜಾರಿದ ಪಂಚೆಯನ್ನು ಎರಡೂ ಕೈಲಿ ಹಿಡಿದು ಮುಂಚೆ ಕಡೆ ಬಾಗಿಲಿನಿಂದ ಓಡಿದ. ಈಚಲ ಹಿಡಿಯ ಗರಿಗಳು ಅಲ್ಲಲ್ಲ ಉದುರಿ ಹಿಡಿ ಪುಕ್ಕ ತರೆದ ಕೋಳಿಯಂತಾಗಿತ್ತು. ಬಾಗಿಲ ಬಳಿ ಬಿದ್ದಿದ್ದ ಅವನ ನಶ್ಯದ ಟೋಪಿ ಮತ್ತು ಮೆಟ್ಟನ್ನ ತೆಗೆದು ಅವನ ಕಡೆಗೆ ಬೀಸಿ ಒಗೆದು ಹೇಳಿದಳು ಸೀತೆ, "ಇಕಳ್ಳಿ ನಿಮ್ಮ ಟೊಪ್ಗೆ, ಮೆಟ್ಟು ತಗಂಡ್ಹೋಗಿ ಕತ್ಲೆ ಹೊತ್ತು ದಾರಿ ಉದ್ದಕ್ಕೂ ಕಲ್ಲು, ಮುಳ್ಳು ಅದೆ, ಯಾಚ್ರ ಇಟ್ಕಂಡ್ಹೋಗಿ. ಮತ್ತೆ ಬರೂದುಬ್ಯಾಡ ಇತ್ಲಾಗಿ ತಿಳೀತ ?"

ಕಾಲ ಬುಡಕ್ಕೆ ಬಿದ್ದ ಮೆಟ್ಟು. ಟೊಪ್ಪಿಗೆಯನ್ನು ಎತ್ತಿಕೊಂಡು ಕುಂಟುತ್ತ ಮರಗಳ ನೆರಳಿನ ಕತ್ತಲೆಯಲ್ಲಿ ಓಡಿದ ಅಪ್ಪು. ಸೀತೆ ಮುಂಚೆ ಕಡೆ ಬಾಗಿಲು ಹಾಕಿದಳು ಗೊರ್ರೆಂದು ಸದ್ದುಮಾಡಿತು. ಆ ದಪ್ಪ ಬಾಗಿಲು. ಅಲ್ಲಲ್ಲ ಉದುರಿ ಚಲ್ಲಾಪಿಲ್ಲಿಯಾಗಿದ್ದ ಈಚಲ ಗರಿಯನ್ನು ಬೇಗ ಬೇಗ ತೆಗೆದು ಜೋಡಿಸಿ ಗುಡಿಸಿ ಬಿಸಾಡಲು ತಿರುಗಿದರೆ ಉಯ್ಯಾಲೆಯ ಮೇಲೆ ಅಪ್ಪುವಿನ ನಿಕ್ಕಲ ಬ್ಯಾಟರಿ ಕಾಣಿಸಿತು. ಅವಳು ಎಂದೂ ಬ್ಯಾಟರಿ ಮುಟ್ಟಿರಲಿಲ್ಲ. ಮೊದಲ ಬಾರಿಗೆ ಹೆದರುತ್ತ ಎತ್ತಿ ಗುಂಡಿ ಒತ್ತಿದಳು. ಗೋಡೆಯ ಒಂದಂಕಣಕ್ಕೆ ಪ್ರಖರ ಬೆಳಕುಬಿದ್ದಿತು. ಇನ್ನು ಅಪ್ಪೂಗೆ ಅದನ್ನು ತಲುಪಿಸೋದು ಕಷ್ಟ. ಆಗಲೇ ನಂಜು ಬರೋ ಹೋತ್ತಾಯ್ತು. ಸಾಯಲಿ ! ಅಂದುಕೊಂಡು ಬ್ಯಾಟರಿ ಎತ್ತಿಕೊಂಡು ಹಿತ್ತಲ ಕಡೆಗೆ ಹೋದಳು. ಬ್ಯಾಟರಿ ಭಾರವಾಗಿದ್ದರಿಂದ ಇದು ನೀರಲ್ಲಿ ಮುಳುಗೀತು ಅನಿಸಿತು. ಹಿತ್ತಲ ಅಂಗಳದ ಭಾವಿಕಟ್ಟೆ ಹತ್ತಿರ ನಿಂತ. ಮತ್ತೆ ಗುಂಡಿ ಒತ್ತಿದಳು. ಪ್ರಖರ ಬೆಳಕು ! ಬೆಚ್ಚಿದಳು. ಓಣಿಯ ಪಕ್ಕದ ಮನೆಯೇ ಅಚ್ಚಣ್ಣ ಭಟ್ಟರದು. ಅವರ ಮನೆ ಬೆಳಕಿಂಡಿ ಈ ಕಡೆಗೇಇದೆ ಅವರ ಹೆಂಡತಿ ಕಂಡರೆ ? ಕೂಡಲೇ ಬಾವಿಯೊಳಗೆ ಜಾರಿಸಿದಳು. ಅದು ಅತ್ತ-ಇತ್ತಲಿನ ಕಲ್ಲುಗಳಿಗೆ ತಾಟು ಹೊಡೆಯುತ್ತ ಆಳವಾದ ಆ ಭಾವಿಯಲ್ಲಿ ಮುಳುಗಿತು. ಸೀತೆ ಹಿತ್ತಲ ಬಾಗಿಲು ಹಾಕಿ ಒಳ ಬರುವುದರಲ್ಲಿ ಮುಂಚೆ ಕಡೆ ಬಾಗಿಲಿನಲ್ಲಿ "ಸೀತಕ್ತೀ" ಎಂದು ಕೂಗುತ್ತ ಬಾಗಿಲು ಬಡಿಯುತ್ತಿದ್ದ ನಂಜು. ಸೀತೆ ಹೋಗಿ ಬಾಗಿಲು ತೆಗೆದಳು. ದೋಟಿ ಸುಬ್ಬಮನೆ ರಸ್ತೆವರೆಗೆ ಬಂದು ಬಿಟ್ಟು ಹೋಗಿದ್ದ. ನಂಜು ಒಳ ಬಂದಾಗ ಸೀತೆಯಂದಳು :

"ತುಸ ಬೆಳಕ್ಹಿದ್ದಾಗ್ಲೆ ಬರಬಾರ್ದಾಗಿತ್ತನ? ಈಪಾಟಿ ಕತ್ಲಾಗೆ ಒಬ್ನೇ ಒಂದ್ಯಾ?"

"ಇಲ್ಲ, ಅಪ್ಪ ಅಲ್ಲೀತಂಕ ಬಂದು ಬಿಟ್ಹೋದ. ನಿಮ್ಮನೆ ಕಡಿಂದ ಯಾರೋ ಬೆಳ್ಳಗೆ ಪಂಚೆ ಉಟ್ಕೋರು ಅತ್ತ ಕಡೆ ಹೋದ್ಹಾಂಗಾಣಸ್ತಪ್ಪ. ಯಾರ್ಯಾರಾ ಬಂದಿದ್ರ ಇತ್ತ?"

ಒಂಪುಗಳಿಗೆ ಸೀತೆಗೆ ತಬ್ಬಿಬ್ಬಾಯಿತು. ಮುಖ ಅತ್ತ ತಿರುಗಿಸಿ ಹೋಗುತ್ತ ಅಂದಳು :

"ನಮ್ಮನಿಗ್ಯಾರು ಬರ್ತ್ತಾರೆ ಈ ಸರವತ್ನಾಗೆ. ಬ್ಯಾರೆ ಯಾರೋ ಗಂಡಸ್ರಿದ್ವಾರು."

"ಕುಂಟ್ತಾ ಅರಳಿ ಮರದಕಡೀಗೆ ಹೋದ್ಹಂಗಾಣಸ್ತು. ತೀರ್ಥ ಕ್ಯೋರೋ ಏನೋ"

ಎಂದುಕೊಂಡು "ಘಣು ಮಲಗ್ಯಾತ?" ಎಂದ.

"ಆಗ್ಲೆ ಮಲಗ್ತು ಬಾ ಉಣ್ಣೀವಂತೆ" ಎಂದು ಅಡಿಗೆ ಮನೆಗೆ ಹೋಗಿ ಬಳ್ಳಿ ಹಾಕಿ ಬಡಿಸಿದಳು. ಬುಡ್ಡಿಯ ಬೆಳಕಿನಲ್ಲಿ ನಂಜು ಪರಿಷಂಚನೆ ಮಾಡು ವುದನ್ನು ನೋಡಿ ಅನುಮಾನವಿಲ್ಲವೆಂದ ದೃಢ ಮಾಡಿಕೊಂಡಳು ಮತ್ತೆ ಎರಡು ದಿನ ತಿಮ್ಮುವೇ ಮಲಗಲು ಬಂದಳು. ರಾಮುಕ್ಕ, ಕೊಮಾರಿ ಮನೆಗೆ ಬಂದಾಗ ರಾಮಕ್ಕ ಸಹಜವಾಗಿ ಅಂದಳು :

"ತೀರ್ಥಳ್ಳಿ ಅಪ್ಪು ಅದೆಲ್ಲೋ ಜಾರಿಬಿದ್ದು ಕಂಡಾಪಟ್ಟೆ ನೈಯಲ್ಲ ಜಜ್ಜ್ಗಂಡು ಕೆಂಡಾಮಂಡ ಜ್ವರ ಬಂದು ಬಿದ್ಗಂಡದಾನಂತೆ."

ಸೀತೆ ತನಗದು ಸಂಬಂಧವಿಲ್ಲವೆಂಬಂತೆ ಮಳೂರ ಸುದ್ದಿ ಕೇಳಿದಳಾ ದರೂ ಅಪ್ಪುವಿನ ಬಗೆಗೆ ಕನಿಕರವಾಯಿತು. ಮುಂದೆ ಒಂದೂವರೆ ತಿಂಗಳು ಅಪ್ಪು ಮನೆಯಿಂದ ಹೊರಗೆ ಬಂದಿರಲಿಲ್ಲ. ಕತ್ತಲಲ್ಲಿ ಜಾರಿ ಬಿದ್ದೆ ಎಂದು ಹೇಳಿಕೊಂಡಿದ್ದ. ಆಷಾಢದ ಮಳೆ ಜಡಿಹಿಡಿದು ಹೊಡೆದು ತುಂಗೆ ಹೊಳೆ ತುಂಬಿ ಹರಿದು ಪುತ್ತಿಗೆ ಮಠದ ಮೆಟ್ಟಿಲು ತಟ್ಟಿದಳು ತುಂಗೆ. ರಾಮ ಮಂಟಪ ಮುಚ್ಚಿ ಹೋಯ್ತು. ಅಂಬಿಗರಾದ ಬಂಟ, ಕಾಳ ಹರಿ ಗೋಲನ್ನು ಹಲಸಿನ ಮರಕ್ಕೆ ಕಟ್ಟಿ ಹುಟ್ಟನ್ನು ತಮ್ಮ ಹಟ್ಟಿಗೆ ಒಯ್ದಿಟ್ಟರು.

ತೀರ್ಥಹಳ್ಳಿ, ಕುರುವಳ್ಳಿ ಸಂಪರ್ಕ ಸಧ್ಯಕ್ಕೆ ಇರಲಿಲ್ಲ. ಇದು ಪ್ರತಿವರ್ಷ ಮಳೆಗಾಲದ ಕೆಲವು ದಿನಗಳ ಕಥೆ.

ಅನ್ನಪೂರ್ಣಮ್ಮನನ್ನು ಕರೆದೊಯ್ಯಲು ಯಮನೋ, ದೇವತೆಗಳೋ ಆಗಲೇ ಬಂದಿರಬೇಕು. ಆಕೆಗೆ ಮೇಲುಸಿರು ಪ್ರಾರಂಭವಾಗಿ ನಾಲ್ಕು ದಿನವಾಗಿತ್ತು. ಶೇಷ ಪಂಡಿತರು ಕೈ ಮುಗಿದು ಕೂತರು. "ಒಂದಪ ಅವರ ಪಾದ ಮುಟ್ಟಿ ಪ್ರಾಣ ಬಿಡ್ತನಿ. ಯಾರಾರ ಅವರನ್ನ ಕರಕಂಬನ್ನಿ" ಇದು ಅನ್ನಪೂರ್ಣಮ್ಮನ ದೀನತೆಯ ಅಂತಿಮ ಕೋರಿಕೆ. ಶ್ಯಾಮಯ್ಯ ತಂಗಿಯ ಮನೆಯಲ್ಲಿಂದು ಬೆಚ್ಚಗೆ ಸೂಳೆಯ ಮನೆಯಲ್ಲಿ ಮಲಗಿದ್ದಾರೆ. ಇಡೀ ಕುರುವಳ್ಳಿ ಹೋಗಿ ಆಕೆಯ ಅಂತಿಮ ದರ್ಶನ ಪಡೆದು ಬರುತ್ತಿತ್ತು. ಕಾಳ, ಬಂಟ ಹರಿಗೋಲು ಬಿಡುವುದಿಲ್ಲವೆಂದು ಖಂಡಿತ ಹೇಳಿದರು. ಜನ ಶ್ಯಾಮಯ್ಯನಿಗೆ ಹಿಡಿ ಶಾಪ ಹಾಕಿದರು. ಹೊಳೆ ರುದ್ರಭೀಕರವಾಗಿ ಭೋರ್ಗರೆದು ಹರಿಯುತ್ತಿದೆ. ಈಜು ಬರುವವರೂ ಹೊಳೆಗಿಳಿಯುವಂತಿರಲಿಲ್ಲ. ಬೇಸಗೆಯಲ್ಲಿ ರಮ್ಯಮನೋಹರವಾಗಿ ನಲಿಯುವ ಪ್ರಕೃತಿ ಈಗ ಕೋಪೋದ್ರಿಕ್ತವಾಗಿ ಆರ್ಭಟಿಸುತ್ತಿದೆ. ಸೀತೆ ಅನ್ನಪೂರ್ಣಮ್ಮನ ಹಣೆಗೆ ಕುಂಕುಮವಿಟ್ಟಾಗ ಆಕೆ ತೊದಲಿದರು :

"ನಾ ಅವರನ್ನು ನೋಡ್ದೇನೆ ಸಾಯ್ತನಿ ಕಣೆ ಸೀತೆ"

ಮೊದಲ ಬಾರಿಗೆ ಅವಳ ಕಣ್ಣು ತುಂಬಿತು. ತಟ್ಟನೆ ಹೊರಗೆ ನಡೆದಳು. ಮತ್ತೆ ಕಾಲು ಗಂಟೆಯಲ್ಲಿ ಯಾರೋ ಬಂದು ಕೂಗಿದರು :

"ಅಯ್ಯಯ್ಯೋ ! ಹರಿಗೋಲು ಬಿಚ್ಕೊಂಡು ಸೀತಮ್ಮ ಒಬ್ರೇ ಮಳೇಲಿ ನೆನೀತಾ ಹರಿಗೋಲು ಹಾಕ್ತಾ ಅದಾರೆ ತೀರ್ಥಳ್ಳಿ ಕಡೆಗೆ"

ಒಂದೇ ಬಾರಿಗೆ ಮನೆಯೊಳಗಿನ ಜನಪ್ರವಾಹ ಶ್ಯಾಮಯ್ಯನವರ ಮುಂಚೆ ಕಡೆ ಜಗುಲಿಗೆ ಬಂದಿತು. ಮೋಡ ಕವಿದಿದೆ ! ಮಳೆ ಸುರಿಯುತ್ತಿದೆ. ಪುಟ್ಟ ಹರಿಗೋಲಿನಲ್ಲಿ ಸೀತೆಯೊಬ್ಬಳೇ ಎರಡು ಹರಿವಾಣಗಳಲ್ಲಿ ನೀರನ್ನು ಹಿಂದೆ ತೋಡುತ್ತ ಸಾಗಿದ್ದಾಳೆ. ಹೆಬ್ಬಲೆಗಳು ಏರಿ ಬಂದು ದೋಣಿಯನ್ನು ಸೊಟ್ಟಪಟ್ಟಾಗಿ ತಳ್ಳಿ ತೀರ್ಥಹಳ್ಳಿಯ ಮುಸಾಫಿರ ಖಾನೆಯ ದಿಕ್ಕಿಗೆ ಸೆಳೆದೊಯ್ದಿತು ಜನ 'ಹೋ ಹೋ ಇನ್ನೇನ್ಗತಿ' ಎಂದು ಕೂಗು

ತ್ತಿರುವಾಗಲೇ ಸೀತೆಯ ಹರಿಗೋಲು ಅನಂತಯ್ಯನ ಅಗ್ರಹಾರದ ಕಡೆಯ ಹೊಳೆಯ ಸುಳಿಯಲ್ಲಿ ಗಿರಗಿರನೆ ತಿರುಗಿ ಕಣ್ಣಿಗೆ ಕಾಣದಾಯಿತು. ಕುರುವಳ್ಳಿ ಜನವೆಲ್ಲ ಒಟ್ಟಿಗೆ ಬೊಬ್ಬೆ ಹೊಡೆದರು :

"ಅಯ್ಯಯ್ಯೋ ತಗ್ಗಿನಮನೆ ಸೀತಮ್ಮ ಹೊಳೇಲಿ ಮುಳುಗಿ ಹೋದ್ರೋ" —ಎಂದು.

## ೧೯

ಮಗುವನ್ನು ರತ್ನಿಯ ಕೈಗೆ ಕೊಟ್ಟು ಎರಡು ಹಿತ್ತಾಳೆ ಹರಿವಾಣ ಹಿಡಿದು ಹರಿಗೋಲೇರಿದ ಸೀತೆ ಹುಚ್ಚು ಹೊಳೆಯ ನಡುವೆ ನೀರನ್ನು ತಳ್ಳುತ್ತಾ ಹುಚ್ಚಿಯಂತೇ ಸಾಗಿದ್ದಳು. ಹೆಚ್ಚಿನ ವಿಮರ್ಶಾತ್ಮಕ ಬುದ್ಧಿ ಇಲ್ಲದಿದ್ದರೂ ಸ್ವಭಾವತಃ ದಿಟ್ಟೆ ಹಾಗೂ ವಾಸ್ತವಜೀವಿಯಾಗಿದ್ದ ಸೀತೆಯ ಮನಸ್ಸು ಈಗ ಬಂಡೆದ್ದು ಬುಸುಗುಡುತ್ತಿತ್ತು. 'ಹೆಂಡ್ತಿ ಸಾಯ್ತಾ ಬಿದ್ದಿದ್ರೂ ಇವನೆಂಥ ಪತಿ ? ಅಂಥವನ ಪಾದಮುಟ್ಟಿ ಪ್ರಾಣ ಬಿಡುವ ಹುಚ್ಚಿನ ಇದೆಂಥ ವ್ರತ ಈಕೆಯದು ! ನಾನಾಗಿದ್ರೆ ಹಾಳಾಗ್ಲಿ ಅಂತಿದ್ದೆ -ಎಂದು ಮನಸ್ಸು ಕೂಗಾಡಿದರೂ ಮರುಗಳಿಗೆ ತಮಗೆಲ್ಲ ಜೊಗಸೆ ಬೊಗಸೆ ಅರಿಸಿನ-ಕುಂಕುಮ, ಹೂವು-ತಾಂಬೂಲ, ಸೀರೆ-ಕಣಗಳನ್ನು ನೀಡುತ್ತಿದ್ದ ಅನ್ನಪೂರ್ಣಮ್ಮನ ಸೊಣಕಲು ಕೈ ಕಣ್ಣ ಮುಂದೆ ಬಂದಿತು. ಆ ಕೈ ಈ ಹೊಲಸು ಪಾದ ಮುಟ್ಟಿಯೇ ಪ್ರಾಣಬಿಡಬೇಕು.

ತನ್ನ ಸಧ್ಯದ ಪರಿಸ್ಥಿತಿಯನ್ನು ಮರೆತು ಆವೇಶದಿಂದ ದೆವ್ವವೇರಿದವಳಂತೆ ನೀರು ತೋಡಿದಳು. ಹೇಗೋ ದೊಡ್ಡ ಸುಳಿಯಿಂದ ಪಾರಾಗಿ ದಡದ ಹತ್ತಿರ ಬಂದಿತ್ತು ಹರಿಗೋಲು. ಹರಿವಾಣಗಳನ್ನು ದೋಣಿಯೊಳಗೇ ಹಾಕಿ ದಂಡೆ ಬದಿಯ ಒಂದು ಕಲ್ಲಿಗೆ ಹರಿಗೋಲ ಹಗ್ಗವನ್ನು ಬಿಗಿದು ತಲೆ ಎತ್ತಿದಳು. ಎಡಗಡೆ ಮುಸಾಫೀರ ಖಾನೆ, ಬಲಗಡೆಗೆ ಅನಂತಯ್ಯನ ಅಗ್ರಹಾರ,

ನಡುವೆ ಕೆಸರು ರಸ್ತೆ. ಇಡೀ ಅಗ್ರಹಾರ ನಿರ್ಜನ. ಕುಂಭದ್ರೋಣ ಮಳೆ. ಸಂಪೂರ್ಣ ತೊಯ್ದು ತೊಪ್ಪೆಯಾದ ತನ್ನ ಮೈಯ ಕಡೆಗೆ ಅವಳ ಗಮನ ವಿರಲಿಲ್ಲ. ಅಗ್ರಹಾರದಿಂದ ಹರಿದು ಬರುವ ರಸ್ತೆಯ ಕೆಂಪು ನೀರೂ ಹೊಳೆಗೇ ಸೇರುತ್ತಿದೆ ಈಗ ಅವಳು ಶಾಂಭವಿಯ ಮನೆ ನೋಡಬೇಕು. ಒಂದು ದಿನ ದೂರದಿಂದ ಯಾರೋ ತೋರಿಸಿದ್ದರು. ಸಮಯ ತಿಳಿಯುವಂತಿಲ್ಲ. ಸಂಪೂರ್ಣ ಮೋಡಮುಸುಕಿ ಅಂಧಕಾರ ಕವಿಯುತ್ತ ಬಂದಿದೆ. ಒದ್ದೆಯಾಗಿ ಮೈಗೆ ಅಂಟಿಕೊಂಡ ಸೀರೆಯಿಂದಾಗಿ ಬೇಗ ಹೆಜ್ಜೆ ಇಡಲೂ ಆಗುತ್ತಿಲ್ಲ. ಸೀರೆ ಮೇಲೆತ್ತಿ ಮುದುರಿಸಿದಳು. ಹೇಗೋ ಕಷ್ಟದಿಂದ ನಾಲ್ಕು ಮಾರು ನಡೆಯುವುದರಲ್ಲಿ ಶಾಂಭವಿಯ ಮನೆ ಕಾಣಿಸಿತು. ಮಂಗಳೂರು ಹೆಂಚಿನ ಸಂದಿಯಿಂದ ಚಿಪ್ಪಗಿನ ಬೆಳಕು ಕಾಣಿಸಿತು. ಮುಂಚೆ ಕಡೆ ಬಾಗಿಲು, ಕಿಟಕಿ ಎಲ್ಲಾ ಮುಚ್ಚಿದೆ. ಅವಳಿಗೆ ನಾಟಕದ ಕಂಪೆನಿಯಲ್ಲಿ ನೋಡಿದ ಗ್ಯಾಸ್ ಲೈಟಿನ ನೆನಪಾಯಿತು. 'ಈ ಲೌಡಿ ಮನೇಲಿ ಈ ಪಾಟಿ ಬೆಳಕಿನ ಗ್ಯಾಸ್ ಲೈಟ್ ಬೇರೆ ಅದೆಯಾ ?' —ಎಂದುಕೊಂಡು ಬೇಗಬೇಗ ಜಗುಲಿ ಏರಿದಳು. ಆ ಗಳಿಗೆಗೆ ಒಂದು ವಿಧವಾಯಿತು. ಹಿಂದೆ ಮುಂದೆ ಯೋಚಿಸದೆ ತಾನು ಈ ಸೂಳೆ ಮನೆಗೆ ಬಂದದ್ದು ಸರಿಯೇ ? ಒಂದೆರಡು ಬಾರಿ ರಾಮೇಶ್ವರ ದೇವಸ್ಥಾನದಲ್ಲಿ ಆ ತಾಯಿ ಮಗಳನ್ನು ಕಂಡದ್ದು. ಹೆಚ್ಚಿನ ಪರಿಚಯವಂತೂ ಇಲ್ಲ. ಅವಳನ್ನ ಕಟ್ಟಿಕೊಂಡು ತನಗೇನಾಗಬೇಕಾಗಿದೆ ? ಶ್ಯಾಮಯ್ಯನನ್ನು ಕರೆದುಕೊಂಡು ಹೋಗುವುದು ನನ್ನ ಕೆಲಸ. ಮತ್ತೆ ಯೋಚಿಸಲಿಲ್ಲ. ಜೋರಾಗಿ ಬಾಗಿಲು ತಟ್ಟಿದಳು.

"ಯಾರದು ?" ಎಂಬ ಗಡಸು ದನಿ ಕೇಳಿಬಂತು.

"ತುಸ ಬಾಗಿಲು ತೆಗೀರಿ ಹೇಳ್ತಿನಿ" ಅಂದಳು ಜೋರಾಗಿ.

"ಈಪಾಟಿ ಮಳೇಲಿ ಯಾರಪ್ಪಾ ಅದು ಹೆಂಗಸ್ರ ದನಿ ?"

ಹೇಳುತ್ತಲೇ ಭಾರವಾದ ಬಾಗಿಲು ತೆಗೆದವಳು ಪುಟ್ಟತಾಯಿ ಹೆಸರ್ರು ಪುಟ್ಟದಾದರೂ ಆಕೆ ಆನೆ ಮರಿಯೇ. ಎರಡು ದಪ್ಪ ಕಂಬಗಳ ಹಜಾರದಲ್ಲಿ ಉಯ್ಯಾಲೆ ಮಣೆ, ತೂಗುದೀಪ ತೂಗುತ್ತಿತ್ತು. ಪುಟ್ಟತಾಯಿ ಒಂದು ಗಳಿಗೆ ಮರವಟ್ಟು ನಿಂತಳು.

ಬೆಲ್ಲದಲ್ಲಿ ಕಲಸಿಟ್ಟುಕೊಂಡಿದ್ದ ಕಂಚಿ ಕುಂಕುಮ ಪೂರಾ ಕರಗಿ

ಹೋಗಿದೆ. ಮೈ ಪೂರಾ ಹೊಳೆಯಲ್ಲಿ ಮುಳುಗಿ ಎದ್ದು ಬಂದಂತಿದೆ. ಬೆಳ್ಳಗಿನ ದುಂಡು ಮೈಗೆ ಸೀರೆ ಮೆತ್ತಿಕೊಂಡಿದೆ. ದಪ್ಪಗಿನ ಕಾಲು ಬಳೆ, ಬೆಳ್ಳಿ ಪಟ್ಟಿ, ಕೆಂಪು ಸಾಣಿ ಬಳೆ, ತಲೆಯಲ್ಲಿ ಮುಡಿದ ಮಲ್ಲಿಗೆ ದಂಡೆ, ಕನ್ನೆಯಲ್ಲಿ ಹಚ್ಚಗೆ ಅರಿಸಿನ ! ಹಾಲು ತುಂಬಿದ ಎದೆ, ಲಕ್ಷಣವಾಗಿ ತುಂಬಿಕೊಂಡಿದ್ದ ಹಿಂಬದಿಯ ದಿಂಡು ! ಒಂದು ಗಳಿಗೆ ಪುಟ್ಟತಾಯಿಗೆ ಬಾಯಿ ನೀರೂರಿತು. ತನ್ನ ಮಗಳು ಹೀಗಿದ್ದಿದ್ದರೆ ಬಾರಿ ಮಿಕವನ್ನೇ ಹಿಡಿಯಬಹುದಿತ್ತು. ಮರುಗಳಿಗೆ ಅವಳಿಗೆ ಗುರುತು ಹತ್ತಿತು.

"ಅ ಥಿ ! ನೀವು ರಾಮಕ್ಕನ ಸೊಸೆ ತಗ್ಗಿನ ಮನೆ ಸೀತಮ್ಮ ಅಲ್ಲವೆ ? ಈ ಪಾಟಿ ಮಳೇಲಿ ಇತ್ತ ಹ್ಯಾಂಗೆ ಬಂದ್ರಪ್ಪ. ಮದ್ಲು ಒಳಗ್ಬನ್ನಿ ಟುವಾಲು ಕೊಡ್ತನಿ ಮದ್ಲು ತಲೆ ಒರಸ್ಕಳ್ಳಿ. ಬ್ಯಾರೆ ಸೀರೆ...."

ಅವಳ ಮಾತು ಪೂರ್ತಿಯಾಗಲಿಲ್ಲ. ಸೀತೆ ಕೇಳಿದಳು.

"ಶ್ಯಾಮಯ್ಯ ಆದಾರ ?"

ಪುಟ್ಟತಾಯಿಗೆ ಏನೂ ಅರ್ಥವಾಗಲಿಲ್ಲ. "ಅದಾರೆ ಕರೀತಸಿ ಇರಿ" ಅಂದವಳೆ ಬಾಗಿಲು ಮುಂದೆ ಮಾಡಿದ ಕೋಣೆಯ ಹತ್ತಿರ ನಿಂತು ಕೂಗಿದಳು:

"ಶಾಂಭವಿ, ತಗ್ಗಿನ ಮನೆ ಸೀತಮ್ಮ ಬಂದದಾರೆ. ಶ್ಯಾಮಯ್ಯನ್ನ ಕರೀತದಾರೇಂತ ಹೇಳೆ"

ಸೀತೆ ನಡುಗುತ್ತ ನಿಂತೇ ಸುತ್ತಲೂ ನೋಡಿದಳು. ಒಬ್ಬ ಸೂಳೆಯ ಮನೆಯನ್ನು ಮೊದಲ ಬಾರಿಗೆ ನೋಡುತ್ತಿದ್ದಾಳೆ. ಚಿತ್ರ ಕಟ್ಟಿನ ನಾಲ್ಕು ಬಾಗಿಲುಗಳಿಗೂ ಗಾಜಿನ ಕೋವೆ – ರಸದ ಗುಂಡುಗಳ ತೋರಣ, ಸುತ್ತಲೂ ಒಳ್ಳೊಳ್ಳೆಯ ಪಟಗಳು ! ಹಸಿರು, ಕೆಂಪು, ನೀಲಿಯ ದಪ್ಪ ದಪ್ಪ ರಸದ ಗುಳುಪುಗಳನ್ನು ಅಲ್ಲಲ್ಲಿ ತೂಗ ಹಾಕಿದ್ದಾರೆ. ಗಂಧದ ಕಡ್ಡಿಯ ಪರಿಮಳ ಮನೆಯೆಲ್ಲ ತುಂಬಿದೆ. ಅಲ್ಲಲ್ಲಿ ಕರೀಮರದ ಸುಖಾಸನಗಳು. ಒಂದು ಒದಿಗೆ ಉಯ್ಯಾಲೆ, ಉಪ್ಪರಿಗೆಗೆ ಹೋಗುವ ಮರದ ಮೆಟ್ಟಿಲುಗಳು.

ಮೂರು ಬಗೆಯ ರಾಗ ಪಾಡಿ ಕೋಣೆಯ ಬಾಗಿಲು ತೆರೆಯಿತು. ಕೆಂಪು ಶಾಲು ಹೊದ್ದ ಶ್ಯಾಮಯ್ಯ ಶಾಂಭವಿ ಒಟ್ಟಿಗೆ ಗಾಬರಿಯಿಂದ ಹೊರ ಬಂದರು ಸೀತೆ ಶಾಂಭವಿಯ ಕಡೆ ನೋಡಿದಳು. ಹೆಚ್ಚು ರೂಪವತಿಯಲ್ಲ ದಿದ್ದರೂ ಮೈತುಂಬ ನಗ, ಕಂಚಿ ಸೀರೆ, ಮುಡಿ ತುಂಬಾ ಹೂವು, ದಪ್ಪ

ಸೊಂಟಕ್ಕೆ ಚಿನ್ನದ ಪಟ್ಟಿ ಹಾಕಿಕೊಂಡು ಸುಂದರಿಯಾಗಿ ಕಾಣುತ್ತಿದ್ದಳು. ವೇಶ್ಯೆಯರಾದರೂ ತಾಯಿ ಮಗಳದು ಬಹಳ ಒಳ್ಳೆಯ ಗುಣ – ಎಂದು ಹಲವರು ಹೇಳಿದ್ದನ್ನು ಕೇಳಿದ್ದಳು. ಶ್ಯಾಮಯ್ಯ ಅವಸರದಲ್ಲಿ ಕೇಳಿದರು :

"ಯಾಕಮ್ಮ ಸೀತೆ ಈಪಾಟಿ ಮಳೇಲಿ ಬಂದಿದ್ದೀ. ಹ್ವಳೆ ಕಟ್ಟಿದೆ. ನೀ ಇಲ್ಲೀತಂಕ ಒಂದದ್ಸಾದರೂ ಹೇಗೆ? ಯಂತದು ರಾಮಕ್ಕ ನಿನ್ನ ಹೊಡದು ಮನೀಂದ ಅಟ್ಟಿದ್ರಾ? ಸಣ್ಣ ಮಗಿಂತಾಯಿ ಈಪಾಟಿ ನೆಂದಿದ್ದೀಯಲ್ಲ."

ಶ್ಯಾಮಯ್ಯ ಗುಣದಲ್ಲಿ ಒಳ್ಳೆಯವರೆಂದು ಅವಳಿಗೆ ಗೊತ್ತು. ಆದರೆ ಈಗ ಈ ಮುದುಕ ತನ್ನ ತಪ್ಪನ್ನು ಜ್ಞಾಪಿಸಿಕೊಳ್ಳದೆ ನಿರಪರಾಧಿಯಾದ ತನ್ನ ಅತ್ತೆಯನ್ನು ಅನ್ನುತ್ತಿದ್ದಾರಲ್ಲ? ನನ್ನ ಅತ್ತೆಯ ಗುಣ ಯಾರಿಗೆ ಗೊತ್ತಿಲ್ಲ? ಬಾಯಿ ಜೋರು ನಿಜ. ಮನಸ್ಸು ಅಷ್ಟೇ ಒಳ್ಳೇದು. ಧಾರಾಳದ ಕೈ. ಅಚ್ಚುಕಟ್ಟಿನ ಕೆಲಸ. ಯಾರಿಗೂ ಹೆದರದ ದಿಟ್ಟತನ. ಒಂದೊಂದು ಸಾರಿ ಅತ್ತೆ ತನಗೆ ಒಡೆದದ್ದುಂಟು. ದಿನಾ ಬೈಯೂವುದೂ ನಿಜ. ಆಕೆ ಬೈಯದೇ ಬಿಟ್ಟದ್ದು ಯಾರನ್ನ? ಅವರ ತಪ್ಪನ್ನ ಅವರ ಮುಖಕ್ಕೆ ತಟ್ಟಿ ಕಳಿಸುವ ತನ್ನ ಅತ್ತೆಯ ಗುಣ ಸೀತೆಗೆ ಬಹಳ ಮೆಚ್ಚಿಗೆ. ಏನಂದರೂ ಆಕೆಗೆ ಮಕ್ಕಳು ಸೊಸೆಯರೆಂದರೆ ಬಲು ಅಚ್ಚು. ಮನೆಯ ಮಾತು ಹೊರಗೆ ಹಾಕಿದಾಕೆಯಲ್ಲ. ಈಗ ಸೀತೆಗೆ ಸಿಟ್ಟು ಬಂದಿತು. ಅಲ್ಲಿ ಹೆಂಡತಿ ಸಾಯ್ತಾ ಬಿದ್ದಿರುವಾಗ ತಾನಿಲ್ಲಿ ಸೂಳೆ ಮನೆಯಲ್ಲಿ ಲೋಲಾಪ್ತಿ ಪಡುತ್ತಿದ್ದಾರೆ. ಈ ಸ್ಥಿತಿಯಲ್ಲಿ ಕರೆಯಲು ಬಂದರೆ ಈಪ ಹೀಗೆ ಕೇಳುವುದೇ? ನೂರಾರು ಬೈಗಳು ಅವಳ ಎದೆಯಿಂದ ಒದ್ದು ಬಂದು ಬಾಯಿ ತುಂಬಿ ಬಕಬಕ ಕಾರುವಂತಾಯಿತು. ಮರುಗಳಿಗೆ ಅನ್ನಪೂರ್ಣಮ್ಮನ ಕ್ಷಯದ ಮುಖ ಕಣ್ಣ ಮುಂದೆ ಬಂದು ನಾಲಿಗೆಗೆ ಕಡಿವಾಣ ಹಾಕಿ ನಾಲ್ಕೇ ಮಾತು ಅಂದಳು—

"ಅನ್ನಪೂರ್ಣಮ್ಮಗೆ ಮೇಲುಸ್ರು ಬರ್ತಾ ಅದೆ. ಹೆಚ್ಚ್ಯಾಂದ್ರೆ ಇನ್ನು ಒಂದೆರಡು ತಾಸು ಬದುಕ್ತಾರು ನಿಮ್ಮನ್ನ ನೋಡ್ಬೇಕೂಂತ ಹಂಬಲಸ್ತಾರೆ. ಶೇಷ ಪಂಡಿತ್ರೂ ಅಲ್ಲೇ ಅದಾರೆ ಬನ್ನಿ ಬ್ಯಾಗ ಹೋಗಾಣ."

ಶಾಂಭವಿ ಕಣ್ಣು ಬಾಯಿ ಅಗಲಿಸಿ ಸೀತೆಯನ್ನು ನೋಡುತ್ತಿದ್ದಳು.

"ಹೊಳೆ ತೀರ್ಥಳ್ಳಿ, ಕುರುವಳ್ಳಿ ನುಂಗ್ತಾ ಅದೆ. ಹೋಗೂದಾರ ಹ್ಯಾಂಗೆ ? ಕಲ್ಸಾರ, ರಾಮ್ಮಂಟ್ಪ ಯಲ್ಲ ಮುಳುಗ್ಯಾತಲ್ಲ"

ಶ್ಯಾಮರಾಯರು ಕಣ್ಣು ಕಣ್ಣು ಬಿಟ್ಟರು.

"ನಾ ಹ್ಯಾಂಗೆ ಬಂದ್ನೋ ಹಾಂಗೇ ನಿಮ್ಮನ್ನ ಕರಕೊಂಡು ಹೋಗ್ತನಿ. ಅನ್ನಪೂರ್ಣಮ್ಮ ಹೋದ ಮ್ಯಾಲೆ ಇಲ್ಲೇ ಭದ್ರಾಗಿ ಇದ್ರಾತು."

ಈ ಮಾತು ಶ್ಯಾಮಯ್ಯನವರ ಮರ್ಮಕ್ಕೆ ತಗುಲಿತು. ಶಾಂಭವಿಗೂ ದುಃಖ ತಂದಿತ್ತು. ಮತ್ತೆ ಅವರು ಬದಲಾಡಲಿಲ್ಲ. ಮಲಗುವ ಕೋಣೆಗೆ ಹೋಗಿ ಛತ್ರಿ ಹಿಡಿದು ಬಂದು, "ನಡೀ ಹೋಗೋಣಂತೆ" ಎಂದರು. ತೆರೆದ ಬಾಗಿಲಿನಿಂದ ಕೋಣೆಯ ಒಳಗಿನ ಸೊಳ್ಳೇತೆರೆ ಪಲ್ಲಂಗ, ಮೇಜದ ಮೇಲಿನ ಪೆಟ್ರಮ್ಯಾಕ್ಸ್ ದೀಪ, ಹಾಸಿದ ಪಗಡೆ ಹಾಸು ಎಲ್ಲ ಕಂಡಿತು ಸೀತೆಗೆ. ಈಗ ಆ ವೈಭವ ನೋಡುತ್ತಾ ನಿಲ್ಲಲು ಸೀತೆಗೆ ಸಮಯ ಮನಸ್ಸು ಎರಡೂ ಇರಲಿಲ್ಲ. ದಿಕ್ಕು ತೋರದ ಶಾಂಭವಿ :

"ನಾನೂ ಬರ್ತನಿ ನಿಮ್ಮ ಜೊತೀಗೆ" ಅಂದಳು.

ಶ್ಯಾಮಯ್ಯ ಗದರಿದರು :

"ನಿಂಗೇನ್ಕೆಲ್ಸ ಅಲ್ಲಿ ? ತೆಪ್ಗಿರಬಾರ್ದಾ. ನಾವು ಹೋಗೂದೇ ಭದ್ರಿಲ್ಲ. ನೀ ಹ್ಯಾಂಗೇ ಬರ್ತಿ ?"

ಸೀತೆಗೆ ಶಾಂಭವಿಯನ್ನು ಬಹುವಚನದಲ್ಲಿ ಮಾತಾಡಿಸಲು ಇಷ್ಟವಿಲ್ಲ. ಆದರೆ ವಯಸ್ಸಿನಲ್ಲಿ ಇಪ್ಪತ್ತು ವರ್ಷಕ್ಕೂ ದೊಡ್ಡವಳಾಕೆ. ಏನೂ ತೋರದೆ ಅಂದಳು—

"ಬರೂ ಧೈರ್ಯ ಇದ್ರೆ ಯಾರು ಬೇಕಾರ ಬರ್ಲಿ ಬಿಡಿ ಕಡೆಗಾಲ್ದಾಗಾರಾ ಅನ್ನಪೂರ್ಣಮ್ಮನ್ನ ನೋಡಿ ಬರ್ಲಿ."

ಶಾಂಭವಿ ಹೊರಟು ನಿಂತಳು. ಪುಟ್ಟತಾಯಿಗೆ ಅನುಸಂಕಟ. ಎಳೆ ಮಗುವಿನ ತಾಯಿ ಈ ಹುಚ್ಚು ಹೊಳೆ ದಾಟಿ ಬಂದಿದ್ದಾಳೆ. ಹೇಗೆ ಬಂದಳೋ ಹುಡುಗಿ. ಈಗ ತನ್ನ ಮಗಳು ಹೊರಟಿದಾಳೆ. ಬೇಡ ಅನ್ನುವಂತಿಲ್ಲ. ಆದರೂ ಪರ್ಯಾಯವಾಗಿ ಅಂದಳು :

"ಪೂರ್ಜನ ಯಾಕೆ ಹೋಗ್ಬೇಕೆ. ಅವರು ಹೋಗಿ ಬರ್ಲಿ ಬಿಡು. ಮತ್ತೆ ನೀ ಹಿಂದಕ್ಕೆ ಬರೂದಾರಾ ಹೆಂಗೆ ?"

ಶ್ಯಾಮಯ್ಯ ಮಾತಾಡದೆ ಛತ್ರಿ ಬಿಚ್ಚಿದರು. ಕೆರ ಮೆಟ್ಟಿದರು ಸೀತೆಯಂದಳು :

"ಈ ಗಾಳೀಗೆ ಈ ಬಟ್ಟೆಕೊಡೆ ಹಾರಿಹೋಗತ್ತೆ. ಮೆಟ್ಟು ಹಾಕಿ ಕೆಸರಾಗೆ ನಡೆಯೂಕೂ ಆಗೂದಿಲ್ಲ. ಅದ್ನ ಬಿಟ್ರೆ ವಾಸಿ."

ಎರಡನ್ನೂ ಮೂಲೇಗೆ ಬಿಟ್ಟು ಶಾಲು ಮಾತ್ರಾ ಹೊದ್ದು ಹೊರದಾಟಿದರು. ಈಗ ಪುಟ್ಟತಾಯಿ ಕುಂಕುಮದ ಭರಣಿ ತಂದು ಸೀತೆಯ ಮುಂದೆ ಹಿಡಿದು :

"ಸೀತಮ್ಮ ಯಂತ ಹೊತ್ನಾಗೆ ಬಂದದೀರಿ ನೀವು. ಒಂದು ತಾಂಬೂಲ ಕೊಡೂಕೂ ಪುರಸತ್ತಿಲ್ಲ" ಅಂದಳು.

"ಮತ್ತೊಂದಪ ಬರ್ತಾನಂತೆ ತಾಂಬೂಲಕ್ಕೆ" ಎನ್ನುತ್ತಾ ಒಂದು ಚಿಟಿಕೆ ಕುಂಕುಮ ತೆಗೆದು ನಡುಹಣೆಗೆ ಮೆತ್ತಿಕೊಂಡು ಹೊಸ್ತಿಲು ದಾಟಿದಳು. ಶಾಂಭವಿಯೂ ಮಾತಾಡದೆ ಅವರನ್ನು ಹಿಂಬಾಲಿಸಿದಳು. ಶಾಂಭವಿಯ ಮನೆಯ ಗೋಡೆ ಗಡಿಯಾರ ಐದು ಗಂಟೆ ಹೊಡೆಯಿತು. ಮಬ್ಬು ಕತ್ತಲೆಯಲ್ಲಿ ಕೊಚ್ಚೆ ನೀರು ತುಳಿಯುತ್ತ ಮೂವರೂ ಹೊಳೆ ದಂಡೆಗೆ ಒಂದು ಹರಿಗೋಲೇರಿದರು. ಸೀತೆ ಮಾತಾಡದೆ ಹರಿವಾಣದಿಂದ ನೀರು ಸೆಳೆದಳು. ಆಗ ತಿಳಿಯಿತು ಅವಳ ಸಾಹಸ ಶ್ಯಾಮಯ್ಯನವರಿಗೆ. ಆದರೆ ಎದೆ ನಡುಗಿಸುವಂಥ ದೃಶ್ಯ. ತಾವೂ ಒಂದು ಹರಿವಾಣ ಹಿಡಿದು ನೀರು ತಳ್ಳಿದರು ಸೆಳೆಯ ಸುಳಿವು ಇಲ್ಲದ ಕಡೆ ಸುತ್ತು ಸುತ್ತಾಗಿ ಹರಿಗೋಲು ಹಾಯಿಸಿದಳು ಸೀತೆ. ಅಷ್ಟರಲ್ಲಿ ಎದುರು ದಂಡೆಯಿಂದ ಅಲ್ಲಿನ ಜನ ಸೀತೆಯ ಹೆಣವನ್ನು ಹುಡುಕಲು ಬಂಟ, ಕಾಳರನ್ನು ಬಲವಂತವಾಗಿ ಅಟ್ಟಿದ್ದರು. ಅವರು ಬೇಗ ಬೇಗ ಹುಟ್ಟು ಹಾಕುತ್ತಾ ಇತ್ತ ಬರುತ್ತಿದ್ದವರು ಮಾಸಲುಗತ್ತಲಿನಲ್ಲಿ ಇವರ ಹರಿಗೋಲು ಕಂಡವರೇ ಜೋರಾಗಿ ಕೂಗೇ ಹಾಕಿದರು :

"ಯಾರದು ದೋಣೀಲಿ ಮಾತಾಡಿ."

ಹೊಳೆಯ ಶಬ್ದದಲ್ಲಿ ಅದು ಸರಿಯಾಗಿ ಇವರಿಗೆ ಕೇಳಲಿಲ್ಲವಾದರೂ ಶ್ಯಾಮಯ್ಯ ಉತ್ತರ ಕೊಟ್ಟರು :

"ನಾನು ಕಣ್ರೋ ಶ್ಯಾಮಯ್ಯ. ಹಿಂದಕ್ಕೆ ನಡೀರಿ."

ದೋಣಿಯಲ್ಲಿ ಮೂರು ತಲೆಗಳನ್ನು ಕಂಡು ಅಂಬಿಗರಿಗೆ ಏನೂ ಅರ್ಥ

ವಾಗಲಿಲ್ಲ. ಅದು ತಮ್ಮದೇ ಹರಿಗೋಲು ! ಸೀತಮ್ಮ ಅದನ್ನ ನಡೆಸಿದ್ದು ಹೇಗೆ ? ಇವರು ಬಂದದ್ದು ಹೇಗೆ ?

ಮತ್ತೆ ಅರ್ಧ ಗಂಟೆಯಲ್ಲಿ ಅಂದರೆ ಎಲ್ಲರ ಮನೆಯಲ್ಲಿ ದೀಪ ಹಚ್ಚುವ ವೇಳೆಗೆ ಇವರು ಐದು ಜನ ಶ್ಯಾಮಯ್ಯನ ಮನೆಯನ್ನು ಮುಟ್ಟಿದರು. ಮನೆ ತುಂಬ ಜನ. ನಡೆದ ಸಂಗತಿಯನ್ನು ಸಂಕ್ಷಿಪ್ತವಾಗಿ ಶ್ಯಾಮಯ್ಯ ತಿಳಿಸಿದಾಗ, ಅನ್ನಪೂರ್ಣಮ್ಮ ಮಲಗಿದಲ್ಲಿಂದಲೇ ಸೀತೆಗೆ ಕೈ ಮುಗಿದರು, ಗಂಡನ ಕಾಲು ಮುಟ್ಟಿ ನಮಸ್ಕರಿಸಿದ ಅನ್ನಪೂರ್ಣಮ್ಮ ಶಾಂಭವಿಯನ್ನು ಕಂಡು ಮೆದುವಾಗಿ ನಕ್ಕು ತೊದಲಿದರು :

"ನಾ ಹೋಗ್ತನಿ ಕಣೆ ಶಾಂಭವಿ. ಇನ್ಮೇಲೆ ಇವರನ್ನ ಸಮನಾಗಿ ನೋಡ್ಕಾ. ಎಲ್ಹೋದ್ಲೆ ಸೀತೆ. ಅವಳು ಸೀತೆ ಅಲ್ಲ ಕಣೆ ಕೊಲ್ಲೂರು ಮೂಕಾಂಬ. ಏನಂತ ಹರಸ್ಲಿ ಆ ಮಗೀಗೆ...."

ಉಸಿರು ಕಟ್ಟಿ ಬಂದು ಕೆಮ್ಮು ಒಂದಿತು. ಶೇಷ ಪಂಡಿತರು ತಡೆದರು :

"ಮಾತಾಡಬ್ಯಾಡಿ ಇನ್ನು. ಯಜಮಾನ್ರು ಬಂದ್ರಲ್ಲ. ತುಸ ಸುಧಾರಿಸ್ಕಳಿ"

ಆ ಮನೆ ವಿಲಕ್ಷಣ ರೀತಿಯ ಮೌನ ತಳೆಯಿತು. ಎಲ್ಲರ ಮನದಲ್ಲಿ ಸಾವಿರ ಭಾವನೆಗಳು ಅಲೆಯಲೆಯಾಗಿ ಹರಿದಾಡಿತು. ಎಲ್ಲವೂ ಸೀತೆಗೆ ಸಂಬಂಧಪಟ್ಟದ್ದೇ. ತಾಯಿಯನ್ನು ಕಾಣದೆ ಅಳುತ್ತಿದ್ದ ಮಗುವನ್ನು ಒದ್ದೆ ಬಟ್ಟೆಯಲ್ಲೇ ಎತ್ತಿಕೊಂಡು ಮೊಲೆಕೊಟ್ಟಳು ಸೀತೆ. ಶಾಂಭವಿ ಅನ್ನಪೂರ್ಣಮ್ಮನ ಪಾದಗಳ ಮೇಲೆ ಮಲಗಿ ರಾಗವಾಗಿ ಬಿಕ್ಕಿ ಬಿಕ್ಕಿ ಎಳೆಮಕ್ಕಳಂತೆ ಅತ್ತಳು ಈಗ ಯಾರೂ ಮಾತಾಡುತ್ತಿರಲಿಲ್ಲ. ಕೆಲವು ಮಕ್ಕಳ ಅಳು ಮಾತ್ರ ಕೇಳುತ್ತಿತ್ತು. ಬಂಟ-ಕಾಳರಿಗೆ ಜೀವ ಪುಕ-ಪುಕ ಅನ್ನುತ್ತಿದೆ. ಈ ರುದ್ರ ಪ್ರವಾಹದಲ್ಲಿ ಹೊಳೆ ದಾಟಿ ಶ್ಯಾಮಯ್ಯನನ್ನು ಕರೆತಂದ ಸೀತೆ ಈಗ ಎಲ್ಲರ ಕಣ್ಣಿಗೆ ಸಹಸ್ರಮುಖದ ದೇವತೆಯಾಗಿ ಕಂಡಳು

"ರಾಮಕ್ಕ, ನಿಮಗೆ ಸಮನಾದ ಸೊಸೆ ಸೀತೆ"—ಎಂದು ತೊದಲಿದ ಅನ್ನಪೂರ್ಣಮ್ಮನ ಮಾತು ಕೇಳಿ ಸೀತೆಯ ಮೇಲೆ ಮುಗಿಲೆತ್ತರ ಏರಿದ್ದ ಸಿಟ್ಟೆಲ್ಲ ಜರ್ರನೆ ಇಳಿಯಿತು. ಮೆಲ್ಲಗೆ ಅಂದರು :

“ಎದ್ದೇಳೆ. ಮನಿಗ್ಹೋಗಿ ಬ್ಯಾರೆ ಸೀರೆ ಉಟ್ಕೊಂಡು ತಲೆ ಒರಸ್ಕೋ. ನಿನ್ನ ಮೈ ಯಾತಕ್ಕಾದೀತು. ನಡೀ ಬಿಸಿ ಕಾಪಿ ಮಾಡಿಕೊಡ್ತೀನಿ.”

ಅನ್ನಪೂರ್ಣಮ್ಮನ ಸೊಸೆ ಬಿಸಿ ಕಾಫಿ ಕುಡಿಸಿಯಾಗಿತ್ತು. ಪಕ್ಕದಲ್ಲಿ ಒಣಗಿದ ಸೀರೆಯೂ ಇತ್ತು. ಆದರೂ ಸೀತೆ ಮಗುವನ್ನೆತ್ತಿಕೊಂಡು ಹಿತ್ತಲ ಕಡೆಯಿಂದಲೇ ಮನೆಗೆ ಬಂದಳು. ರಾಮಕ್ಕ ಕಾಫಿಗಿಟ್ಟ್ಯಾಯ್ತು. ದೀಪ ಹಚ್ಚಿತ್ತು. ಸೀತೆ ಸೀರೆ ಬದಲಿಸಿ ತಲೆ ಒರೆಸಿಕೊಂಡು ಒಲೆ ಮುಂದೆ ಕೂತು ಒಣಗಿಸಿಕೊಳ್ಳುತ್ತಿದ್ದಳು. ಅತ್ತೆ ಕೊಟ್ಟ ಕಾಫಿ ಕುಡಿದಳು. ಕೊಮಾರಂಗೂ ಕಾಫಿಯಾಯಿತು. ಎಂದೂ ಇಲ್ಲದವ ಹೆಂಡತಿಗೆ ಜೋರು ಮಾಡಿದ–

“ಅವರ್ಮನೇಲಿ ಎಂಟ್ಜನ ಗಂಡ್ಮಕ್ಳದಾರೆ. ನೀ ಯಾತಕ್ಕೆ ಹೋಗ್ಬೇಕಾಗಿತ್ತು ಆ ಸೂಳೇ ಮನೀಗೆ. ನಿಂಗೆ ಸೊಕ್ಕು ಹೆಚ್ಚಾತು ಅಲ್ಲವ ?”

ಮೊದಲ ಬಾರಿಗೆ ಅತ್ತೆಯ ಎದುರಿಗೇ ಗಂಡನಿಗೆ ಎದುರಾಡಿದಳು ಸೀತೆ :

“ಎಂಟೇ ಜನ ಸೈಯಾ ? ಕುರುವಳ್ಳೀ ಗಂಡಸ್ರು ನೂರಾಜ್ಜನ ಇದ್ರಲ್ಲ ಅಲ್ಲಿ. ನೀವೂ ಇದ್ರಲ್ಲ. ಯಾರಾರ ಹೋಗ್ಬೇಕಾಗಿತ್ತು ಶ್ಯಾಮಯ್ಯನ್ನ ಕರಯೂಕೆ ! ನಾಯೇನು ಸೂಳೆಗಾರಿಕೆ ಮಾಡೂಕೆ ಹೋಗಿದ್ನ ಆಕೆ ಮನೀಗೆ. ಆ ಶ್ಯಾಮಯ್ಯ ನನ್ನಪ್ಪ ಇದ್ಹಂಗದಾರೆ. ಆಕೆ ನೋಡಿದ್ರೆ ಗಂಡ-ಗಂಡಾಂತ ಹಂಬಲಿಸ್ತಿದ್ರು. ಅದ್ಕೆ ಕರಕಂಬರಾಣಾಂತ ಹೋದೆ. ಬ್ಯಾರೆ ಯಾರಾರಾ ಹೋಗಿದ್ರೆ ನಾಯಾಕೆ ಹೋಗ್ತಿದ್ದೆ ?”

ಕೊಮಾರ ಅರಚಿದ :

“ಆಕೆ ಹ್ಯಾಂಗೂ ಸಾಯೋರೆ. ಈಗ ನೀ ಹೋಗಿ ಅವರನ್ನ ಕರಕಂಬಂದ್ಯಲ್ಲ. ಗಂಡ ಆಕೇನ ಬದಕಸ್ತಾರ ? ಸಾಲದ್ದಕ್ಕೆ ಆಕೇನೂ ಕಟ್ಕಂಡು ಬಂದಿದ್ದೀಯಲ್ಲ ನಮ್ಮನೆ ಮಾನ ಎಷ್ಟಾತು ?”

ಸೀತೆ ಏನೋ ಹೇಳಲು ಬಾಯಿ ತೆರೆಯುವುದರಲ್ಲೇ ರಾಮಕ್ಕ ಗದರಿದರು. “ಎದ್ಹೋಗಾ ಆಚೀಗೆ, ನೆಂದು ಬಾಳೆದಿಂಡಾಗಿ ಬಂದದೆ ಅದು. ಯಂತದು ನಿನ್ನ ಕಟಪಟಿ ? ಯಾವ ಕಣಜದಾಗೆ ತುಂಬಿದ್ದ ನಿಮ್ಮನೆ ಮಾನಾನಾ ?” ಹೆಂಡತಿಯ ಮುಂದೆ ಅವಮಾನವಾಯಿತು ಕೊಮಾರಂಗೆ.

"ಸಮನಾಗಿದ್ದೀರಿ ಅತ್ತೆ–ಸೊಸೆ" ಎಂದು ಗೊಣಗುತ್ತ ಎದ್ದ. ಅಷ್ಟರಲ್ಲಿ ದೋಟಿ ಸುಬ್ಬನ ಮಗ ನಂಜು ವಾಲೆ ಕೊಡೆ ಹಿಡಿದು ಓಡಿ ಬಂದ.

"ಅಜ್ಜೀ ! ಅನ್ನಪೂರ್ಣಮ್ಮ ಸತ್ಹೋದ್ರು" ಎಂದ ತೇಕುತ್ತ.

"ಸೀತೆ, ನೀ ಈಗ ಅಲ್ಲೀಗೆ ಬರೂದು ಬ್ಯಾಡ. ಎಸರಿಟ್ಟು ಒಂದನ್ನ ಮಾಡು. ನಾನು, ಕೊಮಾರಿ ಹೋಗಿ ಬರ್ತವಿ ಈಗ. ನೀ ಜೋಗ್ಗ ನೋಡೂವಂತೆ" ಎಂದು ಉತ್ತರಕ್ಕೆ ಕಾಯದೆ "ಬಾರಲಾ ಕೊಮಾರಿ" ಎಂದು ಮಗ, ಮೊಮ್ಮಗನೊಂದಿಗೆ ಹಿತ್ತಲ ಬಾಗಿಲಿಂದ ಹೊರಬಿದ್ದಳು ರಾಮಕ್ಕ.

## ೨೦

ಬಂದ ಹೊಳೆ ಇಳಿಯಲು ಮೂರು ದಿನ ಹಿಡಿಯಿತು. ಅನ್ನಪೂರ್ಣಮ್ಮನ ಕರ್ಮಾಂತರ ಮುಗಿದದ್ದೊಂದು ಬ್ರಹ್ಮಯಾಗ. ಮಳೆ, ಹೊಳೆ, ಕೊಳೆಗಳ ನಡುವೆ ಅಂತೂ ನಡೆಯಿತು ಕರ್ಮ. ವೈಕುಂಠದಂದು ಸೊಸೆಯ ಕೈಲಿ ಕುತ್ತಾಲದ ಸೀರೆ ಕೊಡಿಸಿದರು ಸೀತೆಗೆ ಶ್ಯಾಮಯ್ಯ

ಈಗ ಸೀತೆ ಮಲೆನಾಡಿನ ಒಂದು ಸುದ್ದಿಯಾದಳು. ವದಂತಿಯಾದಳು. ಕತೆಯಾದಳು. ಭಲೇ ಎಂದರು, ಭೇಷ್ ಅಂದರು. ರಾಮಕ್ಕನ ಸೊಸೆ ಸಮ ಅಂದರು, ದಿಂಡೆತನ ಅಂದರು, ಇಪ್ರೀತ ಸೊಕ್ಕು ಅಂದರು, ನಾಚಿಕೆಲ್ಲದ ಹೆಣ್ಣು ಅಂದರು. ಹಾಗೆಂದವರಲ್ಲಿ ಸಾತಿ, ಮಾನಿಯರೂ ಸೇರಿದ್ದರು. "ಕಿರಿ ಸೊಸೆ ಕಿಮಿ ಕಿತ್ರೂ ಸಮ" ಅಂದುಕೊಂಡರು.

ಅನ್ನಪೂರ್ಣಮ್ಮನ ಕರ್ಮಾಂತರವೆಲ್ಲ ಮುಗಿದ ನಂತರ ಶ್ಯಾಮಯ್ಯ ಕೈ ಹಿಡಿದು ಗದ್ಗದರಾಗಿ ಅಂದರು.

"ಸೀತೆ ಕೈ ಹಿಡಿಯೂಕೆ ನೀ ಪುಣ್ಯಮಾಡಿದ್ದೆ ಕಣೋ ಕೊಮಾರಿ. ನಿಮ್ಮಮ್ಮಗೆ ಸಮನಾದ ಸೊಸೆ ಅದು. ಧೈರ್ಯದ ಹೆಣ್ಣು. ಚಂದಾಗಿಟ್ಕೆ

ಹುಡುಗೀನ" ಎಂದಾಗ, ಕೊಮಾರಿಯ ಮನದಲ್ಲಿದ್ದ ಅಸಮಾಧಾನ ಕರಗಿ ಹೋಯಿತು "ಎಲ್ಲಾ ನಿಮ್ಮ ಆಶೀರ್ವಾದ" ಎಂದು ಹೆದ್ದು ಮಾತಾಡಿ ಮನೆಗೆ ಬಂದ ಅಂದಿನಿಂದ ಸೀತೆಯ ಚಲನ-ವಲನ ಸರಿಯಾಗಿ ಗಮನಿಸಿದ.

ಶ್ಯಾಮಯ್ಯ ಹೇಳಿದ ಮಾತು ನಿಜ. ಕುರುವಳ್ಳಿಯಲ್ಲೇ ನೋಡಲು ಚಂದದ ಹೆಣ್ಣು ಸೀತೆ. ಕೆಲಸವೆಲ್ಲ ರಾಮಕ್ಕನ ಹಾಗೇ ಶಿಸ್ತು, ಅಚ್ಚುಕಟ್ಟು. ಶುಭ್ರ. ಅಡಿಗೆ ತಿಂಡಿ, ಒಲುರುಚಿ. ಅರಗಳಿಗೆ ಸುಮ್ಮಗೆ ಕೂರುವ ಜೀವವಲ್ಲ. ಕಂಡವರ ಸುದ್ದಿ ಹರಟುವದಿಲ್ಲ. ನಡೆವಾಟ ಚುರುಕು ; ಕೆಲಸ ಚುರುಕು, ಆಯಾಸ ಎಂಬುದೇ ಇಲ್ಲ ಸೀತೆಗೆ. ಒತ್ತ ಕುಟ್ಟುತ್ತಾಳೆ, ತರಕಾರಿ ಬೆಳೆಯುತ್ತಾಳೆ, ಮನೆಗೆಲಸ ಪೂರಾ ಅವಳದೆ.

ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಹುರಿಗಾಳು, ಹಣಚಿಟ್ಟು, ಬಾಳಕ, ಶ್ಯಾಪಿಗೆ ಹೀಗೆ ಬೇಸಿಗೆಯ ಬಿಸಿಲನ್ನು ಸಂಪೂರ್ಣ ಉಪಯೋಗಿಸಿ ಕೊಳ್ಳುವಳು.

ಮಳೆಗಾಲದಲ್ಲಿ ಕೊಟ್ಟಿಗೆಯ ಗೋಡೆ ಕುಸಿದಾಗ ಯಾರನ್ನೂ ಕರೆಯು ಲಿಲ್ಲ, ಕಾಯುಲಿಲ್ಲ. ಬಿದ್ದ ಮಣ್ಣನ್ನೇ ಮತ್ತೆ ಕಲೆಸಿ ಗೋಡೆ ಏರಿಸಿದಳು ಮೂಗ ಕಿತ್ತು ಹಾಕಿದ ಮಾಡಿನ ಹೆಂಚನ್ನು ಕೈಯಾಡಿದಳು ಅವಳು ಏಣಿ ಇಟ್ಟು ಮನೆಯ ಬೇಂಗಡೆಯಲ್ಲಿ ಕೂತು ಹೆಂಚು ಕೈಯಾಡುವಾಗ ಕುರು ವಳ್ಳಿಯ ಗಂಡಸರು ಕಣ್ಣುಸನ್ನೆಯಿಂದಲೇ ಮಾತಾಡಿಕೊಳ್ಳುವರು. ಯಾಕೋ ಅನೇಕರಿಗೆ ಸೀತೆ ಅಂದರೆ ಸ್ವಲ್ಪ ಭೀತಿಯೂ ಇತ್ತು.

ಕಾರಣ ಸುಮಾರು ಆರೆಂಟು ತಿಂಗಳು ಅಪ್ಪೂರಾಯ ಹೊಳೆಯ ದಿಕ್ಕಿಗೆ ಬರಲಿಲ್ಲ. ನಾಲ್ಕು ತಿಂಗಳು ಮನೆ ಬಿಟ್ಟು ಬಂದಿರಲಿಲ್ಲ.

'ಎಲ್ಲೋ ಬಿದ್ದು ಸೊಂಟದ ಮೂಳೆ ಮುರದದೆ ಓಡಾಡೂಕಾಗುಲ್ಲ' ಎಂದು ನೆವ ಹಾಕಿ ಮನೆಯೊಳಗೇ ಉಳಿದಿದ್ದ. ಇಲ್ಲದಿದ್ದರೆ ಅಂಗಡಿ, ಮೋಟಾರು ಟಿಕೇಟು ಕೊಡಲು ಅವನ ತಮ್ಮನನ್ನು ನೇಮಿಸಿದ್ದ.

"ಯಾಕೆ ಅಪ್ಪು ಕಾಣಲಿಲ್ಲ ?" ಎಂದು ಯಾರಾದರೂ ಕೇಳಿದರೆ,

"ಅವರಿಗೆ ಮೈ ಸ್ವಸ್ಥಿಲ್ಲ" ಅನ್ನುತ್ತಿದ್ದ ಅವನ ತಮ್ಮ.

ಆದರೆ ಅಪ್ಪೂರಾಯನ ಹೆಂಡತಿಯ ಬಾಯಿ ಹರಕು. ಹೊಳೆ ದಂಡೆಯ ಗೆಳತಿಯರು ಕೇಳಿದಾಗ ಅವಳು ಅಳುಕದೆ ಅಂದಿದ್ದಳು :

"ಯಂತದೋಪ್ಪ ಒಂದಿನರಾತ್ರಿ ಮೈಯೆಲ್ಲ ಯಮಗಾಯ ಮಾಡ್ಕಂಡು, ಪಂಚೆ ಹರಕೊಂಡು, ಮಕ-ಕೈ-ಕಾಲೆಲ್ಲ ನೆತ್ತರ ಸುರಸ್ಕಂಡು ಕುಂಟ್ತಾ. ಒಂದ್ರು ಮನೀಗೆ. ನಾ ಕೇಳಿದ್ದಕ್ಕೆ ಹೊಳೆದಂಡೇಲಿ ಜಾರಿಬಿದ್ದೆ ಅಂದ್ರು ಮೈಯಲ್ಲ ಯಮಗಾಯ ಆಗಿತ್ತು. ನಂಗಂತೂ ಅದು ಬಿದ್ದ ಗಾಯವ ಹಾಂಗೆ ಕಾಣ್ಲಿಲ್ಲ. ಯಾರೋ ಸಮ ಹಿಡಕಂಡು ಹೆಗ್ಗ ಜಪ್ಪಿದ್ಹಾಂಗೆ ಜಪ್ಪಿದ್ರೂಂತ ಕಾಣತ್ತೆ. ಬಳ್ಳಿನ ಏಟಿನ ಹಾಂಗೆ ಬರೆಬರೆ ಬಿದ್ದದೆ. ಕೋಟು ಜೇಬಿನಾಗೆ ಒಂಚೂರು ಈಚಲ ಹಿಡಿ ತುಂಡಿತ್ತು. ನಾ ಯಂತ ದಾರ ಕೇಳಿದ್ರೆ ನಂಗೆ ಜಪ್ಪೂಕೆ ಬರ್ತಾರೆ. ಸಾಯ್ಲಿ ಅಂದ್ಕಂಡು ಸುಮ್ನಾದೆ ನಾನು ಯಂತದೋ ಮುಲಾಮು ತಂದು ಹಚ್ಕ್ಯತದಾರೆ ಆವರೇ. ಈಗ ತುಸೂ ವಾಸಿ. ಮನೆಬಿಟ್ಟು ಎಲ್ಲೂ ಹೋಗುಲ್ಲ. ತೆಪ್ಪಗೆ ಕೂತದಾರೆ. ಹಾಂಗಾಗ್ಬಕು ಒಂದಪ ಗಂಡಸ್ರಿಗೆ. ಇಲ್ದಿದ್ರೆ ಇಪ್ರೀತ ಪುಂಡಾಟ್ಕೆ ಇವರದ್ದು."

ಈ ಚಿರ ಸತ್ಯ ಹೆಂಗಸರ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹರಿದಾಡಿ ಊರೆಲ್ಲ ಹರಡಿಕೊಂಡಿತ್ತು. ಭಟ್ಟರ ಸೊಸೆ ಸಂಕು ಸೀತೆಯ ಕಿವಿಗೆ ಈ ಮಾತು ಹಾಕಿದಾಗ ಅವಳು ಜೋರಾಗಿ ಕೂ ಡ ಪಾ ನ ಉಚ್ಚುತ್ತಾ-

"ಹೌದಾ ?! ಇದ್ದೀತು. ಅದಕೇ ಅವ ಇತ್ಲಾಗೆ ಹೊಳೆ ಕಡೆ ಬಂದ್ಹಾಗೆ ಕಾಣ್ಲಿಲ್ಲ. ಅವನ ಹೆಂಡತಿ ಸುಳ್ಯಾಕೆ ಹೇಳ್ತ್ಯಾಳು ? ಯಾವ ಹೆಂಗ್ಸಿನ ಕೆಣಕೂಕೆ ಹೋಗಿದ್ನೋ ಸಮಾ ಜಪ್ಪಿ ಕಳ್ಸಿದ್ದಾಳೆ. ಸಾಯ್ಲಿ ; ಈಗ ಸಧ್ಯ ಹ್ವಳೇ ಹತ್ರ ಅವನ ಜತಿಯೋರೂ ಯಾರೂ ಕಾಣುಲ್ಲಪ್ಪ. ಒಳ್ಳೇದಾತು ಬಿಡಿ" ಎಂದಿದ್ದಳು ತೀರಾ ಸಹಜವಾಗಿ.

ಒಂದೆರಡು ಬಾರಿ ಸೀತೆ ಮಾಳೂರಿಗೆ ಹೊರಟಾಗ ದೂರದಿಂದ ಸೀತೆ ಕಂಡ ಕೂಡಲೇ ತಾನು ಜಾರಿಕೊಂಡು ತಮ್ಮನನ್ನು ಕಳಿಸಿದ ಟಿಕೇಟು ಕೊಡಲು. ಸೀತೆ ಮನದಲ್ಲೇ ನಕ್ಕಿದ್ದಳು.

ಕಾಲ ಚಕ್ರದಲ್ಲಿ ಹತ್ತಾರು ಸುತ್ತು ತಿರುಗಿತ್ತು. ಹಳೆಯ ತಲೆಮಾರು ಕಳೆದು ಹೊಸ ಯುವ ಉದಯಿಸಿತು. ಅರಳಿ ಮರದ ಒಣ ಎಲೆಗಳು ವರ್ಷ ವರ್ಷ ಉದುರಿ ಹೊಸ ಚಿಗುರು ಕೊನರುವಂತೆ ಕುಟುಂಬ, ಸಮಾಜ, ದೇಶ ಎಲ್ಲದರಲ್ಲೂ ಹೊಸ ತಿರುವುಗಳು ಬಂದಿವೆ. ತಗ್ಗಿನ ಮನೆ, ಕುರುವಳ್ಳಿ, ತೀರ್ಥಹಳ್ಳಿಯ ಹಳೆಯ ತಲೆಗಳೆಲ್ಲಾ ಉದುರಿ ; ಹೊಸ ತಲೆಗಳು ಎದ್ದಿವೆ. ಇತ್ತಲಿನ ಹತ್ತು ವರ್ಷಗಳಲ್ಲಿ ಸೀತೆಯ ಅಜ್ಜ, ರಾಮಕ್ಕ, ಮೈಲಾರಯ್ಯ, ಶ್ಯಾಮಯ್ಯ ಇತ್ಯಾದಿ ಮುದುಕರೆಲ್ಲಾ ಕರಗಿ ಹೋದರು. ಸೀತೆಗೆ ನಾಲ್ಕೂ ಗಂಡು ಮಕ್ಕಳು. ತಾಯಿಯಂತೆ ಅಜ್ಜಿಯಂತೆ ನಾಲ್ಕೂ ಬಲು ಚುರುಕಿನವು. ಚಂದದವು. ಹೆಣ್ಣು ಮಕ್ಕಳಿಗಾಗಿ ಅವಳು ಬಯಸಲಿಲ್ಲ. ಭಟ್ಟರ ಹೆಂಡತಿ ಹಣ್ಣು ಮುದುಕಿ ಎಂದಾದರೂ–

"ನಾಕೂ ಗಂಡೇ ಆದವಲ್ಲೆ ಸೀತೆ. ಒಂದಾರ ಹೆಣ್ಣಾಗಿದ್ರೆ ಚೆಂದಾಗಿತ್ತು" ಎಂದರೆ ಸೀತೆ ಸಹಜವಾಗಿ ಅನ್ನುವಳು–

"ಅದಕೆ ನಾ ಯಂತದ ಮಾಡ್ಲಿ ಅತ್ತೆ. ಚಕ್ಲಿ, ಕ್ವಾಡಬಳೆ ಹಿಟ್ಟಾಗಿದ್ರೆ ನಮಗೆ ಹ್ಯಂಗೆ ಬೇಕೋ ಹಂಗೆ ಮಾಡ್ಕಾಭೋದಾಗಿತ್ತು. ಇದು ನಾ ಮಾಡ್ಕಂಡಿದ್ದಲ್ಲ ಅಲ್ಲ. ಸವ್ರನ್ನೇಲೂ ಅದಾವಲ್ಲ ಬೇಕಾದಷ್ಟು ಹೆಣ್ಣು ಮಕ್ಳು, ಬೇಕಾರೆ ಅದನ್ನೆ ತಂದಿಟ್ಕಂಡ್ರಾತಪ್ಪ."

ಕಳಸಪ್ಪನಿಗೆ ನಾಲ್ಕು ಹೆಣ್ಣು ಒಂದು ಗಂಡು ಆಗಿದ್ದು. ಗಂಡು ಹುಡುಗ ಹನ್ನೆರಡು ವರ್ಷ ಬೆಳೆದು ಸಿಡಿಬಿದ್ದು ಸತ್ತುಹೋದ. ತಮ್ಮಾಗೆ ಐದೂ ಹೆಣ್ಣೇ ಹುಟ್ಟಿದ್ದ. ಹೀಗಾಗಿ ಈಗ ಸಾತಿ, ಮಾನಿಯರಿಗೆ ಆಡಲಾರದ ಅನುಭವಿಸಲಾರದ ಅನುಸಂಕಟ. ಕಳಸಪ್ಪ, ತಮ್ಮಪ್ಪ ಆ ಬಗ್ಗೆ ಹೆಚ್ಚು ಯೋಚಿಸದಿದ್ದರೂ ಒಳಗೊಳಗೇ ಕೊರಗಿದವರು ಸಾತಿ, ಮಾನಿಯರು. ಆದರೆ ಅದರಲ್ಲಿ ಮೂರು ಹೆಣ್ಣು ಮಕ್ಕಳಿಗೆ ಮದುವೆಯೂ ಆಗಿಹೋಯ್ತು.

ಕಡೆಗಾದರೂ ಎಲ್ಲಾ ಆಸ್ತಿಯೂ ಸೀತೆಯ ಮಕ್ಕಳಿಗೇ ಸರಿಹೋಗುತ್ತದಲ್ಲಾ ಎನ್ನುವ ಸಂಕಟ. ಸೀತೆ ತಪ್ಪಿ ಕೂಡ ಆ ಬಗ್ಗೆ ಮಾತೆತ್ತಿದವಳಲ್ಲ.

ಮಾಳೂರಿನಿಂದ ಕೊಮಾರಿ ತಂದು ಹಾಕಿದ್ದನ್ನ ಇವಳು ಮಾಡಿ ಹಾಕುವಳು. ಮನೆಯ ತರಕಾರಿ, ಹೂವು, ಹಾಲು, ಮೊಸರು, ತೆಂಗಿನಕಾಯಿ, ಬಾಳೆಯೆಲೆ, ಬತ್ತ, ಅಡಿಕೆ, ಬೆಲ್ಲ ಇರುತ್ತಿತ್ತು. ರಾಮಕ್ಕ ಮನೆಯ ಹಿತ್ತಲಿನ ಇಳಿಜಾರಿನಲ್ಲಿ ಆರು ಕಾಫಿ ಗಿಡಗಳನ್ನು ಬೆಳೆಸಿದ್ದಳು. ಅದು ಸೀತೆಗೆ ಅತ್ತೆಯ ಆಸ್ತಿ. ಮನೆಗಾಗ ಪಷ್ಟು ಕಾಫಿ ಬೀಜವೂ ಸಿಗುತ್ತಿತ್ತು

ಗೌರಿವನದ ಮೊಮ್ಮಗಳು ಕಲ್ಯಾಣಿಯ ತಳಿ ಈಗ ಕೊಟ್ಟಿಗೆ ತುಂಬಿತ್ತು. ಕೆಚ್ಚಲು ತುಂಬಿ ಹಾಲು ಕೊಡುತ್ತಿದ್ದವು ಯಾವ ಕೆಲಸಕ್ಕೂ ಇನ್ನೊಬ್ಬರ ಕೈ ಕಾಯುವುದೆಂದರೆ ಸೀತೆಗಾಗದು. ಸಣ್ಣ ಕಟ್ಟಿಗೆ ಬೇಕಾದರೆ ತಾನೇ ಕುಡುಗೋಲು ಹಿಡಿದು ಕಟ್ಟಿಗೆ ಕಡಿದುಕೊಳ್ಳುವಳು. ಮಕ್ಕಳನ್ನು ಅದೇ ರೀತಿ ತಯಾರು ಮಾಡಿದ್ದಳು. ನಾಲ್ಕು ಮಾಣಿಗಳೂ ಲಂಗೋಟಿ ಕಟ್ಟಿ ಹೊಳೆಯಲ್ಲಿ ಈಜಿ ಬರುತ್ತಿದ್ದವು. ಎರಡು ಹುಡುಗರು ತೀರ್ಥಹಳ್ಳಿ ಸ್ಕೂಲಿಗೆ ಮತ್ತೆರಡು ಕುರುವಳ್ಳಿ ಸ್ಕೂಲಿಗೆ ಹೋಗುತ್ತಿದ್ದವು.

ಪಣಿ, ಕಿಟ್ಟು, ಶೀಮು, ಸೂರಿ.

ಸೂರಿ ಹುಟ್ಟುವ ವೇಳೆಗೆ ರಾಮಕ್ಕ ತೀರಿಕೊಂಡಾಗಿತ್ತು. ಓರಗಿತ್ತಿ ಯರಿಗೂ ಹೇಳಿಕಳಿಸಲಿಲ್ಲ ಸೀತೆ.

"ಅತ್ತಿಗ್ಗೆ ಹೇಳಿ ಬರ್ಲ್ಲಾ ?" ಅಂದ ಕೊಮಾರಿಗೆ ಸೀತೆ ಹಗುರಾಗಿ ಅಂದಿದ್ದಳು.

"ಮಾಡೂಕ್ಕೆ ಇಲ್ಲ. ನಾವು ಹಡದಾಗೆಲ್ಲ ಯಾರನ್ನಾರ ಯಾಕೆ ಗೋಳು ಹುಯ್ಯೂದು. ಹತ್ತು ದಿನ ಕಳದ ವ್ಯಾಲೆ ನೀವೆ ಒದ್ದೆರಡ್ತಿಂಗ್ಳು ಮಣ್ಣಿನ್ನಾಸರು ಮಾಡಿಹಾಕಿ. ಅಗಸಗಿತ್ತಿ ಬಟ್ಟೆ ಪಾತ್ರೆ ನೀರು ಮಾಡಿ ಕೊಡ್ತಾಳೆ ಯಾರ್‍ಯಾರಿಗೆ ಯಂತ ತಾಪತ್ರೆ ಇರತ್ತ್ರೋ. ನಾವು ಇಂಥಾ ಹೊತ್ನಾಗೆ ಕರದ್ರೆ ಅವರು ಬರೂ ಹಂಗಿಲ್ಲ, ಬಿಡೂ ಹಂಗಿಲ್ಲ. ಯಂತದು ಯಲ್ಲಾರೂ ಹಡದ ಹಾಂಗೇ ನಾನೂ ಹಡೆಯೂದು ಸೈಯಲ್ಲ" ಅಂದಿದ್ದಳು.

ಅದಕ್ಕೆ ತಕ್ಕ ಹಾಗೇ ಬಾಣಂತನಕ್ಕೆ ಬೇಕಾದ ಸಲಕರಣೆ, ಖಾರ, ಮೆಣಸು, ಶುಂಠಿ, ಕಾಯದ ಪುಡಿ, ಬಟ್ಟೆ–ಬರೆ ಎಲ್ಲಾ ಸಿದ್ಧಮಾಡಿಕೊಂಡು

ಮುಂಚಿತವಾಗಿಯೇ ಮಡಿವಾಳಗಿತ್ತಿಗೂ ಹೇಳಿಯಾಗಿತ್ತು. ರಾಮಕ್ಕನಂತೆಯೇ ಸೀತೆಯ ಕೈಯೂ ಧಾರಾಳವಾಗಿದ್ದರಿಂದ ಯಾರಾದರೂ ಕರೆದ ಕೂಡಲೇ ಬರುತ್ತಿದ್ದರು.

ಸೂರಿ ಹುಟ್ಟುವಾಗ ಹೆರಿಗೆ ಕೋಣೆಯಲ್ಲಿ ಮೊರ ಸಹ ಹಾಸಿ ಸಿದ್ಧ ಮಾಡಿಟ್ಟಳು. ಹಿಂದಿನ ರಾತ್ರಿಯಿಂದ ಸಣ್ಣಗೆ ಸೊಂಟನೋವಿತ್ತು. ಬೆಳಗ್ಗೆ ಫಣಿ ಸ್ಕೂಲಿಗೆ ಹೊರಟಾಗ ಅವನ ಕೈಲೇ ಸೂಲಗಿತ್ತಿಗೆ ಹೇಳಿ ಕಳಿಸಿದಳು :

"ಕೇಳ್ತನಾ ಫಣಾ, ನೀ ಇಸ್ಕೂಲಿಗೆ ಹೋಗುವಾಗ ಹಂಗೇ ಆಸ್ಪತ್ರೀಗೆ ಹೋಗಿ ಸೋಪಿ ಸೂಲಗಿತ್ತಿಗೆ ಹೇಳು. ಈಗ್ಲೆ ನಮ್ಮನೀಗೆ ಹೋಗ್ಬೇಕಂತೆ, ಅಮ್ಮಗೆ ಸೊಂಟ ನೋವಂತೇನ್ನು. ತಿಳೀತ ?"

ಊಟಮಾಡಿಕೊಂಡು ಓಡಿದ ಫಣಿ. ಕ್ರಿಶ್ಚಿಯನ್ ಹುಡುಗಿ ಸೋಫಿಯಾ ಅಲ್ಲಿಯ ಸೂಲಗಿತ್ತಿ. ಇನ್ನೂ ಮದುವೆಯಾಗದವಳು. ಎರಡು ವರ್ಷಗಳಿಂದ ತೀರ್ಥಹಳ್ಳಿಯ ಹೆಂಗಸರೆಲ್ಲ ಅವಳಿಗೆ ಪರಿಚಯ. ಮಕ್ಕಳನ್ನು ಸ್ಕೂಲಿಗೆ ಕಳಿಸಿ ಕೊಮಾರಿಯನ್ನು ಮನೆಯಲ್ಲಿರಲು ಹೇಳಿ ಸೀತೆ ರಾಶಿ ಬಟ್ಟೆ, ಪಾತ್ರೆ ಹೊತ್ತು ಹೊಳೆಗೆ ಬಂದಳು. ಸೋಫಿಯ ಹದಿನೆಂಟು ಪ್ರಾಯದ ಹುಡುಗಿ. ಸೀತೆಗೆ ಬೇನೆ ಸಂಕಟವೆಂದು ಅವಳು ಉರಿಬಿಸಿಲಿನಲ್ಲಿ ಬೇಗ ಬೇಗ ಅರೆಕಲ್ಲು ಬಂಡೆ, ಕಲ್ಲುಸಾರ ದಾಟಿ ಬಂದಾಗ ಪುಷ್ಕರಣಿಯಲ್ಲಿ ಬಟ್ಟೆ ಒಗೆಯುತ್ತಿದ್ದ ಸೀತೆಯನ್ನು ಕಂಡು ಬೆರಗಿನಿಂದ ಕೇಳಿದಳು :

"ಸೀತಮ್ಮ, ನಿಮಗೆ ಹೆರಿಗೆ ನೋವು ಬರಬೇಕಂತೆ — ಅಂತ ನಿಮ್ಮ ಮಗ ಆಗಲೇ ನನಗೆ ಹೇಳಿ ಹೋದ. ಯಾರಿಗೆ ಹೆರಿಗೆ ನೋವು ? ನೀವು ಇಲ್ಲಿದ್ದೀರಲ್ಲ ?"

ಸೀತೆ ಬಟ್ಟೆ ಕುಕ್ಕಿಗೆ ತುಂಬುತ್ತ ಮೆಲ್ಲಗಂದಳು :

"ಯಾಪಾಟಿ ಕೂಗ್ತೀಯೋ ಸೋಪಿ. ಅತ್ಲಾಗೆ ನೋಡು ಗಂಡಸ್ರು ಹಿಂಡದೆ. ನಂಗೇ ಬ್ಯಾನೆ ಸಂಕ್ಟ. ನಡೀ ಮನೀಗೆ. ನಾಳಿಂದ ಅಗಸಗಿತ್ತಿ ಬರ್ತಾಳೆ. ಇವತ್ತಿನ ಮುಸ್ರೆ ಬಟ್ಟೆ ಯಾಕೆ ಮೂಲೇಲಿ ಇಡೂದು ? ನೀ

ಬರೂದರೊಳಗೆ ಒಕ್ಕಂಡು ಹೋದರಾತೂಂತ ಬಂದೆ. ನೀ ಮುಂದ್ಹೋಗು. ನಾ ಇದನ್ನ ತಗಂಡ್ಬರ್ತನಿ."

ಬಿಳಿಯುಡುಗೆಯ ಕರಿಯ ಸೋಫಿಯ ಬೆವರೊರಸಿಕೊಳ್ಳುತ್ತ ಅಂದಳು ಬೆರಗಿನಿಂದ :

"ಯಂತದಿದು ಹುಡುಗಾಟ ನಿಮ್ದು ಸೀತಮ್ಮ? ಬ್ಯಾನೆ ಸಂಕ್ಟ ಹತ್ತಿ ಡೋರು ಹೊಳೆಗೆ ಬರೂದಾ? ಇಲ್ಲೇ ಏನಾರ ಆದರೆ ಏನು ಗತಿ?"

ಸೀತೆ ಬೆಳಗೆ ಬೆಳಗಿದ ಕೊಡಪಾನ ಕಂಕುಳಿಗೇರಿಸಿ, ಪಾತ್ರೆ ಕುಕ್ಕೆ ತಲಿಗಿಟ್ಟು, ಬಟ್ಟೆ ಹಿಂಡಿಕೆಗಳನ್ನು ಹೆಗಲಿಗೆ ಹಾಕಿ ಸೋಪಾನವೇರುತ್ತ ಪಿಸುಗುಟ್ಟಿದಳು.

"ಸಾಕು ನಡಿಯೇ ಕಂಡಿದನಿ. ಹಂಗೇ ದಾರೀಲಿ ಉದುರೂಕೆ ಆದಂತದು ಕೊಳಕು ಮಾವಿನ ಹಣ್ಣಾ? ನಾ ಮೂರು ಹೆತ್ತದನಿ. ನೀ ಎಷ್ಟು ಹೆತ್ತಿದ್ದಿ ಹೇಳು? ಇನ್ನೂ ಅರ್ಧ ತಾಸಾರಾ ಬೇಕು."

ಸೋಫಿಯ ಸರಸರ ಸೋಪಾನವೇರುತ್ತ ಅಂದಳು :

"ಸೈ ಸೀತಮ್ಮ. ನಿಮ್ಮ ಕತೇನ ನನ್ನ ಡೈರೀಲಿ ಬರದಿಡ್ತನಿ. ಬನ್ನಿ ಬ್ಯಾಗ."

"ಇಶ್ಶಿ! ಅದೆಂತದೆ ಹೆಂಗಸ್ರು ಹಡದ್ದೆಲ್ಲ ಬರೀತಾರಾ?"

"ಮತ್ತೆ? ನಾವು ತಿಂಗ್ಳಿಗೆ ಎಷ್ಟು ಹೆರಿಗೆ ಮಾಡಿದೀವೀಂತ ಲೆಕ್ಕ ಕೊಡಬಕಲ್ಲ ಆಸ್ಪತ್ರೀಗೆ."

"ಹೋಗೇ ಮಾರಾಯ್ತಿ! ಹೀಂಗೇಂತ ಗೊತ್ತಿದ್ರೆ ನಾ ನಿಂಗೆ ಹೇಳ್ಕಳಸ್ತಿರಲಿಲ್ಲ. ಇನ್ಮೇಲೆ ಹೇಳ್ಕಳ್ಸೂದೂ ಇಲ್ಲ."

ಸೋಫಿಯಾ ನಕ್ಕಳು :

"ನೋಡಾಣಂತೆ ಇನ್ನೆರಡು ವರ್ಷ ಕಳೀಲಿ."

ಸೀತೆ ಮನೆಗೆ ಹೋಗಿ ಹೆಗಲ ತಲೆಯ, ಸೊಂಟದ ಭಾರ ಇಳಿಸಿ ಸೋಫಿಯಾಗೆ ಸೊಗಸಾದ ಕಾಫಿ ಕೊಟ್ಟು ಹೆರಿಗೆ ಕೋಣೆಗೆ ಬಂದು ತಾನೇ ಹಾಸಿ ಸಿದ್ಧಮಾಡಿಕೊಂಡ ಹಳೇ ಗೋಣೀ ಚೀಲದ ಮೇಲೆ ಮಲಗಿ ಗುಂಡ

ಗಿನ ಗಂಡು ಮಗುವನ್ನು ಭೂಮಿಗಿಳುಹಿ ಹೊಟ್ಟೆ ಹಗುರ ಮಾಡಿಕೊಂಡಳು. ಹೊಕ್ಕಳು ಬಳ್ಳಿ ಕತ್ತರಿಸಿ, ಮಗು ತೊಳೆದು ಮಲಗಿಸಿ, ಕಸ ತೆಗೆದು ಹಾಕಿದ್ದಷ್ಟೇ ಸೋಫಿಯಾ ಕೆಲಸ.

"ಇಂಥ ಹೆರಿಗೆ ಆದ್ರೆ ನಾನು ದಿನಕ್ಕೆ ನೂರು ಮಾಡಿಯೇನು!" ಎಂದುಕೊಂಡು ಹೋದಳು ಸೋಫಿಯ.

ಸೀತೆ ಹೇಳಿದಂತೆ ಮುಂದೆ ಅವಳು ಸೂಲಗಿತ್ತಿಯನ್ನು ಕರೆಯುವ ಪ್ರಸಂಗ ತಂದುಕೊಳ್ಳಲಿಲ್ಲ. ಅವಳಿಗೆ ಅತ್ತೆಯ ಟ್ರೈನಿಂಗ್ ಇತ್ತು. ಯಾವ ಯಾವ ದಿನ ಗಂಡನ ಕೋಣೆಗೆ ಹೋಗಬೇಕು, ಬಾರದು ಎಂಬುದನ್ನು ಸೊಸೆಯ ಕಿವಿ ಜಿವುಟಿ ಹೇಳಿಕೊಟ್ಟಿದ್ದರು ಅತ್ತೆ. ಸೀತೆ ಮುಂದೆ ಸಂತತಿಗೆ ನಿಯಂತ್ರಣ ಹಾಕಿಕೊಂಡಳು. ಗಂಡನಿಗೂ ಪರ್ಯಾಯವಾಗಿ ಹೇಳಿದ್ದಳು,

"ಒಂದಲ್ಲಾಂತ ನಾಲ್ಕು ಮಕ್ಕಳಾತಲ್ಲ ಸಾಕು. ಇನ್ನು ತುಸಾ ದೂರ ಇದ್ರೆ ವಾಸಿ. ಮಕ್ಳು ದೊಡ್ಡೋವಾದ್ವಲ್ಲ."

ಈಗ ಕೊನೂರಿ ಸೀತೆಯ ಆಜ್ಞಾಧಾರಕ. ಗಂಡನಿಗೆ ಬೇಕಾದ ರುಚಿಯಡಿಗೆ ಮಾಡಿ ಹೊಟ್ಟೆ ತುಂಬ ಬಡಿಸುತ್ತಾಳೆ. ಒಳ್ಳೆಯ ಕಾಫಿ ಕೊಡುತ್ತಾಳೆ. ಬಾಕಿ ಹೆಂಗಸರಂತೆ ಗಂಟೆಗಟ್ಟಲೆ ಹರಿಕತೆ ಪುರಾಣ ಕೇಳುತ್ತ ಕೂಡುವಷ್ಟು ವ್ಯವಧಾನ ಸೀತೆಗಿಲ್ಲ. ಒಂದು ರೀತಿಗೆ ಅವಳು ಕರ್ಮಯೋಗಿ. "ಕೇಳಿದ್ದನ್ನೇ ಎಷ್ಟು ಸಲ ಕೇಳೂದು" ಅನ್ನುವಳು. ಹಬ್ಬ–ಹರಿದಿನ ಮಾಡುವಳು. ಶೀರಾ ಕಷ್ಟದಲ್ಲಿರುವವರಿಗೆ ನೆರವಾಗುವಳು. ಅದಿಲ್ಲದಿದ್ದರೆ ತಾನಾಯಿತು, ತನ್ನ ಮನೆಯ ಕೆಲಸವಾಯಿತು. ಎಳ್ಳಮಾವಾಸ್ಯೆಯಲ್ಲಿ ಸೌಭದ್ರಮ್ಮ, ಕಾಡಿ, ಗಂಗೆ ಬಂದು ಹೋಗುತ್ತಿದ್ದರು. ಈಗ ಜಾತ್ರೆ ಆಕರ್ಷಣೆ ನಾಟಕ. ಸೀತೆ ಒಂದು ನಾಟಕ ನೋಡಿದರೆ ಆಯ್ತು. ಸೀತೆಯ ತುಂಬಿದ ಬಾಳಿನಲ್ಲಿ ಉಳಿದ ಕೊರಗು ಒಂದೇ. ಅಚ್ಚಿಯ ಬಾಳು ಹಾಳಾದದ್ದು. ಚನ್ನಭಟ್ಟನಂತೇ ಸಿಕ್ಕಟಿಗೆಯಂತಿದ್ದ ತಬ್ಬಲಿ ಹುಡುಗಿಯೊಂದು ಭಟ್ಟನಿಗೆ ಎರಡನೇ ಹೆಂಡತಿಯಾಗಿ ಒಂದು ಒಂದೆರಡು ಮಕ್ಕಳನ್ನು ಉದುರಿಸಿ ಈಗ ಹೆಬ್ಬುಲಿಯಾಗಿ ಅಚ್ಚಿಯನ್ನು ತೌರುಮನೆಗೆ ಓಡಿಸಿತು. ತೌರುಮನೆ

ಯಲ್ಲಿ ಅಪ್ಪ–ಅಮ್ಮ ಇಬ್ಬರೂ ಇಲ್ಲ. ತವ್ರು ಮತ್ತೆ ಅತ್ತೆ ಮನೆಗೆ ಕಳಿಸಿದ. ಹೀಗೆ ಅಚ್ಚಿ ಕಾಲ್ಚೆಂಡಿನಂತೆ ಇಲ್ಲಿಂದಲ್ಲಿಗೆ, ಅಲ್ಲಿಂದಿಲ್ಲಿಗೆ ಒದೆಯಲ್ಪಟ್ಟು ಒಂದು ಸಾರಿ ಸೀತೆಯ ಮುಂದೆ ಗೋಳಿಟ್ಟಳು :

"ನಂಗಿನ್ನು ತುಂಗೆ ಹೊಳೇನೇ ಗತಿ ಕಣೆ ಸೀತೆ. ಹೀಂಗೆ ಅತ್ಲಾಗಿತ್ಲಾಗಿ ತಾಟು ಹೊಡಕಂಡು ಯಂತ ಒದಕಾಟ ನಂದು ? ಸತ್ರೆ ನಿಶ್ಚಿಂತೆ ಬಿಡು."

"ಅದು ಬದ್ಧ. ನೀ ಸತ್ರೆ ನಿನ್ನ ಗಂಡಗೆ, ಸವತೀಗೆ, ನಿನ್ನಮ್ಮಗೆ ನಿಶ್ಚಿಂತೆ. ಅದ್ರೆ ನಾ ಬದುಕಿರೂತಂಕ ನಿನ್ನ ಸಾಯೂಕೆ ಬಿಡೂದಿಲ್ಲ. ಸ್ವಸ್ಥಾಗಿ ನಮ್ಮನೇಲಿ ಇರು. ಅದು ಯಾರು ಯಂತದ ಅಂತಾರಂತೆ ನಾ ನೋಡ್ಕ್ಯಾತನಿ"

ಎಂದು ಗಂಡನ ಅನುಮತಿ ಪಡೆದು ಅಚ್ಚಿಗೆ ತನ್ನ ಮನೆಯಲ್ಲಿ ಆಶ್ರಯ ಕೊಟ್ಟಳು. ಈ ವೇಳೆಗೆ ಶಂಕರಭಟ್ಟರೂ ತೀರಿಹೋಗಿದ್ದರು.

ಬಾಲ್ಯದಂತೆಯೇ ಈಗಲೂ ಅಚ್ಚಿ-ಸೀತೆಯರು ಸದಾ ಜೊತೆಯಾಗಿರುವರು. ಅಚ್ಚಿ ಕೆಲಸದಲ್ಲೇನೂ ಹಿಂದಿಲ್ಲ. ಎತ್ತಿನ ದುಡಿಮೆ ಅವಳದು. ಸೀತೆಯ ಮಕ್ಕಳಿಗೆ ಅವಳು ಅಚ್ಚತ್ತೆಯಾದಳು. ಹೊಳೆ, ಮನೆ, ತೋಟ, ಹಿತ್ತಲು, ಕೊಟ್ಟಿಗೆ ಎಲ್ಲೆಡೆಯೂ ಅವರಿಬ್ಬರೂ ಜೊತೆ.

ತೀರ್ಥಹಳ್ಳಿ, ಕುರುವಳ್ಳಿ, ಸುತ್ತಮುತ್ತಲಿನ ಹಿರಿಯರಿಗೆ, ಕಿರಿಯರಿಗೆ, ಹೆಂಗಸರಿಗೆ 'ತಗ್ಗಿನ ಮನೆ ಸೀತೆ' ಒಂದು ಕಿರುತಾರೆಯಂತೆ. ಯಾವುದೋ ಅಗೋಚರ ವೈಶಿಷ್ಟ್ಯ ಅವಳಲ್ಲಿತ್ತು. ಯಾರಿಗೂ ಸ್ಪಷ್ಟ ಗೋಚರಿಸದು. ಮಳೆಗಾಲವಲ್ಲಿ ಹೊಳೆ ತುಂಬಿ ಹರಿವಾಗ ಸೀತೆಯ ನೆನಪು. ಅಪ್ಪೂರಾಯರಿಗಂತೂ ಅವಳು ಸಿಂಹಸ್ವಪ್ನ.

ಮಕ್ಕಳು ಶಾಲೆಯಿಂದ ಬರುವ ವೇಳೆಗೆ ಹುಳಿ–ಅನ್ನ, ಗೊಜ್ಜನ್ನ ಇಲ್ಲ ತಿಂಡಿ ಏನನ್ನಾದರೂ ಪಾತ್ರೆಯಲ್ಲಿ ಹೊತ್ತು ಪುಷ್ಕರಣೀಯ ಹತ್ತಿರ ಕಾದಿರುವರು ಅಚ್ಚಿ-ಸೀತೆ. ಮಕ್ಕಳಿಗೆ ಅಲ್ಲೇ ತಿಂಡಿ, ಆಟ.

ಅಚ್ಚಿ ತನ್ನ ಬಾಲ್ಯವನ್ನು ಜ್ಞಾಪಿಸಿಕೊಂಡು–

"ಆಗ್ಲೇ ಚಂದಾಗಿತ್ತು ಕಣೆ ಸೀತೆ. ಈ ರೆಗಳೆಯಂತದೂ ತಿಳದಿರ ಲಿಲ್ಲ. ಅಂತೂ ದೇವರು ನನ್ನ ನಿನ್ನ ಕಾಲಬುಡಕ್ಕೆ ತಂದು ಹಾಕ್ದ."

ಸೀತೆ ನಕ್ಕಳು.

"ದೇವರ್‍ಯಾಕೆ ತಂದ್ಹಾಕ್ತಾನೇ ? ಆ ಕಡಿಂದ ನಿನ್ನ ಸವತಿ, ಈ ಕಡಿಂದ ನಿನ್ತಮ್ಮ ಇಬ್ರೂ ಒದಿಯೂಕೆ ಹಿಡದ್ರು. ಯರಡೂ ಬ್ಯಾಡಾಂತ ನೀನ್ ನನ್ನ ಹತ್ರ ಬಂದುಬಿದ್ದೆ ಒಳ್ಳೇದಾತುಬಿಡು. ಆಗ ಹುಡುಗ್ರಾಗಿ ಜತೆ, ಈಗ ಮುದಕ್ರಾಗಿ ಜತೇಲಿರಾಣಂತೆ. ನೀನು ಸಮನಾಗಿದ್ರೆ ಸಾಕು. ಮಕ್ಳಾಗ್ಬೇಕಿತ್ತು ಅಷ್ಟೇ ಸೈಯಲ್ಲ. ನಿಂಗೆ ಬೇಕಾರೆ ನನ್ನ ಮಕ್ಳನ್ನೆಲ್ಲಾ ನೀನೇ ತಗ."

ಹಗಲು ಕಂತಿತು. ರಾತ್ರಿ ಇಳಿಯುತ್ತಿತ್ತು. ಹಗಲು-ರಾತ್ರಿಗಳಂತೆಯೇ ಒಟ್ಟಾಗಿ ಬಾಳಿದರು ಅಚ್ಚಿ-ಸೀತೆ. ತಗ್ಗಿನ ಮನೆ ಸೀತೆ.

——oo——

## ಎಂ. ಕೆ. ಇಂದಿರಾ ಅವರ ಕೃತಿಗಳು

| | |
|---|---|
| ತುಂಗ-ಭದ್ರಾ | ಡಾಕ್ಟರ್ |
| ಸದಾನಂದ | ತಪೋವನದಲ್ಲಿ |
| ಗೆಜ್ಜೆ ಪೂಜೆ | ಚಿದ್ವಿಲಾಸ |
| ಮನೆ ತುಂಬಿದ ಮಡದಿ | ಜಾತಿ ಕೆಟ್ಟವಳು |
| ಹೆಣ್ಣಿನ ಆಕಾಂಕ್ಷೆ | ಸುಖಾಂತ |
| ತಾಪದಿಂದ ತಂಬಿಗೆ | ಯಾರು ಹಿತವರು |
| ಬ್ರಹ್ಮಚಾರಿ | ಹೂಬಾಣ |
| ಕಲಾದರ್ಶಿ | ವರ್ಣಲೀಲೆ |
| ಶಾಂತಿಧಾಮ | ಹಸಿವು |
| ನವರತ್ನ | ಕೂಪ |
| ಅಂಬರದ ಅಪ್ಸರೆ | ಕೂಚುಭಟ್ಟ |
| ನಗಬೇಕು | ಜಾಲ |
| ನವಜೀವನ | ಗುಂಡ |
| ಪವಾಡ | ಮುಸುಕು |
| ಕಲ್ಪನಾ ವಿಲಾಸ | ಕತೆಗಾರ |
| ದಶಾವತಾರ | ಕವಲು |
| ಸುಸ್ವಾಗತ | ಆಭರಣ |
| ಗಿರಿಬಾಲೆ | ಮೋಹನಮಾಲೆ |
| ಟುಲೆಟ್ | ರಸವಾಹಿನಿ |
| ಮನೆ ಕೊಟ್ಟು ನೋಡು | ಅನುಭವ ಕುಂಚ |
| ಬಿದಿಗೆ ಚಂದ್ರಮ ಡೊಂಕು | ಪೂರ್ವಾಪರ |
| ನಾಗವೀಣಾ | ತಾಳಿದವರು |
| ಆತ್ಮಸಖಿ | ತಗ್ಗಿನಮನೆ ಸೀತೆ |

Cover Ptd. by : Bhaskar Printers, B-53 Phone : 75467